ಪಟ್ಟೋಳೆ ಪಳಮೆ

(ಸುವರ್ಣ ಕರ್ನಾಟಕತ್‌ರ ವಿಶೇಷ ಯೋಜನೆ)

● ನಡಿಕೇರಿಯಂಡ ಚಿಣ್ಣಪ್ಪ



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ



ಪಟ್ಟೋಲೆ ಪಳಮೆ

ನಡಿಕೇರಿಯಂಡ ಚಿಣ್ಣಪ್ಪ

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ

PATTOLE PALAME - A study of the culture, customs and institutions of the KODAVAs of Kodagu district in Karnataka. Compiled and edited by Sri Nadikerianda Chinnappa. The first edition was published in 1924 by the author himself; the second edition was published in 1975 by the Institute of Kannada Studies, University of Mysore, Mysore. The third edition was published in 1995 by the Kannada Book Authority (Kannada Pusthaka Pradhikara) Bangalore. The fourth edition was published in 2002 by the Karnataka Kodava Sahithya Academy, Madikeri. The fifth edition was published in 2006, by the Karnataka Kodava Sahithya Academy, Madikeri.

Sixth : **2012**

ಆರನೇ ಮುದ್ರಣ : **2012**

ಕ್ರಯ : ‘. **375.00**

Price : ‘. **375.00**

ಎಲ್ಲಾ ಹಕ್ಕ್‌ನ ಕಾತ್ ಬೆಚ್ಚಿತ್

All rights reserved

ಬೊಳಿಪಡ್‌ತ್‌ನವು : ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಕೌಟ್‌ಭವನ, ಮ್ಯಾನ್ಸ್ ಕಾಂಪೌಂಡ್
ಮಡಿಕೇರಿ – **574201 (**ಫೋನ್ **: 08272 229074)**

ಅಚ್ಚ್‌ಕಾರ : ಹೃಷಿಕಾ ಗ್ರಾಫಿಕ್ಸ್ & ಸ್ಪೀಡ್ ಪ್ರಿಂಟ್
ದರ್ಬೆ, ಪುತ್ತೂರು, ದ. ಕ.
ಫೋನ್ **: 08251 - 230805**

18

ಸಮರ್ಪಣೆ

ಈ ಪುಸ್ತಕವನ್ನು ನನ್ನ ಮಾತೋಶ್ರೀ ತಾಯಮ್ಮನವರಾದ

ನಡಿಕೇರಿಯಂಡ ಪೊನ್ನವ್ವನವರ ಪಾದಾರವಿಂದಕ್ಕೆ

ಸಮರ್ಪಿಸಿದ್ದೇನೆ.

ಸ್ವದೇಶ ಪ್ರಿಯ ಕೀರ್ತನೆ

1. ಶ್ರೀ ಮೂಲ ಕನ್ನಿಯೆ ।
ಪೊಮ್ಮಾಲೆ ಕೊಡು ಮಾಲೆ
ಪೊಮ್ಮಾಲೆಂದ್ ನೀ ಚೂಡಿಯೊಳೊ ಕಾವೇರಿಯಮ್ಮೆ! ॥
ಜೋಮಾಲೆ ಎನ್ನಂಗ್ ?
ಪೂಮಾಲೆ ಎನ್ನಂಗ್ ?
ಪೊಮ್ಮಾಲೆ ಕೊಡವುನ ಮಾಲೆಂದ್ ನೀ ಚೂಡಿಯ ತಾಯೆ ॥

2. ಶ್ರೀ ಪಾರ್ವತಿ ಮಾಯೆ
ಲೋಪಾಮುದ್ರೆಯೇ
ನೀ ಪಾರುವಂಗ್ ಮೋವಳಾಯಿತ್ ಭೂಮಿಕ್ ಬಂದ್ ॥
ಪಾಪಿ ಜನಡೆಲ್ಲಾ
ಪಾಪ ತ್ಪೇಪಕ್ಂದ್,
ನೀ ಪರಿಂಜಿಯ ಕುಂಡಿಕೆಲ್ಂಜಿ ಕೇಕ್ ಕಡಲೋಳ ! ॥

3. ಚೊಕ್ಕನಯಂಕೆಲ್ಲ
ಒಕ್ಕುವಳ ನೀರೆ !
ಚಿಕ್ಕನಯಂಕೆಲ್ಲ ದುಃಖ ತ್ಪೇಪಳ ಪುಣ್ಯತ್ ನೀರ್ ! ॥
ಮಕ್ಕಳಿಲ್ಲತೆಯೊ,
ಒಕ್ಕಾಮಿಲ್ಲತೆಯೊ
ಚಿಕ್ಕಿ ಚೋತಕ ನಂದ್ ಮಾಡಿತ್ ಚಾಕಿ ಪೊಲತವ್ವಾ ॥

– ನಡಿಕೇರಿಯಂಡ ಚಿಣ್ಣಪ್ಪ

ಪ್ರಸ್ತಾವನೆ

ನನ್ನ ವಿನೋದಕ್ಕಾಗಿ ಕೊಡಗು ಪದಗಳನ್ನು ಒದಗಿಸುತ್ತಾ ಇದ್ದು, ಕೆಲವು ಮಟ್ಟಿಗೆ ಹಾಡುಗಳು ದೊರೆತ ನಂತರ ಕೊಡಗರ ಪದ್ಧತಿಗಳನ್ನು ಬರೆಯಲು ತೊಡಗಿದೆನು. ಪದ್ಧತಿಗಳು "ಆರ್ ನಾಡ್‌ಕ್ ನೂರ್ ಪಾಜೆ' (ಆರುನಾಡಿಗೆ ನೂರುಭಾಷೆ) ಎಂಬಂತೆ ತೋರ ಬಂದವು; ಆದರೂ

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಾ॥
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತ॥
ಕೆಲವಂ ಸಜ್ಜನ ಸಂಗದಿಂದ

ಅರಿತು ಪರಿಶೋಧಿಸಿ ನೋಡಿದಲ್ಲಿ ಪದ್ಧತಿಗಳು ಮರೆತುಹೋದುದ್ದರಿಂದಲೂ ತಪ್ಪಿತದಿಂದಲೂ, ಹೆಚ್ಚು ಕಡಿಮೆಯಾದುದಾಗಿಯೂ, ವ್ಯತ್ಯಾಸಗಳು ಬಹು ಕಿಂಚಿತ್ ಬಾಬಿನವುಗಳಾಗಿಯೂ ಕಂಡು ಬಂದುವು. ಆದುದರಿಂದ ಇಂಥ ಒಂದು ಪುಸ್ತಕವನ್ನು ಬರೆದಿಟ್ಟರೆ ಉಪಯೋಗ ವಾದೀತೆಂದು ಅಭಿಪ್ರಾಯ ಪಟ್ಟು ಬರೆಯಲು ತೊಡಗಿದೆನು.

ಈ ಪುಸ್ತಕವನ್ನು ಒಡನೆ ಪ್ರಕಟಿಸುವೆನೆಂದರೆ ಲಕ್ಷ್ಮೀದೇವಿಯ ಕಟಾಕ್ಷವು ಕಡಿಮೆಯಾದುದರಿಂದ ಸರಕಾರಕ್ಕೆ ಬರೆದುಕೊಳ್ಳಲಾಗಿ ಕೊಡಗು ಕಮೀಷನರಾಗಿದ್ದ ಸಿ. ಎಸ್. ಸೂಟರ್ ಸಾಹೇಬರವರೂ, ಸಿ. ಹಿಲ್ಟನ್ ಬ್ರೌನ್ ಸಾಹೇಬರವರೂ ನನ್ನ ಕೆಲಸವನ್ನು ಕೃಪಾದೃಷ್ಟಿಯಿಂದ ನೋಡಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ರಾವ್ ಸಾಹೇಬ್ ಕೇಟೋಳಿರ ಚಂಗಪ್ಪನವರಿಂದಲೂ, ಮೈಸೂರು ದೇಶದ ಕೌನ್‌ಸಿಲ್ಲರಾಗಿದ್ದು ರಿಟೈರಾದ ರಾವ್ ಬಹದೂರ್ ಕೋದಂಡ ಮಾದೈಯ್ಯನವರಿಂದಲೂ ಮತ್ತು ಕೊಡಗು ಅಸಿಸ್ಟೆಂಟ್ ಕಮೀಷನರಾಗಿದ್ದು ರಿಟೈರಾದ ರಾಯಬಹದೂರ್ ಕೊಡಂದೆರ ಕುಟ್ಟೈಯ್ಯನವರಿಂದಲೂ ಪರಿಶೋಧಿಸಿದ್ದಲ್ಲಿ, ಈ ಪುಸ್ತಕವನ್ನು ಪ್ರಕಟಿಸಿದರೆ, ಮರೆತು ಹೋಗುವುದರಿಂದಲೂ, ತಪ್ಪಿತದಿಂದಲೂ ನಿಲ್ಲುತ್ತಾ ಅಥವ ಭಿನ್ನವಾಗುತ್ತಾ ಬರುವ ಪದ್ಧತಿಗಳು ಏಕೀಭಾವದಲ್ಲಿರುವಂತೆ ಅನುಕೂಲವಾಗುವುದರಿಂದ ಈ ಪುಸ್ತಕವು ಬಹಳ ಉಪಯೋಗವಾದೀತೆಂದು ಇವರು ಅಭಿಪ್ರಾಯ ಕೊಡಲು ಸರಕಾರವು ಕೆಲವು ಮಟ್ಟಿಗೆ ದ್ರವ್ಯ ಸಹಾಯ ಮಾಡಿದ್ದರಿಂದ ಈ ಪುಸ್ತಕವನ್ನು ಅಚ್ಚಿ ಹಾಕಿಸಲು ಉದ್ಯುಕ್ತನಾದೆನು.

ಈ ಪುಸ್ತಕಕ್ಕೆ ಏನು ಹೆಸರು ಹಾಕಲೆಂದು ಯೋಚಿಸುತ್ತಿದ್ದು ಕೊನೆಗೆ **"ಪಟ್ಟೋಲೆ ಪಳಮೆ"** ಎಂದು ಕರೆದೆನು. ಇದರಲ್ಲಿರುವ ವಿಷಯಗಳು ತಕ್ಕ ಮಟ್ಟಿಗಾದರೂ ಸರಿಯಾಗಿದ್ದು ಅದರಲ್ಲಿರುವವುಗಳನ್ನು ಅನುಸರಿಸಿ ನಡೆದರೆ ಇದಕ್ಕೆ "ಪಟ್ಟೋಲೆ ಪಳಮೆ" ಎಂಬ ಹೆಸರು ಇಟ್ಟದ್ದು ಸಾರ್ಥಕವಾಯಿತು.

ಮುದ್ರಣ ಕಾಲದಲ್ಲಿ ತಪ್ಪುಗಳನ್ನು ತಿದ್ದಲು ಸಹಾಯ ಮಾಡಿದ
ಮೈಸೂರು ಗೌರ್ನಮೆಂಟ್ ಪ್ರೆಸ್, ಪ್ರೂಫ್ ಎಗ್ಜಾಮಿನರ್
ಮ॥ ರಾ॥ ಕುಲ್ಲಚ್ಚಂಡ ಕರಿಂಬೈಯ್ಯನವರಿಗೆ
ನನ್ನ ವಂದನೆಗಳನ್ನು ಸಮರ್ಪಿಸಿರುತ್ತೇನೆ.

ಕರಡ ಗ್ರಾಮ
1–1–1922

– ನಡಿಕೇರಿಯಂಡ ಚಿಣ್ಣಪ್ಪ

15

ಪಟ್ಟೋಲೆ ಪಳಮೆ

ಪೀಠಿಕೆ

॥ಕಂದ॥ ಅರಿತವನೆ ನಿನಗೇತಕಿದು ?
ಅರಿಯಲಿಷ್ಟಿಲ್ಲದವನೆ ನಿನಗೇತಕಿದು ?
ಅರಿಯಲಾರದವಗೇತಕಿದು ?
ಅರಿಯಲಪೇಕ್ಷಿಸುವವನೆ ನೀನಿದನು ಓದು !

– ನಡಿಕೇರಿಯಂಡ ಚಿಣ್ಣಪ್ಪ
(ಗ್ರಂಥ ಕರ್ತ)

ಅಂಜನೇ ಮುದ್ರಣಕ್ ಅಧ್ಯಕ್ಷಿಣಿರ ತಕ್ಕ್

ಕೊಡವ ತಕ್ಕ್‌ಲ್ ಇಕ್ಕಣೆಕ್ ಬೊಳಿ ಕಂಡ ಪುಸ್ತಕತ್‌ರ ಕೂಟ್‌ಲ್ ಏರ ಕುರಿ ಮುದ್ರಣ ಆನದ್ 'ಪಟ್ಟೋಲೆ ಪಳಮೆ'. ಆದಿಲ್, 1924ಲ್ ಬೊಳಿಕಂಡ ಈ 'ಪಟ್ಟೋಲೆ ಪಳಮೆ' ಕಯಿಂಜ 82 ಕಾಲತ್‌ರ ಸಮಯತ್ ಒಟ್ಟು ಅಂಜಿ ಕುರಿ ಪುನರ್ ಮುದ್ರಣ ಆಯಿತ್. ಈ ಲೆಕ್ಕತ್, ಏರ ಕೊಡವಾಭಿಮಾನಿಯಡ ಮನೆಲ್ ಉಳ್ಳ ಪುಸ್ತಕ ಬಹುಶ ಇದೇ.

'ಪಟ್ಟೋಲೆ ಪಳಮೆ'ನ ಬೊರೀ ಒರ್ ಪುಸ್ತಕ ಎಣ್ಣುವಾಂಗ್‌ಂಜಿ ಒರ್ ಆಧಾರ ಗ್ರಂಥ, ಮಾಹಿತಿರ ಗೂಡ್, ನೀತಿ ನಡ್‌ಪುರ ಬಟ್ಟೆಬೊಳಿರ ತೂಡ್... ಎಣ್ಣಕೋ ತಪ್ಪಾಗ. 1920ನೇ ದಶಕತ್ ಕೊಡವ, ಕನ್ನಡ ಭಾಷೆಕ್, ಕೊಡಗ್‌ರ ಮಟ್ಟಿಗೆ ಬಲ್ಯ ಬೀರ್ಯ–ಬರ್ಕತ್ತ್ ಇಲ್ಲತಿಂಜ ಕಾಲತ್ ಎಳ್‌ಕಾರ ನಡಿಕೇರಿಯಂಡ ಚೆಣ್ಣಪ್ಪ ಅಯಿಂಗ ವಿವರತ್‌ನೆಲ್ಲ ಕೂಟಿ ಕೂಟೀ, ಬಯ್ಯಂಜಿ ಈ ರೂಪತ್‌ರ ಪುಸ್ತಕ ಮಾಡ್‌ನದ್ ಚೆರಿಯ ಸಾಸವೊಂದೂ ಅಲ್ಲ. ಇನ್ನನಾಯಿತೇ ಈ ಪುಸ್ತಕಕ್ ದಕ್ಷಿಣ ಭಾರತತ್‌ರ ಆದ್ಯ ಜಾನಪದ ಗ್ರಂಥ ಎಣ್ಣುವ ಪೆದವೂ ಬಾತ್. ಮೈಸೂರ್ ವಿಶ್ವವಿದ್ಯಾನಿಲಯ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ... ಇನ್ನತ ಸರಕಾರೀ ಪುಡ್‌ತತ್‌ರ ಸಂಸ್ಥೆಕಾರ ಇದ್‌ನ ಬೊಳಿಪಡ್‌ತ್‌ನದ್ ಪುಸ್ತಕಕ್ ಇಂಞಾಚ್ಚಕ್ ಬೆಲೆ ಬಪ್ಪನೆಕೆ ಆಚಿ. ಪದ್ಧತಿ ಪರಂಪರೆ, ನಡ್‌ಪು – ನೀತೀರ ವಿಷಯತ್, ಎನ್ನೇಂಗಿ ಅಪ್ಪರಿಪ್ಪರ ವಾದ–ವ್ಯಾಜ್ಯ ಬಂದಲ್ಲಿ 'ಪಟ್ಟೋಲೆ ಪಳಮೆ'ನ ಆಧಾರ ಆಯಿತ್ ಕೋರ್ಟ್ – ಕಛೇರಿಲ್ ಸಂಬಂಧಪಟ್ಟವು ಬಳಸುವ ಎಣ್ಣುವದ್ ಅರಿಂಜಿತಿರಂಡಿಯ ಸಂಗತಿ ಆಯಿತುಂಡ್.

ಕೊಡಗ್‌ರ ಭೂಭಾಗ ವಿವರಣೆ, ಪುರಾಣ, ಕಾವೇರಿ ಪುರಾಣ, ಚರಿತ್ರೆ, ಜನಜೀವನ, ಕೆಟ್ಟ್‌ಪಾಡ್, ಜಾನಪದ ಬದ್‌ಕ್, ಕುಂಞಿ ಪುಟ್ಟ್‌ನಲ್ಲಿಂಜಿ ಚಾವಲ್ಲಿಕೆತ್ತನೆ ಮಾಡುವ ಕ್ರಿಯೆ – ಕಾರ್ಬಾರ್, ಅದದ್ ಸಂದರ್ಭತ್‌ರ ಬಾಳೋಪಾಟ್ ವಿವರ, ಪಾಟ್, ಪಳಂಜೊಲ್ಲ್, ಒಡ್‌ಪ ಗಾದೆ, ನಂಬಿಕೆ, ಮೂಡನಂಬಿಕೆ... ಇನ್ನನೆ ಕೊಡಗ್‌ರ, ಕೊಡವ ಸಂಪ್ರದಾಯತ್‌ರ ಮನೆರ ವಿವರ – ವಿಶೇಷತೆ ಈ ಪುಸ್ತಕತ್ ಅಡ್‌ಂಗಿತುಂಡ್.

1924ಲ್ ಇದ್‌ನ ಆದ್ಯ ಬೊಳಿಪಡ್‌ತ್‌ನ ನಡಿಕೇರಿಯಂಡ ಚೆಣ್ಣಪ್ಪ ಅಯಿಂಡ ಬಲ್ಯ ಸಾಸತ್‌ನ ದೇಶತ್‌ರ ಜನ ಎಂದೂ ಕೊಂಡಾಡಂಡು. ಅಲ್ಲಿಂಜಿ 1975ಲ್ ಇದ್‌ನ ಬೊಳಿಪಡ್‌ತ್‌ನ ಮೈಸೂರ್ ವಿಶ್ವ ವಿದ್ಯಾನಿಯತ್‌ರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆನೋ ಮರ್‌ಪಕಾಗ. ಇದಾನದು 1995ಲ್ ಕನ್ನಡ ಪುಸ್ತಕ ಪ್ರಾಧಿಕಾರ ಇದ್‌ನ ಬೊಳಿಪಡ್‌ತ್‌ಚಿ, 2002ಲ್ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಇದ್‌ಂಡ ನಾಲನೇ ಮುದ್ರಣತ್‌ನ ಮಾಡ್‌ಚಿ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿರ ಮೂಲಕ "ಸುವರ್ಣ ಕರ್ನಾಟಕನಮ್ಮೆ"ರ ಮಾರೀಪತ್ ಅಂಜನೇ ಮುದ್ರಣ ಕಂಡಂಡುಳ್ಳದ್ ಏರ ಕುಸಿ ಪಡುವನ್ನತ ಸಂಗತಿ. ಈ ಪುಸ್ತಕತ್‌ರ ಪ್ರೂಫ್ ನೋಟುವಕ್ ಸಹಾಯ ಮಾಡ್‌ನ ನಡಿಕೇರಿಯಂಡ ಚೆಣ್ಣಪ್ಪ ಅಯಿಂಡ ಕ್‌ರ್‌ಮಕ್ಕ್, ಬೆಂಗಳೂರ್ ನಿವಾಸಿಯಳಾನ ಬೊವ್ವೇರಿಯಂಡ ಎಂ. ಚೆಣ್ಣಪ್ಪ ಪಿಂಞ ಡಾ. ನಂಜಮ್ಮ ಚೆಣ್ಣಪ್ಪ ಇಯಂಗಕ್ ಅಕಾಡೆಮಿರ ಪರ ವಂದನೆ. ಅಲ್ಲತೆ, ಈ ಪುಸ್ತಕ ಪ್ರಕಟಣೆಕ್ ಪಲತರತ್ ಸಹಕರಿಚಿಟ್ಟ ಬೋರೆಲ್ಲಾ ಅಭಿಮಾನಿಯಕೂ ನಂಗಡ ವಂದನೆ.

ಎನ್ನನೆಯೂ, ಮಿಂಞತ್‌ರನ್ನಕೇ, ಈ ಅಂಜನೇ ಮುದ್ರಣತ್‌ರ ಪುಸ್ತಕವೂ ಎಲ್ಲಾ ಸಾಹಿತ್ಯಾಭಿಮಾನಿಯಡ ಮನೆ ಮನೆಲ್ ಎಂದು ಎಲಂಗಿಯಂಡಿರಡ್.

ಬಾಳೋ ಬಾಳೋ ನಂಗಡ
ಚೆಣ್ಣಪ್ಪ ಬಾಳೋ ಮಾಕವಿ...

ಮಡಿಕೇರಿ
20-12-2006

ಉಳ್ಳಿಯಡ ಡಾಟಿ ಪೂವಯ್ಯ, ಅಧ್ಯಕ್ಷಿಣಿ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ನಾಲನೆ ಮುದ್ರಣಕ್ ಅಧ್ಯಕ್ಷಂಡ ತಕ್ಕ್

ಪಟ್ಟೋಲೆ ಪಳಮೆನ ಕೊಡವ ತಕ್ಕ್ ಪರಿವಯಿಂಗಡ 'ವೇದಾ'ಂದ್ ಚೆನ್ನ ಜನ ಎಣ್ಣ್‌ನಾಲ್ ನಲ್ಲ ಅರ್ಥ ಉಂಡ್. 1924ನೇ ಇಸವಿಲ್ ನಡಿಕೇರಿಯಂಡ ಚಿಣ್ಣಪ್ಪ ಎಣ್ಣುವಯಿಂಗ ಕೊಡಗ್‌ರ ಮೂಲೆ ಮೂಲೆ ಸುತ್ತಿತ್ ಮನೆ ಮನೆಕ್ ಎತ್ತಿತ್ ಸಂಗ್ರಹ ಮಾಡ್‌ನ ಆದ್ಯ ಜಾನಪದ ಸಂಗ್ರಹ ಇದ್. ದಕ್ಷಿಣ ಭಾರತತ್‌ಲೇ ಈ ಪುಸ್ತಕಕ್ ಒರ್ ವಿಶಿಷ್ಟ ಸ್ಥಾನ ಉಂಡ್. ಆ ಕಾಲತ್ ಇನ್ನತ್ತೋರ್ ಪುಸ್ತಕ ರಚನೆ ಆಗತೇ ಪೋಯಿತುಂಡೇಂಗಿ ಇಂಗ್ಲೀಷ್ ಸಂಸ್ಕೃತಿರ ಪ್ರಭಾವತ್‌ನಗುಂಡ್ ಕೊಡವ ಭಾಷೆ, ಕೊಡವ ಸಾಹಿತ್ಯ, ಕೊಡವ ಕಲೆ, ಕೊಡವ ಸಂಸ್ಕೃತಿ ಪಿಂಞ ಕೊಡವ ಜಾನಪದ ಎಂದೋ ಮರೆಯಾಯಿ ಪೋಪಕಿಂಜತ್. ಇಚ್ಚಕ್ ಮಹತ್ವತ್‌ರ ಒರ್ ಸಂಗ್ರಹ ದಾಖಲೆ ಇಂಜಕಲೂ ಅದ್‌ಂಗ್ ಸಾರ್ವತ್ರಿಕ ಮನ್ನಣೆ ಪೆರ್ತ್‌ಕಾಲ ಕ್‌ಟ್ಟಿತಿಂಜ್‌ಲೆ. ಕೊಡಗ್‌ರ ವಿದ್ಯಾವಂತಂಗಳೆಲ್ಲ ಇಂಗ್ಲೀಷ್ ಸಂಸ್ಕೃತಿರ ಪ್ರಭಾವಕ್ ಒಳಪಟ್ಟ್‌ತಿಂಜಾನಗುಂಡ್ ಕೊಡಗ್‌ರ ಸಂಸ್ಕೃತಿ ಪಿಂಞ ಜಾನಪದ ಕಲೆಯೆಲ್ಲ ಮೂಲೆಕಾಯಂಡ್ ಬಾತ್. ಕರ್ನಾಟಕ ರಾಜ್ಯತ್ ಜಾನಪದ ಸಂಶೋಧನೆಕ್ ವಿದ್ವಾಂಸಂಗ ಇಳ್‌ಂಜಿತಾಪಕ ಕೊಡಗ್‌ರ ಜಾನಪದತ್‌ರ ವಿಚಾರತ್‌ಲ್ ಚೆನ್ನ ವಿದ್ವಾಂಸಂಗ ಸಂಶೋಧನೆಕ್ ಇಳ್‌ಂಜತ್. ಅಕ್ಕ ಇಡೀ ಕೊಡಗ್‌ರ ಜಾನಪದತ್‌ರ ಬಲ್ಯೋರ್ ಖಜಾನೆಯಾನ ಈ ಪಟ್ಟೋಲೆ ಪಳಮೆ ಸಂಶೋಧಕಂಗಡ ಕಣ್ಣ್‌ಕ್ ಬುದ್ದತ್. ಇನ್ನತೋರ್ ವಿಶೇಷಪಟ್ಟ ಪುಸ್ತಕ ಉಂಡ್‌ೕಂದೂ, ನಡಿಕೇರಿಯಂಡ ಚಿಣ್ಣಪ್ಪಂಡ ಸಾಧನೆ ಇಡೀ ದಕ್ಷಿಣ ಭಾರತತ್‌ಲೇ ಸುರೂವತ್‌ರದೂ ಪಿಂಞ ಕೇಳಿಪಟ್ಟದ್‌ೕಂದೂ ಪೊರಮೆರ ಸಂಶೋಧಕಂಗ ಈ ಪುಸ್ತಕಕ್ ದುಂಬ ಪ್ರಚಾರ ಕೊಡ್‌ತತ್. ಆಚೇಂಗಿ ಅಕ್ಕಣೆಕ್ ಪಟ್ಟೋಲೆ ಪಳಮೆರ ಪ್ರತಿಯೇ ಕ್‌ಟ್ಟತಾಯಿಪೋಯಿತಿಂಜತ್. ಕೊಡಗ್‌ರ ಜನ ಪಟ್ಟೋಲೆ ಪಳಮೆರ ಕೇಳಿ ಕೇಟ್‌ತುಂಡೇಂಗಿಯೂ ಪುಸ್ತಕ ನೋಟತಯಿಂಗಳೇ ಜಾಸ್ತಿ ಇಂಜತ್.

ಈ ಕೊರತೆನ ನಿವಾರಣೆ ಮಾಡ್‌ವಕಾಯಿತ್ 1975ನೇ ಇಸವಿಲ್ ಮೈಸೂರ್ ವಿಶ್ವವಿದ್ಯಾನಿಲಯತ್‌ರ ಕನ್ನಡ ಅಧ್ಯಯನ ಸಂಸ್ಥೆಕಾರ ಈ ಪುಸ್ತಕತ್‌ರ ಪುನರ್ ಮುದ್ರಣ ಮಾಡ್‌ಚಿ. ಆಚೇಂಗಿ ಆ ಪ್ರತಿಯೆಲ್ಲ ಬೆರಿಯ ತ್‌ೕಂದ್‌ಪೋಚಿ. ಪುಸ್ತಕಕ್ ಬೋಡಿಕೆ ಜಾಸ್ತಿ ಅನಾನಗುಂಡ್ 1995ಲ್ ಕರ್ನಾಟಕ ಸರ್ಕಾರತ್‌ರ ಕನ್ನಡ ಪುಸ್ತಕ ಪ್ರಾಧಿಕಾರ 3ನೇ ಮುದ್ರಣ ಮಾಡ್‌ಚಿ. [ಈ 3ನೇ ಮುದ್ರಣವೂ ತ್‌ೕಂದ್ ಪೋಯಿತ್ ಚೆನ್ನಕಾಲತ್‌ಂಜಿಪ್ಪರ] ಪಟ್ಟೋಲೆ ಪಳಮೆನ ಓದಂಡೂಂದ್ ಕೇಟಂಡ್ ಬಪ್ಪಯಿಂಗಕ್ ಬಲ್ಯ ನಿರಾಶೆ ಆಯಿ ಪೋಪಯಿಂಜತ್. ಕೊಡವ ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯ ಪಿಂಞ ಜಾನಪದತ್‌ಲ್ ಸಂಶೋಧನೆಕ್ ಇಳಿವ ವಿದ್ಯಾರ್ಥಿಯಡ ಸಂಖ್ಯೆ ಜಾಸ್ತಿ ಆಯಂಡ್ ಬಾತ್. ಪೊರ ರಾಜ್ಯ ಪಿಂಞ ಪೊರದೇಶತ್‌ರ ವಿದ್ಯಾರ್ಥಿಯಕೂ ಈ ಚೆರಿಯ ಕೊಡಗ್‌ರ ಮೇಲೆ ಸಂಶೋಧನೆ ಮಾಡುವ ಪುರ್‌ಡ್ ಪುಟ್ಟಿತ್, ಪ್ರತಿಯೊಬ್ಬನೂ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಕ್ ಬಂದಿತ್ ಪಟ್ಟೋಲೆ ಪಳಮೆ ಬೋಂಡೂಂದ್ ಹಟ ಮಾಡ್‌ವಯಿಂಜತ್. ಕೆಲಬಯಿಚಿತ್ ಕೂಳ್ ಕೇಪವಂಗ್ ಕೂಳ್‌ಡ್‌ವದ್ ಮನೆಕಾರಡ ಧರ್ಮ. ಅನ್ನನೆ ಆಸಕ್ತ ಜನಡ ಬೋಡಿಕೆನ ಪೂರೈಚಿಡ್‌ವಕ್ಕಾಯಿತ್ ಈ ಅವಧಿರ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪಟ್ಟೋಲೆ ಪಳಮೆರ 4ನೇ ಮುದ್ರಣಕ್ ಇಳ್‌ಂಜತ್.

ಪಟ್ಟೋಲೆ ಪಳಮೆಲ್ ಎಂತ ಉಂಡ್‌ೕಂದ್ ಕೇಪಾಂಗ್‌ಂಜಿ ಎಂತದ್ ಇಲ್ಲೇಂದ್ ಕೇಪದೇ ಸೆರೀಂದ್ ತೋಂದುವ. ಕೊಡಗ್‌ರ ಭೂ ವಿವರಣೆ, ಕೊಡಗ್‌ರ್ ಪುರಾಣ, ಕಾವೇರಿ ಪುರಾಣ, ಕೊಡಗ್‌ರ ಇತಿಹಾಸ, ಸಾಮಾಜಿಕ ಜೀವನ, ಸಾಮಾಜಿಕ ಕೆಟ್ಟ್‌ಪಾಡ್,

ಪಂಡೇತ ಪದ್ಧತಿ, ಪರಂಪರೆ, ಜಾನಪದ ಕಲೆ, ಸಂಸ್ಕೃತಿ, ಸಾಹಿತ್ಯ... ಇನ್ನನೆ ಇಡೀ ಕೊಡಗ್‌ರ ಪ್ರತಿಬಿಂಬ ಪಟ್ಟೋಲೆ ಪಳಮೆ. ಒರೇ ಒರ್ ವ್ಯಕ್ತಿ ಮಾಡ್‌ನ ಸಾಧನೆ ಇದ್. ಕೊಡಗ್‌ರ ಆದ್ಯ ಸಂಶೋಧಕ ನಡಿಕೇರಿಯಂಡ ಚಿಣ್ಣಪ್ಪಂದ್ ಎಣ್ಣಲು. ಏದೇದ್ ಕಾಲಕೂ ಕೊಡವ ತಕ್ಕ್ ಪರಿಯುವ ಪ್ರತಿಯೊಬ್ಬಂಡ ಮನೆಲೂ ಎಲಂಗಂಡಿಯಂತ ಮಹಾಗ್ರಂಥ ಇದ್.

ಇಕ್ಕಿಕ್ಕ ಸಂಶೋಧನೆಕ್ ಇಳ್‌ಂಜ ಚೆನ್ನ ಜನ ಪಟ್ಟೋಲೆ ಪಳಮೆಲುಳ್ಳ ಪಂಡೇತ ಸಾಮಾಜಿಕ ಸಂಪ್ರದಾಯತ್‌ನ ತಪ್ಪರ್ಥ ಮಾಡಿಯಂಡ್ ಕುತ್ತ ಪರ್‌ಂದವು ಉಂಟ್. ಆಚೇಂಗಿ ಈ ಪುಸ್ತಕ ಎಳ್ತ್‌ಕಾರಂಡ ಅಭಿಪ್ರಾಯತ್‌ನ ಎಳ್‌ದ್‌ನದಲ್ಲಾಂದ್ ಈ ಕುತ್ತ ಪರಿಯುವಯಿಂಗ ಅರ್ಥ ಮಾಡಿಯವಂಡು. ಇದ್ ಪಂಡೇತ ಸಾಮಾಜಿಕ ಪದ್ಧತಿ ಎನ್ನನೆ ಇಂಜತ್, ಎಣ್ಣುವಾಂಡ ಸಮಗ್ರ ಸಂಗ್ರಹ ಮಾತ್ರ. ಪಂಡಿಂಜ ಜಾತಿಪದ್ಧತಿ, ನಡಿಕೇರಿಯಂಡ ಚಿಣ್ಣಪ್ಪ ಮಾಡಿತ್ ಬೆಚ್ಚದ್ ಅಲ್ಲ! ಇವು ಆ ಪದ್ಧತಿನ ದಾಖಲೆ ಮಾಡಿಯೆ ಮಾತ್ರ. ಅಯಿಂಗಳೇ ಸೃಷ್ಟಿ ಮಾಡ್‌ನ ಪದ್ಧತಿ ಅಲ್ಲ ಎಣ್ಣುವಾನ ಇಕ್ಕತ್‌ರ ಜನಾಂಗ ಅರ್‌ಂಜವಂಡಿಯ ಅವಶ್ಯಕತೆ ಉಂಡ್. ಈ ಪುಸ್ತಕ ಎಳ್‌ದ್‌ನ ಕಾಲ ಸುಮಾರ್ 80 ಕಾಲಕ್ ಬಯ್ಯ ಎಣ್ಣ್‌ವಾನೋ ಚೆನ್ನ ಅರ್ಥ ಮಾಡಿಯಂಡ್ ಪಿಮರ್ಶಕಂಗ ಎಳ್‌ದುವಕ ತಂಗಡ ಮನಸ್ಸ್‌ಕೂ, ಪೆನ್ನ್‌ಕೂ ಲಗಾಮು ಇಡಂಡಿಯದ್ ನಲ್ಲದ್ !

ಪುಸ್ತಕ 2, 3ನೇ ಮುದ್ರಣ ಆಯಂಡ್ ಬಂದನ್ನಕೇ ಮೂಲ ಎಳ್ತ್‌ಲೂ ಪುನರ್ ಮುದ್ರಣತ್‌ಲೂ ಪೆರ್ತ್ ವ್ಯತ್ಯಾಸ ಬಂದ್‌ರ್‌ತ್. ಅಕ್ಷರ ತಪ್ಪ್, ಶಬ್ದ ತಪ್ಪ್, ಬುಟ್ಟ್‌ಪೋನ ಭಾಗ, ಈರಂಡ್‌ಕುರಿ ಎಳ್ದಿಪೋನದ್ ಇನ್ನತ ತಪ್ಪ್ ಕಾಂಬಕಾಚಿ. ಈ ತಪ್ಪ್‌ನ ತಿದ್ದಿತ್ ಸೆರಿಪಡ್‌ತ್‌ವಕ್ ಆದ್ಯ ಮುದ್ರಣತ್‌ರ ಪುಸ್ತಕ ಕ್‌ಟ್ಟತಾಯಿತ್ ಇಂಜ ಪರಿಸ್ಥಿತಿಲ್ ನಂಗಡ ಸಹಾಯಕ್ ನಿಂದವು ನಡಿಕೇರಿಯಂಡ ಚಿಣ್ಣಪ್ಪ ಅಯಿಂಗಡ ಕ್‌ರ್‌ಮಕ್ಕಳಾನ ಶ್ರೀ ಬೊವ್ವೇರಿಯಂಡ ಚಿಣ್ಣಪ್ಪ ಪಿಂಞ ಶ್ರೀಮತಿ ನಂಜಮ್ಮ ಚಿಣ್ಣಪ್ಪ, ಬೆಂಗಳೂರ್, ಇಯಂಗ. ಈ ದಂಪತಿಯ ಪಟ್ಟೋಲೆ ಪಳಮೆರ ಪ್ರತಿ ಗೆರೆನೋ ಪ್ರತಿ ಅಕ್ಷರತ್‌ನೋ ಮೂಲ ಎಳ್ತ್‌ಕ್ ಹೋಲಿಕೆ ಮಾಡಿತ್ ವ್ಯತ್ಯಾಸ ಪಿಂಞ ತಪ್ಪ್‌ನೆಲ್ಲಾ ಸೆರಿಪಡ್‌ತಿತ್ ತಂದಿತ್ ಸಹಾಯಮಾಡ್‌ಚಿ. ಇಯಂಗಕ್ ಅಕಾಡೆಮಿರ ಪರವಾಯಿತ್ ವಂದನೆ.

ಈ ಪುಸ್ತಕತ್‌ನ ಚೆನ್ನಂಗೇ ಅವಧಿಲ್ ಚಾಯಿಲ್ ಅಚ್ಚ್ ಮಾಡಿತ್ ಕೊಡಗ್‌ರ ಸಂಸ್ಕೃತಿಕ್ ಒಪ್ಪುವಂಥ ಎದಿಕೆ ಪಾಳೆನ (ಮುಖಪುಟ) ತಾನೇ ತಾಂಡ ಸ್ವಂತ ಬುದ್ಧಿವಂತಿಕೆಲ್ ರೂಪ್ ಕೊಡ್‌ತಿತ್ ಅಚ್ಚ್ ಮಾಡಿ ತಂದಂತ ಮೈಸೂರ್‌ರ ಗುಡ್‌ಟಚ್ ಪ್ರಿಂಟರ್ಸ್ ಮಾಲಿಕಂಗಳಾನ ಶ್ರೀ ಪೊಯ್ಯೇಟಿರ ಗಣಪತಿ ಅಯಿಂಗಕೂ, ಅಯಿಂಗಡ ಸಿಬ್ಬಂದಿ ವರ್ಗಕೂ ನಂಗಡ ವಂದನೆ. ಅದತ್‌ಲೂ ಕುಮಾರಿ ಉಮ ಅಯಿಂಗಡ ಮುತುವರ್ಜಿ ಮೆಚ್ಚುವಂತದೆ.

ಈ ನಾಲನೇ (4ನೇ) ಮುದ್ರಣತ್‌ಲ್ ತಪ್ಪ್ ಬರತನ್ನಕೆ ನಂಗ ಪೆರ್ತ್ ಪ್ರಯತ್ನ ಪಟ್ಟತ್. ಆನಕಲೂ ಎನ್ನೇಂಗಿ ಚೆರಿಯ ಚೆರಿಯ ದೋಷ ಕಣ್ಣ್ ತಪ್ಪ್‌ನಗುಂಡ್ ಬಂದೇ ಬಪ್ಪ. ಅನ್ನತ ತಪ್ಪ್ ಕಂಡಕ ಓದುಗಂಗ ಮಾಪ್ ಮಾಡಂಡೂಂದ್ ಕೇಟವಿ.

ಪಟ್ಟೋಲೆ ಪಳಮೆ ಎಲ್ಲಾ ಕೊಡವ ಭಾಷಿಕಂಗಡ ಮನೆರ ನೆಲ್ಲಕ್ಕಿ ಬೊಳಕ್‌ರಡಿಲ್ ಸ್ಥಾನ ಪಡ್‌ಂದಿತ್ ಕೊಡವಾಮೆರ ಬೊಳಚೆಕೊ ಕೇಳಿಕೂ ಸಹಾಯ ಆಡ್‌ಂದ್ ಬಯಂದವಿ.

ಬಾಚರಣಿಯಂಡ ಪಿ. ಅಪ್ಪಣ್ಣ
ಅಧ್ಯಕ್ಷ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

ಮೂರನೆಯ ಮುದ್ರಣದ ಮುನ್ನುಡಿ

ಮೊದಲನೆಯ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಒಂದು ಅತ್ಯಂತ ಉಪಯುಕ್ತವಾದ ಹೆಜ್ಜೆಯನ್ನಿಟ್ಟಿತು. ಒಂದು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಸುಲಭ ಬೆಲೆಗೆ ದೊರೆಯುವಂತೆ ಪ್ರಕಟಿಸಿತು.

ಈ ಘನವಾದ ಕಾರ್ಯವನ್ನು ಕರ್ನಾಟಕ ಸರ್ಕಾರವು 'ಜನಪ್ರಿಯ ಪುಸ್ತಕಮಾಲೆ'ಯ ಮೂಲಕ ಮುಂದುವರೆಸಿತು. "ಕನ್ನಡ ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಮೂಡಿಸುವ ಹಾಗೂ ಕನ್ನಡ ಪುಸ್ತಕಗಳನ್ನು ಎಲ್ಲರಿಗೂ ಸುಲಭ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ದೃಷ್ಟಿಯಿಂದ" ೧೯೮೯–೯೦ರ, ಸಾಲಿನಿಂದ 'ಜನಪ್ರಿಯ ಪುಸ್ತಕಮಾಲೆ'ಯ ಯೋಜನೆಯನ್ನು ಕಾರ್ಯಗತ ಮಾಡಿತ್ತು. ೧೯೯೩–೯೪ರ ವರ್ಷದ ಹೊತ್ತಿಗೆ ಈ ಮಾಲೆಯಲ್ಲಿ ೭೮ ಪುಸ್ತಕಗಳು ಪ್ರಕಟವಾದವು.

ಕನ್ನಡ ಪುಸ್ತಕ ಪ್ರಾಧಿಕಾರವು 'ಜನಪ್ರಿಯ ಪುಸ್ತಕಮಾಲೆ'ಯ ಮೂಲ ಉದ್ದೇಶವನ್ನು ಕಣ್ಣ ಮುಂದಿರಿಸಿಕೊಂಡು ಮುಂದುವರೆಯುತ್ತಿದೆ. ಜನಪ್ರಿಯತೆಯನ್ನು ಗಳಿಸಿದ ಮೌಲಿಕವಾದ ಕೃತಿಗಳು ಹಲವು ಇಂದು ಓದಬಯಸುವವರಿಗೆ ಲಭ್ಯವಿಲ್ಲ. ಇಂತಹ ಕೃತಿಗಳನ್ನು ಆರಿಸಿ, ಒಂದು ಆವೃತ್ತಿಯ ಪ್ರಟಕಣೆಯ ಹಕ್ಕನ್ನು ಪಡೆಯಲು ಸಾಧ್ಯವಾದ ಸಂದರ್ಭದಲ್ಲಿ ಅವನ್ನು ಆದಷ್ಟು ಸುಲಭ ಬೆಲೆಗೆ ಓದುಗರಿಗೆ ಲಭ್ಯಮಾಡಿಕೊಡಲು ಕನ್ನಡ ಪುಸ್ತಕ ಪ್ರಾಧಿಕಾರವು ಉದ್ದೇಶಿಸಿದೆ.

'ಪಟ್ಟೋಲೆ ಪಳಮೆ'ಯು ಈ ಮಾಲೆಯಲ್ಲಿ ಅರಳುತ್ತಿರುವುದು ನನಗೆ ವಿಶೇಷ ಸಂತೋಷವನ್ನು ಕೊಡುತ್ತಿದೆ. ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕು. ಕೊಡಗು, ಕರ್ನಾಟಕದಲ್ಲಿ ಸಾಂಸ್ಕೃತಿಕ ವೈವಿಧ್ಯವನ್ನೂ ಸಂಪತ್ತನ್ನೂ ಬೆಳೆಸಿರುವ ಪ್ರದೇಶಗಳಲ್ಲಿ ಒಂದು. ಕೊಡಗು ಭಾಷೆಗೆ ಸ್ವಂತ ಲಿಪಿ ಇಲ್ಲದಿದ್ದರೂ ಆ ಪ್ರದೇಶದ ನಮ್ಮ ಸೋದರ ಸೋದರಿಯರು ಮೌಖಿಕ ಪರಂಪರೆಯಲ್ಲಿಯೇ ತಮ್ಮ ಸಾಂಸ್ಕೃತಿಕ ಭಾಗ್ಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಈ ಕೃತಿಯು ಕೊಡಗಿನ ಜಾನಪದಕ್ಕೆ ಮಾತ್ರವಲ್ಲ ಕನ್ನಡ ನಾಡಿನ ಜಾನಪದಕ್ಕೆ ಒಂದು ಅಪೂರ್ವ ಕೊಡುಗೆ. ಇದನ್ನು ಸಿದ್ಧಗೊಳಿಸಿದ ಶ್ರೀ ನಡಿಕೇರಿಯಂಡ ಚಿಣ್ಣಪ್ಪನವರು ಅಸಾಧಾರಣ ನಿಷ್ಠೆ ಮತ್ತು ಸಾಮರ್ಥ್ಯಗಳ ಕ್ಷೇತ್ರ ಕಾರ್ಯಕರ್ತರು. ಜಾನಪದ ಅಧ್ಯಯನ, ಸಾಹಿತ್ಯದ ಅಧ್ಯಯನ, ಸಂಸ್ಕೃತಿಯ ಅಧ್ಯಯನ, ಭಾಷೆಯ ಅಧ್ಯಯನ ಯಾವುದನ್ನು ಕೈಗೊಂಡವರಿಗೂ ಬಹು ಮೌಲಿಕವಾದ ಈ ಕೃತಿಯನ್ನು ಕನ್ನಡಿಗರ ಕೈಯಲ್ಲಿಡಲು ಸಾಧ್ಯವಾದುದು ನಮ್ಮ ಸುಯೋಗ.

ಈ ಕೃತಿಯ ಈ ಆವೃತ್ತಿಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದವರು ಆಗ ಕರ್ನಾಟಕದ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದು ಈಗ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರಾದ ಮಾನ್ಯ ಶ್ರೀ ಎಂ. ಸಿ. ನಾಣಯ್ಯನವರು. ಈ ಪುಸ್ತಕದ ಪ್ರತಿಗಳು ಲಭ್ಯವಿಲ್ಲ ಎಂಬ ಅಂಶದ ಕಡೆಗೆ ಗಮನ ಸೆಳೆದು ಅದರ ಪುನರ್ ಮುದ್ರಣಕ್ಕೆ ಅಗತ್ಯವನ್ನು ವಿವರಿಸಿದವರು ಅವರು. ಕನ್ನಡ ಪುಸ್ತಕ ಪಾಧಿಕಾರವು ಇದನ್ನು ಪ್ರಕಟಿಸಲು ಹಲವು ಅಡ್ಡಿಗಳು ಎದುರಾದವು. ಅವನ್ನು ನಿವಾರಣೆ ಮಾಡಿದವರು

ಅವರು. ಪುಸ್ತಕದ ಪ್ರತಿ ದೊರೆಯದಿದ್ದಾಗ ವಿಶೇಷ ಶ್ರಮವಹಿಸಿ ಒದಗಿಸಿಕೊಟ್ಟವರು ಅವರು. ನಮಗೆ ನೆರವಾದ ಮತ್ತೊಬ್ಬ ಸ್ನೇಹಿತರು ಮೈಸೂರಿನ, ಮೈಸೂರು ಮಿತ್ರ, ಸ್ಟಾರ್ ಆಫ್ ಮೈಸೂರು ಪತ್ರಿಕೆಗಳ ಸಂಪಾದಕರಾದ ಶ್ರೀ ಕೆ. ಬಿ. ಗಣಪತಿ ಅವರು. ಅಚ್ಚಿಗೆ ಬಳಸಬಹುದಾದ ಪ್ರತಿಯನ್ನು ಕಳುಹಿಸಿ ಉಪಕಾರ ಮಾಡಿದರು.

ಈ ಕೃತಿಯನ್ನು ಪ್ರಕಟಿಸಲು ಒಪ್ಪಿಗೆ ಕೊಟ್ಟವರು ಶ್ರೀ ಎನ್. ಎ. ತಿಮ್ಮಯ್ಯ ಅವರು. ಈ ಕೃತಿ ಮೊದಲ ಬಾರಿಗೆ ೧೯೨೪ರಲ್ಲಿ ಅಚ್ಚಾಯಿತು. ೧೯೭೫ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಎರಡನೆ ಆವೃತ್ತಿಯನ್ನು ಪ್ರಕಟಿಸಿತು. ಈ ಮೂರನೆ ಆವೃತ್ತಿಯನ್ನು ಪ್ರಕಟಿಸಲು ಸಾಧ್ಯವಾದದ್ದು ಶ್ರೀ ಎಂ. ಸಿ. ನಾಣಯ್ಯ, ಶ್ರೀ ಕೆ. ಬಿ. ಗಣಪತಿ ಮತ್ತು ಶ್ರೀ ಎನ್. ಎ. ತಿಮ್ಮಯ್ಯ ಅವರ ಸಹಕಾರದಿಂದ. ಈ ಮೂವರು ಸಹೃದಯರಿಗೂ ಕನ್ನಡ ಪುಸ್ತಕ ಪ್ರಾಧಿಕರದ ಕೃತಜ್ಞತೆಗಳು.

ಕೃತಿಯು ಅಚ್ಚಾಗುವಾಗ ಕೊಡವ ಭಾಷೆ ಬಲ್ಲವರು ಕರಡು ಪ್ರತಿಯನ್ನು ತಿದ್ದ ಬೇಕೆಂದು ನಾವು ಬಯಸಿದೆವು. ಶ್ರೀಮತಿ ಎಂ. ಟಿ. ರತಿ ಅವರು ನಮ್ಮ ನೆರವಿಗೆ ಬಂದು ಕರಡು ಪ್ರತಿಯನ್ನು ತಿದ್ದಿಕೊಟ್ಟಿದ್ದಾರೆ. ಭಾರತೀಶ ಎಂಟರ್‌ಪ್ರೈಸಸ್ ಮುದ್ರಣಾಲಯದವರು ಬಹು ಮಿತವಾದ ಕಾಲಾವಧಿಯಲ್ಲಿ ಇದರ ಮುದ್ರಣವನ್ನು ಪೂರೈಸಿಕೊಟ್ಟಿದ್ದಾರೆ. ಇವರಿಗೂ ನಮ್ಮ ವಂದನೆಗಳು.

ಬೆಂಗಳೂರು
೧-೩-೧೯೯೫

ಎಲ್. ಎಸ್. ಶೇಷಗಿರಿ ರಾವ್
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಎರಡನೆ ಆವೃತ್ತಿಗೆ ಮುನ್ನುಡಿ

ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಬಗ್ಗೆ ಹೊಸ ಉತ್ಸಾಹಗಳು ತೋರಿಬರುತ್ತಿರುವುದು ಗಮನಾರ್ಹವಾದ ವಿಷಯ. ಶಾಸ್ತ್ರೀಯವಾದ ತಳಹದಿಯ ಮೇಲೆ ಜಾನಪದ ಸಂಗ್ರಹ, ಸಂಶೋಧನೆಗಳು ನೆಲೆಗೊಳ್ಳಬೇಕಾಗಿದೆ. ಸಂಸ್ಕೃತಿಯ ತಾಯಿಬೇರಾದ ಜಾನಪದದ ಬಗೆಗೆ ಭಾರತದಲ್ಲಿ ನಿರ್ಲಕ್ಷ್ಯವೇ ಹೆಚ್ಚಾಗಿದ್ದು ಈವರೆಗೆ ನಡೆದಿರುವ ಸಂಗ್ರಹಕಾರ್ಯ ತುಂಬ ಅಸಮಗ್ರ ಎನಿಸಿದೆ. ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಕೆಲವು ಜಾನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಸಂಶೋಧನೆಗಳು ನಡೆದಿದ್ದರೂ ಸಮಗ್ರ ಜಾನಪದದ ಬಗೆಗೆ ವ್ಯಾಪಕವಾದ ಕಾರ್ಯ ಇನ್ನೂ ಆಗಬೇಕಾಗಿದೆ. 'ಭಾರತ ಜಾನಪದದ ತೌರು' ಎಂಬ ಅಂಶವನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು ಒಪ್ಪಿಕೊಂಡರೂ ಸಂಗ್ರಹ, ಅಧ್ಯಯನಗಳು ಇನ್ನೂ ಸಮರ್ಪಕ ರೀತಿಯಲ್ಲಿ ವೈಜ್ಞಾನಿಕವಾಗಿ ಭಾರತದಲ್ಲಿ ಆಗಬೇಕಾಗಿದೆ ಎಂಬ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಕೈಯಾಡಿಸಿದ ಯಾವ ವಿದ್ವಾಂಸನಾದರೂ ಈ ಮಾತನ್ನು ಒಪ್ಪಿಕೊಳ್ಳಬೇಕಾಗಿದೆ.

ಜಾನಪದದ ಸಾಹಿತ್ಯಿಕ ಬಗೆ, ಭಾಷಿಕ ಬಗೆ, ವೈಜ್ಞಾನಿಕ ಬಗೆ, ಕ್ರಿಯಾತ್ಮಕ ಬಗೆಗಳಿಗೆ ಸಂಬಂಧಿಸಿದಂತೆ ಕತೆ, ಗೀತೆ, ಲಾವಣಿ, ಒಗಟು, ಗಾದೆ, ನಂಬಿಕೆ, ಸಂಪ್ರದಾಯ, ವೈದ್ಯ, ಅಡುಗೆ, ಉಡುಗೆ, ತೊಡುಗೆ, ವೃತ್ತಿ, ಮಾಟ, ಮಂತ್ರ, ನೃತ್ಯ, ನಾಟಕ, ಚಿತ್ರ, ಶಿಲ್ಪ, ಆಟ, ಕೂಟ, ನಡೆ, ನುಡಿ ಮುಂತಾಗಿ ಜನಪದ ಜೀವನದ ಎಲ್ಲ ಸ್ತರಗಳನ್ನೂ ಒಳಗೊಳ್ಳುವ ವಿಸ್ತಾರ, ವೈವಿಧ್ಯದ ಹಿನ್ನೆಲೆಯಲ್ಲಿ ಪರಿಶೋಧನೆ ಸಂರಕ್ಷಣೆಗಳು ನಡೆಯಬೇಕಾದುದು ಅತ್ಯಂತ ಅವಶ್ಯಕವಾದ ವಿಷಯವಾಗಿದೆ. ವಿಶ್ವ ವಿದ್ಯಾನಿಲಯಗಳಂಥ ಶ್ರೇಷ್ಠ ಅಧ್ಯಯನ ಕೇಂದ್ರಗಳು ಈ ಕಾರ್ಯವನ್ನು ಕೈಗೊಂಡಾಗ ಮಾತ್ರ ಅದು ಸಾಕಷ್ಟು ಸಮರ್ಪಕವಾಗಿ, ಶಾಸ್ತ್ರೀಯವಾಗಿ, ಸುವ್ಯವಸ್ಥಿತವಾಗಿ ನಡೆಯಲು ಸಾಧ್ಯವಾಗುತ್ತದೆ. ಅನೇಕ ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳು ಜಾನಪದ ವಸ್ತು ಸಂಗ್ರಹಾಲಯ, ಸಂಶೋಧನಾಲಯ, ಅಧ್ಯಯನ ಕೇಂದ್ರಗಳ ವ್ಯವಸ್ಥೆಯನ್ನು ಎಷ್ಟೋ ವರ್ಷಗಳ ಹಿಂದೆಯೇ ಮಾಡಿವೆ. ಶಾಲಾ ಕಾಲೇಜುಗಳಲ್ಲಿ ಜಾನಪದ ಅಧ್ಯಯನ ವಿಷಯಗಳಲ್ಲಿ ಒಂದಾಗಿ ಸ್ವೀಕೃತವಾಗಿದೆ.

ಕರ್ನಾಟಕದಲ್ಲಿ ಜಾನಪದ ಸಂಗ್ರಹ ಕಳೆದ ಶತಮಾನದಿಂದಲೇ ಆರಂಭವಾದರೂ ಗೀತೆ ಮತ್ತು ಗಾದೆಗಳಿಗೆ ಸಂಬಂಧಿಸಿದಂತೆ ಮಾತ್ರ ಈ ಕಾರ್ಯ ತಕ್ಕಮಟ್ಟಿಗೆ ಆಗಿದೆ. ಜಾನಪದದ ಉಳಿದ ಪ್ರಕಾರಗಳತ್ತ ಯಾರೂ ವಿಶೇಷವಾದ ಆಸಕ್ತಿಯನ್ನು ಹರಿಸದೆ ಆ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಅಪಾರವಾಗಿ ಉಳಿದಿದೆ. ಗೀತೆ, ಗಾದೆಗಳನ್ನೊಳಗೊಂಡಂತೆ ಜಾನಪದದ ಉಳಿದ ಎಲ್ಲಾ ಪ್ರಮುಖ ಪ್ರಕಾರಗಳ ವ್ಯಾಪಕವಾದ ಸಂಗ್ರಹಕಾರ್ಯ ತ್ವರಿತವಾಗಿ ಆಗಬೇಕಾಗಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಸ್ಥಿರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲಬೇಕು. ಜಾನಪದ ಸಂಬಂಧವಾದ ಚಟುವಟಿಕೆಗಳು ಇಲ್ಲಿ ಸಕ್ರಮವಾಗಿ ಆರಂಭವಾಗಿ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ. ನಾಲ್ಕು ಐದು ವರ್ಷಗಳ ಹಿಂದೆಯೇ ಜಾನಪದವನ್ನು ಅಧ್ಯಯನ ವಿಷಯವನ್ನಾಗಿ ಕನ್ನಡ ಎಂ. ಎ. ತರಗತಿಗೆ ಅಳವಡಿಸಿದ್ದರ ಜೊತೆಗೆ ಜಾನಪದ ಸಂಶೋಧನೆ, ಜಾನಪದ ವಸ್ತುಸಂಗ್ರಹಾಲಯದ ಸ್ಥಾಪನೆಯ ಮೂಲಕ ಕನ್ನಡ ಅಧ್ಯಯನ

ಸಂಸ್ಥೆ ಉತ್ತಮ ರೀತಿಯಲ್ಲಿ ಜಾನಪದ ಸಂವರ್ಧನ ಕಾರ್ಯವನ್ನು ಕೈಗೊಂಡಿದೆ. ಅಪೂರ್ವ ಜನಪದ ಗೀತೆಗಳನ್ನು ಧ್ವನಿಮುದ್ರಣ ಮಾಡಿ ಸಂರಕ್ಷಿಸಲಾಗುತ್ತಿದೆ. ಇದರ ಜೊತೆಗೆ ಇತರ ಸಂಗ್ರಹಕರು ಕೈಗೊಳ್ಳುವ ಜಾನಪದ ಸಂಬಂಧವಾದ ಸಂಶೋಧನೆಗಳಿಗೂ ವಿಶೇಷ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಶಾಸ್ತ್ರೀಯ ಪ್ರಕಟಣೆಗಳಿಗೆ ಆದ್ಯ ಗಮನ ಕೊಡಲಾಗುತ್ತಿದೆ.

ಕೊಡಗಿನ ಜಾನಪದ ಸಂಸ್ಕೃತಿ, ಸಮಾಜ ಜೀವನ, ಇತಿಹಾಸ ಮೊದಲಾದ ಸಂಗತಿಗಳ ಮೇಲೆ ಬೆಳಕು ಬೀರುವ ಅಮೂಲ್ಯ ಗ್ರಂಥವಾದ ದಿ। ನಡಿಕೇರಿಯಂಡ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ' ಮೊದಲ ಬಾರಿಗೆ ೧೯೨೪ರಲ್ಲಿ ಪ್ರಕಟವಾಗಿದ್ದು, ಈಚೆಗೆ ಅದರ ಪ್ರತಿಗಳು ದುರ್ಲಭವಾಗಿದ್ದುವು. ಅದರ ಅಗತ್ಯವನ್ನು ಮನಗಂಡು ದಿ। ಚಿಣ್ಣಪ್ಪನವರ ಪುತ್ರರಾದ ಶ್ರೀ ಎನ್. ಸಿ. ಸುಬ್ಬಯ್ಯನವರು ಎರಡನೆಯ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸುವ ಪ್ರಯತ್ನದಲ್ಲಿ ತೊಡಗಿದ್ದರು. ಗ್ರಂಥದ ಮಹತ್ವವನ್ನು ಗಮನಿಸಿ ಈ ಗ್ರಂಥವನ್ನು ಅಧ್ಯಯನ ಸಂಸ್ಥೆಯ 'ಜಾನಪದ ಮಾಲೆ'ಯ ಅಂಗವಾಗಿ ಪ್ರಕಟಿಸಲು ನಿರ್ಧರಿಸಲಾಯಿತು. ಅಧ್ಯಯನ ಸಂಸ್ಥೆಯ ಮಹತ್ವದ ಪ್ರಕಟಣೆಗಳಲ್ಲಿ ಒಂದಾಗಿ 'ಪಟ್ಟೋಲೆ ಪಳಮೆ' ಈಗ ಹೊರಬರುತ್ತಿದೆ. ಅಧ್ಯಯನ ಸಂಸ್ಥೆಯ ಬಗ್ಗೆ ತೋರಿದ ಅಭಿಮಾನಕ್ಕಾಗಿ ಶ್ರೀ ಸುಬ್ಬಯ್ಯ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಮೊದಲ ಪುಟಗಳನ್ನು ಬಿಟ್ಟು ಉಳಿದ ಭಾಗ ಕೊಡಗಿನ ಅನುರಾಧ ಪ್ರೆಸ್ಸಿನಲ್ಲಿ ಅಚ್ಚಾಗಿದೆ. ಅಚ್ಚಾಗಿರುವ ಪುಟಗಳನ್ನು ಪರಿಶೀಲಿಸಿ, ತಪ್ಪುಗಳೇನಾದರೂ ಇದ್ದಲ್ಲಿ ಪಟ್ಟಿ ಮಾಡಿಕೊಡುವಂತೆ 'ಮೆ. ಕೂರ್ಗ್‌ಸ್ಟೀಲ್ ಇಂಡಸ್ಟ್ರೀಸ್'ನ ಶ್ರೀ ಕೆ. ಬಿ. ಸೋಮಯ್ಯನವರನ್ನು ಕೇಳಿಕೊಂಡೆವು. ಅವರು ತುಂಬ ಶ್ರದ್ಧೆ, ಆಸಕ್ತಿಯಿಂದ ಇಡೀ ಪುಸ್ತಕವನ್ನು ಪರಿಶೀಲಿಸಿ, ಬಹುಮಟ್ಟಿಗೆ ಪಾಠಾಂತರ ರೂಪದಲ್ಲಿರುವ ಹೆಚ್ಚಿನ ಪಂಕ್ತಿಗಳನ್ನೂ ಪದ್ಯಗಳನ್ನೂ ಒಳಗೊಂಡಿರುವ 'ಒಪ್ಪೋಲೆ'ಯೊಂದನ್ನು ಸಿದ್ಧಪಡಿಸಿಕೊಟ್ಟರು. ಆದರೆ, ಅಚ್ಚಾಗಿರುವ ಈ ಪ್ರತಿ ಸಂಕಲನಕಾರರ ಮೇಲ್ವಿಚಾರಣೆಯಲ್ಲಿ ೧೯೨೪ರಲ್ಲಿ ಅಚ್ಚಾದ ಪ್ರತಿಯನ್ನು ನಿಕಟವಾಗಿ ಹೋಲುತ್ತದೆ ಎಂಬುದು ತೌಲನಿಕ ಪರಿಶೀಲನೆಯಿಂದ ದೃಢಪಟ್ಟಿತು. ಹೀಗಾಗಿ ಶ್ರೀ ಸೋಮಯ್ಯನವರು ಸೂಚಿಸಿದ ತಿದ್ದುಪಡಿಗಳನ್ನು ಈ ಆವೃತ್ತಿಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗದೆ ಹೋಗಿದೆ. ಆದರೂ ಸಂಸ್ಥೆಯ ಮೇಲಿನ ವಿಶ್ವಾಸದಿಂದ ಅವರು ಮಾಡಿಕೊಟ್ಟಿರುವ ಕೆಲಸಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವಾಗಿದೆ. ಗ್ರಂಥಭಾಗವನ್ನು ಮುದ್ರಿಸಿಕೊಟ್ಟಿರುವ ಅನುರಾಧ ಪ್ರೆಸ್ಸಿನವರಿಗೂ, ಮೊದಲ ಪುಟಗಳ ಮುದ್ರಣ, ರಕ್ಷಾಕವಚದ ಮುದ್ರಣ ಹಾಗೂ ಬೈಂಡಿಂಗ್ ಕಾರ್ಯಗಳಲ್ಲಿ ಸಹಕರಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಿಗೂ ನಮ್ಮ ವಂದನೆಗಳು.

ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ಎರಡನೆ ಆವೃತ್ತಿಗೆ ವಿಭಾಗ ಸಂಪಾದಕರ ಮಾತು

೧

ಕರ್ನಾಟಕ ಜಾನಪದ ಸಂಗ್ರಹದ ಇತಿಹಾಸವನ್ನು ಬರೆಯುವಾಗ ಸಾಮಾನ್ಯವಾಗಿ ಗೀತಸಂಕಲನಗಳ ಸಾಲಿನಲ್ಲಿ 'ಗರತಿಯ ಹಾಡು'(೧೯೩೧), ಸಮಗ್ರ ಜಾನಪದ ದೃಷ್ಟಿಯ ಗ್ರಂಥಗಳಲ್ಲಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು'(೧೯೩೪), ಇವುಗಳನ್ನು ಆದ್ಯಕೃತಿಗಳೆಂದು ಹೆಸರಿಸಲಾಗುತ್ತಿತ್ತು. ಕೊಡಗಿನ ಜಾನಪದಕ್ಕೆ ಸಂಬಂಧಿಸಿದಂತೆ ೧೯೨೪ರ ವೇಳೆಗೇ ಪ್ರಕಟವಾಗಿದ್ದ 'ಪಟ್ಟೋಲೆ ಪಳಮೆ' ಸಂಶೋಧಕರ ಆಸಕ್ತಿಯನ್ನು ಇತ್ತೀಚೆಗೆ ಸೆಳೆದಿದೆ. ಈ ಹಿಂದೆ ಇಷ್ಟೇ ಮಹತ್ವದ ಮತ್ತೊಂದು ಕೃತಿ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಸಹ ದ್ವಿತೀಯ ಮುದ್ರಣವನ್ನು ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಮತ್ತೆ ಕಂಡಿತು. ಕನ್ನಡ ಜಾನಪದ ಸಂಗ್ರಹಗಳ ಆಚಾರ್ಯ ಕೃತಿಯಾದ 'ಪಟ್ಟೋಲೆ ಪಳಮೆ' ಈ ಮಾಲೆಯಲ್ಲಿಯೇ ಪ್ರಕಾಶಕ್ಕೆ ಬರುತ್ತಿರುವುದು ಅಭಿಮಾನದ ವಿಷಯವಾಗಿದೆ.

ಕಳೆದ ಶತಮಾನದಲ್ಲಿ, ಈ ಶತಮಾನದ ಆದಿಭಾಗದಲ್ಲಿ ಕರ್ನಾಟಕದಲ್ಲಿ ಜಾನಪದ ಸಂಗ್ರಹಕಾರ್ಯ ಅಷ್ಟಿಷ್ಟು ನಡೆದಿದ್ದರೂ ಹೆಚ್ಚು ಸಾಹಿತ್ಯ ಇಂಗ್ಲೀಷಿನ ಮೂಲಕವೇ ನಮಗೆ ಪರಿಚಯವಾಗಬೇಕಿದ್ದಿತು. ಗೋವರ್ ಹಾಗೂ ಫ್ಲೀಟರು ಬೆಳಕಿಗೆ ತಂದ ಜನಪದಗೀತೆ, ಲಾವಣಿಗಳು ಈ ಬಗೆಯವು. ಲಾವಣಿಗಳ ಕನ್ನಡ ರೂಪಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಫ್ಲೀಟರು ನೀಡಿದ್ದರೂ ಸ್ವತಂತ್ರ ಸಂಕಲನವೊಂದರಲ್ಲಿ ಅವು ಲಭ್ಯವಾಗಲಿಲ್ಲ.[1] 'ಮುಂದೆ ೧೮೯೪ರ ವೇಳೆಗೆ ಕಿಟ್ಟೆಲ್ ಕೋಶದ ಗಾದೆಗಳು ನಮ್ಮ ಗಮನವನ್ನು ಸೆಳೆದುಕೊಳ್ಳುತ್ತವೆ. ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಬಾಸೆಲ್ ಮಿಶನ್ ಪ್ರೆಸ್ಸಿನವರು ಹೊರತಂದ ಎರಡು ಗಾದೆಗಳ ಸಂಕಲನವೂ ಅಷ್ಟೇನೂ ಪ್ರಮುಖವಾದುವಲ್ಲ. ಹೀಗೆ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಸಣ್ಣ ಪ್ರಯತ್ನಗಳನ್ನು ಬಿಟ್ಟರೆ ವಿವರವಾದ ಅಧ್ಯಯನ ೧೯೨೪ರವರೆಗೆ ಎಲ್ಲಿಯೂ ಕಾಣುವುದಿಲ್ಲ. ಕೊಡಗಿನ ಶ್ರೀ ನಡಿಕೇರಿಯಂಡ ಚಿಣ್ಣಪ್ಪನವರು ಕೊಡವ ಸಂಸ್ಕೃತಿಯನ್ನು ಪರಿಚಯಿಸುವ 'ಪಟ್ಟೋಲೆ ಪಳಮೆ'ಯಂಥ ಅತ್ಯಂತ ಗಮನಾರ್ಹ ಕೃತಿಯನ್ನು ಪ್ರಕಟಿಸಿ ಕರ್ನಾಟಕ ಜಾನಪದ ಅಧ್ಯಯನಕ್ಕೆ ಒಳ್ಳೆಯ ನಾಂದಿಯನ್ನು ಹಾಡಿದರು. ಈ ಕೃತಿಯನ್ನು ಸಮಗ್ರ ಜಾನಪದ ದೃಷ್ಟಿಯ ಹಿನ್ನೆಲೆಯಲ್ಲಿ ನೋಡಿದಾಗ ಭಾರತೀಯ ಭಾಷೆಗಳಾವುದರಲ್ಲಿಯೂ ಈ ಅವಧಿಯಲ್ಲಿ ಇಂಥ ಪ್ರಯತ್ನಗಳು ಕಾಣಬರುವುದಿಲ್ಲ ಎಂಬುದು ಇಲ್ಲಿ ಗಮನಾರ್ಹ.

'ಪಟ್ಟೋಲೆ ಪಳಮೆ' ಶೀರ್ಷಿಕೆಯೇ ಸೂಚಿಸುವಂತೆ ಬಾಯಿಂದ ಬಾಯಿಗೆ ಹರಿದು ಬಂದ ಮಾತನ್ನೊಳಗೊಂಡ ಕೃತಿ. ಪರಂಪರಾನುಗತ ವಿಷಯಗಳನ್ನೊಳಗೊಂಡು, ಮೌಖಿಕ ಸಂಪ್ರದಾಯಗಳನ್ನು ಪರಿಚಯಿಸುವ ಒಂದು ಒಳ್ಳೆಯ ಪ್ರಯತ್ನ. ಕೃತಿಕಾರರು ಪ್ರಥಮ ಆವೃತ್ತಿಯಲ್ಲಿ 'ಇವರಿಂದ ಸಂಗ್ರಹಿಸಲ್ಪಟ್ಟಿದ್ದು' ಎಂಬ ಮಾತನ್ನೇ ಬಳಸಿ, ತಾವು ಜನರ ನಡೆ, ನುಡಿ ಆಚಾರ ವಿಚಾರಗಳನ್ನು ಸಂಗ್ರಹಿಸಿ ಪ್ರಕಟಿಸಿದ 'ಕ್ಷೇತ್ರ ಕಾರ್ಯಕರ್ತ' ಎಂಬ ಅಭಿಪ್ರಾಯವನ್ನು ಖಚಿತಪಡಿಸುತ್ತಾರೆ. ಕೊಡವ ಮೂಲದ ಜಾನಪದದ ವಿವಿಧ ಪ್ರಕಾರಗಳನ್ನು ತಮ್ಮ ಕೃತಿಯಲ್ಲಿ ಅವರು ಸಂಗ್ರಹಿಸಿಕೊಟ್ಟಿದ್ದರೂ, ತಾವೊಬ್ಬ ಜಾನಪದ ವಿದ್ವಾಂಸನಾಗಿ ಈ ಕಾರ್ಯವನ್ನು ಮಾಡುತ್ತಿದ್ದೇನೆಂಬ ಕಲ್ಪನೆಯೇ ಇಲ್ಲದೆ ಆ ಕ್ಷೇತ್ರದ ಒಂದು ಮಹತ್ವದ

---

[1] ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಮಾಲೆಯಲ್ಲಿ ಫ್ಲೀಟರು ಸಂಗ್ರಹಿಸಿದ ಸಮಗ್ರ ಲಾವಣಿಗಳನ್ನು ಇತ್ತೀಚೆಗೆ ಪ್ರಕಟಿಸಲಾಗಿದೆ.

ಹೆಸರಾಗಿ ಉಳಿದುಹೋಗಿದ್ದಾರೆ.

"ನನ್ನ ವಿನೋದಕ್ಕಾಗಿ ಕೊಡಗು ಪದಗಳನ್ನು ಒದಗಿಸುತ್ತ ಇದ್ದು ಕೆಲವು ಮಟ್ಟಿಗೆ ಹಾಡುಗಳು ದೊರೆತನಂತರ ಕೊಡವರ ಪದ್ಧತಿಗಳನ್ನು ಬರೆಯತೊಡಗಿದೆ..." ಎಂದು ಅವರು ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ಪ್ರಸಿದ್ಧ ಮಾನವ ಶಾಸ್ತ್ರೀಯ ಹಾಗೂ ಜಾನಪದ ವಿದ್ವಾಂಸ ಬಿ. ಎ. ಬಾಟ್ಕಿನ್ ಅವರು ಹೇಳುವಂತೆ 'In a purely oral cuture every thing is folklore' ಎಂಬ ಮಾತು ಇಲ್ಲಿ ತುಂಬ ಅರ್ಥಪೂರ್ಣವಾಗಿ ತೋರುತ್ತದೆ. ಕೊಡವ ಜನಾಂಗಕ್ಕೆ ತನ್ನದೇ ಆದ ಲಿಪಿಯಿಲ್ಲ. ಬದುಕಿನ ಸಮಸ್ತವೂ ಮೌಖಿಕ ಸಂಪ್ರದಾಯದ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಇಲ್ಲಿ ಸಾಗಿಬರಬೇಕು. ಜೀವನ ವಿಧಾನ, ನಂಬಿಕೆ, ಸಂಪ್ರದಾಯ, ಕಲೆ, ಗಾದೆ, ಒಗಟು, ಹಾಡು, ಕತೆ, ಅಡುಗೆ, ವೈದ್ಯ ಮುಂತಾದ ಎಲ್ಲ ವಿಷಯಗಳಿಗೂ ಅವರು ಮೌಖಿಕ ಸಂಪ್ರದಾಯವನ್ನು ಅವಲಂಬಿಸುತ್ತಾರೆ. ಶ್ರೀ ಜಿಣ್ಣಪ್ಪನವರು ಇಂಥ 'ಸಂಸ್ಕೃತಿ'ಯನ್ನು ತಮ್ಮ ಅಧ್ಯಯನ ವಿಷಯವಾಗಿ ಆರಿಸಿಕೊಂಡು, ಕೇವಲ ಅದರ ಉಳಿವಿಗಾಗಿ ಗ್ರಂಥರೂಪದಲ್ಲಿ ಸಂಗ್ರಹಿಸಿಡುವ ಸ್ತುತ್ಯ ಪ್ರಯತ್ನವನ್ನು ಮಾಡಿದ್ದಾರೆ. ಇದೊಂದು ಕೊಡವ ಜನಾಂಗದ 'ಸಂಸ್ಕೃತಿ'ಯ ಕೈಪಿಡಿ ಎಂಬಂತೆ ವಿಷಯಗಳನ್ನು ಅಳವಡಿಸಿ ಸಂಪ್ರದಾಯಗಳನ್ನೆಲ್ಲ ಪರಿಚಯಿಸಿದ್ದಾರೆ.

೨

ಕೊಡಗು ಜಿಲ್ಲೆ ಕರ್ನಾಟಕದ ಅತ್ಯಂತ ಸಂಪತ್ಸಮೃದ್ಧ ಪ್ರದೇಶಗಳಲ್ಲಿ ಒಂದು. ತನ್ನ ನಿಸರ್ಗ ಸಂಪತ್ತಿನಂತೆಯೇ ಕಾಫಿ, ಕಿತ್ತಳೆ, ಏಲಕ್ಕಿ, ಜೇನುತುಪ್ಪಗಳಿಗೂ ಪ್ರಸಿದ್ಧವಾದುದು. ಜಾನಪದ ಹಾಗೂ ಮಾನವಶಾಸ್ತ್ರ ದೃಷ್ಟಿಯಿಂದ ನೋಡಿದಾಗಲೂ ಸಂಶೋಧಕರಿಗೆ ಇಲ್ಲಿ ಹೇರಳವಾಗಿ ಸಾಮಾಗ್ರಿ ಲಭ್ಯವಾಗುತ್ತದೆ. ಕರ್ನಾಟಕದ ಮೂಲನಿವಾಸಿಗಳಲ್ಲಿ ಎರವರು, ಜೇನುಕುರುಬರು, ಬೆಟ್ಟಕುರುಬರು, ಮಲೆಕುಡಿಯರು ಮುಂತಾದವರು ಇಲ್ಲಿ ಕಂಡುಬರುತ್ತಾರೆ. ಪ್ರಮುಖ ಕೊಡವ ಜನಾಂಗದ ಜೊತೆಗೆ ಒಕ್ಕಲಿಗರು, ವೀರಶೈವರು, ಹರಿಜನರು, ವಿವಿಧ ಉಪಕಸುಬಿನ ಮಲಬಾರಿನ ಅನೇಕ ಬಗೆಯ ಜನರು, ತುಳುನಾಡಿನಿಂದ ಬಂದ ಜನರು ಅನೇಕ ಕಾಲದಿಂದ ಇಲ್ಲಿ ನೆಲೆಸಿದ್ದಾರೆ. ಕ್ರಿ. ಶ. ನಾಲ್ಕನೇ ಶತಮಾನದಿಂದ ಹದಿಮೂರನೆ ಶತಮಾನದವರೆಗೆ ಕೊಡಗು ಪ್ರದೇಶ ಜೈನಪ್ರಭುಗಳ ಆಳ್ವಿಕೆಗೆ ಒಳಪಟ್ಟಿದ್ದಿತು. ಅಲ್ಲಿಂದೀಚೆಗೆ ವೀರಶೈವ ಅರಸರು ಈ ಪ್ರದೇಶವನ್ನು ಆಳಿದರು. ಇಂಥ ಶಿಷ್ಟಧರ್ಮಗಳ ಅಲೆಗಳು ಬೀಸಿದರೂ ಕೊಡವ ಸಂಸ್ಕೃತಿ ತನ್ನ ನೈಜಸ್ವರೂಪದಲ್ಲಿ ನೈಸರ್ಗಿಕ ಧರ್ಮವನ್ನು (Natural Religion) ಕಾಪಾಡಿಕೊಂಡು ಬಂದಿರುವುದು ಕಾಣಬರುತ್ತದೆ. ಕೊಡವರು ಅತ್ಯಂತ ನಾಗರಿಕರೂ ಹೌದು ಸಂಪ್ರದಾಯನಿಷ್ಠರೂ ಹೌದು. ಅಮ್ಮ ಕೊಡವ, ಸಣ್ಣ ಕೊಡವ, ಮಲ್ಲ ಕೊಡವ, ಜಮ್ಮ ಕೊಡವ ಮುಂತಾದ ಅವರ ಒಳವಿಭಾಗಗಳಲ್ಲಿ ಅಮ್ಮ ಕೊಡವರು ಶಾಖಾಹಾರಿಗಳೆಂದು ಹೇಳಲಾಗುತ್ತದೆ. ಉಳಿದ ಕೊಡವರು ಶೌರ್ಯಸಾಹಸಕ್ಕೆ ಹೆಸರಾದವರು. ಅವರದೇ ಆದ ಸಂಪ್ರದಾಯಗಳ ಆವರಣದಲ್ಲಿ ಬದುಕತಕ್ಕವರು. ಇಂದಿಗೂ ಅವರ ಮದುವೆಗಳಲ್ಲಿ, ಹಬ್ಬ, ಉತ್ಸವಗಳಲ್ಲಿ ಸಾಂಪ್ರದಾಯಿಕ ಪೋಷಾಕನ್ನು ಧರಿಸುವುದರಲ್ಲಿ ಅವರಿಗೆ ಅಪಾರ ಅಭಿಮಾನ, ನಿಷ್ಠೆ. ಅವರು ತಮ್ಮ ಎಲ್ಲ ಸಂಪ್ರದಾಯಗಳನ್ನೂ ಅಷ್ಟೇ ಮಟ್ಟಿಗೆ ಕಾಯ್ದುಕೊಂಡು ಬಂದಂತೆ ತೋರುತ್ತದೆ.

ಕೊಡಗು ಪ್ರದೇಶ ವಿಭಿನ್ನ ರಾಜಕೀಯ, ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಪ್ರವಾಹಗಳಿಗೆ ಪಕ್ಕಾಗಿ ಅಲ್ಲಿ ಸಂಕೀರ್ಣ ಸ್ವರೂಪದ ಜಾನಪದ ನೆಲೆಯೊಂದು ರೂಪುಗೊಂಡಿರಲು ಸಾಧ್ಯ.

ಇತ್ತೀಚೆಗೆ ಕೊಡಗಿನಲ್ಲಿ ಬಂದು ನೆಲೆಸುವವರ ಸಂಖ್ಯೆ ಹೆಚ್ಚಾಗಿ, ಕೊಡಗರು ತಮ್ಮ ತೌರನ್ನು ತೊರೆದು, ನಗರಗಳಲ್ಲಿ ಹೋಗಿ ನೆಲೆಸುತ್ತಿದ್ದಾರೆ. ತಮಿಳು ನಾಡಿನ ಚೆಟ್ಟಿಯಾರರು, ಕೇರಳದ ಮಲೆಯಾಳಿಗಳಿಗೂ ಕೊಡಗಿನ ಎಸ್ಟೇಟುಗಳ ಸ್ವಾಮ್ಯವನ್ನು ವಹಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ದಶಕದಲ್ಲಿ ಕೊಡಗಿನಲ್ಲಿ ಕೊಡವರೇ ಅಲ್ಪಸಂಖ್ಯಾತರಾದರೂ ಆಶ್ಚರ್ಯವಿಲ್ಲ. ಕೊಡವ ಸಂಸ್ಕೃತಿಯ ಹಿರಿಮೆಯನ್ನು ಪರಿಚಯಮಾಡಿಕೊಳ್ಳುವ ಅವಕಾಶ ನಮಗೆ 'ಪಟ್ಟೋಲೆ ಪಳಮೆ' ಯಂಥ ಕೃತಿಗಳಲ್ಲಿ ಮಾತ್ರ ಸಾಧ್ಯವಾಗಬಹುದು. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಶ್ರೀ ಚಿಣ್ಣಪ್ಪನವರು ಐವತ್ತು ವರ್ಷಗಳ ಹಿಂದೆಯೇ ಸಂಗ್ರಹಿಸಿ ಪ್ರಕಟಿಸಿದ ವಿಷಯಗಳ ಪ್ರಾಮುಖ್ಯತೆ ಏನು ಎಂಬುದು ನಮಗೆ ವೇದ್ಯವಾಗುತ್ತದೆ.

೨

ಜಾನಪದ ಸಂಶೋಧಕರ ಕುತೂಹಲವನ್ನು ಕೆರಳಿಸುವ ಕೊಡಗಿನಲ್ಲಿ ಜನಪದ ಗೀತೆಗಳನ್ನು ಸಂಗ್ರಹಿಸುವ ಪ್ರಯತ್ನಗಳು ಕಳೆದ ಶತಮಾನದಲ್ಲಿಯೇ ಕಂಡುಬರುತ್ತವೆ. ಜರ್ಮನ್ ಮಿಷನರಿಗಳಾದ ಗ್ರೆಯಟರ್ ಮತ್ತು ಜಾರ್ಜ್ ರಿಕ್ಟರ್ ಅವರು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಕೊಡವ ಗೀತೆಗಳನ್ನು ಮೂಲಭಾಷೆಯಲ್ಲಿಯೇ ಸಂಗ್ರಹಿಸಿದ್ದರು. ಗ್ರೆಯಟರ್ ಕೆಲವು ಗೀತೆಗಳನ್ನು ಜರ್ಮನ್ ಭಾಷೆಗೂ ಅನುವಾದಿಸಿದ್ದಾರೆ. ಕೊಡಗಿನಂಥ ಅಪರಿಚಿತ ಸ್ಥಳಕ್ಕೆ ಆಗಮಿಸಿ, ಅಲ್ಲಿನ ಜನರೊಡನೆ ಬೆರೆತು, ಅವರ ಭಾಷೆಯನ್ನು ಕಲಿತು ಜನರನ್ನೂ ರಾಜರನ್ನೂ ಒಲಿಸಿಕೊಂಡು ರಿಕ್ಟರ್ ಧರ್ಮ ಪ್ರಚಾರದ ಜೊತೆಗೆ ಜಾನಪದ ಸಾಹಿತ್ಯ ಸಂಗ್ರಹವನ್ನೂ ನಡೆಸಿದನು. ಮಡಿಕೇರಿಯ ಶಾಲೆಯ ಮುಖ್ಯೋಪಾಧ್ಯಾಯನಾಗಿ, ಕೆಲದಿನ ಶಾಲಾ ಇನ್ಸ್‌ಪೆಕ್ಟರನಾಗಿ ಕೆಲಸ ಮಾಡಿದ ಇವನು ಕೊಡಗನ್ನೆಲ್ಲಾ ಸುತ್ತಾಡುವ ಅವಕಾಶವನ್ನು ಪಡೆದುಕೊಂಡು ಕೊಡಗು ಗೆಜೆಟಿಯರನ್ನು ಮೊದಲಬಾರಿಗೆ ರೂಪಿಸಿದ.

ಗ್ರೆಯಟರ್ ಮತ್ತು ರಿಕ್ಟರ್ ಅವರು ಸಂಗ್ರಹಿಸಿದ ಕೆಲವು ಶಿಶುಪ್ರಾಸಗಳೂ, ಹುತ್ತರಿ ಹಾಡುಗಳೂ, ಗೋವರ್ ಅವರ ಸಂಕಲನದಲ್ಲಿ [1]ಬೆಳಕು ಕಂಡಿವೆ. ಅಲ್ಲದೆ ಗೋವರ್ ಹುತ್ತರಿ ಹಬ್ಬ ಹಾಗೂ ಕೊಡಗು ಪ್ರದೇಶದ ವಿವರವಾದ ಪರಿಚಯವನ್ನು ಆ ಕೃತಿಯಲ್ಲಿ ನೀಡಿದ್ದಾರೆ. ಕೊಡಗು ಜಾನಪದ ಕೇತ್ರದಲ್ಲಿ ಸಂಗ್ರಹಕಾರ್ಯವನ್ನು ನಡೆಸಿದವರಲ್ಲಿ ಶ್ರೀ ಐ. ಮಾ. ಮುತ್ತಣ್ಣ. ಶ್ರೀ ಪೇರಿಯಂಡ ಚಂಗಪ್ಪ, ಶ್ರೀ ಬಿ. ಡಿ. ಗಣಪತಿ, ಶ್ರೀ ಕೆ. ಸಿ. ಭೀಮಯ್ಯ ಮುಂತಾದವರು ಮುಖ್ಯರು. ಆದರೆ ಕಾಲದೃಷ್ಟಿಯಿಂದ, ವಿಷಯದೃಷ್ಟಿಯಿಂದ, ಕ್ರಮಬದ್ಧವಾದ ಜಾನಪದ ಅಧ್ಯಯನ ದೃಷ್ಟಿಯಿಂದ ಚಿಣ್ಣಪ್ಪನವರ 'ಪಟ್ಟೋಲೆ ಪಳಮೆ' ಮಹತ್ವದ ಕೃತಿಯಾಗಿ ನಿಂತಿದೆ.

"ಪಟ್ಟೋಲೆ ಪಳಮೆ'ಯ ಮೊದಲನೆಯ ಅಧ್ಯಾಯ ಕೊಡಗಿನ ಭೌಗೋಳಿಕ ಹಾಗೂ ಐತಿಹಾಸಿಕ ವಿವರಗಳನ್ನು ಪರಿಚಯಮಾಡಿಕೊಡುತ್ತದೆ. ಎರಡನೆಯ ಅಧ್ಯಾಯದಿಂದ ನೇರವಾಗಿ ನಾವು 'ಜಾನಪದ' ಸಂಗ್ರಹವನ್ನು ಎದುರುಗೊಳ್ಳುತ್ತೇವೆ. ಆರಂಭದಲ್ಲಿ ಸಂಪ್ರದಾಯಗಳನ್ನು ಪರಿಚಯಿಸುತ್ತ ಸಂಗ್ರಹಕರು ಹುಟ್ಟು, ವಿವಾಹ, ಸಾವು ಮುಂತಾದ ಘಟ್ಟಗಳಿಗೆ ಸಂಬಂಧಿಸಿದ ಕೊಡವರ ಪದ್ಧತಿಗಳನ್ನು ವಿವರವಾಗಿ ಬಣ್ಣಿಸಿ, ಅಲ್ಲಲ್ಲಿನ ಗೀತ ಸಾಹಿತ್ಯವನ್ನೂ ನೀಡಿದ್ದಾರೆ. ಮೂರನೆಯ ಅಧ್ಯಾಯ ಕೊಡಗಿನ ಹಬ್ಬಗಳಿಗೆ ಸಂಬಂಧಪಡುತ್ತದೆ. ಹುತ್ತರಿ, ಕಾವೇರಿ ಸಂಕ್ರಮಣ, ಕೈಲ್ ಮುಹೂರ್ತ ಮುಂತಾದ ಹಬ್ಬಗಳ ಸಕ್ರಮ ಪರಿಚಯವನ್ನು ಇಲ್ಲಿ

---

[1]The Folksongs of Southern India (1871)

ನೋಡಬಹುದು. ಕೇವಲ ಹಬ್ಬಗಳ ವರ್ಣನೆಯಲ್ಲೆ, ಈ ಭಾಗಗಳು ಪರ್ಯವಸಾನವಾಗದೆ ಹುತ್ತರಿಕೋಲು, ಹುತ್ತರಿಹಾಡು ಮುಂತಾದುವಕ್ಕೆ ಸಂಬಂಧಿಸಿದ ಅಪಾರ ಸಾಹಿತ್ಯವನ್ನು ಒಳಗೊಂಡಿದೆ.

'ಪಟ್ಟೋಲೆ ಪಳಮೆ'ಯ ನಾಲ್ಕು ಮತ್ತು ಐದನೆಯ ಅಧ್ಯಾಯಗಳು ದೈವ ಸಂಬಂಧಿ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಇಲ್ಲಿ ದೇವರ ಪದಗಳನ್ನು ಹೇರಳವಾಗಿ ಸಂಗ್ರಹಿಸಿಕೊಡಲಾಗಿದೆ. 'ನಾನಾ ತರದ ವಿಷಯಗಳು' ಎಂಬ ಶೀರ್ಷಿಕೆಯನ್ನೊಳಗೊಂಡ ಆರನೆಯ ಅಧ್ಯಾಯ ಜಾನಪದದ ಉಳಿದ ಪ್ರಕಾರಗಳನ್ನೊಳಗೊಂಡಿದೆ. ಗಾದೆ, ಒಗಟು, ಕಟ್ಟುಕಟ್ಟಳೆ, ಜಾತಿಪದ್ಧತಿ, ಮೃಗಪಕ್ಷಿಗಳ ಹೆಸರು, ಶಬ್ದಾರ್ಥಗಳು ಹೀಗೆ ವೈವಿಧ್ಯಮಯ ವಿಷಯಗಳು ಇಲ್ಲಿ ಸಂಗ್ರಹಗೊಂಡಿವೆ.

೫೦೦ಕ್ಕೂ ಹೆಚ್ಚು ಪುಟಗಳ ಈ ಗ್ರಂಥ ಕೊಡವ ಸಂಸ್ಕೃತಿಯ ಒಂದು ಪ್ರಾತಿನಿಧಿ ಕೃತಿ; ನಮ್ಮ ಜಾನಪದ ಕೃತಿಗಳ ಸಾಲಿನಲ್ಲಿ ಕಾಲ ಮತ್ತು ವಸ್ತು ದೃಷ್ಟಿಯಿಂದ ಅತ್ಯಂತ ಗಮನಾರ್ಹ ಸಂಕಲನ. 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' ಕೃತಿಗಿಂತ ವಿಷಯದ ವ್ಯಾಪ್ತಿಯಲ್ಲಿ, ಅಧ್ಯಯನ ಕ್ರಮದಲ್ಲಿ, ಪ್ರಾದೇಶಿಕ ಹಿನ್ನೆಲೆಯಲ್ಲಿ ಇದಕ್ಕೆ ಮಿಗಿಲಾದ ಸ್ಥಾನ ಲಭ್ಯವಾಗುತ್ತದೆ. ಇಂಥ ಅಪೂರ್ವ ಗ್ರಂಥವೊಂದನ್ನು ಪ್ರಕಟಿಸಿ, ಕೊಡವ ಸಂಸ್ಕೃತಿಯ ಅಧ್ಯಯನಕ್ಕೆ ಶ್ರೀ ನಡಿಕೇರಿಯಂಡ ಚಿಣ್ಣಪ್ಪನವರು ನೆರವಾಗಿದ್ದಾರೆ.

೪

ಪ್ರಕೃತ ಗ್ರಂಥದಲ್ಲಿ ನಿರೂಪಣೆಯ ಭಾಗ ಕನ್ನಡದಲ್ಲಿದ್ದರೂ ಗೀತೆ, ಗಾದೆ, ಒಗಟು ಮುಂತಾದ ಕೆಲವು ಜಾನಪದ ಪ್ರಕಾರಗಲು ಕೊಡಗು ಮೂಲದಲ್ಲಿಯೇ ಇವೆ. ಅವುಗಳ ಕನ್ನಡ ಭಾಷಾಂತರವನ್ನಾಗಲೀ ಪರಿಚಯಾತ್ಮಕ ಟಿಪ್ಪಣಿಗಳನ್ನಾಗಲೀ ಕನ್ನಡದಲ್ಲಿ ಕೊಡಲು ಈ ಆವೃತ್ತಿಯಲ್ಲಿ ಸಾಧ್ಯವಾಗಿಲ್ಲ. ಇಲ್ಲಿನ ೬೫೫ ಗಾದೆಗಳೂ ೬೯ ಒಗಟುಗಳೂ ಮೂಲಭಾಷೆಯಲ್ಲಿಯೇ ಇದ್ದು ಕೊಡವ ಭಾಷೆಯ ಬನಿಯನ್ನೂ ಅಲ್ಲಿನ ಸಂಸ್ಕೃತಿಯ ಸಾರವನ್ನೂ ಸಮರ್ಥವಾಗಿ ಪರಿಚಯಮಾಡುತ್ತವೆ. ಮಾನವ ಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ, ಜಾನಪದ ಈ ಎಲ್ಲ ರೀತಿಯ ಅಧ್ಯಯನಗಳಿಗೂ ಪ್ರಕೃತ ಕೃತಿ ಸಹಾಯಕವಾಗಿದೆ. ಸಂಶೋಧನೆಯನ್ನು ಕೈಗೊಳ್ಳುವವರು ಇಲ್ಲಿನ ಸಾಮಾಗ್ರಿಯನ್ನು ಬಳಸಿಕೊಂಡು, ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಮತ್ತಷ್ಟು ಸಾಹಿತ್ಯವನ್ನು ಸಂಗ್ರಹಿಸಿ ಕೊಡವ ಜಾನಪದದ ಎಲ್ಲ ಮುಖಗಳನ್ನೂ ಪರಿಚಯ ಮಾಡಿಕೊಳ್ಳಬಹುದಾಗಿದೆ. ಕೊಡಗಿನ ಜನಪದ ಕಥೆಗಳು ಈವರೆಗೆ ಸಂಗ್ರಹಗೊಂಡಿಲ್ಲ. ಕನ್ನಡದಲ್ಲಿಯೂ ಅಪಾರ ಜನಪದ ಸಾಹಿತ್ಯ ಕೊಡಗು ಜಿಲ್ಲೆಯಲ್ಲಿ ಲಭ್ಯವಾಗುತ್ತದೆ. ಸುಧೀರ್ಘ ಜನಪದ ಕಾವ್ಯಗಳನ್ನು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಸಂಶೋಧಕರು ಕೊಡಗಿನಲ್ಲಿ ಗುರುತಿಸಿದ್ದಾರೆ. ಜಾನಪದ ವಸ್ತು ಸಂಗ್ರಹಾಲಯಕ್ಕೂ ಇಲ್ಲಿನ ಅಪೂರ್ವ ವಸ್ತುಗಳನ್ನು ಕಲೆಹಾಕಲಾಗಿದ. ಇಲ್ಲಿನ ಆದಿವಾಸಿಗಳಿಗೆ ಸಂಬಂಧಿಸಿದಂತೆ ಜಾನಪದ ದೃಷ್ಟಿಯಿಂದ ಅಧ್ಯಯನ ನಡೆಯಬೇಕಾಗಿದೆ. ಜಾನಪದ ಸಂಶೋಧನ ವಿಭಾಗದ ಮೊದಲ ಹಂತದ ಕೆಲಸವಾಗಿ ಕೊಡವರಿಗೆ ಸಂಬಂಧಪಟ್ಟ 'ಪಟ್ಟೋಲೆ ಪಳಮೆ'ಯೂ ಅಲ್ಲಿನ ಕನ್ನಡಿಗರಿಗೆ ಸಂಬಂಧಿಸಿದ 'ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು' ಸಂಕಲನವೂ ಹೊರ ಬರುತ್ತಿವೆ. ಸಂಶೋಧಕರು ಈ ಕೃತಿಗಳ ಪೂರ್ಣಪ್ರಯೋಜನವನ್ನು ಪಡೆದುಕೊಳ್ಳಲೆಂದು ಹಾರೈಸಬಹುದು.

ಜೀ. ಶಂ. ಪರಮಶಿವಯ್ಯ

2

ಪರಿವಿಡಿ

ಮುನ್ನುಡಿ	....	
1 : ಕೊಡಗು ವಿವರಣೆ...	....	1
2 : ಕೊಡಗರ ಪದ್ಧತಿ...	....	55
3 : ಹಬ್ಬಗಳು...	....	154
4 : ದೇವತೆಯಡ ಪಾಟ್	....	204
5 : ಕೇಳಿಪೋನಯಂಡ ಪಾಟ್	....	308
6 : ನಾನಾ ತರದ ವಿಷಯಗಳು	....	385
ಮೃಗಗಳ ಮತ್ತು ಪಕ್ಷಿಗಳ ಕೂಗುಗಳಿಗೆ ಇರುವ ಪ್ರತ್ಯೇಕ ಹೆಸರುಗಳು	....	415
ಶಬ್ದಗಳ ಅರ್ಥಗಳು ಮತ್ತು ವಿವರಗಳು	....	416

೧. ಕೊಡಗು ವಿವರಣೆ

ಕೊಡಗು ದೇಶವು ಪಶ್ಚಿಮ ಘಟ್ಟಗಳ ಮೇಲ್ಭಾಗದಿಂದ ಪೂರ್ವಕ್ಕೆ ಹರಡಿರುವ ಮನೋಹರವಾದ ಪರ್ವತ ಸೀಮೆಯಾಗಿದೆ. ಇದು ಸಮಭಾಜಕ ವೃತ್ತದಿಂದ ಉತ್ತರಕ್ಕೆ 11.56 ಮತ್ತು 12.50ರ ಅಕ್ಷ ವೃತ್ತಗಳ ಮಧ್ಯೆಯೂ, ಮಧ್ಯ ರೇಖೆಯಿಂದ ಪೂರ್ವಕ್ಕೆ 75.22ರ ಮತ್ತು 76.12ರ ರೇಖಾವೃತ್ತಗಳ ಮಧ್ಯೆಯೂ ಇದೆ.

ಹೆಸರು : ಕೊಡಗು ಎಂಬ ಶಬ್ದವು "ಕುಡು" ಅಂದರೆ ಕಡುದಾದ ಬೆಟ್ಟಗಳುಳ್ಳದ್ದು ಎಂಬ ಶಬ್ದದಿಂದ ಬಂತೆಂದೂ "ಕ್ರೋಡ" ಅಂದರೆ ಉಗುರುಗಳಿಂದ ಹಂದಿಗಳಂತೆ ಗುಡ್ಡ ಬೆಟ್ಟಗಳನ್ನು ಬಯಲು ಮಾಡಿದ್ದರಿಂದ ಬಂತೆಂದೂ, "ಕೊಡುಮಲೆ" ಅಂದರೆ ತುದಿಯಲ್ಲಿರುವ ಮಲೆ ಎಂಬುದರಿಂದ ಬಂತೆಂದೂ, ಚರಿತ್ರಕಾರರು ಬರೆದಿರುತ್ತಾರೆ. ಕೊಡಗು ಮಲಯಾಳ ಮತ್ತು ವಯನಾಡು ಸಹ ಮಲೆ ಪ್ರದೇಶಗಳಾದುದರಿಂದ ಕೊಡು ಮಲೆ ಅಥವಾ ಕೊಡವು ಮಲೆಯೇ ತುದಿಯಲ್ಲಿರುವ ಮಲೆಯೆಂದೂ ಮಲಯಾಳವೆ ಆಳದಲ್ಲಿ ಅಂದರೆ ತಗ್ಗಿನಲ್ಲಿರುವ ಮಲೆಯೆಂದೂ ವಯ ನಾಡೇ ಬಯಲಾಗಿರುವ ನಾಡೆಂದೂ ಆಯಾಯ ದೇಶಗಳ ಸಹಜ ಸ್ಥಿತಿಯಿಂದ ಆಯಾಯ ಹೆಸರುಗಳು ಬಂದವೆಂದೂ ಹೇಳುವುದು ಸರಿಯಾಗಿ ಕಾಣುತ್ತದೆ.

ವಿಸ್ತೀರ್ಣ : ಈ ದೇಶವು 1,582 ಚದರ ಮೈಲುಗಳಿವೆ. ಉದ್ದವಾದ ಸ್ಥಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ 60 ಮೈಲಿಗಳೂ ಪೂರ್ವದಿಂದ ಪಶ್ಚಿಮಕ್ಕೆ 40 ಮೈಲಿಗಳೂ ಇದೆ.

ಮೇರೆ : ಇದರ ಉತ್ತರ ಮತ್ತು ಪೂರ್ವಕ್ಕೆ ಮೈಸೂರು ದೇಶದ ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟ್‌ಗಳೂ ದಕ್ಷಿಣ ಮತ್ತು ಪಶ್ಚಿಮಕ್ಕೆ ಮಲಯಾಳ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ಗಳೂ ಇವೆ.

ಪಟ್ಣಗಳು : ಈ ದೇಶದ ಮುಖ್ಯ ಪಟ್ಟಣವು ಮಡಿಕೇರಿ. ಇದಲ್ಲದೆ ವೀರರಾಜೇಂದ್ರ ಪೇಟೆ, ಸೋಮವಾರಪೇಟೆ, ಕೊಡ್ಲಿಪೇಟೆ, ಕುಶಾಲ್‌ನಗರ ಅಥವಾ ಫ್ರೆಜರ್‌ಪೇಟೆ, ಗೋಣಿಕೊಪ್ಪಲು, ಸುಂಟಿಕೊಪ್ಪಲು, ಪೊನ್ನಂಪೇಟೆ, ಸಿದ್ಧಾಪುರ ಅಮ್ಮತ್ತಿ ಅಥವಾ ಕೋಲ್‌ಪೇಟೆ, ನಾಪೊಕ್ಲು, ಶನಿವಾರಸಂತೆ, ಮೂರುನಾಡು ಇತ್ಯಾದಿ ಹಲವು ಚಿಕ್ಕ ಚಿಕ್ಕ ಪಟ್ಟಣಗಳಿವೆ. ಇವುಗಳಲ್ಲಿ ಮುಖ್ಯವಾದವುಗಳಾದ ಮಡಿಕೇರಿಯಲ್ಲಿ ಶುಕ್ರವಾರವೂ, ಶನಿವಾರ ಸಂತೆಯಲ್ಲಿ ಶನಿವಾರವೂ, ಸಿದ್ಧಾಪುರ ಗೋಣಿಕೊಪ್ಪಲು ಮತ್ತು ಸುಂಟಿ ಕೊಪ್ಪಲು ಎಂಬ ಸ್ಥಳಗಳಲ್ಲಿ ಆದಿತ್ಯವಾರವೂ, ಸೋಮವಾರಪೇಟೆಯಲ್ಲಿ ಸೋಮ ವಾರವೂ, ಅಮ್ಮತ್ತಿಯಲ್ಲಿ ಮಂಗಳವಾರವೂ ವೀರರಾಜೇಂದ್ರಪೇಟೆಯಲ್ಲಿ ಬುಧವಾರವೂ ಮೂರು ನಾಡಿನಲ್ಲಿ ಬೃಹಸ್ಪತಿವಾರವೂ ವಾರಕ್ಕೊಂದಾವರ್ತಿ ಸಂತೆಯು ಮೆರೆಯುತ್ತದೆ.

ಎತ್ತರ : ಮಡಿಕೇರಿಯು ಸಮುದ್ರ ಮಟ್ಟದಿಂದ 3,809 ಅಡಿ ಎತ್ತರವಿದೆ. ಇಲ್ಲಿಂದ ಸೋಮವಾರಪೇಟೆಯವರೆಗೂ ನೆಲವು ಸರಾಸರಿ 3,500 ಅಡಿ ಎತ್ತರವಿದ್ದು ಪೂರ್ವಕ್ಕೆ ಕಾವೇರಿ ಹೊಳೆಯವರೆಗೂ ಬರು ಬರುತ್ತಾ ಇಳಿಯುತ್ತದೆ. ಫ್ರೇಜರ್ ಪೇಟೆಯು ಬಳಿ

2,720 ಅಡಿ ಎತ್ತರದಲ್ಲಿದೆ.

ಪರ್ವತ ಶ್ರೇಣಿಗಳು : ಕೊಡಗಿನ ವಾಯುವ್ಯ ದಿಕ್ಕಿನಲ್ಲಿರುವ ಪುಷ್ಪಗಿರಿ (ಸುಬ್ರಹ್ಮಣ್ಯ ಬೆಟ್ಟ)ಯಿಂದ ತಾವಳಗೇರಿ ಮೂರುನಾಡಿನಲ್ಲಿರುವ ಬ್ರಹ್ಮಗಿರಿಯವರೆಗೆ 60 ಮೈಲು ದೂರ ಪಶ್ಚಿಮಘಟ್ಟ ಸಾಲುಗಳು ಹಬ್ಬಿಕೊಂಡಿವೆ. ಬೆನ್ನೆಲು ಬೋಪಾದಿಯಲ್ಲಿರುವ ಪಶ್ಚಿಮ ಘಟ್ಟಗಳಿಂದ ಪಕ್ಕೆಲುಬುಗಳೋಪಾದಿಯಲ್ಲಿ ಅನೇಕ ಗುಡ್ಡಗಳು ಪೂರ್ವಕ್ಕೆ ಹಾಯುತ್ತದೆ.

ಜೋಡುಕೋಡಿನ ಸುಬ್ರಹ್ಮಣ್ಯ ಬೆಟ್ಟವು 5,625 ಅಡಿ ಎತ್ತರವಿದೆ. ಮಡಿಕೇರಿಯಿಂದ 9 ಮೈಲು ದೂರದಲ್ಲಿರುವ ಕೋಟೆಬೆಟ್ಟವು 5,375 ಅಡಿ ಎತ್ತರವಿದೆ. ಮಡಿಕೇರಿಯಿಂದ ಪಶ್ಚಿಮಕ್ಕೆ ಇರುವ ಬೇಂಗುನಾಡು ಪರ್ವತಶ್ರೇಣಿಗಳು ಪಶ್ಚಿಮಘಟ್ಟಗಳನ್ನು ಸೇರುವಲ್ಲಿ ಕಾವೇರಿಯು ಉದ್ಭವಿಸುವ ಬ್ರಹ್ಮಗಿರಿಯ ಶಿಖರವಿದೆ. ಇದು 4,447 ಅಡಿ ಎತ್ತರವಿದೆ.

ಕೊಡಗಿನಲ್ಲಿ ಅತ್ಯುನ್ನತವಾದ ಶಿಖರವೇ ತಡಿಯಂಡ ಮೋಳು. ಇದು 5,729 ಅಡಿ ಎತ್ತರವಿದೆ.

ತಾವಳಗೇರಿ ಮೂರುನಾಡಿನಲ್ಲಿರುವ ಬ್ರಹ್ಮಗಿರಿಯು 5,277 ಅಡಿ ಎತ್ತರದಿವೆ. ಇದರ ಶಿಖರವಾದ ದೇವಸಿ ಬೆಟ್ಟವು ಮನೋಹರವಾದ ಹುಯ್ಯಾಲೆ ಮಲೆಯಲ್ಲಿದೆ. ಇದರ ಪಶ್ಚಿಮಕ್ಕೆ 4,205 ಅಡಿ ಎತ್ತರದಲ್ಲಿರುವ ಹನುಮಂತನ ಬೆಟ್ಟವಿದೆ.

ಇನ್ನು ಮುಖ್ಯವಾದ ಬೆಟ್ಟಗಳು ಯಾವುವೆಂದರೆ – ನಾಲ್ಕು ನಾಡಿನಲ್ಲಿರುವ 5,625 ಅಡಿ ಎತ್ತರವುಳ್ಳ ತುಂಬೆಮಲೆ, 5,221 ಅಡಿ ಎತ್ತರವಿರುವ ಇಗ್ಗುತಪ್ಪನ ಬೆಟ್ಟ, ಇದಲ್ಲದೆ ಇನ್ನೂ ಅನೇಕ ಗುಡ್ಡಗಳು ಅಲ್ಲಲ್ಲಿ ಇವೆ.

ನದಿಗಳು : ಬೇಂಗುನಾಡು ಬ್ರಹ್ಮಗಿರಿಯಲ್ಲಿ ಉದ್ಭವಿಸುವ ಪವಿತ್ರವಾದ ಕಾವೇರಿಯು ಕೊಡಗಿನ ಮುಖ್ಯವಾದ ನದಿಯು. ಇದು 470 ಮೈಲು ಉದ್ದವಿದೆ. ಇದು ರಾಮಸ್ವಾಮಿ ಕಣಿವೆ ಹೋಬಳಿಯಲ್ಲಿರುವ ಸಿರಂಗಾಲ ಗ್ರಾಮದವರೆಗೆ ಮಾತ್ರ ಕೊಡಗಿನಲ್ಲಿ ಹರಿದುಹೋಗಿ ಅಲ್ಲಿಂದ ಮೈಸೂರು ದೇಶಕ್ಕಾಗಿಯೂ ಮದರಾಸು ದೇಶದ ತಿರುಚನಪಳ್ಳಿ ತಂಜಾವೂರುಗಳ ಮೇಲೆ ಪ್ರವಹಿಸಿ ಬಂಗಾಳಕೊಲ್ಲಿಗೆ ಸೇರುತ್ತದೆ.

ಉಪನದಿಗಳು : ತಡಿಯಂಡ ಮೋಳಿನಿಂದ ಹರಿದು ಬರುವ ಕಕ್ಕಬ್ಬೆ ಹೊಳೆಯೂ ಸೋಮ ಬೆಟ್ಟದಿಂದ* ಹರಿದು ಬರುವ ಕರಡ ಹೊಳೆಯೂ ಹೆಗ್ಗಳದಿಂದ ಹರಿದು ಬರುವ ಕದನೂರು ಹೊಳೆಯೂ ಮಗ್ಗುಲದಿಂದ ಹರಿದುಬರುವ ಕುಮ್ಮೆ ಹೊಳೆಯೂ ದಕ್ಷಿಣ ದಿಕ್ಕಿನಿಂದಲೂ ಕಗ್ಗೋಡು ನಾಡಿನಿಂದ ಹರಿದು ಬರುವ ಮುತ್ತಾರಮುಡಿ ಹೊಳೆಯೂ ಹೊರೂರು ನೂರೊಕ್ಕಲು ನಾಡಿನಿಂದ ಹರಿದು ಬರುವ ಚಿಕ್ಲಿ ಹೊಳೆಯೂ ಉತ್ತರ ದಿಕ್ಕಿನಿಂದಲೂ ಕಾವೇರಿ ಹೊಳೆಯನ್ನು ಸೇರುತ್ತದೆ. ಸೋಮವಾರಪೇಟೆಯಲ್ಲಿ ಹುಟ್ಟುವ ಕುಕ್ಕೆ ಹೊಳೆಯೂ ಶಾಂತಳ್ಳಿಯಿಂದ ಹರಿದುಬರುವ ಚೋರ (ಎಣ್ಣೆ) ಹೊಳೆಯೂ ಕೋಟೆ ಬೆಟ್ಟದಿಂದ ಹುಟ್ಟುವ ಮಾದಾಪುರ ಹಟ್ಟಿ ಹೊಳೆಗಳೂ ಹಾರಂಗಿ ಹೊಳೆಗೆ ಬಿದ್ದು ಕೂಡಿಗೆ ಎಂಬಲ್ಲಿ ಕಾವೇರಿ ನದಿಯನ್ನು ಸೇರುತ್ತದೆ. ಹೇಮಾವತಿಯು ಮೈಸೂರು ಮತ್ತು ಕೊಡಗಿಗೆ ಮೇರೆಯಾಗಿ ಉತ್ತರ ಕೊಡಗಿನಿಂದಲೂ ಮತ್ತು ತಾವಳಗೇರಿ ಮೂರುನಾಡಿನಲ್ಲಿರುವ ಬ್ರಹ್ಮಗಿರಿಯಿಂದ ಹುಟ್ಟುವ ಲಕ್ಷ್ಮಣ ತೀರ್ಥವು ದಕ್ಷಿಣ ಕೊಡಗಿನಿಂದಲೂ ಕಾವೇರಿಯನ್ನು ಮೈಸೂರು ದೇಶದಲ್ಲಿ ಸೇರುತ್ತದೆ. ರಾಮತೀರ್ಥವು, ಲಕ್ಷ್ಮಣ ತೀರ್ಥವನ್ನು ಸೇರುತ್ತದೆ.

---

* **ಸೋಮ ಬೆಟ್ಟವನ್ನು ತಪ್ಪಾಗಿ ಸ್ವಾಮಿ ಬೆಟ್ಟವೆಂದು ಕರೆಯುತ್ತಾರೆ.**

ಕಿಗ್ಗಟ್ಟುನಾಡಿನಲ್ಲಿರುವ ಬರಪೊಳೆಯೂ ಸಂಪಾಜೆಯಲ್ಲಿರುವ ನೊಜೆಕಲ್ಲು ಹೊಳೆಯೂ ಸುಬ್ರಹ್ಮಣ್ಯ ಗಟ್ಟದಲ್ಲಿ ಹುಟ್ಟುವ ಕುಮಾರಧಾರ ಹೊಳೆಯೂ ಅರಬ್ಬೀ ಸಮುದ್ರಕ್ಕೆ ಸೇರುತ್ತದೆ.

ಬರಪೊಳೆಯು 434 ಅಡಿ ಎತ್ತರದಿಂದ ಧುಮುಕಿ ಸಾರತ ಅಬ್ಬಿ ಎಂದು ಹೆಸರುಗೊಂಡು ಮುಂದಕ್ಕೆ ಪ್ರವಹಿಸುತ್ತದೆ.

ಮಳೆ : ಪಾಟಿಕೊಲ್ಲಿಯಲ್ಲಿ 250 ಇಂಚೂ ಮಡಿಕೇರಿಯಲ್ಲಿ 130 ಇಂಚೂ ವೀರರಾಜೇಂದ್ರ ಪೇಟೆಯಲ್ಲಿ 110 ಇಂಚೂ ಭಾಗಮಂಡಲದಲ್ಲಿ ಸರಾಸರಿ ಮಳೆಯು 203 ಇಂಚೂ ಹೊಡಿಯುತ್ತದೆ.

ವಾಯುಗುಣ : ಕೊಡಗು ಶೀತಳವಾದ ಸೀಮೆಯಾಗಿದೆ.

ಜನಸಂಖ್ಯೆ : 3,21,516 (1916ನೇ ಖಾನೇಷ್ ಮಾರಿ ಪ್ರಕಾರ)

ಕಾವೇರಿ ಪುರಾಣ

ಕಾವೇರಿ ಪುರಾಣವನ್ನು ಈ ರೀತಿ ಹಾಡುವರು

ಬಾಳೊ, ಬಾಳೊ ನಂಗಡ
ದೇವ ಬಾಳೊ ಮಾದೇವ;
ಪಟ್ಟ ಬಾಳೊ ಸೂರಿಯ;
ಕೂಡ ಬಾಳೊ ಚಣ್ಣೂರ;
ಭೂಮಿ ಬಾಳೊ ಜಬ್ಬೂಮಿ;
ಕನ್ನಿ ಬಾಳೊ ಕಾವೇರಿ;
ಗಂಗೆ ಬಾಳೊ ತೀರ್‌ತ;
ತೀರ್‌ತ ಕುಳಿಚಕ್ಕ,
ಈ ಚೆರ್ ಮನ್‌ಸಂಡ,
ಕೆಜ್ಜ ಪಾಪ ಪೋಕುಲ,
ಮೇಲೆ ಪಾಪ ಪೊದ್ದಲ;
ಪೊದ್ದ್‌ನ ಶನಿಯೆಲ್ಲ
ದೂರ ನೀಂಗಿ ನಿಕ್ಕುಲ,
ಕಾವೇರ್ಯಮ್ಮೆ ದೇವಿರ
ಸತ್ತಿಯ ಸ್ಥಳತ್‌ಲ್
ಸತ್ತಿಯ ನಡಪಕ್ಕ
ಅನ್ನತ ನೆಲೆಯಾಪ.
ಕೇಳೊ ಕೇಳೋ ಸಂಜಾದಿ
ಸಂಜಾದಿ ಮನವೇಂಗಿ,
ಕೊಟ್ಟೊಂದ್ ಮರಿಕನ
ಪಾಟೊಂದ್ ತಿರ್‌ಕನ;
ಕೊಟ್ಟೊಂದ್ ಮರಿಪಕ್ಕ್
ಬಟ್ಟಿ ಕೂಟಿ ಬೋಂಡಲ
ಕತ್ತಿ ಮತ್ತ್ ತಾಂಬೋಂಡ
ಮುಲ್ಲೆ ಪೂವೆಳೆ ಪೊಂಗ
ಕೂಬಾಕಿ ಮರಿಚೋಲೆ
ಎಲ್‌ಂಬಿಲ್ಲತ ನಾವ್‌ನ
ಕಾವೆರ್ಯಮ್ಮೆ ದೇವಿನ
ಪಾಡಿನೊ ಕೊದಿ ಪೋಗ.
ಕೇಳೊ ಕೇಳೊ ಸಂಜಾದಿ
ಪಂಡ್ ಪಂಡ್ ಕಾಲತ್
ಕೃತಯುಗ ನಲ್ಲಾಲ್
ಕಶ್ಯಪ ಮಾಮುನಿಕ್
ದಂಡಾಳಿಂಜ ದೇವಿಯ
ನೀಲ ಕೊಡಿ ದಿತಿಯು
ದೇವಕನ್ನಿ ಅದಿತಿ.
ಅಕ್ಕತಂಗೆ ದಂಡಾಳು
ತಣ್ಣನೆ ಪೊಲವಕ್ಕ
ಕಾಲ ಮೂವಾಂಡಾಪಕ್ಕ
ಕನ್ನಿ ಪೊಲೆ ಕಂಡತ್,
ಆ ಪೊಲೆ ಕುಳಿಚಿತ್
ಮಕ್ಕ ಪೊಲೆ ಕಂಡತ್,

ಆ ಪೊಲೆಯೊ ನಿಂದಿತ್
ಅಕ್ಕ ತಂಗೆ ದಂಡಾಕು
ತಾಂಗ್‌ನ ಕುಳಿಯಮೆ.
ಆರೂ ನಾಲೂ ಕೂಡಣೆ
ತಿಂಗ ಪತ್ತ್ ತೇಂದತ್.
ಅನ್ನನಿಪ್ಪ ಕಾಲತ್
ನಲ್ಲೋರಾಚೆ ನಾಳಾಯಿ
ದೇವ ಕನ್ನಿ ಅದಿತಿ
ದೇಬುವಳ ಪೆತ್ತತ್.
ಅಕ್ಕಂಗೊತ್ತ ತಂಗಮ್ಮ
ನೀಲ ಕೊಡಿ ದಿತಿಯೊ
ರಾಕ್ರಾಸ್ಯಳ ಪೆತ್ತತ್.
ರಾಕ್ರಾಸ್ಯಳು ದೇಬುವ
ಆಳ್ ಕಾಳೆ ತೇಂದಿತ್
ತಣ್ಣನೆ ಪೊಲವಕ್ಕ
"ಚಾವದೂ ಪರಪದೂ
ಎಂಗಕ್ ತರವಲ್ಲ;
ಈಂಗೆನ್ನ ಕೊಯಲೆನ್ನ?
ಎಂದೆಣ್ಣಿ ಪರಂದಿತ್
ಬೇರಂಗೊಂಡಳತತ್.
ಬೇರಂಗೊಂಡಳತದ್
ನಾರಾಯಣ ದೇವ್ಯೆಯ್ಯ
ತಾನರಿಂಜಿಕೊಂಡಿತ್
ದೇಬುವಳ ಕಾಕಿತ್
ರಾಕ್ರಾಸ್ಯಳ ಕೂಟಿತ್
ಈ ಬಾಕ್ ಪರಂದತ್,
"ಜಬ್ಬೂಮಿರ ಮೀದಲ್
ಭೂಮಿಕೆಲ್ಲೊಯಂದದ್
ಮಹಮೇರು ಪರುವತ.
ಆ ಕುಂದ್ ಪೊರಿಚಿತ್
ಏಳ್ ಕಡಕಾಬರ
ಏಳ್ ಕಡಕೀಬರ
ನೆತ್ತಾಕಡ ಪಾಕಡ
ಪಾಕಡತ್ ತಾತಿತ್
ಪಾಕಡ ಕಡಂದಿನೊ
ಅಮೃತ ಪೊರಡುವ;
ಅಮೃತ ಕುಡಿಚಕ್ಕ
ಚಾವಂಡ ಪರಕಂಡ
ತಣ್ಣನೆ ಪೊಲವಲು"
ಎಂದೆಣ್ಣಿ ಪರಂದಿತ್
ಮುತ್ತಪ್ಪಣೆ ಮಾಡಣೆ
ರಾಕ್ರಾಸಿಯ ದೇಬುವ
ಚಂದೋಳ ಪೆರ್‌ಜಾಯಿ
ಪಾಕಡ ಕಡಂದತ್.
ಅಕ್ಕಣೆಕ್ ಮಮ್ಮಾಯ!
ಧನ್ವಂತರಿ ಪುಟ್ಟಿತ್
ಪಾಕಡತಿಂಜೆದ್ದಿತ್
ಅಮೃತೋಡೆ ಬಂದಿತ್
ಪೊಂಗಲಶ ಪಾತ್ರನ
ಅಲ್ಲಿ ಕೋಂದ್ ಬೆಕ್ಕಣೆ
ರಾಕ್ರಾಸಿಯ ದೇಬುವ
"ನಾಕ್ ನಾಕ್"ಂದೆಣ್ಣಿತ್
ಕೂರ್ ಪಡೆ ಪೊತ್ತಿತ್
ರಾಕ್ರಾಸಿಯ ಗೆದ್ದತ್.
ರಾಕ್ರಾಸಿಯ ಗೆದ್ದಿತ್
ಪೊಂಗಲಶ ಕೊಂಡಿತ್
ಅಲ್ಲಿಂಜಿ ಪೊರಡಣೆ
ನಾರಾಯಣ ದೇವ್ಯೆಯ್ಯ
ತಾನೆನ್ನ ಪಣಿ ಕೆಜ್ಜ,
ಅಲ್ಲತೊಂದು ಅಲ್ಲಲ

* ಕಾವೇರಿ ತುಂಗೆಯೆಂಬ ಎರಡು ನದಿಗಳು ಸಹ್ಯಾದ್ರಿ ಪರ್ವತದಲ್ಲಿ ಹುಟ್ಟಿದವು {(240ನೇ ಪುಟ) ನಿಜಗುರು ಶಿವಯೋಗೀಂದ್ರ ವಿರಚಿತಮಾದ ವಿವೇಕ ಚಿಂತಾ ಮಣಿ} ಸಹ್ಯಾದ್ರಿಯೊಳುದಿಸಿದ ಮಹನದಿಯೇ ಮರದ್ವೃೇದೆ ಕಾವೇರಿಯೆಂಬ ಹೆಸರುಗಳಿಂದ ವೇದಪುರಾಣ ಪ್ರತೀತಮಾಗಿ ದಕ್ಷಿಣ ಗಂಗಾ ತ್ರಿವೇಣಿಯೆನಿಸಿ, ಅಗಸ್ತ್ಯ ಕಮಂಡಲದಿಂದೊಗೆದು ಅರ್ಕ ಪುಷ್ಕರಾದಿ ಕ್ಷೇತ್ರಂಗಳಂ ಬಳಸಿ, ಗಜಾರಣ್ಯಮಂ ಪೊಕ್ಕು, ಕಪಿಲೆಯಂ ಕೂಡಿ ರಂಗತ್ರಯಮಂ ಕೂಡಿ, ಜಂಬುಕೇಶ್ವರ ಕುಂಭ ಕೋಣಾದಿ ಪ್ರಾಂತಮಾಗಿ ಚೋಳ ಜೀವಿಕೆಯೆನಿಸಿ ಪೂರ್ವ ಸಾಗರಮಂ ಪೊಕ್ಕು ಮಾಗಿಹುದು.

ಆಣ್ ರೂಪ ಬುಟ್ಟಿತ್
ಮೋಹಿನಿರ ರೂಪಾಯಿ
ಪೊಣ್ಣಾಯಿತ್ ನಿಂದತ್.
ಅಕ್ಕಣೆಕ್ ಸಂಜಾದಿ
ಲಕ್ಷ್ಮಿದೇವಿ ಮಾತಾಯಿ
ಪಾರ್ವತ್ಯಮ್ಮೆ ದೇವಿರ
ಮಮ್ಮಾಯವತಾರ–
ಲೋಪಾಮುದ್ರೆ ದೇವಿನ
ಕೂಟ್‌ಕ್ ತೊಣೆಯಾಯಿ
ಅಲ್ಲಿಕೆ ಅಯಚತ್.
ದೇವಿಯಳು ದಂಡಾಳು
ಜೋಡೊತ್ತಿತ್ ಪೋಕಣೆ
ರಾಕ್ರಾಸಿಯ ಕಂಡಿತ್
ಚಾಯಿಕ್ ಮರ್‌ಳಾಯಿ
"ನಾಕ್ ನಾಕ್"ಂದೆಣ್ಣಿತ್
ಅಮ್ಯತೋಡೆ ಪಾತ್ರನ
ಮೋಹಿನಿಕ್ಕೊಡ್‌ತತ್.
ಅದ್ ಕಂಡ ಮೋಹಿನಿ
ಪೊಂಗಲಶ ಪಾತ್ರನ
ದೇಬುವಕ್ಕೊಡ್‌ತತ್.
ದೇಬುವಕ್ಕೊಡ್‌ತಿತ್
ಅಲ್ಲಿಂಜಿ ಪೊರಟಿತ್
ಸಹ್ಯಮಲಕ ಊರ್‌ಲ್
ಕಲ್ಲಾಯಿ ಮರಿಂಜತ್.
ಕೇಳೊ ಕೇಳೊ ಬೆಂದುವೆ
ಆ ಕಲ್ಲ್ ನಡುಕಾಲೆ
ನುಗ್ಗಲು ಪೊರಡಲು;
ನುಗ್ಗಿತ್ ಪೊರಟನೊ
ಕೆಜ್ಜ ಪಾಪ ಪೋಪಲ;
ಮೇಲೆ ಪಾಪ ಪೊದ್ದುಲೆ;
ಅನ್ನತ ನೆಲೆಯಾಪ.
ಇಞ್ಞಾ ಕೇಳೊ ಸಂಜಾದಿ
ಲೋಪಾಮುದ್ರೆ ದೇವಿನ
ಲಕ್ಷ್ಮಿದೇವಿ ಕೊಂಡಿತ್
ನಾಲ್ ಮಂಡೆ ಬ್ರಹ್ಮಂಗ್
ದತ್ತ್ ಮೋವಂದೆಣ್ಣಿತ್
ಕೈನ್‌ಟಿ ಕೊಡ್‌ತತ್.

ಅದ್ ಕಂಡ ಬ್ರಹ್ಮನ್
ಚಂದೋಳ ಪೆರ್‌ಜಾಯಿ
ಲೋಪಾಮುದ್ರೆ ದೇವಿನ
ಕೊಂಡಾಟತ್ ಚಾಕ್‌ಚಿ
ಇನ್ನನ್ನಿಪ್ಪ ಕಾಲತ್
ಜಬ್ಬೂಮಿರ ಮೀದಲ್
ಪುಟ್ಟ್‌ಚೊಬ್ಬ ಪಾರುವ
ಕವೇರ ಪೆದಂಗೊಂಡ್.
ಚೆನ್ನ ಕಾಲ ಪೋಕಣೆ
ಕವೇರ ಮಹಮುನೀಂದ್
ಭೂಮಿಲ್ ಪೆದಂಗೊಂಡ್
ತಾನೂ ತಾಂಡ ಕೊಂಡವಳೂ
ಜಬ್ಬೂಮಿನ ಸುತ್ತಿತ್
ಪೊಮ್ಮಾಲೆ ಕೊಡವುಲ್
ಸಹ್ಯಾದ್ರಿರ ಮೋಳ್‌ಲ್
ಅಲ್ಲಿ ಬಂದ್ ನಿಂದಿತ್
ಮಕ್ಕ ಫಲ ಬೋಂಡೂಂದ್
ನಾಲ್ ಮೂಡ್ ಬ್ರಹ್ಮನ
ಮನತ್ ನೆನತಿತ್
ಉಗ್ರ ತಪ ಕೆಜ್ಜತ್.
ಕೇಳೆನ್ನಡ ಸಂಜಾದಿ
ಆ ತಪ ಬಲತ್‌ಲ್
ಅಗ್ನಿ ದೇವ ಪುಟ್ಟಿತ್
ಮೂಂದ್ ಲೋಕ ಚುಟ್ಟತ್.
ಅದ್ ಕಂಡ ದೇಬುವ
ಬೊತ್ತಿತ್ ಬೊರ್‌ಂಡಿತ್
ಓಡಿ ಪಾರಿ ಪೋಯಿತ್
ನಾಲ್ ಮಂಡೆಕಾರಂಗ್
ಈ ಸುದ್ದಿನರ್‌ಪ್‌ಚಿ.
ಅದರಿಂಜ ಬ್ರಹ್ಮನ್
"ದೇಬುವಳೆ ಬೊತ್ತಂಡ"
ಎಂದೆಣ್ಣಿ ಪರಂದಿತ್
ದೇಬುವಳ ಕೂಟಿತ್
ಸಹ್ಯಾದ್ರಿಕ್ ಬಂದಿತ್
ಕವೇರಂಡ ಮಿಞ್ಞಲ್
ಅಲ್ಲಿ ಬಂದ್ ನಿಂದಿತ್
ಕವೇರಂಡ ಸುತ್ತಲೂ

ಮಾರ್‌ಟ್ಟಿತ್ ಕತ್ತುವ
ಅಗ್ಗಿ ಬಾಯಿ ತಿತ್ತ್‌ಕ್
ನಾಲ್ ಮಂಡೆ ದೇವೈಯ್ಯ
ಕೆಂದಾವರೆ ಕೈಯ್ಯೊಂಡ್
ತೀರ್‌ತ ತಳಿಚತ್.
ತೀರ್‌ತ ತಳಿಚಿತ್
ತಿತ್ತ್‌ನ ಕೆಡ್‌ತಿತ್
ಈ ಬಾಕ್ ಪರಂದತ್
"ಕೇಳೊ ಕೇಳೊ ಕವೇರ
ಎನ್ನಾಂಡ ಮೊಳಿಗೊಂಡ್
ಇನ್ನನೆ ತಪ ಕೆಜ್ಜ?"
ಎಂದೆಣ್ಣಿತ್ ಕೇಕಣೆ
ಕವೇರ ಮುನಿರಾಯ
ಕಣ್ಣ್ ಬುಟ್ಟ್ ನೋಟ್‌ಚಿ.
ಕಣ್ಣ್ ಬುಟ್ಟ್ ನೋಟಣೆ
ನಾಲ್ ಮಂಡೆ ಬ್ರಹ್ಮನ
ಕಣ್ಣೊಡನೆ ಕಂಡಿತ್
ಚಂದೋಳ ಪೆರ್‌ಜಾಯಿ
ಮಕ್ಕ ಫಲ ಬೋಂಡೂಂದ್
ಅಡ್ಡ ಬುದ್ದ್ ಬೋಡ್‌ಚಿ.
ಅದ್ ಕೇಟ ದೇವೈಯ್ಯ
ಉಳ್ಳ್ ಗೇನ ಮಾಡಿತ್
ಈ ಬಾಕ್ ಪರಂದತ್
"ಕೇಳೊ, ಕೇಳೊ ಪಾರುವ
ಪಂಡಿಯ ಜನ್‌ಮತ್
ಕೆಜ್ಜ ಪಾಪಕ್ಕಾಯಿತ್
ಮಕ್ಕ ಫಲ ಕ್‌ಟ್ಟಲ.
ಆನಕ್ಕಿಕ ಮುನಿಯೆ
ನೀಕೆಜ್ಜ ತಪಸ್‌ಕ್
ಮೆಚ್ಚಿತೆ ವರ ತಪ್ಪಿ;
ಅಲ್ಲತೊಂದು ಅಲ್ಲಲ
ಲಕ್ಷ್ಮಿದೇವಿ ಮಾತಾಯಿ
ದತ್ತ್ ಮೊವಂದೆಣ್ಣಿತ್
ನಾಕ್ ತಂದ ಕುಞ್ಞಿನ
ಲೋಪ ಮುದ್ರೆ ದೇವಿನ
ನೀನೆಡ್‌ತ್ ಚಾಕಿಯ"
ಎಂದೆಣ್ಣಿ ಪರಂದಿತ್

ಕುಞ್ಞಿನ ಕೊಡ್‌ತತ್.
ಅದ್ ಕಂಡ ಕವೇರ
ಚಂದೋಳ ಪೆರ್‌ಜಾಯಿ
ಲೋಪಾಮುದ್ರೆ ಕನ್ನಿನ
ಕೈಕೆಡ್‌ತ್ ಕೊಂಡತ್.
ಅದ್ ಕಂಡ ಬ್ರಹ್ಮನ್
ದೇಬುವಳ ಕೂಟಿತ್
ಅಲ್ಲಿಂಜ ಪೊರಟತ್.
ಕವೇರ ಮುನಿರಾಯ
ಲೋಪಾ ಮುದ್ರೆ ದೇವಿಕ್
ಭೂಮಿ ದೇವಿಂದೆಣ್ಣಿತ್
ಬಾಳೊ ಬಾಳೊಂದೆಣ್ಣಿಚಿ;
ಅದ್ ಕೇಟ ಕನ್ನಿಯೊ
ಪಾರುವ ಕವೇರಂಗ್
ಈ ಬಾಕ್ ಪರಂದತ್.
"ಕೇಳೊ ಕೇಳೊ ಅಪ್ಪೈಯ್ಯ
ಇಂದಾಕಣೆ ಸ್ವರ್ಗತ್
ಲೋಪಾಮುದ್ರೆಂದೆಣ್ಣಿತ್
ನಾಲ್ ಮಂಡೆ ಬ್ರಹ್ಮಂಡ
ದತ್ತ್ ಮೋವಳಾಯಿತ್
ಪುಟ್ಟಿತ್ ಬೊಳಂದನೋ;
ಇಞ್ಞಿ ಮಿಞ್ಞಿ ಅಪ್ಪೈಯ್ಯ
ನ್‌ಡ ಮೋವಳಾಯಿತ್
ಕಾವೆರ್ಯಮ್ಮೆ ದೇವೀಂಚ್
ಭೂಮಿಲ್ ಪೆದಂಗೊಂಡ್
ಈ ಚೆರ್ ಮನ್‌ಸಂಡ
ಕೆಜ್ಜ ಪಾಪ ಪೋಪೋಲೆ
ಕೇಕಿಯ ಕಡಲೋಳ
ನೀರಾಯಿ ಪರಿವಿನೊ"
ಎಂದೆಣ್ಣಿ ಪರೆಯಣೆ
ಕವೇರ ಮಹಾ ಮುನಿಕೂ
ಕವೇರಂಡ ಕೊಂಡವಕೂ
ಚಂದೋಳ ಪೆರ್‌ಜಾಯಿ
ತಣ್ಣನೆ ಪೊಲಂದತ್.
ಕಾಲನ್ನನೆ ಪೋಪಕ
ದೇವ ದೇವಿ ದಂಡಾಳು
ಚತ್ತ್ ಸ್ವರ್ಗ ಸೇರ್‌ಚಿ.

ಇಇಷ್ಟ್ಲಾ ಕೇಳ್ ಸಂಜಾದಿ
ಕಾವೇರ್ಯಮ್ಮೆ ದೇವಿಯೊ
ಬ್ರಹ್ಮಾದ್ರಿರ ಮೋಳ್‌ಲ್
ತಣ್ಣನೆ ಪೊಲವಕ್ಕ
ಅಗಸ್ತ್ಯ ಮಹಮುನಿಯೊ
ಜಬ್ಬೂಮಿನ ಸುತ್ತಿತ್
ಶಂಭು ಶಿವ ದೇವನ
ಕಣ್ಣೊಡನೆ ಕಾಂಬಕ್
ಸಹ್ಯಾದ್ರಿರ ಮೋಳ್‌ಕ್
ಅಲ್ಲಿ ಬಂದಿತೆತ್ತಣೆ
ಕಾವೇರ್ಯಮ್ಮೆ ಕನ್ನಿನ
ಕಣ್ಣೊಡನೆ ಕಂಡಿತ್
ಕಂಡಿತ್ ಕೊದಿಯಾಚಿ;
ಈನಂಗುಂಡ್ ಪೋರಾಂದ್
ದೇವ ಕನ್ನಿ ಮಿಞ್ಞಲ್
ತಾನ್ ಪೋಯಿ ನಿಂದಿತ್
ಈ ಬಾಕ್ ಪರಂದತ್;
"ಕೇಳೊ ಕೇಳೊ ಕನ್ನಿಯೆ,
ಪೊಣ್ಣಿಲ್ಲತೆ ಮುಂಬಾಚೆ
ಬದ್ಧಿನೊ ಫಲವಿಲ್ಲೆ;
ಆನಂಗುಂಡ್ ಕನ್ನಿಯೆ,
ನಿನ್ನ ಕೂಡಿ ಬಾವಂಡು
ಎಂದೆಣ್ಣಿ ನೆನತಿಯ;
ನೀನಿಕ್ಕ ಮನ ಬೆಚ್ಚಿ
ಎನ್ನ ಕೂಡಿ ಬದ್ದೋಳೊ"
ಎಂದೆಣ್ಣಿ ಪರಂದತ್.
ಆ ಬಾಕ್‌ನ ಕೇಕಣೆ
ಕಾವೇರ್ಯಮ್ಮೆ ದೇವಿಯೋ
"ನಾಕೊತ್ತೋರ್ ದೇವನೆ"
ಎಂದೆಣ್ಣಿ ನೆನತಿತ್
ತಕ್ಕ್ ಬಾಕ್ ತೀತಿತ್
ಪಂಡಿಯ ನಡಪೋಲೆ
ಮಾಲೆ ಚೂಡಿ ಮಂಗ್‌ಲ
ಶಾಸ್ತ್ರ ಪೋಲೆ ಮಾಡಿತ್
ಚಂದೋಳತೆ ಇಪ್ಪಕ,
ಕಾವೇರ್ಯಮ್ಮೆ ತಾಯಿಯೊ
ದೇವೈಯ್ಯನ ನೋಟಿತ್

ಈ ಬಾಕ್ ಪರಂದತ್
"ಒಂದ್ ಕೇಳ್ ದೇವೈಯ್ಯ
ಎನ್ನ ನೀ ಚದಿಕಂಡ
ನಿನ್ನ ನಾ ಮರೆಯುಲೆ;
ಎನ್ನ ನೀನ್ ಬುಟ್ಟಿತ್
ದೂರ ಬಟ್ಟೆ ಪೋಯಿನೊ
ನಿನ್ನ ನಾ ಚದಿಚಿತ್
ನೀರಾಯಿ ಪರಿವಿನೊ"
ಎಂದೆಣ್ಣಿ ಪರೆಯಣೆ
ಅಗಸ್ತ್ಯ ಮಹಮುನಿಯೊ
ಆಕು ಪೋಕುಂದೆಣ್ಣಿತ್
ಕೈ ಮುಟ್ಟಿ ಕಡಂದತ್.
ಇನ್ನನಿಪ್ಪ ಕಾಲತ್
ದೇವ ದೇವಿ ದಂಡಾಳು
ತಣ್ಣನೆ ಪೊಲವಕ್ಕ
ನಲ್ಲೋರಾಚೆ ನಾಳಾಯಿ
ಅಗಸ್ತ್ಯ ಮುನೀಶ್ವರ
ಕಾವೇರ್ಯಮ್ಮೆ ದೇವಿನ
ಪೊಂಗಲಶ ಪಾತ್ರತ್
ಮುಚ್ಚಿ ಮರೆ ಮಾಡಿತ್
ಪಕ್ಕಲಿಂಜ ಪಾರುವ
ಮಕ್ಕಳ ಪುಡಿಚಿತ್
"ಕೇಳಿ ಕೇಳಿ ಮಕ್ಕಳೆ
ನಾನಿಕ್ಕ ಕನಕೆಲ್
ಮುಂಜಿತ್ ಕುಳಿಚಿತ್
ಬೈಪಿರಿಂಜಿ ಬಕ್ಕಣೆ
ಕಾವೇರ್ಯಮ್ಮೆ ದೇವಿನ
ಜೋಪಾನತ್ ಕಾಪಾಡಿ"
ಎಂದೆಣ್ಣಿ ಪರಂದಿತ್
ಪೊಂಗಲಶೆಡ್‌ತಿತ್
ಶಿಷ್ಯಂಗ್ ಕೊಡ್‌ತತ್.
ಮಕ್ಕಕ್ ಕೊಡ್‌ಕಣೆ
"ಪೊಂಗಲಶ ಪಾತ್ರತ್
ಎನ್ನ ಮುಚ್ಚಿ ಬೆಚ್ಚಿತ್
ದೂರ ಬಟ್ಟೆ ಪೋಚಿ"ಂಬ್
ಕಾವೇರ್ಯಮ್ಮೆ ದೇವಿಕ್
ಮೈದುಂಬ ಚೊಡಿ ಬಂದ.

ಅಕ್ಕಣೆಕ್ ಮಮ್ಮಾಯ!
ಕಾವೇರ್ಯಮ್ಮೆ ದೇವಿರ
ಸತ್ಯ ಫಲಂಗುಂಡ್
ಪಾತ್ರೆಡ್‌ತ ಪಾರುವ
ಮುಟ್ಟ್ ಪಟ್ಟ್ ಬುದ್ದತ್.
ಅದ್ ಕಂಡ ದೇವಿಯೊ
ಕುಂಡಿಕೆಕ್ ಪಾರಿತ್
ಪೊಣ್ಣ್ ರೂಪ ಬುಟ್ಟಿತ್
ನೀರಾಯಿ ಪರಿಂಜತ್.
ಅದ್‌ಕಂಡ ಪಟ್ಟಮ
ಬೊತ್ತಿತ್ ಬೊರ್‌ಂಡಿತ್
"ಇದೆನ್ನ ಕದೆ ಮಾಯ"?
ಎಂದೆಣ್ಣಿ ಪರಂದಿತ್
ಒಕ್ಕುವಳ ನೀರ್‌ನ
ಮಾರ್‌ಟ್ಟ್ ತಡ್‌ತತ್;
ಅದ್ ಕಂಡ ದೇವಿಯೊ
ಆ ತಡೆನ ಕೊವ್ವತೆ
ಈ ಚೆರ್ ಮನ್‌ಸಂಡ
ಕಣ್ಣ್‌ಕ್ ಮರೆಯಾಚಿ.
ಅದರಿಂಜ ಪಟ್ಟಮ
ಓಡಿ ಪಾರಿ ಪೋಯಿತ್
ಅಗಸ್ತ್ಯಂಗರ್‌ಪ್‌ನ.
ಅದರಿಂಜಗಸ್ತ್ಯನ್
ಏರ ದುಃಖ ಮಾಡಿತ್
ಓಡಿ ಪಾರಿ ಬಂದಿತ್
"ತಪ್ಪ್‌ಕೊಪ್ಪ್ ಮಾಡಂಡು"
ಎಂದೆಣ್ಣಿ ಪರಂದಿತ್
ಕೂಡ ಬಯ್ಯ ಪೋಯಿತ್
ಚೆಂಡೋಲೆ ಕಡಿಯೋಂಡ
ನಾಡ್‌ಡ ನಡುವುಲ್
ಒಕ್ಕುವಳ ನೀರ್‌ಲ್
ಬಟ್ಟೆಕಡ್ಡ ನಿಕ್ಕಣೆ
ಕಾವೇರ್ಯಮ್ಮೆ ಮಾತಾಯಿ
ಬಲಬರಿಕ್ ಸುತ್ತ್‌ಚಿ.
ಆನಂಗುಂಡ್ ಸಂಜಾದಿ
ಪೊಮ್ಮಾಲೆ ಬಲಮುರಿ
ಎಂದೆಣ್ಣಿ ಪೆದ ಪೋನ.

ಅಲ್ಲಿಂಜಿ ಪೊರಟಿತ್
ಉಕ್ಕಿಡೊಕ್ಕಿ ಪೋಪಕ
ಬಯ್ಯ ಬಪ್ಪ ಮುನಿನ
ಕಣ್ಣೊಡನೆ ಕಂಡಿತ್
ಪೋಪಕ್ ಕಾಲ್ ಬರ
ಬಪ್ಪಕ್ ಮನ ಬರ,
"ಆನಕಲೂ ನೋಟಂಡು
ತಪ್ಪ್ ನೆಪ್ಪರಿಯಂಡು"
ಎಂದೆಣ್ಣಿ ನೆನತಿತ್
ಬೊಳ್ಳಿ ಕೊಂಬ್ ಕುಯ್ಯತ್
ಕಾವೇರ್ಯಮ್ಮೆ ದೇವಿನ
ಪೊಂಗಲಶ ಪಾತ್ರತ್
ಚಿತ್ತಾಲ್ ಮದುವಡಿ
ಅಲ್ಲಿ ಕೂಡಿ ನಿಂದಿತ್
ದೇವ ದೇವಿ ದಂಡಾಳು
ತಕ್ಕ್‌ಬಾಕ್ ತ್‌ಪಕ್ಕ
ಚಿತ್ತಾಲ್‌ಡ ಕುಞ್ಞಿಯೊ
ವಾಯು ಕಾತಡಿಕಣೆ
ತೊಪ್ಪ್ ತೊಪ್ಪಲೆ ಪೊಜ್ಜ.
ಅಲೆ ಪೊಜ್ಜ ಸದ್ದ್‌ಕ್
ತಕ್ಕ್ ಬಾಕ್ ಕೇಟ್‌ಲೆ;
ಅಕ್ಕಣೆ ಮುನಿರಾಯ
ಮೈ ದುಂಬ ಚೊಡಿ ಬಂದ್
"ಸದ್ದ್! ಸದ್ದ್!"ಂದೆಣ್ಣ್‌ನ.
ಆ ಬಾಕ್‌ನ ಕೇಟಿತ್
ಚಿತ್ತಾಲ್‌ಡ ಕುಞ್ಞಿಯೊ
ಅಂದ್ ತೊಟ್ಟ್ ಇಂದೋಳ
ಸದ್ದಡಂಗಿ ನಿಂದಿತ್!
ಒಂದ್ ಕೇಳ್ ಸಂಜಾದಿ
ಅಗಸ್ತ್ಯ ಮುನಿರಾಯ
ಕಾವೇರ್ಯಮ್ಮೆ ಮಾತಾಯಿ
ಚಿತ್ತಾಲ್ ಮದುವಡಿ
ತಕ್ಕ್ ಬಾಕ್ ತ್‌ಪಿಂಜ;
ಅದ್ ಕೇಟ ಪಟ್ಟರೊ
ಅಗಸ್ತ್ಯನ ನೋಟಿತ್
ಈ ಬಾಕ್ ಪರಂದತ್
"ಅಲ್ಲ ಕೇಳ್ ಮುನಿಯೆ,

ಮುಚ್ಚಿತ್ ಮರೆ ಮಾಡಿ
ಕನಕೆನ ಕೊದಿಚಿಯ”
ಎಂದೆಣ್ಣಿ ಪರೆಯಣೆ
ಅಗಸ್ತ್ಯ ಮಹಮುನಿಕ್
ಮ್ಮೈ ದುಂಬ ಚೊಡಿಬಂದ್
ಪಟ್ಟಮರ ನೋಟಿತ್
“ಮತ್ಸ್ಯದೇಶ ಪಟ್ಟರೆ,
ಈ ದೇಶ ಜನವೆಲ್ಲ
ನಿಂಗಕ್ ಮಿನಿಯಡ್!
ಉಂಬಕೂ ಕುಡಿಪಕೂ
ಬಾವಕೂ ಬದ್‌ಕುವಕೂ
ನಿಂಗಕೆತ್ತತಾಯೋಡ್!”
ಎಂದೆಣ್ಣಿತ್ ಶಾಪ್‌ಟ್ಟ,
ಅದ್ ಕೇಟ ಪಾರುವ
ಬೊತ್ತಿತ್ ಬೊರ್‌ಂಡಿತ್
ಕಾವೇರ್ಯಮ್ಮ ದೇವಿರ
ಪಾದಕಡ್ಡ ಬುದ್ದಿತ್
ದುಃಖತ್ ಮೊರಟತ್.
ಅದ್ ಕಂಡ ಮಾತಾಯಿ
ಈ ಬಾಕ್ ಪರಂದತ್
“ಪಟ್ಟಮರೆ ಕೇಳಿರೊ,
ದೇವ ಮುನಿ ನಿಂಗಕ್
ಇಟ್ಟ ಶಾಪ ತಟ್ಟುಲ;
ಆನಕಲೂ ಪಟ್ಟರೆ
ಎನ್ನ ನಿಂಗ ನಂಬಿತ್
ಇಂಜಚ್ಚಕ್ ನಾಳೋಳ
ಉಂಬಕೂ ಕುಡಿಪಕೂ
ನಿಂಗಕ್ ಕೊರುವಾಂಡ”
ಎಂದೆಣ್ಣಿ ಪರಂದತ್.
ಅದ್‌ಕೇಟ ಪಾರುವ
ಚಂದೋಳ ಪೆರ್‌ಜಾಯಿ
ಅಲ್ಲಿ ಕೂಡಿ ನಿಂದತ್.
ಇಇಷ್ಣ ಕೇಳ್ ಸಂಜಾದಿ,
ದೇವ ದೇವಿ ದಂಡಾಳು
ತಕ್ಕ ಬಾಕ್ ತ್‌ಇತಿತ್
ಕಾವೇರ್ಯಮ್ಮ ಮಾತಾಯಿ
ದಂಡಾಯಿತೊಡಂದತ್–

ಅಗಸ್ತ್ಯಂಗ್ ಪೊಣ್ಣೊಬ್ಬ
ಲೋಪಾಮುದ್ರೆ ದೇವಿಯೊ,
ಲೋಕಕ್ ಪೊಳೆಯೊಬ್ಬ
ಕಾವೇರ್ಯಮ್ಮ ಮಾತಾಯಿ
ಎಂದೆಣ್ಣಿ ಪೆದಪೋಯಿ
ಬೈಪಿರಿಂಜಿ ಬಂದಳೊ.
ಬೈಪಿರಿಂಜಿ ಬಂದದ್
ಕಣ್ಣೊಡನೆ ಕಂಡಿತ್
ಅಗಸ್ತ್ಯ ಮುನಿರಾಯ
ಚಂದೋಳ ಪೆರ್‌ಜಾಯಿ
ಈ ಬಾಕ್ ಪರಂದತ್
“ಕೇಳೊ ಕೇಳೊ ದೇವಿಯ
ಲೋಕಕ್ ಪೊಳೆಯಾಯಿ
ಪೋಪ ಬಟ್ಟೆ ಎಣ್ಣುವಿ–
ಕುಂಡಿಕೆನ ಬುಟ್ಟಿತ್,
ಮತ್ಸ್ಯ ತೀರ್ಥ ಮುಟ್ಟಿತ್
ಅಲ್ಲಿಂಜಿ ಪೊರಟಿತ್
ಭಗಂಡಂಡ ಕ್ಷೇತ್ರತ್
ಪೊಮ್ಮಾಲೆ ಕನಕೆನ
ಕೂಟಿಂಗೊಂಡ್ ಪೋಯಿತ್,
ಸಪ್ತ ಕೋಟೀಶ್ವರಂಡ
ಕ್ಷೇತ್ರಕಾಲೆ ಪೋಯಿತ್,
ಅಲ್ಲಿಂಜಿ ಪೊರಟಿತ್,
ಹರಿಶ್ಚಂದ್ರಕಾಯಿತ್
ಬಟ್ಟೊತ್ತ ಬಲಮುರಿ
ಅಲ್ಲಿ ಪೋಯಿ ಸುತ್ತಿತ್,
ಅಲ್ಲಿಂಜಿ ಪೊರಟಿತ್
ಗಜಾಖ್ಯ ಗೋಮುಖಿನ
ಕಂಡಿತ್ ಪೊರಟಿತ್,
ಮಾರ್ಕಂಡೇಯ ಮಹಮುನಿ
ಉಳ್ಳಾಲೆ ಕಡಂದಿತ್
ಕಪಿಲ ಋಷಿ ಸ್ಥಾನತ್
ಅಲ್ಲಿ ಪೋಯಿ ನಿಂದಿತ್,
ಅಲ್ಲಿಂಜಿ ಪೊರಟಿತ್
ಚಂದ್ರಪುಷ್ಕರಿಣಿಲ್
ಅಲ್ಲಿ ಪೋಯಿ ಕೂಡಿತ್,
ಅಲ್ಲಿಂಜಿ ಪೊರಟಿತ್

ಪಾಕಡ ಸೇರಿಯೋಳೋ;
ನೀನ್ ಪೋನ ಬಟ್ಟೆರ
ದಂಡ್‌ಕರೆ ಭೂಮಿಲೂ
ಶಿವಲಿಂಗ ಮಾಡಿತ್
ಶಾಂತಿಪೂಜೆ ಕೆಯ್ಯುವಿ"
ಎಂದೆಣ್ಣಿ ಪರೆಯಣೆ
ಕಾವೇರ್ಯಮ್ಮೆ ಮಾತಾಯಿ
ಚಂದೋಳ ನಲಿಂಜಿತ್
ಉಕ್ಕಿ ಒಕ್ಕಿ ಪೋನಳೊ,
ಕೇಳೊ ಕೇಳೊ ಸಂಜಾದಿ
ಕಾವೇರಿ ಪೊಳೆಯಿಲ್
ಒಕ್ಕುವಳ ನೀರ್‌ಲ್
ಮುಂಜಿತ್ ಕುಳಿಚಕ್ಕ
ಕೆಜ್ಜ ಪಾಪ ಪೋಪದ್
ಎನ್ನನೆಂದರಿವಿಯ?
ನಲ್ಲೋರಾಚೆ ನಾಳಾಯಿ
ಅಗಸ್ತ್ಯ ಮುನಿರಾಯ
ಪೊಂಗಲಶ ಪಾತ್ರತ್
ತೀರ್‌ತನ ಬೂಕಿತ್
ಬ್ರಹ್ಮಗಿರಿ ಮೋಳ್‌ಲ್
ಬೆಚ್ಚಿತ್ ಪೊರಟಿತ್
ಚೆನ್ನ ಬಟ್ಟೆ ಪೋಯಿತ್
ಬೈಪಿರಿಂಜಿ ಬಕ್ಕಣಿ
ಪಾಪಿ ಕೆಟ್ಟ ಕಾಕೆಯೊ
ಪೊಂಗಲಶ ಪಾತ್ರತ್
ತೀರ್‌ತ ಮರಿಚತ್.
ಅದ್ ಕಂಡಗಸ್ತ್ಯನ್
ಮೈದುಂಬ ಚೊಡಿ ಬಂದ್
ನಾಲ್ ದಿಕ್ಕೂ ನೋಟಣೆ,
ನಾಲ್ ಮಂಡೆ ಬ್ರಹ್ಮನ್
ಮಮ್ಮಾಯತೆ ಬಂದಿತ್
ಮುನಿ ಮಿಞ್ಞಾ ನಿಂದಿತ್
"ಚೊಡಿ ಬೋಂಡ ಋಷಿಯೆ
ಬೋಂಡಿಯದ್ ಬೋಡಿಯ"
ಎಂದೆಣ್ಣಿ ಪರಂದಿತ್
ಚೊಡಿನ ತಣಿಚತ್.
ಆ ಬಾಕ್‌ನ ಕೇಟಿತ್
ಅಗಸ್ತ್ಯ ಮುನಿರಾಯ
ಈ ಬಾಕ್ ಪರಂದತ್
"ಕೇಳೆನ್ನಡ ದೇವೈಯ್ಯ
ಪೊಂಗಲಶ ಪಾತ್ರತ್
ಇಂಜ ತೀರ್ಥ ಚೆಲ್ಲ್‌ಚಿ
ಆನಂಗುಂಡ್ ದೇವ್ವೈಯ್ಯ
ತೀರ್ಥ ಬುದ್ದ ಕುಂಡ್‌ಲ್
ಕಾಲೋರಾಂಡೆಕೋರಮ್ಮ
ತೀರ್ಥ ಪುಟ್ಟುವನ್ನನೆ
ನಾಕೋರ್ ವರ ತಾರೊ"
ಎಂದೆಣ್ಣಿತ್ ಬೋಡಣೆ
ನಾಲ್ ಮಂಡೆ ದೇವೈಯ್ಯ
ಕೇಟದ್ ಕೊಡ್‌ತಿತ್
ಕಣ್ಣ್‌ಕ್ ಮರೆಯಾಚ.
ಅದರಿಂಜ ಪಾರುವ
ಚಂದೋಳ ಪೆರ್‌ಜಾಯಿ
"ಸ್ವರ್ಗ ಮರ್ತ್ಯ ಪಾತಾಳ
ಈ ಮೂಂದ್ ಲೋಕತುಳ್ಳ
ತೀರ್‌ತೆಲ್ಲ ಬಾರಿ"ಂಬ್
ಕೈಯೆಡ್‌ತ್ ಕಾಕಣೆ
ತೀರ್‌ತ ಪೊಳೆಯೆಲ್ಲ
ಅಲ್ಲಿ ಬಂದ್ ನಿಂದಿತ್
ಮುತ್ತಪ್ಪಣೆ ಕೇಟತ್.
ಅದ್ ಕಂಡ ಮುನಿಯೊ
ಅಪ್ಪಣೆಯೊ ಮಾಡ್‌ಚಿ
"ಏಳ್ ಕೋಟಿ ತೀರ್‌ತ
ಕಾಲೋರಾಂಡೆಕೋರಮ್ಮ
ನೇರ ಇಚ್ಚಕಾಪಕ್ಕ
ಶಂಭು ಶಿವ ದೇವಂಡ
ನೆತ್ತಿ ಕಣ್ಣ್ ಸೂರಿಯ
ತುಲಾ ರಾಶಿಕೆತ್ವಕ
ನಿಂಗೆಲ್ಲಾರು ಬಂದಿತ್
ಈ ಕುಂಡಿಕೆಲಿಂಜಿತ್
ಕುಂಡಿಕೆರೊಳ್‌ಲಿಂಜಿ
ಉಕ್ಕಿ ಉಕ್ಕಿ ಒಕ್ಕೊಂಡು.
ಅಂದಿಯ ದಿನತ್‌ಲ್
ಆರ್ ಇಲ್ಲಿ ಬಂದಿತ್

ಮುಂಜಿತ್ ಕುಳಿಪನೊ
ಆ ಚೆರ್ ಮನ್‌ಸನ್
ಏಳೇಳ್ ಜನ್‌ಮತ್
ಕೆಜ್ಜ ಪಾಪ ಪೋಂಡುಲ
ಮೇಲೆ ಪಾಪ ಪೊದ್ದಲ.
ಪೊದ್ದ್‌ನ ಶನಿಯೆಲ್ಲ
ದೂರ ನೀಂಗಿ ನಿಕ್ಕಂಡು.
ಮಕ್ಕಿಲ್ಲತ ಮಾಲೋಂಗ್
ಮಕ್ಕ ಫಲ ಕ್‌ಟ್ಟಂಡು;
ಕಣ್ಣಿಲ್ಲತ ಮಾಲೋಂಗ್
ಕಂಬಲ ಕೊಡ್‌ಕಂಡು;
ಪೊಣ್ಣಿಲ್ಲತ ಬಾಲಂಗ್
ಕನ್ನಿ ಬಟ್ಟ್ ಕ್‌ಟ್ಟಂಡು;
ಕಾಲಿಲ್ಲತ ಕುಂಟಂಗ್
ಕಾಲ್ ಫಲ ಕ್‌ಟ್ಟಂಡು;
ಕೈಯಿಲ್ಲತ ಮೋಟಂಗ್
ಕೈಯಿ ಫಲ ಕ್‌ಟ್ಟಂಡು;
ಮನತ್ ನೆನತದ್
ಅಕ್ಕ ಅಲ್ಲಿ ಕ್‌ಟ್ಟಂಡು;
ಅನ್ನತ ನೆಲೆಯಾಂಡು"
ಎಂದಪ್ಪಣೆ ಮಾಡ್‌ನ.
ಅದ್ ಕೇಟ ತೀರ್‌ತ
ತೀರ್‌ತ ಪೊಳೆಯೆಲ್ಲಾ
ಬಪ್ಪಕೊವ್ವಂದೆಣ್ಣಿತ್
ಅಪ್ಪಣೆ ಪಡಂದಿತ್
ಕಣ್ಣ್‌ಕ್ ಮರೆಯಾಚಿ.
        ಕೇಳೊ ಕೇಳೊ ಬೆಂದುವೆ,
ಆ ಕುಂಡಿಕೆರೊಳ್‌ಕ್
ಕಾವೇರ್ಯಮ್ಮೆ ಮಾತಾಯಿ
ಪಾರುವಂಜಿ ಬುದ್ದಿತ್
ಪೊಣ್ಣ್ ರೂಪ ಬುಟ್ಟಿತ್
ನೀರಾಯಿ ಪರಿಂಜದೊ;
ಆನ್‌ಗುಂಡ್ ಸಂಜಾದಿ
ಕಾವೇರ್ಯಮ್ಮೆ ದೇವಿರ
ತೀರ್‌ತ ಕುಳ್‌ಚಕ್ಕ
ಮನತ್ ನೆನತದ್
ಅಕ್ಕ ಅಲ್ಲಿ ಕ್‌ಟ್ಟುವ.

ಪಿಞ್ಞಾ ಕೇಳ್ ಸಂಜಾದಿ
ಸಂಜಾದಿ ಮನವೇಂಗಿ
ಭಗಂಡಂಡ ಕ್ಷೇತ್ರತ್
ಸಂಗಮತ್ ನೀರ್‌ಲ್
ಮುಂಞಿತ್ ಕುಳಿಚಕ್ಕ
ಕೆಜ್ಜ ಪಾಪ ಪೋಪದ್
ಎನ್ನನೆಂದರಿವಿಯ?
ಅಲ್ಲತೊಂದ್ ಅಲ್ಲಲ,
ಪೊಮ್ಮಾಲೆ ಕನಕೆಯು
ದೇವ ಕನ್ನಿ ಸುಜ್ಯೋತಿ
ಆರೆಣ್ಣಿತರಿವಿಯ?
ಅಲ್ಲತಾರು ಅಲ್ಲಲ.
ಪಾಡಿ ನೋಟಿಕೊಂಡಲ್ಲಿ
ಪೊಮ್ಮಾಲೆ ಕನಕೆಯೊ
ಯಕ್ಷಿಣಿ ಪೆದಲಿಂಜ
ದೇವೇಂದ್ರಂಡ ಮಚ್ಚಿಯೊ
ಸುಜ್ಯೋತಿನ ಕೂಡಿತ್
ನೀರಾಯಿ ಪರಿಂಜದ್
ಎನ್ನನೆಂದರಿವಿಯ?
ಪಂಡ್ ಪಂಡ್ ಕಾಲತ್
ಸುಯಜ್ಞನ್ ಪಾರುವ
ಜಬ್ಬೂಮಿನ ಸುತ್ತಿತ್
ಪೊಮ್ಮಾಲೆ ಕೊಡವುಲ್
ಊರ್ ಪೆದ ಚೆಲ್ಲುಳ್ಳ
ಸಹ್ಯ ಮಲಕ ಊರ್‌ಲ್
ನಾರಾಯಣ ದೇವನ
ಮನತ್ ನೆನತಿತ್
ಉಗ್ರ ತಪ ಕೆಜ್ಜತ್.
ಅದರಿಂಜ ದೇವ್ಯೆಯ್ಯ
ಸುಯಜ್ಞಂಡ ಮಿಞ್ಞಲ್
ಮಮ್ಮಾಯತೆ ನಿಂದಿತ್
ಪಾರುವ ಸುಯಜ್ಞನ"
ಎನ್ನಾಂಡ ಮೊಳಿಗೊಂಡ್
ಇನ್ನನೆ ತಪ ಕೆಜ್ಜ?"
ಎಂದೆಣ್ಣಿತ್ ಕೇಕಣೆ
ಸುಯಜ್ಞ ಮುನಿರಾಯ
ದೇವ್ಯೆಯ್ಯನ ನೋಟಿತ್

ಚಂದೋಳ ಪೆರ್‌ಜಾಯಿ
ಮಕ್ಕ ಫಲ ಬೋಂಡೂಂದ್
ಕೈಯೊಡ್ಡಿತ್ ಬೋಡ್‌ಚಿ.
ಅದ್ ಕಂಡ ದೇವೈಯ್ಯ
ಉಳ್ಳ್‌ಗೇನ ಮಾಡಿತ್
ತನ್ನಂಗುಂಡ್ ಪುಟ್ಟ್‌ನ
ಸುಜ್ಯೋತಿನೆಡ್‌ತಿತ್
ಕೈ ನ್‌ೀಟಿ ಕೊಡ್‌ತತ್.
ಅದ್ ಕಂಡ ಪಾರುವ
ಈ ಬಾಕ್ ಪರಂದತ್
"ನಿಪ್ಪಕ್ ನೆಲೆ ತಾರೊ
ಸತ್ತಿಯ ಸ್ಥಳವೇದೋ?"
ಎಂದೆಣ್ಣಿತ್ ಕೇಕಣೆ
ಎಂಗಡ ಪಡಿಚವನ್
ಈ ಬಾಕ್ ಪರಂದತ್
"ಕೇಳ್ ಕೇಳ್ ಮುನಿಯೆ
ಇಲ್ಲಿಂಜಿ ಪೊರಟಿತ್
ಅಗ್ನಿ ಕುಂದ್‌ಕೇರಿತ್
ಬ್ರಹ್ಮಾದ್ರಿ ಬರಿಯಿಲ್
ಗಜಾದ್ರಿರ ಮೋಳ್‌ಲ್
ನೀಲ ಕೊಡಿ ಯಕ್ಷಿಣಿ
ಅಲ್ಲಿ ಕೊಪ್ಪ ಬೆಚ್ಚಿತ್;
ಅಲ್ಲಿ ನೆಲೆಕೊಂಡೊಳೊ.
ಪಿಞ್ಞಿ ಚೆನ್ನ ಕಾಲತ್
ದೇವಕನ್ನಿ ಯಕ್ಷಿಣಿ
ನೀರಾಯಿ ಪರಿಯುವ;
ಅಕ್ಕ ಕೇಳ್ ಪಾರುವ
ಸುಜ್ಯೋತಿ ಕುಮಾರಿಯೂ
ನೀರಾಯಿತ್ ಒಕ್ಕುವ;
ಒಕ್ಕುವಳ ನೀರ್‌ಕ್
ಯಕ್ಷಿಣಿಯು ಕೂಡಿತ್
ಪೊಮ್ಮಾಲೆ ಕನಕೆಂದ್
ಅಲ್ಲಿಂಜಿ ಪೆದಗೊಂಡ್
ಕಾವೇರಿನ ಕೂಡಿತ್
ಪಾಕಡಕ್ ಸೇರುವ".
ಎಂದೆಣ್ಣಿ ಪರಂದಿತ್
ನಾರಾಯಣ ದೇವೈಯ್ಯ
ಕಣ್ಣ್‌ಕ್ ಮರೆಯಾಚಿ.
ಅದ್ ಕೇಟ ಪಾರುವ
ಅಲ್ಲಿಂಜಿ ಪೊರಟಿತ್
ಗಜಾದ್ರಿಕ್ ಪೋಯಿತ್
ಚೆನ್ನ ಕಾಲ ಬಾವಂಜಿ
ಚತ್ತ್ ಸ್ವರ್ಗ ಸೇರ್‌ಚಿ.
ಬಾಳೊ ಕೇಳ್ ಸಂಜಾದಿ
ನೀಲ ಕೊಡಿ ಯಕ್ಷಿಣಿ
ಭೂಮಿದೇವಿ ಸುಜ್ಯೋತಿ
ದಂಡಾಳಿಂಜ ಕನ್ನಿಯ
ಕೂಳ್ ನೀರ್ ಬುಟ್ಟಿತ್
ನೂರಾಯಿರ ಕಾಲೋಳ
ಉಗ್ರ ತಪ ಕೆಜ್ಜತ್.
ಆ ಸುದ್ದಿನರಿಂಜಿತ್
ದೇವಲೋಕೊಡೆಯನ್
ಗಜಾದ್ರಿಕ್ ಬಂದಿತ್
ಸುಜ್ಯೋತಿ ಕುಮಾರಿನ
ಕಂಡಿತ್ ಕೊದಿಯಾಯಿ
ಈ ಬಾಕ್ ಪರಂದತ್,
"ದೇವಕನ್ನಿ ಸುಜ್ಯೋತಿ
ನೀನ್ ತಪ ಬುಟ್ಟಿತ್
ಎನ್ನಕೂಡಿ ಬಾವಂಡು"
ಎಂದೆಣ್ಣಿತ್ ಕೇಟಲ್ಲಿ
ಆಕು ಪೋಕುಂದೆಣ್ಣಿತ್
ಒತ್ತಿತ್ ಪಿರಿಂಜತ್.
ಈನಂಗುಂಡ್ ಪೋರಾಂದ್
ದೇವೇಂದ್ರಂಗ್ ಪೊಣ್ಣಾಯಿ
ಚೆನ್ನ ಕಾಲ ಬದ್ದಲ್ಲಿ
ದೇವಕನ್ನಿ ಸುಜ್ಯೋತಿ
ಬೇರಂಗೊಂಡೆಳತಿತ್
ಯಕ್ಷಿಣಿನ ನೋಟಿತ್
ಈ ಬಾಕ್ ಪರಂದತ್
"ಕೇಳ್ ದೇವಿ ಯಕ್ಷಿಣಿ
ಎಂಗಿನ್ನನೆ ಬದ್ದಿನೊ
ಬದ್ದೋರ್ ಫಲವಿಲ್ಲೆ;
ನಲ್ಲದೊಂದು ಕ್‌ಟ್ಟುಲೆ.
ದೇವೇಂದ್ರಂಗ್ ಪೊಣ್ಣಾಯಿ

ಇಪ್ಪಕ್ ಮನವಿಲ್ಲೆ;
ಆನಂಗುಂಡ್ ದೇವಿಯೆ
ದಂಡಾಳುಳ್ಳ ಎಂಗಳೊ
ನೀರಾಯಿ ಪರಿಯನ.
ನೀರಾಯಿ ಪರಿಂಜಿನೊ
ಲೋಕಕ್ ಪೊಳೆಯಾಚಿ;
ಇಂದಾಕಣೆ ಯಕ್ಷಿಣಿ
ಇಞ್ಞಿ ನೀ ಕನಕೆಂದ್
ಕಾವೇರ್ಯಮ್ಮ ದೇವಿರ
ಕೂಡ ಕೂಡಿ ಪೋಯಿತ್
ಪಾಕಡಕ್ ಸೇರಂಗ"
ಎಂದೆಣ್ಣಿ ಪರಂದಿತ್
ಒತ್ತಿತ್ ಪೊರಟಿತ್
ಸುಜ್ಯೋತಿ ಕನಕೆಂದ್
ಜೋಡಾಯಿ ಪರಿಂಜತ್.
ಅದರಿಂಜ ದೇವೇಂದ್ರ
ಕ್‌ಬ್ಭೂಮಿಕ್ ಬಂದಿತ್
ಸುಜ್ಯೋತಿನ ನೋಟಿತ್
ಈ ಬಾಕ್ ಪರಂದತ್
"ಕನ್ನಿ ಕೇಳ್ ಸುಜ್ಯೋತಿ
ಎನ್ನ ನೀ ಮಿನಿಂಜಿತ್
ನೀರಾಯಿ ಪರಿಂಜಿಯ.
ನ್‌ೀಡ ನೀರ್ ಬತ್ತಿತ್
ಕಡಕೆತ್ತತಾಯೋಡ್"
ಎಂದೆಣ್ಣಿತ್ ಶಾಪ್‌ಟ್ಟ.
ಅದ್ ಕೇಟ ಸುಜ್ಯೋತಿ
ಮಂಡೆ ಮಂಡೆ ಪೊಜ್ಜಿತ್
ಮೊರಟತ್ ತೆರಂದತ್.
ಅದ್ ಕಂಡ ಇಂದ್ರನ್
ಕರಕರೆಯೊ ಪುಟ್ಟಿತ್
ಈ ಬಾಕ್ ಪರಂದತ್
"ದುಃಖ ಬೋಂಡ ಕನ್ನಿಯೆ
ಇಟ್ಟ ಶಾಪ ತಟ್ಟುಲ,
ಆನಂಗುಂಡ್ ಕನ್ನಿಯೆ
ನೀರಿಂಜಿತು ಇಲ್ಲತೆ
ಯಕ್ಷಿಣಿರ ಕೂಡೆಯೊ
ಭಗಂಡಂಡ ಕ್ಷೇತ್ರಕ್
ಚಾಚಿ ಮೆಲ್ಲೆ ಪೋಯೋಳೊ,

ಅಲ್ಲಿ ಉಂಡ್ ಕಾವೇರಿ;
ಕಾವೇರ್ಯಮ್ಮ ದೇವಿನ
ಆ ದೇವಿನ ಕಂಡಿನೊ
ನಿನ್ನಡ ಮನ ಪೋಲೆ
ಪಾಕಡಕ್ ಸೇರಲು"
ಎಂದೆಣ್ಣಿ ಪರಂದಿತ್
ಕಣ್ಣ್‌ಕ್ ಮರೆಯಾಚಿ.
ಆ ಬಾಕ್‌ನ ಕೇಟಿತ್
ನೀಲ ಕೊಡಿ ಸುಜ್ಯೋತಿ
ಚಂದೋಳ ಪೆರ್‌ಜಾಯಿ
ಭಗಂಡಂಡ ಕ್ಷೇತ್ರಕ್
ಪೊಮ್ಮಾಲೆ ಕನಕೆನ
ಕೂಡಿಂಗೊಂಡ್ ಬಕ್ಕಣೆ
ಕಾವೇರ್ಯಮ್ಮ ದೇವಿರ
ಮಮ್ಮಾಯತ್ ತೀರ್‌ತ
ಉಕ್ಕಿ ಒಕ್ಕಿ ಬಪ್ಪದ್
ಕಣ್ಣೊಡನೆ ಕಾಂಗಣೆ
ಚಂದೋಳತ್ ಚಾಯೋಃಡೆ
ಕೊಂಡಾಟತ್ ಕೋಪೋಃಡೆ
ಒಪ್ಪೋಡೆ ಪೊರ್‌ಲೋಡೆ
ಕಾವೇರ್ಯಮ್ಮ ದೇವಿರ
ನೂರಾರ್ ಪೆದಲೆಣ್ಣಿ
ತಂಗ ಕೂಡ ಬಪ್ಪಾಂದ್
ಪಾದಕಡ್ಡ ಬುದ್ದತ್.
ಅದ್ ಕಂಡ ಕಾವೇರಿ
ಸುಜ್ಯೋತಿ ಕನಕೆನ
ಸಂಗಮಾಯಿ ಕೂಡಿತ್
ಅಲ್ಲಿಂಜಿ ಪೊರಟಿತ್
ಪಾಕಡಕ್ ಸೇರ್‌ಚಿ.
ಆನಂಗುಂಡ್ ಸಂಜಾದಿ,
ಸಂಗಮತ್ ನೀರ್‌ಲ್
ಮುಂಜಿತ್ ಕುಳ್‌ಚಕ್ಕ
ಕೆಜ್ಜ ಪಾಪ ಪೋಪಲ
ಎಂದೆಣ್ಣಿತ್ ಪಾಡ್‌ನ;
ಈ ಪಾಟ್‌ನ ಬೆಪ್ಪಿನೊ.
ಬೆಪ್ಪಕೊಮ್ಮೆಡ್‌ಪಕ್ಕ
ಪಾಡುವ ಮೊರಡಾಪ
ಆದಿ ಮೂಲ ಲಲ್ಲೇಲೊ !

ಸ್ಕಾಂದ ಪುರಾಣದಲ್ಲಿ ಅಡಕವಾಗಿರುವ ಕಾವೇರಿ ಪುರಾಣದಲ್ಲಿ ಹೇಳುವ ಮೇರೆ ಮತ್ಸ್ಯ ದೇಶದ ರಾಜನಾದ ಸಿದ್ಧಾರ್ಥನ ಕಿರಿ ಮಗ ಚಂದ್ರವರ್ಮನು ದಕ್ಷಿಣ ದೇಶದ ಎಲ್ಲಾ ಯಾತ್ರಾ ಸ್ಥಳಗಳನ್ನು ಸಂಚರಿಸಿ ಕೊನೆಗೆ ಕಾವೇರಿಯು ಹುಟ್ಟುವ ಬ್ರಹ್ಮಗಿರಿಗೆ ಬಂದು ಪಾರ್ವತಿಯನ್ನು ಕುರಿತು ತಪಸ್ಸು ಮಾಡಲು ಪಾರ್ವತಿಯು ಪ್ರಸನ್ನಳಾಗಿ ಅವನಿಗೆ ಒಂದು ಕುದುರೆಯನ್ನೂ ಒಂದು ಕತ್ತಿಯನ್ನೂ ಒಂದು ಸೈನ್ಯವನ್ನೂ ದಯಪಾಲಿಸಿ ಈ ದೇಶದಲ್ಲಿರುವ ಮ್ಲೇಂಛರನ್ನು ಗೆದ್ದು ಇಲ್ಲಿ ರಾಜ್ಯಭಾರವನ್ನು ಮಾಡಬೇಕಾಗಿ ವರವನ್ನಿತ್ತಳು. ತನ್ನ ಪಟ್ಟಕ್ಕೆ ರಾಣಿಯನ್ನು ಕೇಳಲು ತನ್ನ ಶಕ್ತಿಯಿಂದ ಸೃಷ್ಟಿಸಲ್ಪಟ್ಟ ಒಬ್ಬ ಶೂದ್ರ ಕನ್ನಿಕೆಯನ್ನು ಕೊಟ್ಟಳು. ಈ ಶೂದ್ರ ಸ್ತ್ರೀಯಿಂದ ಹನ್ನೊಂದು ಮಂದಿ ರಾಜಕುಮಾರರು ಹುಟ್ಟಿ ಕ್ಷತ್ರಿಯರಂತೆ ಬೆಳೆದು ವಿದರ್ಭ ದೇಶದ ರಾಜನಿಗೆ ಶೂದ್ರ ಸ್ತ್ರೀಯರಲ್ಲಿ ಹುಟ್ಟಿದ ನೂರು ಮಂದಿ ರಾಜಕುಮಾರಿಯರನ್ನು ಮದುವೆ ಮಾಡಿಕೊಂಡರು. ಇವರಿಗೆ ನೂರು ಮಂದಿ ಮಕ್ಕಳು ಹುಟ್ಟಿ ಇವರ ಸಂತಾನದವರು ದೇಶವನ್ನೆಲ್ಲಾ ಆಕ್ರಮಿಸಿ ಬೆಟ್ಟ ಗುಡ್ಡಗಳನ್ನು ಉಗುರುಗಳಿಂದ ಕೆರೆದು ಮಟ್ಟ ಮಾಡಿ ವ್ಯವಸಾಯಕ್ಕೆ ತಂದರು. ಆದುದರಿಂದ ಈ ದೇಶವನ್ನು ಕ್ರೋಡ ದೇಶವೆಂದೂ ಮತ್ಸ್ಯ ದೇಶದ ರಾಜನ ಸಂತತಿಯವರು ಈ ದೇಶವನ್ನು ಆಳಿದ್ದರಿಂದ ಇದನ್ನು ಮತ್ಸ್ಯ ದೇಶವೆಂದೂ ಕರೆದರು.

ಕಾವೇರಿಯೇ ಪಾರ್ವತಿಯ ಅವತಾರವೆಂದು ಚಂದ್ರವರ್ಮನು ಪಾರ್ವತಿ ಯಿಂದ ತಿಳಿದಿದ್ದನು. ಈ ವಿಷಯವನ್ನು ಚಂದ್ರವರ್ಮನು ತನ್ನ ಮಕ್ಕಳಿಗೆ ತಿಳಿಸಿ ತನ್ನ ಹಿರಿಯ ಮಗನಾದ ದೇವಕಾಂತನಿಗೆ ಪಟ್ಟವನ್ನು ಕಟ್ಟಿ ತಾನು ತಪಸ್ಸಿ ಗಾಗಿ ಅರಣ್ಯಕ್ಕೆ ಹೋದನು.

ತುಲಾ ಸಂಕ್ರಮಣಕ್ಕೆ ಎರಡು ದಿನಕ್ಕೆ ಮೊದಲು ದೇವಕಾಂತನಿಗೆ ಪಾರ್ವತಿಯು ಸ್ವಪ್ನದಲ್ಲಿ ಪ್ರಸನ್ನಳಾಗಿ ತನ್ನ ಮಗಳ ವಂಶದಲ್ಲಿ ಉತ್ಪತ್ತಿಯಾದ ಸಮಸ್ತರೂ ಬಲಮುರಿಗೆ ಹೋಗಿ ತನ್ನ ತಮ್ಮಂದಿರೇ ಮೊದಲಾದ ಸ್ವಜನರನ್ನು ಕೂಡಿದವನಾಗಿ ಬಲಮುರಿಯಲ್ಲಿ ಹೊಳೆಯಾಗಿ ಹರಿದುಬರುವ ಕಾವೇರಿಯ ನೀರಿನಲ್ಲಿ ಸ್ನಾನವನ್ನು ಮಾಡಲು "ಸ್ತ್ರೀಯರುಗಳು ಹಿಂದಣ ನೆರಿಯುಳ್ಳವರಾಗಿ ಆದರು."

ಕೊಡಗರ ಜಾತಿ : ಕೊಡಗರೇ ಈ ದೇಶದ ಮುಖ್ಯ ನಿವಾಸಿಗ ಳಾಗಿರುವುದರಿಂದಲೂ ಕೊಡಗರ ಹೆಂಗಸರೇ ಹಿಂದಣ ನೆರಿಯುಳ್ಳವ ರಾಗಿರುವುದರಿಂದಲೂ ಕೊಡಗರೇ ಬ್ರಾಹ್ಮಣರನ್ನು ತಮ್ಮ ಆಚಾರ ವಿಚಾರಗಳಲ್ಲಿ ಸೇರಿಸದೆ ಇರುವುದರಿಂದಲೂ ಇವರು ಚಂದ್ರವರ್ಮನ ವಂಶದವರೆಂದು ಹೇಳು ವುದರಲ್ಲಿ ಸಂಶಯವಿಲ್ಲವೆಂದು ತೋರುತ್ತೆ. ಹಾಗಾದರೆ ಕೊಡಗರು ಉಗ್ರರು. ಆದರೆ ಕೊಡಗರು ತಾವು ಕ್ಷತ್ರಿಯರೆಂದು ಹೇಳಿಕೊಳ್ಳುವರು.

ಕೊಡಗರಲ್ಲಿ ಅಮ್ಮ, ಸಣ್ಣ, ಮಲ್ಲ ಮತ್ತು ಬೊಡ್ಡು ಕೊಡಗರೆಂಬ ನಾಲ್ಕು ಭೇದಗಳಿವೆಯೆಂದು ಕೆಲವರು ತಿಳಿದುಕೊಂಡಿದ್ದಾರೆ. ಸಣ್ಣ ಕೊಡಗರು ಎಲ್ಲ ಕೊಡಗರು ಮತ್ತು ಬೊಡ್ಡು ಕೊಡಗರೆಂಬ ಮಾತುಗಳು ಅಪಹಾಸ್ಯದ ಮಾತುಗಳಲ್ಲದೆ ಅಂಥ ಬೇಧಗಳಿರುವುದಿಲ್ಲ.

ಅಮ್ಮ ಕೊಡಗರು : ಮಲಯಾಳ ದೇಶದ ತಾಯಿಕಾಟ್ ತಂಬಿರಾನ್ ಎಂಬ ಬ್ರಾಹ್ಮಣನ ಮನೆತನದಲ್ಲಿ ಒಂದಾನೊಂದು ಕನ್ಯೆಯು ಮದುವೆಯಾಗುವ ಮೊದಲು ಋತುವಾದ್ದರಿಂದ ಅವಳನ್ನು ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟು ಬಿಟ್ಟರಾಗಿಯೂ ಅವಳು ಈ ದೇಶಕ್ಕೆ ಬಂದು ಒಬ್ಬ ಕೊಡಗನನ್ನು ಕೂಡಿಯಾಡಿ ಉಂಟಾದ ಸಂತತಿಯವರು ತಾಯಿಯಂತೆ ಮಧುಮಾಂಸವನ್ನು ಸೇವಿಸದೆ "ಅಮ್ಮ ಕೊಡಗ"ರೆಂದೆನ್ನಿಸಿಕೊಂಡಾಗಿಯೂ ಅವರ ಮಕ್ಕಳು–ಗಂಡೇ ಆಗಲೀ ಕೊಡಗರನ್ನು ಮದುವೆಯಾದರೂ ಹುಟ್ಟಿದ ಮಕ್ಕಳೆಲ್ಲವು ಅಮ್ಮ ಕೊಡಗರಾಗುತ್ತಾ ಬಂದು ಇವರ ವಂಶವು ಕೊಡಗು ದೇಶದಲ್ಲಿ ವೃದ್ಧಿಯಾಯಿತಾಗಿಯೂ ಹೇಳುವರು.

ಅಮ್ಮ ಕೊಡವರು ಮತ್ತು ಕೊಡವರು ಎಂಬ ಭೇದವು ಲಿಂಗಾಯತ ರಾಜರ ಆಳ್ವಿಕೆಯು ಕೊನೆಗೊಂಡ ಮೇಲೆ ಕಣ್ಣಿಗೆ ಬೀಳತೊಡಗಿತು. ಅಮ್ಮ ಕೊಡಗರು ಮಧುಮಾಂಸವನ್ನು ಸೇವಿಸುವುದಿಲ್ಲವಲ್ಲದೆ ಕರ್ಮಾಂತರಗಳಲ್ಲಿ ಲೇಸವೂ ವ್ಯತ್ಯಾಸವಿಲ್ಲದೆ ಅನ್ಯೋನ್ಯವಾಗಿ ಹೆಣ್ಣು ಕೊಡುವುದೂ ತರುವುದೂ ಇತ್ತು.

ಕೊಡವರು ಚಂದ್ರವರ್ಮನ ಸಂತಾನದವರಲ್ಲವೆಂದೂ, ಮಾನವ್ಯ ಗೋತ್ರದ ಆಶ್ವಲಾಯನ ಸೂತ್ರದ ಚಾಲುಕ್ಯರ ಸಂತಾನದವರೆಂದೂ, ಆದುದರಿಂದ ಕ್ಷತ್ರಿಯರೆಂದೂ' ಚರ್ಚಿಸುವವರೂ ಇದ್ದಾರೆ. ಕೊಡವರು ಚಂದ್ರವರ್ಮನ ಸಂತಾನದವರಲ್ಲವೆಂದು ಹೇಳಲು ಆಧಾರವಿಲ್ಲವಾದರೂ ಅಮ್ಮ ಕೊಡವರು ಅಗಸ್ತ್ಯನಿಂದ ಶಪಿಸಲ್ಪಟ್ಟ ಬ್ರಾಹ್ಮಣರಲ್ಲವೆಂದು ಹೇಳುವುದಕ್ಕೆ ಅನೇಕ ಆಧಾರಗಳಿವೆ.

ನೂರೊಕ್ಕಲು ಕುಟ್ಟಚ್ಚಮ್ಮನ ಕುಟ್ಟಮ್ಮ ಸುಬೇದಾರನ ದವಲತ್ತಿನಲ್ಲಿ ಅಮ್ಮ ಕೊಡವರು ತಾವೇ "ಕಾವೇರಿ ಬ್ರಾಹ್ಮಣರು" ಅಂದರೆ ಅಗಸ್ತ್ಯ ಋಷಿಯಿಂದ ಶಪಿಸಲ್ಪಟ್ಟ ಬ್ರಾಹ್ಮಣರೆಂದು ಅಂದುಕೊಂಡು ಮೈಸೂರು ದೇಶದ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ರಾಮಚಂದ್ರಪುರ ಮಠದ ಶಿಷ್ಯರಾಗುವುದಾಗಿ ಒಪ್ಪಿಕೊಂಡು (ಜಯ ಸಂವತ್ಸರದ ಕಾರ್ತೀಕ ಶುದ್ಧ : 10ರಲ್ಲಿ ಕ್ರಿ. ಶ. 1834ನೇ ನವಂಬರ್) ಬರೆದುಕೊಟ್ಟು ಕಾವೇರಿ ತೀರವಾದ ಬಲಮುರಿಯಲ್ಲಿ ಯಜ್ಞೋಪವೀತವನ್ನು ಧರಿಸಿಕೊಂಡರು. ಅದಕ್ಕನುಸಾರವಾಗಿ ಅಮ್ಮ ಕೊಡವರು ಮುಂದೆ ಆಚರಿಸಬೇಕಾದ ಕರ್ಮಾಂತರಗಳನ್ನು ಆ ಮಠದ ಗುರುಗಳು ಪ್ಲವಂಗ ಸಂವತ್ಸರ ಪಾಲ್ಗುಣಶುದ್ಧ 6ರಲ್ಲಿ (ಕ್ರಿ. ಶ. 1847ನೇ ಫೆಬ್ರವರಿ) ನಿರೂಪಿಸಿ ಕಳುಹಿಸಿಕೊಟ್ಟರು. ಆದರೂ ಕಿಗ್ಗಟ್ಟು ನಾಡಿನ ಅಮ್ಮ ಕೊಡವರು ಯಜ್ಞೋಪವೀತವನ್ನು ಧರಿಸಲು ಸಮ್ಮತಿಸದೆ ಕೆಲವು ವರುಷಗಳವರೆಗೆ ಹಾಗೆಯೇ ಇದ್ದು ಆಮೇಲೆ ದಕ್ಷಿಣ ಕನ್ನಡ ಜಿಲ್ಲೆ ಉಡುಪಿಯಲ್ಲಿರುವ ಕಾನೂರು ಮಠದ ಶಿಷ್ಯರಾಗಿ ಇರುಪ್ಪು ದೇವಸ್ಥಾನದಲ್ಲಿ ಯಜ್ಞೋಪವೀತವನ್ನು ಧರಿಸಿಕೊಂಡರು. ಕೆಲವು ಅಮ್ಮ ಕೊಡಗರು ಸುಬ್ರಹ್ಮಣ್ಯ ಮಠದ ಶಿಷ್ಯರಾಗಿಯೂ ಇದ್ದಾರೆ.

ಜಮ್ಮ ಕೊಡವರು : ಎಡನಾಡಿನಲ್ಲಿಯೂ ಸಿದ್ಧಾಪುರ ನಾಡಿನಲ್ಲಿಯೂ ಗಡಿನಾಡಿನಲ್ಲಿಯೂ ಜಮ್ಮ ಕೊಡವರೆನ್ನಿಸಿಕೊಳ್ಳುವ ಒಕ್ಕಲಿಗರಿದ್ದಾರೆ. ಲಿಂಗಾಯಿತ ರಾಜರ ಕಾಲದಲ್ಲಿ ರಾಜನ ಇಟ್ಟಿ ಬಿಟ್ಟಿ ಕೆಲಸ ಮಾಡುವುದಕ್ಕಾಗಿ ಒಕ್ಕಲಿಗರನ್ನು ತಂದು ಅವರಿಗೆ ಜಮ್ಮದ ಹಿಡಿವಳಿಯನ್ನು ಕೊಟ್ಟು ಜಮ್ಮ ಕೊಡಗರೆಂದು ಕರೆದರಾಗಿ ಹೇಳುವರು. ಇವರನ್ನು ಕೊಡಗರು "ಎಡೆ ಕೊಡವ ಮತ್ತು ಬಡುವ" ಎಂದು ಕರೆಯುವರು.

ಇತಿಹಾಸ

ಗಂಗರಾಜರು : ಶಿಲಾಶಾಸನ ಪರೀಕ್ಷಿಸಿ ನೋಡಿದಲ್ಲಿ ಎರಡನೇ ಶತಮಾನದಿಂದ ಹನ್ನೊಂದನೆ ಶತಮಾನದವರೆಗೆ ಮೈಸೂರು ದೇಶವನ್ನು ಆಳಿದ ಗಂಗರಾಜರು ಮೈಸೂರು ಪಟ್ಟಣದ ಆಗ್ನೇಯ ದಿಕ್ಕಿನ ಕಾವೇರಿ ನದಿಯ ತೀರದಲ್ಲಿ ತಲಕಾಡು ಎಂಬುದನ್ನು ಮುಖ್ಯ ಪಟ್ಟಣವಾಗಿ ಮಾಡಿಕೊಂಡು ಕೊಡಗನ್ನು ಮತ್ತು ವಯನಾಡನ್ನು ಒಂಭತ್ತು ಮತ್ತು ಹತ್ತನೇ ಶತಮಾನಗಳಲ್ಲಿ ಆಳಿದವರಾಗಿ ಕಂಡು ಬರುತ್ತದೆ. ಇದೇ ಗಂಗರಾಜರು ಕದಂಬ ರಾಜ ವಂಶಿಕನೆಂದು ಕಂಡುಬರುವ ಚಂದ್ರವರ್ಮನ ಸಂತಾನದವರಾದ ಕೊಡಗರನ್ನು ಗೆದ್ದದಾಗಿ ಚರಿತ್ರಕರು ಬರೆದಿರುತ್ತಾರೆ.

ಗಂಗರಾಜರ ಕೈಕೆಳಗೆ ಚಂಗಲ್ವರು (ಚಂಗನಾಡಿನ ರಾಜರು) ನಂಜರಾಜ ಪಟ್ಣದಲ್ಲಿ ರಾಜ್ಯಭಾರ ಮಾಡಿದರು. ಇವರ ಶಾಸನವು, ಎಡವ ನಾಡಿನಲ್ಲಿಯೂ ಬೆಟ್ಟತ್ತುನಾಡಿನಲ್ಲಿಯೂ ಕಂಡುಬಂದಿದೆ. ಚಂಗಲ್ವರು ಜೈನ ಮತದವರಾಗಿದ್ದರು.

ಚೋಳರು : ಹನ್ನೊಂದನೆ ಶತಮಾನದ ಆದಿಯಲ್ಲಿ ತಮಿಳು ದೇಶದ ಚೋಳರಾಜರು ಗಂಗರಾಜರನ್ನು ಜೈಸಿ ಕೊಡಗನ್ನು ವಶಮಾಡಿಕೊಂಡರು. ಚಂಗಲ್ವರು ಇವರ ಅಧೀನರಾದರು. ಆಗ ಏಳು ಸಾವಿರ ಸೀಮೆಯನ್ನು ಕೊಂಗಲ್ವರೂ, ದಕ್ಷಿಣ ಕೊಡಗನ್ನು ಚಂಗಲ್ವರೂ ಚೋಳ ರಾಜರ ಕೈಕೆಳಗೆ ಆಳಿದರು. ಕೊಂಗಲ್ವರು ಸಹ ಜೈನ ಮತದವರು.

ಹೊಯಿ ಸಾಲರು* (ಪೊಯಿ ಸಾಲರು): ಗಂಗರಾಜರ ಆಳ್ವಿಕೆಯು ಕೊನೆಗೊಂಡ ಮೇಲೆ ಹೊಯಿಸಳರು ಎದ್ದು ಹನ್ನೆರಡನೇ ಶತಮಾನದ ಆದಿಯಲ್ಲಿ ಚೋಳರನ್ನು ಗೆದ್ದು, ಇವರ ರಾಜಧಾನಿಯಾದ ತಲಕಾಡನ್ನು ಕೈವಶಮಾಡಿ, ಹಾಸನ ಡಿಸ್ಟ್ರಿಕ್ಟಿನ ಹಳೇಬೀಡನ್ನು ಮುಖ್ಯ ಪಟ್ಟಣವಾಗಿ ಮಾಡಿಕೊಂಡು, ಮಾಲಪರಲ್ಲಿ ಅಂದರೆ ಪರ್ವತ ರಾಜರಲ್ಲಿ ಪರಾಕ್ರಮಿಸಿಗಳೆಂದೆನ್ನಿಸಿಕೊಂಡರು.

ಕ್ರಿ. ಶ. 997ನೇ ಇಸವಿಯಲ್ಲಿ ಬರೆದ ಶಾಸನದಲ್ಲಿ ನಾಲ್ಕು ಮಾಲಪರನ್ನು ನಮೂದಿಸಿದೆ. ಪ್ರಾಯಶಃ ಇವರು ಮೈಸೂರು ಡಿಸ್ಟ್ರಿಕ್ಟಿನ ತೆಂಕ ದಿಕ್ಕಿನಲ್ಲಿರುವ ಗೋಪಾಲಸ್ವಾಮಿ ಬೆಟ್ಟದ ಮೇಲಿನ ಕೋಟೆಯ (ಬೆಟ್ಟದ ಕೋಟೆಯ) ನಾಯಕ ರಾಗಿರಬಹುದು. ಏಕೆಂದರೆ, ಈ ಸಮಯದಲ್ಲಿ ಇವರು ದಕ್ಷಿಣದಲ್ಲಿ ದೇವಸಿ ಬೆಟ್ಟದವರೆಗೂ, ಉತ್ತರದಲ್ಲಿ ಗೋವೆಯವರೆಗೂ, ಪೂರ್ವದಲ್ಲಿ ಕೊಯಮುತ್ತೂರಿ ನಲ್ಲಿರುವ ಸತ್ಯಮಂಗಲದವರೆಗೂ, ಪಶ್ಚಿಮದಲ್ಲಿ ಕೊಡಗಿನ ವಾಯುವ್ಯ ದಿಕ್ಕಿ ನಲ್ಲಿರುವ ಬಿಸಲೆ ಗಟ್ಟದವರೆಗೂ ಜಯಿಸಿದ್ದಾಗಿ ಶಾಸನವಿದೆ. ಹಾಗಾದರೆ ಕೊಡಗು ದೇಶವು ಇದರ ಒಳಗೆ ಅಡಗಿರಬೇಕು.

ನಾಯಕರು ಕೊಂಗಲ್ವರು ಸಹ ಈಚೆಗೆ ಅಡಗಿಹೋದರು.

ತಮ್ಮ ಮೇಲು ರಾಜರಾದ ಚೋಳರು ಸೋತುಹೋದ ನಂತರ ಹೊಯಿಸಾಲ ರಂತೆಯೇ ತಾವೂ ಸಹ ಚಂದ್ರವಂಶದ ಯಾದವರೆಂದು ಚಿಂಗಲ್ವರು ಸ್ವತಂತ್ರಕ್ಕಾಗಿ ಬಹಳ ಹೊಡೆದಾಡಿದರು. ಕ್ರಿ. ಶ. 1145ರ ವೇಳೆಗೆ ಹೊಯಿಸಾಲ ರಾಜನಾದ ರಾಜನನ್ನು ಯುದ್ಧದಲ್ಲಿ ಕೊಂದು ಅವನ ಆನೆ, ಕುದುರೆ, ನಗ ನಾಣ್ಯಗಳನ್ನು ಸಹ ಕೊಳ್ಳೆ ಮಾಡಿಬಿಟ್ಟನು. ಆಮೇಲೆ ಚೆಂಗಲ್ವರು ಕೊಡಗು ಒಂದನ್ನು ಮಾತ್ರ ಆಕ್ರಮಿಸಿಕೊಂಡಿದ್ದರು.

*** ಸಾಲ ಎಂಬ ರಾಜನು ಸೊಸೆ ಊರು ಎಂಬ ಗ್ರಾಮದಲ್ಲಿ ತನ್ನ ಗೃಹ ದೇವತೆಯ ಪೂಜೆಗೆ ಹೋಗಿ ಪ್ರಸಾದವನ್ನು ತೆಗೆದುಕೊಳ್ಳುತ್ತಿರುವಾಗ ಒಂದು ಹುಲಿಯು ಕಾಡಿನಿಂದ ಆ ಸ್ಥಳಕ್ಕೆ ಹಾರಿ ಬಂತು. ಅರ್ಚಕನು ಅದನ್ನು ಕಂಡು ತನ್ನ ದಂಡವನ್ನು ಸಾಲರಾಜನಿಗೆ ಕೊಟ್ಟು "ಪೊಯಿ! ಸಾಲ" "ಪೊಯಿ! ಸಾಲ" ಎಂದು ಕೂಗಲು ರಾಜನು ಹುಲಿಯನ್ನು ದೊಣ್ಣೆಯಿಂದ ಹೊಡೆದು ಕೊಂದು ಹಾಕಿದನು. ಅಂದಿನಿಂದ ಆ ರಾಜನಿಗೆ ಪೊಯಿಸಾಲ ರಾಜನೆಂದು ಹೆಸರು ಬಂತು. ಅವನ ಸಂತಾನದವರೆಲ್ಲರೂ ಪೊಯಿಸಾಲ ರಾಜಸಂತತಿಯವರೆಂದು ಕರೆಯಲ್ಪಟ್ಟರು. ಹೊಸಗನ್ನಡದಲ್ಲಿ ಅದನ್ನು . ಹೊಯಿಸಾಲನೆಂದು ಮಾಡಿಕೊಂಡರು.**

ಇನ್ನೊಂದು ಆಧಾರದ ಮೇರೆ : ಮೈಸೂರು ಸೀಮೆಯ ಬೇಲೂರಲ್ಲಿ ಕ್ರಿ. ಶ. 1117ನೇ ಇಸವಿಯ ತಾಮಶಾಸನದಲ್ಲಿ ಇವರ ವಂಶಾವಳಿ ಹೀಗೆ ವರ್ಣಿಸಿದೆ. ಯದು ವಂಶದಲ್ಲಿ ಸಳನೆಂಬುವನು ಹುಟ್ಟಿದನು. ಈ ಸಳನೆಂಬುವನು ಒಬ್ಬ ಜೈನ ಸನ್ಯಾಸಿಯೊಡನೆ ಶಶಕಾಪುರದ ಪದ್ಮಾವತಿಯನ್ನು ಪೂಜಿಸುತ್ತಿದ್ದನು. ಒಂದು ದಿವಸ ಪೂಜೆ ಸಮಯದಲ್ಲಿ ಒಂದು ಹುಲಿಯು..."

ಕ್ರಿ. ಶ. 1174ರಲ್ಲಿ ಹೊಯಿಸಾಲ ರಾಜನಾದ ಎರಡನೇ ಬಲ್ಲಾಳನು ತನ್ನ ಸೇನಾನಾಯಕನಾದ ಬೆಟ್ಟರಸನನ್ನು ಹತ್ತುಗಟ್ಟು ನಾಡಿನಲ್ಲಿರುವ ಪಾಲ್ಪರೆ ಕೋಟೆಗೆ ಮುತ್ತಿಗೆ ಹಾಕಲು ಕಳುಹಿಸಿದನು. ಚಂಗಲ್ವ, ಮಹಾದೇವನು ಪರಾಜಿತನಾದನು. ಬೆಟ್ಟರಸನು ಇಲ್ಲಿಯೇ ತನ್ನ ರಾಜಧಾನಿಯನ್ನು ಮಾಡಿಕೊಂಡನು. ಆದರೆ ಚಂಗಲ್ವ, ಪೆಮ್ಮ ವೀರಪ್ಪ, ಬುದಿಗೊಂಡೆಯ ನಂದಿದೇವ, ಕುರ್ಚಿಗ್ರಾಮದ ಉದಯಾದಿತ್ಯ ಮತ್ತು ಎಲ್ಲಾ ನಾಡಿನ ಕೊಡವರು ಸಹ ಪಾಲ್ಪರೆ ಕೋಟೆಗೆ ಮುತ್ತಿಗೆ ಹಾಕಿ ಬೆಟ್ಟರಸನನ್ನು ಸೋಲಿಸಿದರು. ಕೊಡಗರನ್ನು ಕೊಡವರು ಎಂದು ಶಾಸನದಲ್ಲಿ ಕಂಡದ್ದು ಇದೇ ಮೊದಲು. ಆ ಮೇಲೆ ಪುನಹ ಬೆಟ್ಟರಸನಿಗೆ ಜಯವಾಗಿ ಚೆಂಗಲ್ವರು ಪೂರ ಹೊಯಿಸಾಲರ ಅಧೀನರಾದರು.

ಚಂಗಲ್ವರ ರಾಜಧಾನಿಯು ಸಿದ್ಧಾಪುರದ ಹತ್ತಿರ ಇರುವ ಕೊಡಗು ಶ್ರೀರಂಗಪಟ್ಟಣವಾಗಿತ್ತು. (ರಂಗಪಟ್ಟಣ)

ಜೈನರಾಗಿದ್ದ ಚಂಗಲ್ವರು 12ನೇ ಶತಮಾನದಲ್ಲಿ ಪ್ರಬಲವಾದ ಲಿಂಗಾಯುತ ಮತವನ್ನು ಅವಲಂಬಿಸಿದರು.

ವಿಜಯನಗರ ರಾಜರು: ತೆಲುಗಾರಣ್ಯಕ್ಕೆ ಮಹಮ್ಮದಿಯರು ನುಗ್ಗಿ ಓರಗಲ್ಲನ್ನು ತೆಗೆದುಕೊಂಡ ಮೇಲೆ ಅಲ್ಲಿದ್ದ ದೊರೆ ಮಕ್ಕಳು ಕ್ರಿ.ಶ. 1336ರಲ್ಲಿ ತುಂಗಭದ್ರಾ ನದೀ ತೀರದಲ್ಲಿರುವ ವಿಜಯನಗರಕ್ಕೆ ಬಂದು ಅಲ್ಲಿಯ ರಾಜವಂಶವನ್ನು ಜೀರ್ಣೋದ್ಧಾರ ಮಾಡಿದರು. ಕೃಷ್ಣಾ ನದಿಯಿಂದ ಕನ್ಯಾಕುಮಾರಿಯವರೆಗೂ ಹಬ್ಬಿ ವಿಸ್ತರಿಸಿಕೊಂಡಿದ್ದ ಈ ವಿಜಯನಗರ ಸಂಸ್ಥಾನದ ಮೇಲೆ ಮಹಮ್ಮದೀಯರು ಬಿದ್ದು 1565ರಲ್ಲಿ ಈ ಸಂಸ್ಥಾನವನ್ನು ಒಡೆದರು. ಕೊಡಗು ದೇಶವು ಈ ಸಂಸ್ಥಾನಕ್ಕೆ ಸೇರಿತ್ತು. ಈ ಸಂಸ್ಥಾನದ ಚಿಕ್ಕ ಚಿಕ್ಕ ಪ್ರಾಂತ್ಯಗಳಿಗೆ ಅಧಿಕಾರಿ ಗಳಾಗಿದ್ದುಕೊಂಡು ಯುದ್ಧಕಾಲದಲ್ಲಿ ಮಾತ್ರ ಸಹಾಯ ಮಾಡುತ್ತಿದ್ದ ಸೇನಾಧಿಪತಿಗಳಿಗೆ ನಾಯಕರೆಂತಲೂ ಪಾಳ್ಯಗಾರರೆಂತಲೂ ಹೆಸರಿತ್ತು. ಈ ಸಂಸ್ಥಾನವು ಒಡೆದು ಹೋದ ಮೇಲೆ ಈ ಪಾಳ್ಯಗಾರರು ಸ್ವತಂತ್ರರಾಗಿ ಆಯಾಯ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡು ಅವರವರೇ ಆಳುತ್ತಿದ್ದರು.

ಇಂತಹ ಎಂಟು ನಾಯಕರು ಕೊಡಗು ದೇಶವನ್ನು ಆಳುತ್ತಿದ್ದರು. ಇದುವರೆಗೂ ಬಾಳು ಅಥವಾ ಬಾಚೆಕಾರರೆಂದು ಹೆಸರುಗೊಂಡು, ನಾಡ್‌ಬಾಚೆಕಾರರೆಂದು ಅಂದುಕೊಳ್ಳುತ್ತಾ ದೇಶದ ಒಂದೊಂದು ಭಾಗವನ್ನು ತಮ್ಮ ಕೈಕೆಳಗೆ ಇಟ್ಟುಕೊಂಡು ಇಲ್ಲಿಯ ಜನರೇ ರಾಜ್ಯವಾಳುತ್ತಿದ್ದರು. "ಅರೆ ಬಾಚೆಕಾರ"ರೆಂದರೆ ಅರ್ಧ ಆಯುಷ್ಯದವರೆಂದು ಅರ್ಥ. ಈ ನಾಯಕರು ಒಬ್ಬರ ಮೇಲೆ ಒಬ್ಬರು ಬಿದ್ದು ಕೆಲವು ಕಾಲ ಮಾತ್ರ ರಾಜ್ಯವಾಳುತ್ತಿದ್ದುದರಿಂದ ಇವರಿಗೆ ಅರೆ ಬಾಚೆಕಾರರೆಂದು ಹೆಸರು ಸಲ್ಲಬೇಕಾಗಿ ಬಂತು. ನಾಯಕರು ಬಂದ ಮೇಲೆ ಇವರು ಅಡಗಿ ಹೋದರು.

ಇಕ್ಕೇರಿ ರಾಜರು

ಹದಿನಾರನೇ ಶತಮಾನದ ಆದಿಯಲ್ಲಿ ಇಕ್ಕೇರಿ ಸಂಸ್ಥಾನದ ರಾಜಕುಮಾರ ನೊಬ್ಬನು ಅಲ್ಲಿ ಜಗಳ ಮಾಡಿಕೊಂಡು ಕೊಡಗಿಗೆ ಬಂದು ಹಾಲೇರಿ ನಾಡಿನಲ್ಲಿ ಒಂದು ಚಾಪಡಿಯನ್ನು ಕಟ್ಟಿಕೊಂಡು ಮೈತುಂಬ ಬೂದಿ ಬಡಿದುಕೊಂಡು ಸನ್ಯಾಸಿಯಂತೆ ನಟಿಸಿಕೊಂಡಿದ್ದನು. ಇವನನ್ನು "ಬೂದಿ ಚಾವಡಿ" ಸ್ವಾಮಿಯೆಂದು ಕರೆಯುತ್ತಿದ್ದರು. ಇವನಿದ್ದ ಸ್ಥಳಕ್ಕೆ ಈಗಲೂ ಬೂದಿ ಚಾವಡಿಯೆಂದು ಹೆಸರಿದೆ. ಇವನು ಆ ಸ್ಥಳದಲ್ಲಿ ಹುಡುಗರಿಗೆ ಓದುಬರಹವನ್ನು

ಕಲಿಸುತ್ತಿದ್ದು, ಕೊನೆಗೆ ಹಾಲೇರಿ ನಾಯಕನ ಒಳ ಹೊಕ್ಕು, ಕೊಡಗಿನಲ್ಲಿದ್ದ ಇತರ ನಾಯಕರನ್ನು ಒಬ್ಬೊಬ್ಬರನ್ನೇ ಕೊಲ್ಲಿಸಿದನು. ತಾವು ನಾಡು ನಾಯಕನಾಗಿದ್ದ ಕರ್ನ್ಯಯಬಾವು ಇವನಿಗೆ ಸೋತು ಹೋದ ಮೇಲೆ ಕೊಡಗರನ್ನು ಪುಸಲಾಯಿಸಿ ಹಾಲೇರಿ ನಾಯಕನನ್ನು ಕೊಲ್ಲಿಸಿದನು. ದೇಶವು ಅನಾಯಕವಾಯಿತು.

ಬೂದಿ ಚಾವಡಿ ಸ್ವಾಮಿಯು ಕೊಡಗರನ್ನು ನೋಡಿ, ತಮ್ಮ ರಾಜ್ಯವನ್ನು ತಾವು ಆಳಿಕೊಳ್ಳಬೇಕಾಗಿಯೂ, ಹಾಲೇರಿ ಅರಮನೆಯಲ್ಲಿ ತಕ್ಕಂಥವರನ್ನು ಇಡಬೇಕಾಗಿಯೂ ಹೇಳಿದನು. ಕೊಡಗರೆಲ್ಲರೂ ತಮ್ಮ ತಮ್ಮ ಮನೆಗೆ ಹೋಗುವ ಕುತೂಹಲದಿಂದ ತನ್ನಿಂದ ಕೂಡದು ನಮ್ಮಿಂದ ಕೂಡದು ಎಂದು ಎಲ್ಲರೂ ತಿರಸ್ಕರಿಸಿ, ಕೊನೆಗೆ ಎಲ್ಲರೂ ಆಲೋಚಿಸಿ, ಬೂದಿ ಚಾವಡಿ ಸ್ವಾಮಿಯೇ ಹಾಲೇರಿ ಅರಮನೆಯಲ್ಲಿ ಇರುವಂತೆ ಏರ್ಪಡಿಸಿದರು. ಕಪಟ ಸನ್ಯಾಸಿಗೆ ಬೇಕಾಗಿದ್ದುದು ಅದೇ. ಆದರೆ ಬೂದಿ ಚಾವಡಿ ಸ್ವಾಮಿಯು ತನಗೆ ಏಕಾಂಗಿಯಾಗಿರಲು ಆಗುವುದಿಲ್ಲವಾಗಿ ಹೇಳಲು ಕೊಡಗರು ಪಹರೆ ಬಗ್ಗೆ ಸರದಿ ಮೇರೆ ಒಪ್ಪುವುದಾಗಿ ಹೇಳಿ ಅವನನ್ನು ಒಡಂಬಡಿಸಿದರು. ಬೂದಿ ಚಾವಡಿ ಸ್ವಾಮಿಯು ರಾಜನಾದನು. ಕೊಡಗರು ಅವನ ಚಾವಡಿಗೆ ಪಹರೆ ಇದ್ದುದರಿಂದ ಆ ಕೆಲಸ ಮಾಡುವವರಿಗೆ ಚಾವಡಿಕಾರರು ಎಂದು ಹೆಸರಾಯಿತು.

ಇವನು ಪ್ರಾಯಶಃ ಚಂಗಲ್ವ ರಾಜರ ಸಂತಾನದವನಾಗಿರಬಹುದು. ಇವನ ಹೆಸರು ವೀರರಾಜ. ಇವನ ಸಂತಾನದವರು 1834ರವರೆಗೆ ಕೊಡಗು ದೇಶವನ್ನು ನಿರಂಕುಶವಾಗಿ ಆಳಿದರು.

ಇವನ ವಂಶ ವೃಕ್ಷವನ್ನು ಈ ಕೆಳಗೆ ತೋರಿಸಿದ್ದೇನೆ.



ಮೊದಲನೇ ವೀರರಾಜ ಮತ್ತು ಇವನ ಮಗ ಅಪ್ಪಾಜಿಯ ಆಳ್ವಿಕೆಯ ವಿಷಯ ಏನೊಂದೂ ತಿಳಿಯಬರುವುದಿಲ್ಲ. ಏಕೆಂದರೆ 1633ನೇ ಇಸವಿಗಿಂತ ಮುಂದಿನ ಚರಿತ್ರೆಯನ್ನು ನವಾಬ್ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಸುಟ್ಟು ಬಿಟ್ಟಿರುತ್ತಾರೆ.

ಸಂಖ್ಯೆ ಹಾಕಿದವರು ರಾಜ್ಯಭಾರ ಮಾಡಿದವರು

ಮುದ್ದುರಾಜ

ಮುದ್ದುರಾಜನು 1633ರಲ್ಲಿ ಹಾಲೇರಿಯಲ್ಲಿ ಪಟ್ಟಕ್ಕೆ ಬಂದನು. ಆಗ ಇವನ ಕುಟುಂಬಿಕನಾದ ನಜುಂಡರಸನೆಂಬುವವನು ಪೆರ್ರ್ಯಾಪಟ್ಟಣದಲ್ಲಿ ರಾಜ್ಯಭಾರ ಮಾಡಿಕೊಂಡು ಇಬ್ಬರೂ ಏಕ ಗೃಹಕೃತ್ಯದಲ್ಲಿದ್ದರು.

ಮುದ್ದುರಾಜನ ಪಟ್ಟದರಾಣಿ ದೇವಮ್ಮಾಜಿಯ ಗರ್ಭದಲ್ಲಿ 1657ರಲ್ಲಿ (ಸಿರಿ ಬಾಯಿ) ದೊಡ್ಡವೀರಪ್ಪನು ಜನನವಾದನು. ಆಮೇಲೆ ಅಪ್ಪಾಜಿರಾಜನು ಮತ್ತು ನಂದರಾಜನು ಸಹ ಜನಿಸಿದರು. (ಸಿರಿಬಾಯಿ) ದೊಡ್ಡ ವೀರಪ್ಪನಿಗೆ ಮುದ್ದಮ್ಮಾಜಿ ಮತ್ತು ದೇವಮ್ಮಾಜಿ ಇಬ್ಬರನ್ನು ಮದುವೆಮಾಡಿ 1681ರಲ್ಲಿ ಮುದ್ದುರಾಜನು ಮಡಿಕೇರಿಯಲ್ಲಿ * ಕೋಟೆ ಕಟ್ಟಿ ಅಲ್ಲಿ (ಸಿರಿಬಾಯಿ) ದೊಡ್ಡ ವೀರಪ್ಪನಿಗೆ ಪಟ್ಟವನ್ನು ಕಟ್ಟಿದನು. ಅಪ್ಪಾಜಿರಾಜನಿಗೆ ರಾಜಮ್ಮಣ್ಣಿ ಎಂಬವಳನ್ನು ಮದುವೆ ಮಾಡಿ ಮುದ್ದುರಾಜನು ತನ್ನ ಬಳಿ ಹಾಲೇರಿಯಲ್ಲಿಟ್ಟುಕೊಂಡನು. ನಂದರಾಜನಿಗೆ ನಂಜಮ್ಮಣ್ಣಿ ಎಂಬವಳನ್ನು ಮದುವೆ ಮಾಡಿ ಹೊರಮಲೆನಾಡನ್ನು ಜಹಗೀರು ಕೊಟ್ಟು ಅಲ್ಲಿರಿಸಿದನು. 1686ರಲ್ಲಿ ಮುದ್ದುರಾಜನು ತೀರಿಹೋದನು.

(ಸಿರಿಬಾಯಿ) ದೊಡ್ಡ ವೀರಪ್ಪ

ಮುದ್ದುರಾಜನು ಸತ್ತಮೇಲೆ ದೊಡ್ಡ ವೀರಪ್ಪನು ಪಟ್ಟಕ್ಕೆ ಬಂದನು. ಇವನಿಗೆ ಅಪ್ಪಾಜಿ ರಾಜನು ಜನಿಸಿದನು. ಅಪ್ಪಾಜಿ ರಾಜನಿಗೆ ಮದುವೆಯಾಗಿ ಇವನಿಗೆ ಚಿಕ್ಕ ವೀರಪ್ಪನು ಜನಿಸಿದನು. ಮುದ್ದುರಾಜನಿಗೆ ನಂಜಮ್ಮಣ್ಣಿಯನ್ನೂ ಲಿಂಗರಾಜನಿಗೆ ದೇವಾಂಬಿಕೆಯನ್ನೂ ಮದುವೆಮಾಡಿ ನಂಜಮ್ಮಣ್ಣಿಯ ಗರ್ಭದಲ್ಲಿ ಅಪ್ಪಾಜಿರಾಜನೂ ದೇವಾಂಬಿಕೆಯ ಗರ್ಭದಲ್ಲಿ 1763ರಲ್ಲಿ ದೊಡ್ಡ ವೀರರಾಜೇಂದ್ರ ಒಡೆಯನೂ ಜನಿಸಿದರು. ಹೊರಮಲೆ ನಂದರಾಜ ಅರಸಿಗೆ ಮುದ್ದೈಯ್ಯ ಅರಸು ಜನಿಸಿ ಅವನಿಗೆ ಮಲ್ಲೈಯ್ಯನೆಂಬ ಮಗನು ಹುಟ್ಟಿದನು.

ದೊಡ್ಡ ವೀರಪ್ಪನು ಕೊಡಗಿನಲ್ಲಿ ರಾಜ್ಯಭಾರಮಾಡುತ್ತಿದ್ದಾಗ ಮೈಸೂರಲ್ಲಿ ಚಿಕ್ಕದೇವರಾಜ ಒಡೆಯನೂ, ಇಕ್ಕೇರಿ ಸಂಸ್ಥಾನದಲ್ಲಿ ಸೋಮಶೇಖರನಾಯಕ ನಿಗಾಗಿ ದೊಡ್ಡ ಚನ್ನಮ್ಮಾಜಿಯೂ, ಸೋದೆ ಸಂಸ್ಥಾನದಲ್ಲಿ ದೊಡ್ಡ ಸದಾಶಿವ ರಾಜನೂ ಬೇಲೂರು ಸಂಸ್ಥಾನದಲ್ಲಿ ವೆಂಕಟಾದ್ರಿನಾಯಕನೂ ಮತ್ತು ಚರಕಲ ಸಂಸ್ಥಾನದಲ್ಲಿ ರವಿವರ್ಮನೂ ರಾಜ್ಯಭಾರಮಾಡುತ್ತಿದ್ದರು.

ದೊಡ್ಡ ವೀರಪ್ಪನ ಆಳ್ವಿಕೆಯಲ್ಲಿಯೂ ಸಹ ನಂಜುಂಡರಸು ಪೆರ್ರ್ಯಾಪಟ್ಟಣದಲ್ಲಿ ರಾಜ್ಯಭಾರಮಾಡುತ್ತಿದ್ದನು. ಆಗ ಪೆರ್ರ್ಯಾಪಟ್ಟಣವು ಕೊಡಗಿಗೆ ಸೇರಿದ್ದುದರಿಂದ ಕೊಡಗಿನ ಸರಹದ್ದು ಪೆರ್ರ್ಯಾಪಟ್ಟಣ ತಾಲೋಕು ಕಟ್ಟೆಮಳಲವಾಡಿ ಸಮೀಪ ಕೊಡಗರ ಹಳ್ಳಿ ಎಂಬಲ್ಲಿಯವರೆಗೆ ಇತ್ತು. ಅಲ್ಲಿ ನಿಶಾನಿ ಕಲ್ಲು ಸಹ ಇತ್ತು.

ಆ ಸಮಯದಲ್ಲಿ ಪೆರ್ರ್ಯಾಪಟ್ಟಣದ ಕೆಲವು ಜನರು ಚಿಕ್ಕದೇವರಾಜನ ಹತ್ತಿರ ಹೋಗಿ ಪೆರ್ರ್ಯಾಪಟ್ಟಣವನ್ನು ಮೈಸೂರು ದೇಶಕ್ಕೆ ಸೇರಿಸಿಕೊಳ್ಳುವಂತೆ ಚಾಡಿ ಹೇಳಲು ಚಿಕ್ಕದೇವರಾಜನು

*** ಕೋಟೆಯನ್ನು ಈಗ ಹೈಸ್ಕೂಲ್ ಇರುವಲ್ಲಿ ಕಟ್ಟುತ್ತಿರುವಾಗ ಒಂದು ನಾಯಿಯು ಒಂದು ಮೊಲವನ್ನು ಓಡಿಸಿಕೊಂಡು ಹೋಗುತ್ತಾ ಈಗ ಕೋಟೆ ಕಟ್ಟಿದ್ದಲ್ಲಿ ತಲುಪಿದಾಗ ಮೊಲವು ನಾಯಿಯ ಮೇಲೆ ಬಿದ್ದು ನಾಯಿಯನ್ನು ಓಡಿಸಿದ್ದರಿಂದ ಆ ಸ್ಥಳದಲ್ಲಿ ಕೋಟೆ ಕಟ್ಟಿದ್ದಾಗಿ ಹೇಳುವರು.**

ಪೆರ್ಯಾಪಟ್ಟಣದ ಮೇಲೆ ದಂಡೆತ್ತಿ ಬರಲು ಸಿದ್ಧನಾದನು. ಈ ವರ್ತಮಾನವನ್ನು ನಂಜುಂಡರಸು ತಿಳಿದು, ತನ್ನ ಮಗ ವೀರರಾಜನನ್ನು ಅಲ್ಲಿರಿಸಿ ದೊಡ್ಡ ವೀರಪ್ಪನಲ್ಲಿಗೆ ಒಂದು ಈ ಸಮಾಚಾರವನ್ನು ತಿಳಿಸಿದನು. ಕೂಡಲೇ ದೊಡ್ಡ ವೀರಪ್ಪನು ಕೊಡಗರನ್ನು ಜಮಾಯಿಸಿ ಪೆರ್ಯಾಪಟ್ಟಣಕ್ಕೆ ಹೊರಟನು. ಈ ಮಧ್ಯೆ ಚಾಡಿಕಾರರು ಚಿಕ್ಕದೇವರಾಜನಿಗೆ ಈ ಸಂಗತಿಯನ್ನು ತಿಳಿಸಲು ಇವನು ಒಡನೆ ಬಂದು ಪೆರ್ಯಾಪಟ್ಟಣವನ್ನು ಹಿಡಿದುಕೊಂಡನು. ಪೆರ್ಯಾಪಟ್ಟಣದಲ್ಲಿದ್ದ ವೀರರಾಜನು ತನ್ನ ಹೆಂಡತಿ ಮಕ್ಕಳನ್ನು ಕೊಂದು ತಾನು ಯುದ್ಧದಲ್ಲಿ ಮಡಿದನು.

ದೊಡ್ಡ ವೀರಪ್ಪನು ಸಿದ್ದೇಶ್ವರನ ಗದ್ದಿಗೆಗೆ ಹೋಗಿ ತಲುಪುವಷ್ಟರಲ್ಲಿ ಈ ವ್ಯಸನಕರವಾದ ಸುದ್ದಿಯನ್ನು ತಿಳಿದು ಇನ್ನು ಮುಂದಿರಿಸಿ ಫಲವಿಲ್ಲವೆಂದು ಮೈಸೂರಿನವರು ಕೊಡಗಿಗೆ ನುಗ್ಗದಂತೆ ಸರಹದ್ದನ್ನು ಬಲಪಡಿಸುವ ಹಾಗೆ ಅಪ್ಪಣೆಮಾಡಿ ಹಿಂತಿರುಗಿ ಮಡಿಕೇರಿಗೆ ಬಂದು ಅಲ್ಲಿದ್ದ ನಂಜುಂಡರಸನಿಗೆ ಈ ವಿಷಯವನ್ನು ತಿಳಿಸಿದನು.

ನಂಜುಂಡರಸು ಚಿಂತಾಕ್ರಾಂತನಾಗಿ, ಕೊಡಗು ರಾಜನು ಹೇಗಾದರೂ ಪೆರ್ಯಾಪಟ್ಟಣವನ್ನು ಪುನಹ ಸ್ವಾಧೀನಕ್ಕೆ ತರಬೇಕಾಗಿ ಬಹಳವಾಗಿ ಹೇಳಿ, ತನಗೆ ವೃದ್ಧಾಪ್ಯ ಪ್ರಾಪ್ತವಾದುದರಿಂದ ತಾನು ಇರಲು ತನಗೆ ಒಂದು ಮನೆ ಕಟ್ಟಿಕೊಡಬೇಕೆಂತಲೂ, ತನ್ನ ಗೃಹದೇವತೆಯಾದ ವೀರಭದ್ರ ದೇವರಿಗೆ ಒಂದು ದೇವಸ್ಥಾನ ಕಟ್ಟಬೇಕೆಂತಲೂ, ಆ ದೇವಸ್ಥಾನದಲ್ಲಿ ತನ್ನ ಹೆಸರಿನಲ್ಲಿ ಒಂದು ಲಿಂಗ ಪ್ರತಿಷ್ಠೆ ಮಾಡಬೇಕೆಂತಲೂ ಕೇಳಿಕೊಂಡನು. ಅದೇ ಪ್ರಕಾರ ದೊಡ್ಡ ವೀರಪ್ಪ ಹೊಳೆಸಾಲು ಹಳ್ಳಿ ಬಳಿ ಒಂದು ಅರಮನೆ ಮತ್ತು ದೇವಸ್ಥಾನವನ್ನು ಸಹ ಕಟ್ಟಿಸಿ ಆ ದೇವಸ್ಥಾನದ ಖರ್ಚಿನ ಬಗ್ಗೆ ಕೆಲವು ಭೂಮಿಯನ್ನು ಉತ್ತರವಾಗಿ ಕೊಟ್ಟನು.

ಮೈಸೂರು ಚಿಕ್ಕದೇವ ರಾಜನು ಪೆರ್ಯಾಪಟ್ಟಣವನ್ನು ಮುತ್ತಲು ಬಂದಿದ್ದ ಸಮಯದಲ್ಲಿ ಬೆಪ್ಪುನಾಡು ಅರಮೇರಿ ಗ್ರಾಮದ ನಾಯಕಂಡ ಉತ್ತು ಎಂಬ ಕಾರ್ಯಕಾರನು ಕೋಟಂಗಡಿ ಅರಸನ ಬಳಿ ಹೋಗಿ "ಚಿಕ್ಕ ದೇವರಾಜನು ಪೆರ್ಯಾ ಪಟ್ಟಣವನ್ನು ಹಿಡಿದುಕೊಂಡು ಕೊಡಗನ್ನು ಮುತ್ತಲು ಬರುವರೆಂಬ ಸಂಗತಿಯನ್ನು ಕೊಡಗರು ತಿಳಿದು ಬಹಳ ಗಾಬರಿಯಲ್ಲಿದ್ದಾರೆ. ಈಗ ನಾಲ್ಕೈದು ಸಾವಿರ ನಾಯಮ್ಮಾರರನ್ನು ಕರೆದುಕೊಂಡು ತೋಮರಕ್ಕೆ ಬಂದಲ್ಲಿ ಕೊಡಗು ದೇಶವು ನಿನ್ನ ವಶವಾಗುವಂತೆ ಸಹಾಯ ಮಾಡುತ್ತೇನೆ" ಎಂದು ಚಾಡಿ ಹೇಳಿದನು. ಆ ಮಾತನ್ನು ನಂಬಿ ಕೋಟಂಗಡಿ ವೀರವರ್ಮರಾಜನು ಒಂದು ಸೈನ್ಯ ಸಮೇತ ಬಂದು ತೋಮರದಲ್ಲಿ ಒಂದು ಲಕ್ಕಡಿ ಕೋಟೆಯನ್ನು ಹಾಕಿಕೊಂಡು ಉತ್ತುವನ್ನು ಸಹಾಯ ಕೇಳಿದಲ್ಲಿ ಕೊಡಗರೆಲ್ಲರೂ ರಾಜನ ಜೊತೆಯಲ್ಲಿ ಮೈಸೂರು ಸೈನ್ಯದೊಡನೆ ಯುದ್ಧಕ್ಕೆ ಹೋಗಿರುವುದರಿಂದ, ಅವರು ಹಿಂತಿರುಗಿದ ಒಡನೆ ತಕ್ಕ ಸಹಾಯವನ್ನು ಕೊಡುವುದಾಗಿ ಒಪ್ಪಿದನು. ದೊಡ್ಡ ವೀರಪ್ಪನು ಈ ಸಂಗತಿಯನ್ನು ತಿಳಿದು ನಾಲ್ಕೈದು ಸಾವಿರ ನಾಯಮ್ಮಾರರನ್ನು ಮುತ್ತಿಕೊಳ್ಳಲು ಒಂದುವರೆ ಸಾವಿರ ಕೊಡಗರನ್ನು ಕಳುಹಿಸಿ ತಾನು ಮೈಸೂರು ಸೈನ್ಯದ ಮೇಲೆ ಯುದ್ಧ ಮಾಡಲು ಹೊರಟು ಹೋದನು.

ಅಷ್ಟರಲ್ಲಿ ಮೈಸೂರು ಸೈನ್ಯವು ಬಾಳೆಲೆ ಮಾರ್ಗವಾಗಿ ಬಂದು ಪಾಲ್ಪರೆಯಲ್ಲಿ ಉಳಿದುಕೊಂಡಿತ್ತು. ಅಲ್ಲಿ ಕೊಡಗರು ಅವರೊಡನೆ ಘೋರವಾದ ಯುದ್ಧಮಾಡಿ 15,000 ಜನರನ್ನು ಕೊಂದು 77 ಅಂದಳದ ಸರದಾರರನ್ನು ಸಹ ಕಡಿದು ಹಾಕಿದರು.

ಮೈಸೂರರನ್ನು ಸೋಲಿಸಿ ದೊಡ್ಡ ವೀರಪ್ಪನು ತೋಮರಕ್ಕೆ ಹೋದಲ್ಲಿ ಕೊಡಗರು ನಾಯಮ್ಮಾರವರ ಸೈನ್ಯವನ್ನು ಮುತ್ತಿಕೊಂಡಿದ್ದರು. ಆ ನಾಯಮ್ಮಾರ ರನ್ನು ಹೊಡೆದು ಹಾಕಿ ಕೊಡಗರು ಕೋಟಂಗಡಿ ವೀರವರ್ಮರನ್ನು ಕೊಂದು ಹಾಕಿಬಿಟ್ಟರು.

ಆ ಮೇಲೆ ಸಾಧಾರಣ 18 ವರುಷಗಳವರೆಗೆ ರಾಜನು ಕೊಡಗಿನಲ್ಲಿ ಕಡಂಗ ಕಂದಕಗಳನ್ನು ತೆಗೆಸುತ್ತಾ ಸುಖದಿಂದ ರಾಜ್ಯಭಾರಮಾಡುತ್ತಿದ್ದನು. ಈ ಸಮಯದಲ್ಲಿ ಇವನು ಕೊಡಗನ್ನು ಹಾಲೇರಿ ಸಂಸ್ಥಾನವೆಂಬ ಹೆಸರಿಟ್ಟು ಪೂರ್ವದಲ್ಲಿದ್ದ 12 ಕೊಂಬುಗಳನ್ನೂ 35 ನಾಡುಗಳನ್ನೂ ಬದಲಾಯಿಸಿ ಪುನಹ 35 ನಾಡುಗಳಾಗಿ ಏರ್ಪಡಿಸಿ ಅನಾದಿಯಿಂದ ಇದ್ದ ಊರು ಮತ್ತು ನಾಡು ತಕ್ಕಾಮೆಗಳನ್ನು ಅನುಸರಿಸಿ ಪೂರ್ವದಲ್ಲಿದ್ದ ಎಂಟು ನಾಯಕರ ಬದಲಿಗೆ ಎಂಟು ದೇಶ ತಕ್ಕರನ್ನು ಏರ್ಪಡಿಸಿದಾಗಿ ಹೇಳುವರು.*

ಪೂರ್ವದಲ್ಲಿ 35 ನಾಡುಗಳಿಗೆ 35 ತಕ್ಕರಿದರು. ನಾಡುಗಳು ಹೆಚ್ಚಾದುದರಿಂದ ತಕ್ಕರು ಹೆಚ್ಚಾಗಲೂ, ಮತ್ತು ತಕ್ಕರಲ್ಲದ ಕೆಲವು ಕುಳಗಳು ಹಣದ ಅಥವಾ ಉದ್ಯೋಗದ ಶಕ್ತಿಯಿಂದ ತಕ್ಕಾಮೆಯನ್ನುಂಟುಮಾಡಿ ತಕ್ಕರೆಂದು ಅನಿಸಿಕೊಳ್ಳಲು ಕಾರಣವಾದುದರಿಂದಲೂ, ತಕ್ಕರ ಅಧಿಕಾರವನ್ನು ಬ್ರಿಟಿಷ್ ಸರಕಾರವು ಅಂಗೀಕರಿಸದೆ ಇರುವುದರಿಂದಲೂ ತಕ್ಕಾಮೆಯ ಲೆಕ್ಕವು ಕಂಡಾಬಟ್ಟೆ ಆಗಿ ಹೋಯಿತು. ಡೇಗೂ ಈ ಕೆಳಗಿನ ಕುಳಗಳು ನಾಡು ತಕ್ಕರೆಂದು ತಿಳಿಯಬರುತ್ತದೆ.

ತಾವಳಗೇರಿ ಮೂರ್ನಾಡು	...	...	1 ಅಣ್ಣಳಮಾಡ
			2 ಕೈಬಿಲಿರ
ಅಂಜಿಗೇರಿನಾಡು	...	...	1 ಅಜ್ಜಿ ಕುಟ್ಟಿರ
			2 ಚಕ್ಕೆರ
ಮರೆನಾಡು	...	...	1 ಕಾಯಪಂಡ
			2 ಬೊಳ್ಳೆರ
ಹತ್ತುಗಟ್ಟುನಾಡು	...	...	1 ಚೆಪ್ಪುಡಿರ
			2 ಪುಚ್ಚಿಮಾಡ
			3 ಮೇಚಮಾಡ
			4 ಪೋಡಮಾಡ
			5 ಆದೇಂಗಡ
			6 ಅಜ್ಜೆಂಗಡ
ಬೆಟ್ಟಯತ್ತು ನಾಡು	...	...	1 ಅಡ್ಡಂಡ
			2 ಮನೆಯಪ್ಪಂಡ
			3 ಕೊಡೆಂದೆರ
			4 ಪಂದಿಮಾಡ
			5 ಮಳವಂಡ
			6 ಬೊಳ್ಳಜಿರ
			7 ಸಣ್ಣುವಂಡ
ಅಮ್ಮತ್ತಿನಾಡು	...	...	1 ಕೊಲ್ಲಿರ
			2 ಸೋಮೈಯಂಡ

* ಕೊಡಗು ಪದಗಳನ್ನು ಬರೆದಿಟ್ಟ ಕೆಲವು ಕೈ ಬರಹ ಪುಸ್ತಕಗಳಲ್ಲಿ ಈ ಏರ್ಪಾಡು ಮುದ್ದುರಾಜನ ಕಾಲದಲ್ಲಿ ಆದದ್ದೆಂದು ಇದೆ.

ಎಡೆನಾಲ್ಕುನಾಡು	... ...	1 ಅಜ್ಜಿನಿಕಂಡ
		2 ಕೊಳುವಂಡ
		3 ಮುಕ್ಕಾಟಿರ
		4 ಪೊನ್ನಕಚ್ಚಿರ
		5 ಅಮ್ಮಣಕುಟ್ಟಂಡ
ಬೆಪ್ಪುನಾಡು	... ...	1 ಮಾತಂಡ
		2 ಬಲ್ಲಚಂಡ
		3 ಐಚೆಟ್ಟಿರ
		4 ಪಾಲೇಕಂಡ
		5 ಮಾಳೇಟಿರ
		6 ಮುಕ್ಕಾಟಿರ
ಕಡಿಯತ್ತುನಾಡು	... ...	1 ಪೆಟ್ಟಚೆರವಂಡ
		2 ಪಾಲಂದಿರ
		3 ಅಪ್ಪನೆರಮಂಡ
ನಾಲ್ಕುನಾಡು	... ...	1 ಪರದಂಡ
		2 ಕಲಿಯಾಟಂಡ
		3 ಕೇಟೋಳಿರ
		4 ಮೇರಿಯಂಡ
ತಾವುನಾಡು	... ...	1 ಪೋರೆರ
		2 ಪರುವಂಡ
ಬೇಂಗುನಾಡು	... ...	1 ಪಟ್ಟಮಾಡ
		2 ಕಲ್ಲುಮಾಡಂಡ
		3 ತೇಲಪ್ಪಂಡ
ಕುಯ್ಯಂಗೇರಿನಾಡು	... ...	1 ಚೌರಿರ
		2 ಮುಂಜಾದಿರ
		3 ಕುಟ್ಟೇಟಿರ
		4 ಬೊಳ್ಳಂದಂಡ
ಕಾಂತಮೂರ್ನಾಡು	... ...	1 ಪಳಂಗಂಡ
		2 ಕೋಟೆರ
		3 ಮಡೆಯಂಡ
ಹುದಿಕೇರಿನಾಡು	... ...	1 ತಾತಪ್ಪಂಡ
ಮೂಡುಗೇರಿನಾಡು	... ...	1 ಪುಲ್ಲೆರ
ಪೊರೆನಾಲ್ಕುನಾಡು	... ...	1 ಕೊರವಂಡ
		2 ಪೊನ್ನಚೆಟ್ಟಿರ
ಹಾಲೇರಿನಾಡು	... ...	1 ಮುದ್ದುರ
		2 ಐಮುಡಿಯಂಡ
ಹೊರೂರು ಮೂಡುಗೇರಿನಾಡು	... ...	1 ಮುಳ್ಳಂಡ

ಕಗ್ಗೋಡುನಾಡು	...	...	1 ಕಣ್ಣಚಂಡ
ಮಡಿಕೇರಿನಾಡು	...	...	1 ಪೊನ್ನಪ್ಪಂಡ
ಹೊರಮಲೆನಾಡು	...	...	1 ಪಾಂಡಿರ
ಮುತ್ತುನಾಡು	...	...	1 ಕಾಟೆರ
ಸೂರ್ಲಬಿನಾಡು	...	...	1 ಮೇದುಡ
ಗಡಿನಾಡು	...	...	1 ಚೋಕಂಡ

ಈ ದೇಶವನ್ನು 12 ಕೊಂಬುಗಳಾಗಿ ವಿಭಾಗಿಸಿ ದೇಶ ತಕ್ಕರನ್ನು ಏರ್ಪಡಿಸಿದ ಸಂಗತಿಯನ್ನು ಈ ಕೆಳಗಿನ ರೀತಿ ಹಾಡುವರು. ಅದಕ್ಕೆ ದೇಶಕೆಟ್ಟ್‌ಪಾಟ್ ಎಂದು ಹೆಸರು.

ದೇಶಕೆಟ್ಟ್ ಪಾಟ್

ಬಾಳೊ ಬಾಳೊ ನಂಗಡ
ದೇವ ಬಾಳೊ ಮಾದೇವ;
ಪಟ್ಟ ಬಾಳೊ ಸೂರಿಯ
ಕೂಡ ಬಾಳೊ ಚಣ್ಣೂರ;
ಭೂಮಿ ಬಾಳೊ ಜಬ್ಬೂಮಿ;
ಜಬ್ಬಾರಂಡ ಭೂಮಿಲ್
ಈ ಭೂಮಿರ ಮೀದಲ್
ಏದ್ ದೇಶ ಚೊಲ್ಲುಳ್ಳ?
ಪಾಡಿ ನೋಟಿ ಕಾಂಬಕ್ಕ
ಪೊಮ್ಮಾಲೆ ಕೊಡವಾಪ.
ಪೊಮ್ಮಾಲೆ ಕೊಡವುನ
ಎನ್ನನೆ ಪವುತದೊ?
ಅಲ್ಲತೊಂದು ಅಲ್ಲಲ
ಪನ್ನೆರಂಡ್ ಕೊಂಬಾಯಿ
ಈ ದೇಶ ಪವುತತ್.
ಎನ್ನತಾಂಡ ಕೊಂಬಾಪ?
ಕೇಳಿ ಕೇಳಿ ಬೆಂದುವೆ
ಕೈ ಬೈಯಿರಿ ಕೊಂಬಲ್ಲ;
ಬೊವ್ವಾಯಿರಿ ಕೊಂಬಲ್ಲ;
ಪಾಪಲಚಿ ಕೊಂಬಲ್ಲ;
ಚಿತ್ತಾಲ್‌ಡ ಕೊಂಬಲ್ಲ;
ಕೆಂಗಡಮ ಕೊಂಬಲ್ಲ;
ಪೆಗ್ಗಾಟಿರ ಕೊಂಬಲ್ಲ;
ಬೊಳ್ಳಾನೆರ ಕೊಂಬಲ್ಲ;
ಇಂದ್ ಬಾವೊಡೆವೋಂಡ
ಪಲ್ಲಕಿರ ಕೊಂಬಲ್ಲ;
ಪಾಲೇರಿ ಒಡೆವೋಂಡ
ಕಚ್ಚಿಕೊಂಬ್ ನಲ್ಲಾಲ್
ಕೊಡುಮಲೆಕೊರ್‌ತೊರ
ಜಾಮ ಕೊಂಬುರ್‌ಪ್‌ನ.
ಜಾಮ ಕೊಂಬುರ್‌ಪಣೆ
ಪನ್ನೆರಂಡ್ ಕೊಂಬಾನ.
ಎನ್ನನೆಂದರಿವಿರ?
ಪಾಲೇರಿ ಒಡೆವೋಂಡ
ಪೊಂದೇವಡಿ ಪಟ್ಟಿಲ್
ಜಾಮ ಕೊಂಬುರ್‌ಪ್‌ಚಿ;
ಆಂಡ ಧನಿ ನಿಂದಲ್ಲಿ
ಕೊಂಬ್‌ಡೆಣ್ಣ ಒಂದಾಚಿ;
ಅಲ್ಲಿ ಪೋಯಿ ನಿಂದಿತ್
ಜಾಮ ಕೊಂಬುರ್‌ಪ್‌ಚಿ;
ಆಂಡ ಧನಿ ನಿಂದಲ್ಲಿ
ಕೊಂಬ್‌ಡೆಣ್ಣ ದಂಡಾಚಿ;
ಇನ್ನನಾಚಿ ಕೊಂಬೆಲ್ಲ.
ಪೊಮ್ಮಾಲೆ ಕೊಡವ್‌ಲ್
ಪನ್ನೆರಂಡ್ ಕೊಂಬಾಚಿ.
ಪನ್ನೆರಂಡ್ ಕೊಂಬ್‌ಲ್
ಎಚ್ಚಕುಳ್ಳ ನಾಡಾಪ?
ಅಲ್ಲತೊಂದ್ ಅಲ್ಲಲ
ನುಪ್ಪತಂಜಿ ನಾಡಾಪ.
ಎನ್ನನೆಂದರಿವಿರ?

ಮೂಲ ಕನ್ನಿ ಕಾವೇರಿ
ಕಾವೇರ್ಯಮ್ಮೆ ತಾಯಿರ
ನೀಲಕೊಡಿ ತೀರ್‌ತ
ಮಮ್ಮಾಯತೆ ಪುಟ್ಟಿತ್
ಚಾಯ ಬುದ್ದಿತೊಕ್ಕಿತ್
ಕೊಡವುನ ಪವುತತ್–
ಚೋರಂಗೆ ಮುರಿಚಿತ್
ಕೀತ್ ದಂಡ್ ಬೆಚ್ಚೋಲೆ;
ಬೊಳ್ಳ ತೆಂಗೆ ಪೊಜ್ಜಿತ್
ಭಾಗ ದಂಡ್ ಬೆಚ್ಚೋಲೆ
ಸೀಮೆನ ಪವುತತ್.
ಈನಂಗುಂಡ್ ಪೋರಾಂದ್
ಕಾವೇರಿ ಕೊಂಡಾಕರೆ
ಕಾರೋಟೆ ನೆಡಿ ಪೋಲೆ
ಗುದ್ದ್‌ನ ಕಲ ಪೋಲೆ
ಗುದ್ದ ಗುದ್ದ ನಾಡೋನ್
ಕೆಂಗಳಮೆ ಕ್‌ಗ್ಗಟ್ಟ್
ಕ್‌ಗ್ಗಟ್ಟ್ ಪದಿನಾಲ್.
ಕಾವೇರಿ ಕೊಂಡೀಕರೆ
ಬೊಳ್ಳೋಟೆ ನೆಡಿ ಪೋಲೆ
ಪಾಬೊಳಿಯ ಮೇಂದಲೆ
ಮೇಂದಲೆ ಪದಿನಾಲ್.
ದಂಡ್ ನಾಡೂ ಕೂಡಣೆ
ನಾಡಿರುವತೆಟ್ಟಾನ.
ನಾಡ್ ಪೋರಂದೆಣ್ಣಿತ್
ಪಟ್ಟಿ ಪೊಳೆಕಾಬರ
ಎಣ್ಣೆ ಪೊಳೆಕೀಬರ
ಏಳ್ ನಾಡ ಸೂರ್ಲಬಿ;
ಮೂಂದ್ ನಾಡೂ ಕೂಡಣೆ
ನುಪ್ಪತಂಜಿ ನಾಡಾನ.
ನುಪ್ಪತಂಜಿ ನಾಡ್‌ಕ್
ಸೀಮೆ ತಕ್ಕಂಗೆಚ್ಚಕ್?
ತಕ್ಕಂಡ ಪೆದಲೆನ್ನ?
ಕೇಳಿ ಕೇಳಿ ಬೆಂದುವೆ,
ನೇರ ಬಂದುದಿಪಲ್ಲಿ
ತಾಳೆ ಪೂವ್ ತಾಳೇರಿ
ಆ ನಾಡ್ ನಡುವುಲ್
ಕಾಜುಮಾಲೆ ಕಳ್ಳೆಯು,
ಬೀರಪಟ್ಟ ಬೊಳ್ಳೆಯು
ಜೋಡೆರಂಡ್ ತಕ್ಕಂಗ;
ನೇರ ಮಜ್ಜಣಾಪಲ್ಲಿ
ಆನೆ ಬೆಪ್ಪ್ ನಾಡ್‌ಲ್
ಮಾತನು ಬುಡುವನು
ಜೋಡೆರಂಡ್ ತಕ್ಕಂಗ;
ನೇರೊಯಿಪತಾಪಲ್ಲಿ
ನಾಲಾಯಿರ ನಾಡ್‌ಲ್
ಜೊಡೆರಂಡ್ ತಕ್ಕಂಗ
ಪಾಂಡಿಯು ಪರದನು;
ನೇರ ಪೋಯಿ ತಾವಲ್ಲಿ
ಉದ್ದ ಕೊಡೆ ತಾವುಲ್
ಪೋರೆಯು, ಪರುವನು
ಜೊಡೆರಂಡ್ ತಕ್ಕಂಗ
ಸೀಮೆ ತಕ್ಕಂಗೆಟ್ಟಾನ.
ನುಪ್ಪತಂಜಿ ನಾಡ್‌ಲ್
ಕೂಟಇಾಯ ತ್‌ಪಕ್
ಎಚ್ಚಕುಳ್ಳ ಪಟ್ಯಾಪ?
ಚೆಂಡೋಲೆ ಕಡಿಯೋಂಡ
ಪೊಂಬಾವಲಿ ಪಟ್ಯೊಂದ್;
ಕುಯ್ಯಂಗೇರಿ ನಾಡೋಂಡ
ಕಟ್ಟುರ್‌ಪ್ ಕಾರುಂದ
ಕಾರುಂದತ್ ಪಟ್ಯೊಂದ್;
ಉದ್ದ ಕೊಡೆ ತಾವುಲ್
ಅಲ್ಲಿಂಜೂ ತಿರುವುಳ್ಳ
ಪಚ್ಚೆ ಕೊಡೆ ಪಾಂಡತ್
ಪಾಂಡತುಳ್ಳ ಪಟ್ಯೊಂದ್;
ಈನಂಗುಂಡ್ ಪೋರಾಂದ್
*ಪಾಂಬ್ ಕಣ್ಣ್ ಪಾಲೇರಿ
ಇಂದ್ ಬಾವೊಡೆವೋಂಡ
ಪೊಂದೇವಡಿ ಪಟ್ಯೊಂದ್;
ನುಪ್ಪತಂಜಿ ನಾಡ್‌ಕ್

---

* **ಉಕ್ಕಂಬ್ ಮಡಿಕೇರಿ – ಎಂದೂ ಹಾಡಬಹುದು.**

ನಾಲ್ ಪಟ್ಟಿಡಾಚಿಲ.
ನುಪ್ಪತಂಜಿ ನಾಡ್‌ಲ್
ತಕ್ಕ ಪೋಯಳಪಕ್
ನುಪ್ಪತಂಜಿ ಅಂಬ್‌ಲ;
ದೇಬುವ ಕುಳಿಪಕ್
ನುಪ್ಪತಂಜಿ ಪಾಕೆರೆ;
ಚಿಕ್ಕಿ ಬಂದ ಚೋಮಂಗ್
ನೀಕುಡಿ ಕುಡಿಪಕ್
ನುಪ್ಪತಂಜಿ ನೀಕೆರೆ;
ನಾಡ್‌ಕೊರ್ ಮಾದೇವ;
ಊರ್‌ಕೊರ್ ಪೊವ್ವದಿ;
ಕೇರಿಕೊರ್ ಅೈಯ್ಯಪ್ಪ;
ಓಣಿಕೊರ್ ನಾತನ್;
ಒಕ್ಕಕೊರ್ ಪೂದನ್;
ಅನ್ನತ ನೆಲೆಯಾಪ;
ಎಂದೆಣ್ಣಿತ್ ಪಾಡುವ;
ಈ ಪಾಟ್‌ನ ಬೆಪ್ಪಿನೊ.
ಬೆಪ್ಪಕೊಮ್ಮೆಡ್‌ಪಕ್ಕ
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ !

ಅನಂತರ ಮೈಸೂರು ಚಿಕ್ಕ ದೇವರಾಜನು ಬೇಲೂರು ವೆಂಕಟಾದ್ರಿ ನಾಯಕನ ಸೀಮೆಯನ್ನು ಆಕ್ರಮಿಸಿಕೊಳ್ಳಲು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಹೋದ ವರ್ತಮಾನವನ್ನು ದೊಡ್ಡ ವೀರಪ್ಪನು ತಿಳಿದು ಕೊಡಗಿನ ಸರಹದ್ದಿನ ಸೀಮೆಯನ್ನು ಹಿಡಿದುಕೊಳ್ಳುವಂತೆ ಒಂದು ಸೈನ್ಯವನ್ನು ತಾನೂ ಕಳುಹಿಸಿ ಏಳುಸಾವಿರ ಸೀಮೆ ಯನ್ನು ಕೊಡಗಿಗೆ ಸೇರಿಸಿಕೊಂಡನು.

ಚಿಕ್ಕದೇವರಾಜನು ವೆಂಕಟಾದ್ರಿ ನಾಯಕನನ್ನು ಗೆದ್ದು ಏಳುಸಾವಿರ ಸೀಮೆಯನ್ನು ಸಹ ಬಿಟ್ಟು ಕೊಡಬೇಕಾಗಿ ಕೇಳಲು, ದೊಡ್ಡ ವೀರಪ್ಪನು ಸಮ್ಮತಿ ಸದಿದ್ದುದರಿಂದ ಯುದ್ಧವಾಗಿ ಮೈಸೂರವರು ಸೋತು ಹೋದರು. ಆದರೆ ಏಳು ಸಾವಿರ ಸೀಮೆಗೆ ಸೇರಿದ್ದ ಮಲ್ಲಿಪಟ್ಟಣ, ಬೆಮ್ಮತ್ತಿ ಮತ್ತು ಹೊಸೂರು ಎಂಬವುಗಳನ್ನು ಮೈಸೂರವರು ಆಕ್ರಮಿಸಿಕೊಂಡು, ಬೆಮ್ಮತ್ತಿ ಮತ್ತು ಮಲ್ಲಿಪಟ್ಟಣ ಗಳಲ್ಲಿ ಕೋಟೆಗಳನ್ನು ಕಟ್ಟಿ ಅಲ್ಲಿ ಠಾಣ್ಯಗಳನ್ನು ಇಟ್ಟರು. ಆದಾಗ್ಯೂ ಮೈಸೂರವರು ಅಲ್ಲಿಂದ ಹಿಂತಿರುಗಿದ ಒಡನೆ, ಕೊಡಗರು ಆ ಕೋಟೆಗಳನ್ನು ಹಿಡಿದು ಲೂಟಿ ಮಾಡಿದ್ದರಿಂದ ಚಿಕ್ಕ ದೇವರಾಜನು ಆ ಊರುಗಳನ್ನು ಏಳು ಸಾವಿರ ಸೀಮೆಗೆ ಸೇರಿಸಿ ಕೊಡಗು ರಾಜನ ಆಡಳಿತತೆಗೆ ಒಳಪಟ್ಟಿರಬಹುದಾಗಿಯೂ, ಆದರೆ ಆ ಊರುಗಳಲ್ಲಿ ವಸೂಲಾದ ಕಂದಾಯವನ್ನು ತನಗೆ ಕೊಡಬೇಕಾಗಿಯೂ ಕೇಳಿ ಕೊಂಡಿದ್ದರಿಂದ, ಒಪ್ಪಿಕೆಯಾಗಿ ಮೇಲೆ ಹೇಳಿದ ಹೋಬಳಿಗಳನ್ನು ಏಳುಸಾವಿರ ಸೀಮೆಗೆ ಸೇರಿಸಲಾಯಿತು. ಆದುದರಿಂದ ಏಳುಸಾವಿರ ಸೀಮೆಗೆ "ಇತ್ತೆರಿಕೆ ಸೀಮೆ"ಯೆಂದು ಹೆಸರಾಯಿತು.

ಈ ಸಮಯದಲ್ಲಿ ಮೈಸೂರು ದೇಶದ ಚಿಕ್ಕದೇವರಾಜನು ತೀರಿಹೋಗಿ ದೊಡ್ಡ ಕೃಷ್ಣರಾಜನಿಗೆ ಪಟ್ಟವಾಯಿತು.

ಇಕ್ಕೇರಿ ಸಂಸ್ಥಾನದ ಸೋಮಶೇಖರ ನಾಯಕನು ಚರಕಲ ರಾಜ್ಯವನ್ನು ತನ್ನ ಸಂಸ್ಥಾನಕ್ಕೆ ಸೇರಿಸಿಕೊಳ್ಳಬೇಕಾಗಿ ನೀಲೇಶ್ವರ ಮಾರ್ಗವಾಗಿ ದೊಡ್ಡ ದಂಡೆತ್ತಿ ಬಂದು ಚರಕಲ ರಾಜ್ಯದ ಅರ್ಧಾಂಶವನ್ನು ಗೆದ್ದು, ಪೂರ ರಾಜ್ಯವನ್ನು ಗೆಲ್ಲತಕ್ಕ ಬಗ್ಗೆ ಅಲ್ಲಲ್ಲಿ ಲಕಡಿ ಕೋಟೆಗಳನ್ನು ಕಟ್ಟಿ ಠಾಣ್ಯ ಹಾಕುತ್ತಿದ್ದದ್ದನ್ನು ರವಿವರ್ಮನು ಕಂಡು, ಹೆದರಿ, ದೊಡ್ಡ ವೀರಪ್ಪನನ್ನು ಮಧ್ಯಸ್ತಿಕೆ ಮಾಡಬೇಕಾಗಿ ಬೇಡಿಕೊಂಡನು. ದೊಡ್ಡ ವೀರಪ್ಪನು ಈ ವಿಷಯವನ್ನು ಸೋಮಶೇಖರ ನಾಯಕನಿಗೆ ತಿಳಿಸಲು, ತನಗೆ ಬಹಳ ಹಣ ಖರ್ಚಾಗಿರುವುದರಿಂದ ತಾನು ಜಯಿಸಿದ ರಾಜ್ಯವನ್ನು ಬಿಡಲಾಗುವುದಿಲ್ಲವಾಗಿ ಹೇಳಿದನು. ಈ ವರ್ತಮಾನವನ್ನು ತಿಳಿದ ರವಿವರ್ಮನು 18 ಲಕ್ಷ ರೂಪಾಯಿಗಳನ್ನು 5 ಕಂತುಗಳಲ್ಲಿ ಕೊಡುವುದಾಗಿ ಒಪ್ಪಿ, ಕೊಡಗು ರಾಜನನ್ನು

ಜಾಮೀನು ಕೊಟ್ಟನು. ಸೋಮಶೇಖರ ನಾಯಕನು ತನ್ನ ರಾಜ್ಯಕ್ಕೆ ಹಿಂತಿರುಗಿದನು.

ಸಮಯಕ್ಕೆ ಸರಿಯಾಗಿ ಹಣವನ್ನು ವಸೂಲು ಮಾಡಲು, ದೊಡ್ಡ ವೀರಪ್ಪನು ಕೆಲವು ಕಾರ್ಯಕಾರರನ್ನು ಹರಿಕಾರರನ್ನು ರವಿವರ್ಮನ ಹತ್ತಿರ ಕಳುಹಿಸಿದಲ್ಲಿ, ಎರಡು ಮೂರು ಕಂತುಗಳಲ್ಲಿ ಅರ್ಧ ಹಣ ಮಾತ್ರ ಸಂದಾಯಿಸಿ ಬಾಕಿ ಹಣ ಕೊಡದೆ ಸತಾಯಿಸಿದ್ದರಿಂದ ವರಾತ ಮಾಡಲು ಹೋಗಿದ್ದ ಜನರನ್ನು ತಳ್ಳಿಬಿಟ್ಟನು. ಈ ಸಮಾಚಾರವನ್ನು ದೊಡ್ಡ ವರಾತ ಮಾಡಲು ಹೋಗಿದ್ದ ಜನರನ್ನು ತಳ್ಳಿಬಿಟ್ಟನು. ಈ ಸಮಾಚಾರವನ್ನು ದೊಡ್ಡ ವೀರಪ್ಪನು ತಿಳಿದು, ತನ್ನ ದಳವಾಯಿ ಕಾಂತಮೂರ್ನಾಡು ಬೋನಿರ ಮುತ್ತಣ್ಣನನ್ನು ಐದು ಸಾವಿರ ಕೊಡಗರ ಸಮೇತ ಹಣ ವಸೂಲಾತಿ ಬಗ್ಗೆ ಚರಕಲ ರಾಜ್ಯಕ್ಕೆ ಕಳುಹಿಸಿದನು. ಈ ಮುತ್ತಣ್ಣನು ಹಣಕ್ಕೆ ತಗಾದೆ ಮಾಡುತ್ತಿದ್ದರಿಂದ ರವಿವರ್ಮನು ಸಿಟ್ಟುಗೊಂಡು, ಅವನನ್ನೂ ಅವನ ಜೊತೆಯಲ್ಲಿದ್ದ ಕೊಡಗರನ್ನೂ ಉಪಾಯದಿಂದ ಕೊಲ್ಲಬೇಕಾಗಿ ಏರ್ಪಾಡು ಮಾಡುತ್ತಿದ್ದನು. ಇದನ್ನು ಕಣ್ಣನೂರು ಆಲಿರಾಜನು ತಿಳಿದು ಮುತ್ತಣ್ಣನಿಗೆ ತಿಳಿಸಲು ಇವನು ಕೊಡಗರ ಸೈನ್ಯ ಸಮೇತ ಕಣ್ಣನೂರಿಗೆ ರಾತಾ ರಾತ್ರೆ ಹೊರಟನು. ಈ ಸುದ್ದಿಯನ್ನು ರವಿವರ್ಮನು ತಿಳಿದು, ಮುತ್ತಣ್ಣನನ್ನು ಅಡ್ಡಗಟ್ಟಲು ಪ್ರಯತ್ನಿಸಿ ಕೈಸಾಗದೆ ಮಲಯಾಳದಿಂದ ಕೊಡಗಿಗೆ ಹೋಗುವ ದಾರಿಯನ್ನು ಬಂದ್ ಮಾಡಿಬಿಟ್ಟನು. ಇದನ್ನು ಆಲಿರಾಜನು ತಿಳಿದು ಮುತ್ತಣ್ಣನನ್ನು ಅವನ ಸೈನ್ಯ ಸಮೇತ ಪತ್ತೆಮರಿಯಲ್ಲಿ ಹತ್ತಿಸಿ ಇಕ್ಕೇರಿ ಸಂಸ್ಥಾನವಳಿತವಾದ ಕುಂಬಳೆ ತಾಲೋಕಿನಲ್ಲಿಳಿಸಿಬಿಟ್ಟನು. ಮುತ್ತಣ್ಣನು ತನ್ನ ಸೈನ್ಯದೊಡನೆ ತುಳುನಾಡು ಮಾರ್ಗವಾಗಿ ಕೊಡಗಿಗೆ ಸೇರಿದನು.

ಈ ಸಂಗತಿಯನ್ನು ದೊಡ್ಡ ವೀರಪ್ಪನು ತಿಳಿದು ಚರಕಲ ರಾಜನಿಂದ ಸೋಮಶೇಖರ ನಾಯಕನಿಗೆ ಸಲ್ಲತಕ್ಕ ಹಣವನ್ನು ತನ್ನ ಕೈಯಿಂದ ಕೊಟ್ಟನು. ಇದಕ್ಕೆ ಸೋಮಶೇಖರ ನಾಯಕನು ಮೆಚ್ಚಿ, ಕೊಡಗಿಗೆ ಮುಟ್ಟಿದ ತುಳುನಾಡು ವಳಿತವಾದ ಮೂಡ 9 ಮಾಗಣೆಗಳಿಂದ ಕೆಲವು ಗ್ರಾಮಗಳನ್ನು ಹಾಲು ಬೆಣ್ಣೆ ಉದ್ದಿಶ್ಯಕ್ಕೆಂದು ಹೇಳಿ, ಆ ಗ್ರಾಮಗಳಿಗೆ "ಅಮರ"ವೆಂದು ಹೆಸರಿಟ್ಟು ಕೊಡಗು ರಾಜನಿಗೆ ಕೊಟ್ಟನು.

ಅನಂತರ ಕಾವೇರಿಯಮ್ಮನವರ ಪೂಜೆಗೆ ಕೊಡಗಿನಲ್ಲಿ ತೆಂಗಿನಕಾಯಿಯು ಸಿಕ್ಕದ್ದರಿಂದ, ಕೊಡಗಿಗೆ ಒತ್ತಾದ ಸೂಳ್ಯದ ಮಾಗಣೆಯನ್ನು ಕ್ರಯಕ್ಕೆ ಕೊಡಬೇಕಾಗಿ ದೊಡ್ಡ ವೀರಪ್ಪನು ಸೋಮಶೇಖರ ನಾಯಕನನ್ನು ಕೇಳಿದ್ದಕ್ಕೆ ಅವನು ಒಪ್ಪಿಕೊಂಡು ಬೇಗಮಲೆ ಒಡ್ಡಿನಲ್ಲಿ ತೋರಣಕಟ್ಟಿಸಿ ಸೂಳ್ಯದ ಮಾಗಣೆಯನ್ನು ವಿಂಗಡಿಸಿಕೊಟ್ಟನು. ಇದರ ಕ್ರಯವನ್ನು ಕಾವೇರಿಯಮ್ಮನವರ ಭಂಡಾರದಿಂದ ಕೊಡಲ್ಪಟ್ಟಿತು.

ಕೆಲವು ದಿವಸಗಳಲ್ಲಿ ಸೋಮಶೇಖರ ನಾಯಕನು ಮೃತಪಟ್ಟು ಬೂದಿ ಬಸವಪ್ಪನಾಯಕನು ಪಟ್ಟಕ್ಕೆ ಬಂದನು.

ಇತ್ತಲಾಗಿ ರಾಜಕುಮಾರ ಅಪ್ಪಾಜಿಯು ತನ್ನ ರಾಣಿಯನ್ನು ಬಿಟ್ಟು ಸಾಮಾನ್ಯ ಸ್ತ್ರೀಯನ್ನು ಕಟ್ಟಿಕೊಂಡು ರಾಣಿಯನ್ನು ಹೆಚ್ಚಾಗಿ ಹಿಂಸಿಸುತ್ತಿದ್ದುದರಿಂದ ಅವಳು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು. ಈ ವರ್ತಮಾನವನ್ನು ರಾಜನು ತಿಳಿದು, ಮಗ ಅಪ್ಪಾಜಿಯನ್ನೂ ಮೊಮ್ಮಗ ವೀರಪ್ಪನನ್ನೂ ಸೆರೆಯಲ್ಲಿ ಹಾಕಿದನು. 12 ವರುಷ ಸೆರೆಯಲ್ಲಿದ್ದ ಅಪ್ಪಾಜಿಯು ಅಲ್ಲಿಯೇ ಮೃತಪಟ್ಟನು. ಆಮೇಲೆ ಆಪ್ತರಾದ ಕೆಲವು ಕೊಡಗರ ಮಾತಿನ ಮೇರೆ ರಾಜನು (ಚಿಕ್ಕ) ವೀರಪ್ಪನನ್ನು ಸೆರೆಯಿಂದ ಬಿಟ್ಟನು.

ಚಿಕ್ಕ ವೀರಪ್ಪ

ಸೆರೆಯಿಂದ ಬಿಟ್ಟ ಚಿಕ್ಕ ವೀರಪ್ಪನಿಗೆ 1730ರಲ್ಲಿ ಪಟ್ಟವನ್ನು ಕಟ್ಟಿದನು. ಇವನು ಚಿಕ್ಕಂದಿನಿಂದಲೇ ಸೆರೆಯಲ್ಲಿದ್ದುದರಿಂದ ರೋಗಿಷ್ಟನಾಗಿದ್ದನು.

1736ರಲ್ಲಿ ದೊಡ್ಡ ವೀರಪ್ಪನು ತೀರಿಹೋದನು.

ಈ ಸಮಯದಲ್ಲಿ ಮೈಸೂರು ದೇಶದ ದೊಡ್ಡ ಕೃಷ್ಣರಾಜನು ಮೃತಪಟ್ಟು ಚಾಮರಾಜನು ಪಟ್ಟಕ್ಕೆ ಬಂದನು. ಇವನು ದೊಡ್ಡ ಕೃಷ್ಣರಾಜನ ಪಟ್ಟದ ಸ್ತ್ರೀಯ ಮೇಲೆ ಕಣ್ಣು ಇಟ್ಟಿದ್ದರಿಂದ ಅಲ್ಲಿನ ಅರಸುಗಳು ಕೂಡಿ ಇವನನ್ನು ಕಪಾಲದುರ್ಗಕ್ಕೆ ಹಾಕಿಬಿಟ್ಟು 10 ವರುಷ ಪ್ರಾಯದ ಚಿಕ್ಕ ಕೃಷ್ಣರಾಜನನ್ನು ಸಿಂಹಾಸನದಲ್ಲಿ ಕೂರಿಸಿದನು.

ಇದೇ ಸಮಯದಲ್ಲಿ ಇಕ್ಕೇರಿ ಸಂಸ್ಥಾನದ ಬೂದಿ ಬಸಪ್ಪನಾಯಕನು ತೀರಿ ಹೋಗಿ, ಅವನ ರಾಣಿ ವೀರಮ್ಮಾಜಿಯು ರಾಜ್ಯಭಾರವನ್ನು ಮಾಡಿಕೊಂಡಿದ್ದಳು.

ಮೈಸೂರು ದೇಶದ ಚಿಕ್ಕ ಕೃಷ್ಣರಾಜನಿಗೆ ದಳವಾಯಿ ದೇವರಾಜ ಅರಸನ ತಮ್ಮನಾದ ಖರಾಚೂರಿ ನಂದರಾಜ ಅರಸನ ಮಗಳನ್ನು ಮದುವೆ ಮಾಡ ಲಾಯಿತು. ಅಂದಿನಿಂದ ನಂದರಾಜ ಅರಸನೇ ಸರ್ವ ಅಧಿಕಾರವನ್ನು ವಹಿಸಿಕೊಂಡನು. ಆಗ ಅವನ ಬಳಿಯಲ್ಲಿ ಹೈದರಾಲಿ ಎಂಬ ನಾಯಕನು ಕೆಲವು ಮಂದಿ ಸಮೇತ ಚಾಕರಿ ಮಾಡಿಕೊಂಡಿದ್ದನು.

1750ರಲ್ಲಿ ಚಂದಾಸಾಹೇಬನು ಮಹಮದ್ ಅಲ್ಲಿಯ ಮೇಲೆ ಬಿದ್ದು, ತಿರುಚಿನಾ ಪಳ್ಳಿ ಕೋಟೆಗೆ ಮುತ್ತಿಗೆ ಹಾಕಿದಾಗ ಮಹಮದ್ ಅಲ್ಲಿಯು ನಂದರಾಜ ಅರಸನನ್ನು ಸಹಾಯಕ್ಕೆ ಕೇಳಿದ್ದರಿಂದ ನಂದರಾಜ ಅರಸು ತನ್ನ ಜೊತೆಯಲ್ಲಿ ಹೈದರ್ ನಾಯಕನನ್ನು ಕರೆದುಕೊಂಡು ಹೋದನು. ಇಂಗ್ಲೀಷ್ ಕುಂಪಣಿ ಸರಕಾರವುಸಹ ಮಹಮದ್ ಅಲ್ಲಿಯ ಸಹಾಯಕ್ಕೆ ಸೇರಿತ್ತು. ಚಂದಾಸಾಹೇಬನು ಸೋತುಹೋದನು, ಅಲ್ಲಿಂದ ಹೈದರ್ ನಾಯಕನು ಕೆಲವು ಫಿರಂಗಿ ಮುಂತಾದವುಗಳನ್ನು ಲೂಟಿ ಮಾಡಿಕೊಂಡು ಸ್ವಲ್ಪ ಮಟ್ಟಿಗೆ ಪ್ರಬಲಿಸಿದನು.

ಚಂದಾಸಾಹೇಬನ ಮೇಲೆ ಯುದ್ಧಕ್ಕೆ ಹೋದುದಕ್ಕೆ ಪ್ರತಿಫಲ ಸಿಕ್ಕಲಿಲ್ಲವಾಗಿ ಚಿಕ್ಕ ಕೃಷ್ಣರಾಜನಿಗೂ ನಂದರಾಜನಿಗೂ ಮಾತು ಬಂದು ನಂದರಾಜನು ಚಿಕ್ಕಕೃಷ್ಣ ರಾಜನನ್ನು ಖೈದಿಯಲ್ಲಿಟ್ಟನು.

ದಳವಾಯಿ ದೇವರಾಜ ಅರಸು ತೀರಿಹೋದ ಮೇಲೆ ಅವನ ಅರಸಿಯಾದ ಚಲುವಾಜಮ್ಮನು ಖಂಡೇರಾವು ಎಂಬ ಬ್ರಾಹ್ಮಣನನ್ನು ಇಟ್ಟುಕೊಂಡು ದೊಡ್ಡ ಕೃಷ್ಣರಾಜನ ರಾಣಿ ಮುದ್ದಮ್ಮಾಜಿಯ ಮೂಲಕ ಇವನಿಗೆ ಸರ್ವ ಅಧಿಕಾರವನ್ನು ಕೊಡಿಸಿದ್ದರಿಂದ ನಂದರಾಜ ಅರಸು ಸಿಟ್ಟುಗೊಂಡು ಖಂಡೇರಾವನ್ನು ನಿಗ್ರಹಿಸುವಂತೆ ಹೈದರ್ ನಾಯಕನ ಸಂಗಡ ಕೆಲವು ಪವುಜು ಕಳುಹಿಸಿದನು.

ಹೈದರ್ ನಾಯಕನು ಖಂಡೇರಾವುವನ್ನು ಕೊಂದು ಮುದ್ದಮ್ಮಾಜಿಯ ಮತ್ತು ಚಿಕ್ಕ ಕೃಷ್ಣರಾಜನು ಇದ್ದ ಅರಮನೆಗೆ ಪಹರೆ ಇಟ್ಟನು. ಇದರ ಮೇಲೆ ಹೈದರ್‌ನಾಯಕನು ತನ್ನ ಹೆಸರನ್ನು ಹೈದರಾಲಿಖಾನ್ ಬಹದೂರ್ ಎಂದು ಪ್ರಸಿದ್ಧಿ ಪಡಿಸಿ ಪವುತಿ ದಳವಾಯಿ ದೇವರಾಜ ಅರಸನ ಅರಮನೆ ಯಲ್ಲಿಳಿದುಕೊಂಡನು.

ಈ ಸಮಯದಲ್ಲಿ ಇಕ್ಕೇರಿ ಸಂಸ್ಥಾನದಲ್ಲಿ ರಾಜ್ಯಭಾರ ಮಾಡುತ್ತಿದ್ದ ವೀರಮ್ಮಾ

ಜಿಯು, ನಂಬ್ಯಣ್ಣನೆಂಬ ಬ್ರಾಹ್ಮಣನನ್ನು ಇಟ್ಟುಕೊಂಡು ಪಟ್ಟಕ್ಕೆ ಅರ್ಹನಾದ ದೊರೆಮಗನನ್ನು

ಕೊಲ್ಲಿಸಿ ನಂಬ್ಯಣ್ಣನಿಗೆ ಸರ್ವಾಧಿಕಾರವನ್ನು ಕೊಟ್ಟಳು. ಈ ವರ್ತಮಾನವನ್ನು ಹೈದರಾಲಿಖಾನ್ ಬಹದೂರ್ ತಿಳಿದು ಇಕ್ಕೇರಿ ಸಂಸ್ಥಾನವನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸುವ ಸಮಯ ಇದೇ ಎಂದು 1764ರಲ್ಲಿ ಇಕ್ಕೇರಿ ಸಂಸ್ಥಾನದ ಕೋಟೆಗೆ ಮುತ್ತಿಗೆ ಹಾಕಿ ನಂಬ್ಯಣ್ಣನನ್ನು ಕೊಂದು ಆ ಸಂಸ್ಥಾನವನ್ನು ತನ್ನ ಕೈವಶಮಾಡಿಕೊಂಡು ತನ್ನ ಹೆಸರನ್ನು ನವಾಬ್ ಹೈದರಾಲಿಖಾನ್ ಬಹದೂರ್ ಎಂದು ಪ್ರಸಿದ್ಧಗೊಳಿಸಿದನು.

ಆಮೇಲೆ ನವಾಬ್ ಹೈದರಾಲಿಖಾನ್ ಬಹದೂರ್ ಫೌಜು ಹೆಚ್ಚಿಸುತ್ತಾ ತನಗೆ ಅನುಕೂಲರಾದವರನ್ನು ಇಟ್ಟು, ಪ್ರತಿಕೂಲರಾದವರನ್ನು ಕೊಂದು ತನ್ನ ಯಜಮಾನನಾದ ಖರಾಚೂರಿ ನಂದರಾಜನನ್ನು ಸೆರೆಯಲ್ಲಿ ಹಾಕಿ ಮೈಸೂರು ದೇಶವನ್ನೆಲ್ಲ ತನ್ನ ಸ್ವಾಧೀನ ಮಾಡಿಕೊಂಡನು.

ಕೆಲವು ದಿವಸದಲ್ಲಿ ಚಿಕ್ಕ ಕೃಷ್ಣರಾಜನು ತೀರಿಹೋದುದರಿಂದ ಆ ಸಂತತಿಯಲ್ಲಿದ್ದ ಕೃಷ್ಣರಾಜನೆಂಬವನಿಗೆ ಪಟ್ಟಕಟ್ಟಿ ನೆಪಮಾತ್ರಕ್ಕೆ ಅವನನ್ನು ರಾಜನಾಗಿ ಮಾಡಿದನು.

ಕೊಡಗು ರಾಜನು ಬೆಮ್ಮತ್ತಿ ಮಲ್ಲಿಪಟ್ಟಣ ಮತ್ತು ಹೊಸೂರು ಎಂಬ ಊರುಗಳಿಂದ ಕಂದಾಯವನ್ನು ತೆಗೆದುಕೊಂಡು ಮೈಸೂರು ರಾಜನಿಗೆ ಕೊಡುತ್ತಿದ್ದುದ್ದು ಸರಿಯಷ್ಟೇ. ಹೈದರಾಲಿಯ ಇರಾದೆ ಮೇಲೆ ಚಿಕ್ಕವೀರಪ್ಪನು ಈ ಊರುಗಳನ್ನು ಮೈಸೂರು ಸಂಸ್ಥಾನಕ್ಕೆ ಬಿಟ್ಟುಕೊಟ್ಟನು.

ಇದರಿಂದ ತೃಪ್ತಿಯಾಗದೆ ಹೈದರು 1765ರಲ್ಲಿ ಫರ್‌ಜುಲ್ಲಾಖಾನನ ಸಂಗಡ ದೊಡ್ಡ ಸೈನ್ಯವನ್ನು ಕೂಡಿಸಿ ಕೊಡಗನ್ನು ಪೂರ ಜಯಿಸಲು ಕಳುಹಿಸಿದನು. ಅವನು ಬಂದು ಉಬ್ಬಲಂಗಡಿ ಮಾಳದಲ್ಲಿ ತನ್ನ ಸೈನ್ಯ ಸಮೇತ ಇಳಿದುಕೊಂಡನು. ಕೊಡಗರು ಇವನೊಡನೆ ಯುದ್ಧ ಮಾಡಿ ಅವನ ದಂಡನ್ನು ಹಿಂದಕ್ಕೆ ಓಡಿಸಿಬಿಟ್ಟರು. ಕೊಡಗನ್ನು ಜಯಿಸಲು ಕೈಸಾಗದ್ದರಿಂದ ಉಪಾಯಗಾರನಾದ ಹೈದರಾಲಿಯು, ತಮಗೆ ಜಗಳ ಬೇಡವಾಗಿಯೂ ಕೊಡಗಿಗೆ ಮುಟ್ಟಿರುವ ಉಚ್ಚಂಗಿ ಮೊದಲಾದ ಕೆಲವು ಊರುಗಳನ್ನು ಬಿಟ್ಟು ಕೊಡುವುದಾಗಿಯೂ ಅದರ ಕ್ರಯ 3 ಲಕ್ಷ ರೂಪಾಯಿ ಕೊಡಬೇಕಾಗಿಯೂ ಕೇಳಿದನು. ಇವನ ಮೋಸವನ್ನು ತಿಳಿಯದೆ, ಕೈಯಲ್ಲಿ ಹರಿಯದ ಚಿಕ್ಕವೀರಪ್ಪನು ಅದಕ್ಕೆ ಒಪ್ಪಿಕೊಂಡು ಕವುಲು ಕರಾರು ಆಗಿ, ಆ ಬಗ್ಗೆ ಕಾಲು ಪಾಲು ಹಣವನ್ನು ಕೊಟ್ಟು ತನ್ನ ದಳವಾಯಿಯ ತಮ್ಮನಾದ ಚೆರಮಣ್ಣನನ್ನು ಹೊಣೆಕೊಟ್ಟನು. ಆದರೂ ಹೈದರಾಲಿಯು ಉಚ್ಚಂಗಿಯನ್ನು ಬಿಟ್ಟುಕೊಡುವುದಿಲ್ಲವಾಗಿ ಇನ್ಕಾರ ಮಾಡಿದ್ದಲ್ಲದೆ ಚೆರಮಣ್ಣನನ್ನು ಶ್ರೀರಂಗಪಟ್ಟಣದಲ್ಲಿಯೇ ಇಟ್ಟುಕೊಂಡನು.

ರೋಗಿಷ್ಟನಾದ ಚಿಕ್ಕವೀರಪ್ಪನು 1766ರಲ್ಲಿ ಪುತ್ರ ಸಂತಾನವಿಲ್ಲದೆ ಮೃತಪಟ್ಟನು.

ಮುದ್ದುರಾಜ ಮತ್ತು ಮುದ್ದಯ್ಯರಾಜ

ಹಾಲೇರಿಯಲ್ಲಿ ಅಪ್ಪಾಜಿಯ ಮಗ ಮುದ್ದುರಾಜನು ಮತ್ತು ಹೊರಮಲೆಯಲ್ಲಿದ್ದ ನಂದರಾಜನ ಮಗ ಮುದ್ದೈಯ್ಯರಾಜನು ಅನ್ಯೋನ್ಯವಾಗಿ ಜೊತೆಯಲ್ಲಿ ಕೊಡಗಿನ ರಾಜ್ಯಭಾರವನ್ನು ವಹಿಸಿದರು.

ಇವರು ಪಟ್ಟಕ್ಕೆ ಬಂದ ಮೇಲೆ ಹೈದರಾಲಿಯನ್ನು ಉಚ್ಚಂಗಿಯನ್ನು ಬಿಟ್ಟುಕೊಡೆಂದು ಕೇಳಿದಲ್ಲಿ, ಮೊದಲು ಒಪ್ಪಂದ ಮಾಡಿದ ಚಿಕ್ಕ ವೀರಪ್ಪನು ಸತ್ತು ಹೋದುದರಿಂದ ಪೂರ

ಹಣಕೊಟ್ಟು ವಿನಹ ಬಿಟ್ಟುಕೊಡುವುದಿಲ್ಲವಾಗಿ ಧಿಕ್ಕರಿಸಿದ್ದರಿಂದ ಎರಡು ಕಡೆಯವರೂ ಯುದ್ಧಕ್ಕೆ ಸಿದ್ಧರಾದರು.

ಮುದ್ದುರಾಜನ ತಮ್ಮ ಲಿಂಗರಾಜನಿಗೂ ಫರ್‌ಜುಲ್ಲಾಖಾನನಿಗೂ ಏಳು ಸಾವಿರ ಸೀಮೆಯ ಬಳಿ ಯುದ್ಧವಾಗಿ ಫರ್‌ಜುಲ್ಲಾಖಾನನು ಸೋತು, ಬಿಸಿಲೆಘಟ್ಟದ ಮಾರ್ಗವಾಗಿ ಓಡಿಹೋಗುತ್ತಿರುವಾಗ ಅವನನ್ನು ಅಡ್ಡಗಟ್ಟಿ, ಅವನ ಅರ್ಧ ಸೈನ್ಯವನ್ನು ಕೊಂದು ಅವನ ಸಾಮಾನು ಸರಂಜಾಮುಗಳನ್ನು ಕೊಡಗರು ಕಿತ್ತುಕೊಂಡರು.

* ಫರ್‌ಜುಲ್ಲಾಖಾನನು ಸೋತುಹೋದ ವರ್ತಮಾನವನ್ನು ಹೈದರಾಲಿಯು ತಿಳಿದು, ಇಕ್ಕೇರಿ ಸಂಸ್ಥಾನದ ವಳಿತವಾದ ಪಂಜ್ಯೆ ಮತ್ತು ಬೆಳ್ಳಾರೆ ಎಂಬ 2 ಮಾಗಣೆಗಳನ್ನು 1770ರಲ್ಲಿ ಕೊಡಗಿನ ಸಂಸ್ಥಾನಕ್ಕೆ ಬಿಟ್ಟುಕೊಟ್ಟು ಸರ್ವೆಹೊಳೆ ಬಳಿ ತೋರಣವನ್ನು ಕಟ್ಟಿ ರಾಜಿ ಮಾಡಿಕೊಂಡನು.

ಈ ಮಧ್ಯೆ ಚೆರಮಣ್ಣನು ಶ್ರೀರಂಗಪಟ್ಟಣದಲ್ಲಿ ಸಿಡುಬಿನಿಂದ ಸತ್ತುಹೋದನು.

1770ರಲ್ಲಿ ಮುದ್ದುರಾಜ ಮತ್ತು ಮುದ್ದೈಯ್ಯರಾಜ ಸಹ ತೀರಿಹೋದರು.

ದೇವಪ್ಪರಾಜ

ಮುದ್ದುರಾಜ ಮತ್ತು ಮುದ್ದೈಯ್ಯರಾಜ ಸಹ ಸತ್ತುಹೋದ ಮೇಲೆ, ಹಾಲೇರಿ ಯವರಿಗೂ ಹೊರಮಲೆಯವರಿಗೂ ಕೊಡಗು ಸಂಸ್ಥಾನದ ಪಟ್ಟಕ್ಕಾಗಿ ಜಗಳವಾಗಿ ಹೊರಮಲೆಯವರ ಬಲ ಹೆಚ್ಚಾದುದರಿಂದ, ಮುದ್ದೈಯ್ಯರಾಜನ ಮಗ ಮಲ್ಲೈಯ್ಯನು ತನ್ನ ಮಗ ದೇವಪ್ಪರಾಜನಿಗೆ ಮಡಿಕೇರಿಯಲ್ಲಿ ಪಟ್ಟಕಟ್ಟಿದನು.

ಹಾಲೇರಿಯವನಾದ ಲಿಂಗರಾಜನು, ತನ್ನ ಮಗ ದೊಡ್ಡ ವೀರರಾಜೇಂದ್ರ, ಅಣ್ಣನ ಮಗ ಅಪ್ಪಾಜಿರಾಜ ಅವನ ಮಕ್ಕಳು ಸಮೇತ ಹೈದರಾಲಿಯ ಮರೆಬಿದ್ದನು. ಕೊಡಗು ದೇಶವನ್ನು ತನ್ನ ಕೈವಶ ಮಾಡಲು ಒಳ್ಳೇ ಸಮಯ ಒದಗಿತೆಂದು ಹೈದರಾಲಿಯು ಸಂತೋಷಪಟ್ಟನು.

ಈ ಸಮಯದಲ್ಲಿ ಮಹಾರಾಷ್ಟ್ರನಾದ ತ್ರಿಯಂಬಕ ಮಾಮನು ಮೈಸೂರು ಸಂಸ್ಥಾನದ ಮೇಲೆ ಬಿದ್ದು ಹೈದರನನ್ನು ಸೋಲಿಸಿ, ಮೈಸೂರು ದೇಶವೆಲ್ಲವನ್ನು ಲೂಟಿ ಮಾಡುತ್ತಿದ್ದುದರಿಂದ ಹೈದರಾಲಿಯು ಹೇರಳ ದ್ರವ್ಯವನ್ನು ಕೊಟ್ಟು ತ್ರಿಯಂಬಕ ಮಾಮನನ್ನು ರಾಜಿ ಮಾಡಿಕೊಂಡನು. ಆದರೂಈ ಮಹಾರಾಷ್ಟ್ರದ ಹಾವಳಿಯಿಂದ ಮೈಸೂರು ದೇಶದಲ್ಲಿ ಬರಗಾಲವು ತಲೆದೋರಿತು.

ಕೊಡಗಿನಲ್ಲಿ ಹೆಚ್ಚಾದ ದವಸ ಧಾನ್ಯ ಸಿಕ್ಕುವುದೆಂದು ಲಿಂಗರಾಜನು ಹೈದರಾಲಿ ಯನ್ನು ಪ್ರೋತ್ಸಾಹಗೊಳಿಸಿದ್ದರಿಂದ ಇವನು 1773ರಲ್ಲಿ ಅರಕಲಗೋಡು ಕಡೆಯಿಂದ ಬೆಟ್ಟ ಕಣಿವೆ ಮಾರ್ಗವಾಗಿ ಕೊಡಗಿಗೆ ನುಗ್ಗಿದನು. ಆದರೆ ಎಡವನಾಡು ಬಳಿ ಕೊಡಗರು ಇವನ ಮೇಲೆ ಬಿದ್ದುದರಿಂದ ತುರುಕರು ಬಹಳ ಪೆಟ್ಟಾಗಿ ಓಡಿಹೋದರು. ಹೈದರಾಲಿಯು ಲಿಂಗರಾಜನಿಗೆ ಈ ಸಂಗತಿಯನ್ನು ತಿಳಿಸಲು, ಲಿಂಗರಾಜನು ಚಿಂತೆಪಟ್ಟು, ಹೈದರಾಲಿಯ ದಂಡು ಬಂದರೆ ಅವರೊಡನೆ ಯುದ್ಧ ಮಾಡ ಬಾರದಾಗಿ ತನಗೆ ಆಪ್ತರಾದ ಕೊಡಗರನ್ನು ಕೇಳಿಕೊಂಡಿದ್ದರಿಂದ ಅದಕ್ಕೆ ಅವರು ಸಮ್ಮತಿಸಿ ಬಾಳೆಲೆ ಮಾರ್ಗವಾಗಿ ಕೊಡಗಿಗೆ ನುಗ್ಗಲು ಕೊಡಗರು ಇವನೊಡನೆ

*** ಹೈದರನು ಮಂಗಳೂರಿನಿಂದ ಸುಬ್ರಹ್ಮಣ್ಯದಾರಿಗಾಗಿ ಮೈಸೂರಿಗೆ ಹೋಗುವಾಗ ಕೊಡಗು ಅರಸರು ತನಗೆ ಸಹಾಯ ಮಾಡಿದ್ದಕ್ಕಾಗಿ ಘಟ್ಟದ ಮೇಲಿನ ಉಚ್ಚಂಗಿಯ ಬದಲಾಗಿ ಪಂಚ್ಯೆ ಬೆಳ್ಳಾರೆ ಮಾಗಣೆಗಳನ್ನು ಬಿಟ್ಟುಕೊಟ್ಟನು. (ಹೈದರನ ಬರವಣಿಗೆಯಂತೆ)**

ಯುದ್ಧ ಮಾಡದೆ ಒಳಕ್ಕೆ ಬಿಟ್ಟರು.

ರಾಜನು ಈ ಮೋಸವನ್ನು ತಿಳಿದು ಮಲಯಾಳಕ್ಕೆ ಓಡಿ ಹೋಗಿ ಕೋಟಂಗಡಿ ಅರಸನ ಮರೆಬಿದ್ದನು. ಆದರೆ ತನ್ನ ಕಾರಣವನಾದ ವೀರವರ್ಮನನ್ನು ದೊಡ್ಡ ವೀರಪ್ಪನು ತೋಮರದಲ್ಲಿ ಕೊಂದು ಹಾಕಿದ್ದರಿಂದ ತಲೆಗೆ ತಲೆಯಾಗಲೀ ಬೆಲೆಯಾಗಲೀ ಕೊಡಬೇಕಾಗಿ ಕೋಟಂಗಡಿ ಅರಸು ದೇವಪ್ಪ ರಾಜನನ್ನು ಕೇಳಿದಲ್ಲಿ ತನ್ನ ಕೈಯಲ್ಲಿದ್ದ 40 ಸಾವಿರ ಹಣವನ್ನು ಕೊಟ್ಟು ತನ್ನ ವೇಷವನ್ನು ಬದಲಾಯಿಸಿ, ಬರೀ ನಾಲ್ಕು ಜನರನ್ನು ಮಾತ್ರ ಕರೆದುಕೊಂಡು ಮಹಾರಾಷ್ಟ್ರಕ್ಕೆ ಓಡಿಹೋಗುತ್ತಿದ್ದಾಗ ಹರಿಹರದಲ್ಲಿ ಹೈದರಾಲಿಯ ಕಡೆಯವರ ಕೈಗೆ ಸಿಕ್ಕಿ ಅವರು ಇವನನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಅಲ್ಲಿ ಹೈದರಾಲಿಯು ಇವನನ್ನೂ ಸೆರೆಯಲ್ಲಿಟ್ಟಿದ್ದ ಇವನ ಹೆಂಡತಿ ಮಕ್ಕಳನ್ನೂ ಕೊಂದು ಹಾಕಿಬಿಟ್ಟನು.

ಲಿಂಗರಾಜ

ಹೈದರಾಲಿಯ ಸಹಾಯದಿಂದ ಲಿಂಗರಾಜನು 1774ರಲ್ಲಿ ಕೊಡಗಿನ ಪಟ್ಟಕ್ಕೆ ಬಂದನು. ತನ್ನ ಸೈನ್ಯವು ಕೊಡಗಿಗೆ ಎರಡಾವರ್ತಿ ಬಂದು ಹೆಚ್ಚಾದ ನಷ್ಟವಾದುದರಿಂದ ಸೈನ್ಯಕ್ಕೆ ತಗಲಿದ ಖರ್ಚನ್ನು ಕೊಡಬೇಕೆಂದು ಹೈದರಾಲಿಯು ಲಿಂಗರಾಜನನ್ನು ಕೇಳಿದನು. ಖಜಾನೆಯಲ್ಲಿದ್ದ ಹಣವಿಲ್ಲದ್ದರಿಂದ ಸದ್ಯಕ್ಕೆ ಏನೊಂದೂ ಕೊಡಲಾಗುವುದಿಲ್ಲವಾಗಿಯೂ, ಪೂರ್ವದಲ್ಲಿ ಕೊಡಗು ಸಂಸ್ಥಾನಕ್ಕೆ ಬಯನಾಡು (ವಯನಾಡು) ಕಲ್ಪಾತಿವರೆಗೆ ಸೇರಿದ್ದುದರಿಂದ ಅಲ್ಲಿಯವರೆಗೆ ಕೋಟಂಗಡಿ ಅರಸನಿಂದ ಬಿಡಿಸಿಕೊಟ್ಟರೆ ವರುಷ ಒಂದಕ್ಕೆ 24 ಸಾವಿರ ರೂಪಾಯಿ ಕೊಡಬಹುದಾಗಿಯೂ ಹೇಳಿದನು.

ಇದಕ್ಕೆ ಹೈದರಾಲಿಯು ಸಮ್ಮತಿಸಿ ಈ ಅಭಿಪ್ರಾಯದ ಪೂರ್ವಾಪರವನ್ನು ವಿಚಾರಿಸಿ, ಕಲ್ಪಾತಿ ಪರಿಯಂತರ ಕೊಡಗಿಗೆ ಸೇರಿದ್ದದ್ದು ನಿಜವೆಂದು ತಿಳಿದುಬಂದುದರಿಂದ ಅಲ್ಲಿ ಕೊಡಗರ ಠಾಣ್ಯವನ್ನು ಹೊಡೆದುಕೊಳ್ಳಬಹುದಾಗಿ ತೀರ್ಮಾನ ಮಾಡಿದನು. ಇದಕ್ಕೆ ಬದಲಾಗಿ 40 ವರ್ಷಕ್ಕೆ ಹಿಂದೆ ಇಕ್ಕೇರಿ ಸೋಮಶೇಖರ ನಾಯಕನು ದೊಡ್ಡ ವೀರಪ್ಪನಿಗೆ ಬಿಟ್ಟುಕೊಟ್ಟಿದ್ದ ಅಮರ ಮತ್ತು ಸುಳ್ಯ ಮಾಗಣೆಗಳನ್ನೂ 1770ರಲ್ಲಿ ಸಿಕ್ಕಿದ ಪಂಚೆ ಬೆಳ್ಳಾರೆ ಮಾಗಣೆಗಳನ್ನೂ ಲಿಂಗರಾಜು ಹೈದರನಿಗೆ ಬಿಟ್ಟುಕೊಟ್ಟನು.

ಲಿಂಗರಾಜನು 3 ಸಾವಿರ ಕೊಡಗರೊಡನೆ ಅಲ್ಲಿಗೆ ಹೋಗಿ ಕಲ್ಪಾತಿ ಸರಹದ್ದಿನಲ್ಲಿ ಲಕ್ಕಡಿ ಕೋಟೆಯನ್ನು ಕಟ್ಟಿಸಿ, ಆ ಕೋಟೆಯ ಖಿಲ್ಲೆದಾರಿಕೆಯನ್ನು ಎಡೆನಾಲ್ಕು ನಾಡು ಮಂಜುಡ ಅಪ್ಪೈಯ್ಯನಿಗೆ ಕೊಟ್ಟು 2 ಸಾವಿರ ಮಂದಿ ಕೊಡಗರನ್ನು ಅಲ್ಲಿ ಗಡಿ ಬಂದೋಬಸ್ತಿಗೆ ಬಿಟ್ಟು ಅವರಿಗೆ ಮುಖ್ಯಸ್ಥನಾಗಿ ಕಗ್ಗೋಡುನಾಡು ಅಣ್ಣಪ್ಪನ ಅಪ್ಪೈಯ್ಯನೆಂಬ ಸರದಾರನನ್ನು ನೇಮಿಸಿ ಅಲ್ಲಿ ಒಂದು ವರುಷವಿದ್ದು 1 ಸಾವಿರ ಮಂದಿ ಸಮೇತ ಹಿಂತಿರುಗಿ ಬಂದನು.

ಕಲ್ಪಾತಿಗೆ ಹೋಗುವ ಮೊದಲು ಲಿಂಗರಾಜನು ತನ್ನ ಅಣ್ಣನ ಮಗ ಅಪ್ಪಾಜಿಗೆ ಪಟ್ಟವನ್ನು ಕಟ್ಟಿದನು. ಇವನು 1775ರಲ್ಲಿ ಮೃತಪಟ್ಟಿದ್ದರಿಂದ ಲಿಂಗರಾಜನು ಪುನಹ ರಾಜ್ಯಾಭಾರವನ್ನು ತಾನೇ ವಹಿಸಿಕೊಂಡನು.

ಕಲ್ಪಾತಿಯಲ್ಲಿ ಕೊಡಗು ಜನರು 5 ವರುಷದವರೆಗೆ ಇದ್ದರು. ಇವರಿಗೆ ಮಲಯಾಳದಿಂದ ಸಾಮಾನು ಬರುವ ದಾರಿಯನ್ನ ಕೋಟಂಗಡಿ ಅರಸು ಕಟ್ಟಿಬಿಟ್ಟಿದ್ದರಿಂದ ತಮ್ಮ ಹತ್ತಿರ ಇದ್ದ ಸಾಮಾನುಗಳು ತೀರಿಹೋದವಾಗಿ ಇಬ್ಬರು ಕೊಡಗು ಸರದಾರರು ಬಂದು ರಾಜನಿಗೆ

ತಿಳಿಸಿದರು. ಕೂಡಲೇ ರಾಜನು ಮೃತಪಟ್ಟ ಅಪ್ಪಾಜಿರಾಜನ ಇಬ್ಬರು ಮಕ್ಕಳನ್ನು 2 ಸಾವಿರ ಕೊಡಗರೊಡನೆ ಅಲ್ಲಿಗೆ ಕಳುಹಿಸಿದನು. ಆದರೆ ಇವರು ಹೋಗುವ ದಾರಿಯಲ್ಲಿ ಕೋಟಂಗಡಿ ಅರಸನ ಸೈನ್ಯವು ಅವುತಿದ್ದು, ರಾತ್ರಿ ಇವರ ಮೇಲೆ ಬಿದ್ದು ಕೊಡಗು ಜನರನ್ನೆಲ್ಲಾ ಕೊಂದು, ಒಬ್ಬ ರಾಜಕುಮಾರನನ್ನು ಕಡಿದುಹಾಕಿ ಇನ್ನೊಬ್ಬನನ್ನು ಕದನೂರುಕೂಲಾ ಎಂಬಲ್ಲಿ ಸೆರೆಹಾಕಿ ಕೊಂದುಬಿಟ್ಟನು.

1780ರಲ್ಲಿ ಲಿಂಗರಾಜನು ಮಹದೇವಪುರ (ಮಾದಾಪುರ)ದಲ್ಲಿ ಮೃತಪಟ್ಟನು.

ನವಾಬ್ ಹೈದರಾಲಿಖಾನ್ ಬಹದೂರ್

ಲಿಂಗರಾಜನು ಸತ್ತ ಮೇಲೆ ಹೈದರಾಲಿಗೆ ಒಳ್ಳೆ ಒಂದು ನೆವನ ಸಿಕ್ಕಿ ಉಳಿದ ದೊರೆ ಮಕ್ಕಳು ಚಿಕ್ಕವರೆಂದು ಕೊಡಗಿನ ಆಡಳತೆಯನ್ನು ತಾನೇ ವಹಿಸಿಕೊಂಡನು.

1782ರಲ್ಲಿ ಹೈದರಾಲಿಯು ಇಂಗ್ಲೀಷರ ಮೇಲೆ ಯುದ್ಧಕ್ಕಾಗಿ ಆರ್ಕಾಡಿಗೆ ಹೋಗುವಾಗ ಕೊಡಗಿನ ಅಮಲನ್ನು ಕೊಡಗಿನ ಕರಣೀಕರನಾಗಿದ್ದ ಸುಬ್ಬರಸೈಯ್ಯನೆಂಬ ಬ್ರಾಹ್ಮಣನಿಗೆ ಕೊಟ್ಟು ಹೋದನು. ಆದರೆ ಕೊಡಗರು ಬ್ರಾಹ್ಮಣನ ಕೈಕೆಳಗೆ ಇರಲು ಇಷ್ಟಪಡದೆ ದಂಗೆ ಎದ್ದರು. ಸುಬ್ಬರಸೈಯ್ಯನು ಈ ಸಮಾಚಾರವನ್ನು ಹೈದರಾಲಿಗೆ ತಿಳಿಸಲು ದೊರೆಮಕ್ಕಳನ್ನು ಮೈಸೂರು ದೇಶದ ದುರ್ಗದ ತಾಲೋಕು ಗೋರೂರಿನಲ್ಲಿಡುವ ಹಾಗೆ ಅಪ್ಪಣೆ ಮಾಡಿದನು. ಅದೇ ರೀತಿ ಸುಬ್ಬರಸೈಯ್ಯನು ದೊರೆ ಮಕ್ಕಳನ್ನು ಗೋರೂರಿನಲ್ಲಿರಿಸಿದನು.

ಈ ಸಂಗತಿಯನ್ನು ತಿಳಿದು ಕೊಡಗರು ಪುನಹ ದಂಗೆ ಎದ್ದು ತುರುಕರ ಸೈನ್ಯವೆಲ್ಲವನ್ನು ಹೊಡೆದು ಓಡಿಸಿಬಿಟ್ಟರು.

ಪ್ರಜಾಧಿಪತ್ಯ

ಆಮೇಲೆ ರೈತರೇ ರಾಜ್ಯವನ್ನು ಆಳುವುದಕ್ಕೆ ಏರ್ಪಡಿಸಿದರು.

1782ರಲ್ಲಿ ಹೈದರಾಲಿಯು ಆರ್ಕಾಡಿನಲ್ಲಿ ಮೃತಪಟ್ಟನು. ಹೈದರಾಲಿಯು ಸತ್ತನಂತರ ಟಿಪ್ಪುಸುಲ್ತಾನನು ಕೊಡಗಿನ ರಾಜಕುಮಾರನ್ನು ಕುಟುಂಬ ಸಮೇತ ಗೋರೂರಿನ ಪೆರ್ಯಾಪಟ್ಟಣಕ್ಕೆ ಕಳುಹಿಸಿ ಅಲ್ಲಿ ಕೈದಿಯಲ್ಲಿಟ್ಟನು. ಇವರಲ್ಲಿ ಅನೇಕರು ಸಿಡುಬಿನಿಂದಲೂ ಸರಿಯಾದ ಅನ್ನಪಾನ ಇಲ್ಲದೆಯೂ ಮೃತಪಟ್ಟುಹೋದರು.

ಟಿಪ್ಪು ಸುಲ್ತಾನ್

1784ರಲ್ಲಿ ಟಿಪ್ಪುಗೆ ಕೊಡಗಿಗೆ ಬಂದು ಶರಾರತು ಮಾಡಿದ ಕೊಡಗರಿಗೆ ನಂಬಿಕೆ ಭರವಸೆಕೊಟ್ಟು, ಕೊಡಗರೊಡನೆ ಒಪ್ಪಂದ ಮಾಡಿ ಶ್ರೀರಂಗಪಟ್ಟಣಕ್ಕೆ ಹೊರಟು ಹೋದನು.

1785ರಲ್ಲಿ ಕೊಡಗರು ಪುನಹ ದಂಗೆ ಎದ್ದರು. ಇದನ್ನು ನಿಲ್ಲಿಸುವುದಕ್ಕಾಗಿ ಜೈನುಲಾಬುದ್ದೀನ್ ಸೂಸ್ತ್ರಿ ಎಂಬುವವನನ್ನು 15 ಸಾವಿರ ಪವುಜಿನೊಡನೆ ಕೊಡಗಿಗೆ ಕಳುಹಿಸಿದನು. ಅವನು ಒಂದು ಉಲುಗುಲಿ ಸಂತೆಮಾಳದಲ್ಲಿಳಿದು ಕೊಂಡನು. ನಾಲ್ಕೈದು ಸಾವಿರ ಕೊಡಗರು ಅವನ ಸೈನ್ಯವನ್ನು ಮುತ್ತಿಕೊಂಡು ಬಹಳ ತುರುಕರನ್ನು ಕೊಂದು ಹಾಕಿದರು. ತುರುಕರು ಸಾಮಾನು ಸರಂಜಾಮು ಗಳನ್ನು ಬಿಟ್ಟು ಓಡಿ ಹೋಗಿ ಬೆಟ್ಟದಪುರದಲ್ಲಿ ಇಳಿದುಕೊಂಡರು.

ಈ ವರ್ತಮಾನವು ಟಿಪ್ಪುವಿಗೆ ಮುಟ್ಟಿ ತಾನೇ ಖುದ್ದು ಸೈನ್ಯವನ್ನು ತೆಗೆದುಕೊಂಡು ಬಂದು ಅದೇ ಉಲುಗಲಿ ಸಂತೆಮಾಳದಲ್ಲಿಳಿದುಕೊಂಡು ಅಲ್ಲಿದ್ದ ಕೊಡಗರಿಗೆ ನಂಬಿಕೆ ಭಾಷೆಯನ್ನಿತ್ತು ಅಲ್ಲಿಂದ ಮಡಿಕೇರಿಗೆ ಬಂದು ಅದೇ ಮೇರೆ ಮೋಸಪಡಿಸಿ, ಅಲ್ಲಿಂದ ಭಾಗಮಂಡಲಕ್ಕೆ ಹೋಗಿ ದೇವಟು ಪರಂಬಿನಲ್ಲಿಳಿದುಕೊಂಡು ಕೊಡಗರನ್ನೆಲ್ಲ ತನ್ನ ಹತ್ತಿರ ಕರೆದುಕೊಂಡು ಪಹರೆ ಭದ್ರಿಕೆಯಲ್ಲಿಟ್ಟು ಕೊಡಗು ಜನರ ಕುಟುಂಬ ಮಕ್ಕಳನ್ನೆಲ್ಲ ಬೇಟೆಯಾಡಿ ಒಂದು ಲಕ್ಷ ಹನ್ನೊಂದು ಸಾವಿರ ಜನರನ್ನು ಶ್ರೀರಂಗಪಟ್ಟಣಕ್ಕೆ ಹಿಡಿದುಕೊಂಡು ಹೋಗಿ ಬಲಾತ್ಕಾರದಿಂದ ಜಾತಿ ಕೆಡಿಸಿ ಮಹಮ್ಮದೀಯ ಮತಕ್ಕೆ ಸೇರಿಸಿದನು.

ಇದರ ಮೇಲೆ ಟಿಪ್ಪುವು ಕೊಡಗು ಜನರ ಭೂಮಿ ಮನೆಗಳನ್ನು ಮುಸಲ್ಮಾನರಿಗೆ ಜಹಗೀರಾಗಿ ಕೊಟ್ಟು ಈ ರೀತಿಯಾಗಿ ಇಸ್ತಿಹಾರನ್ನು ಬಹಿರಂಗಪಡಿಸಿದನು.

"ಈ ದೇಶವನ್ನು ನಿಮಗೆ ಜಹಗೀರಾಗಿ ಕೊಡಲ್ಪಟ್ಟಿದೆ. ಇದನ್ನು ವೃದ್ಧಿಪಡಿಸಿಕೊಂಡು ಸುಖವಾಗಿರತಕ್ಕದ್ದು. ಅಲ್ಲದೆ ಈ ದೇಶದಲ್ಲಿರುವ ಪರ್ವತ ನಿವಾಸಿಗಳನ್ನು ನಿರ್ಮೂಲ ಪಡಿಸಬೇಕೆಂದು ನಮ್ಮ ರಾಜಾಜ್ಞೆಯಾಗಿರುವುದರಿಂದ ನಮ್ಮ ದೃಷ್ಟಿಯಿಂದ ತಪ್ಪಿ ಹೋಗಿ ರುವವರನ್ನು ಹುಡುಕಿ ಹಿಡಿದು ಕೊಲ್ಲುವುದು ನಿಮಗೆ ದೊಡ್ಡ ಬಹುಮಾನವಾದ ಕೆಲಸವೆಂದು ತಿಳಿದಿರತಕ್ಕದ್ದು. ಅವರ ಕುಟುಂಬ ಮಕ್ಕಳೆಲ್ಲವೂ ನಿಮಗೆ ಗುಲಾಮರಾಗಿರತಕ್ಕದ್ದು."

ಮುಸಲ್ಮಾನರಿಂದ ಸಾಗುಮಾಡಲಿಕ್ಕೆ ತೀರದ ಭುಮಿಯನ್ನು ಸಾಗು ಮಾಡುವುದಕ್ಕಾಗಿ ಟಿಪ್ಪುವು ಬಳ್ಳಾರಿ ಡಿಸ್ಟ್ರಿಕ್ಟ್ ಅದವಾನಿಯಿಂದ ಜನರನ್ನು ತಂದು ರೈತಾವಿಗೆ ನೆಲೆಗೊಳಿಸತಕ್ಕ ಬಗ್ಯೆ ಅವರಿಗೆ ಬೇಕಾದುದ್ದನ್ನು ಕೊಡಲು ಕರಣೀಕ ಸುಬ್ಬರಸೈಯ್ಯನ ತಮ್ಮ ನಾಗಪ್ಪೈಯ್ಯನನ್ನು ನೇಮಕ ಮಾಡಿದನು.

ಈ ನಾಗಪ್ಪೈಯ್ಯನು ರೈತರಿಗೆ ಕೊಡಬೇಕಾದ ಹಣವನ್ನು ತಾನು ತಿಂದು ಅವರಿಂದ ಲಂಚ ತೆಗೆದುಕೊಂಡು ಕೆಲವರನ್ನು ಆದವಾನಿಗೆ ಬಿಟ್ಟ ವರ್ತಮಾನ ವನ್ನು ಟಿಪ್ಪುವು ತಿಳಿದು ನಾಗಪ್ಪೈಯ್ಯನನ್ನು ತೂಗುಹಾಕಲು ಅಪ್ಪಣೆ ಕೊಟ್ಟನು. ಇದನ್ನು ನಾಗಪ್ಪೈಯ್ಯನು ತಿಳಿದು ಓಡಿಹೋಗಿ ಕೋಟಂಗಡಿ ಅರಸನ ಮರೆ ಬಿದ್ದುದರಿಂದ ಅವನ ಐವತ್ತು ಜನ ನಾಯಮ್ಮಾರರನ್ನು ಪೈಯೋಟು ಚಂದು ಎಂಬುವವನ ಕೈಕೆಳಗೆ ಇವನ ಜೊತೆಯಲ್ಲಿ ಕಳುಹಿಸಿಕೊಡಲು ಅವರು ಕೊಡಗಿಗೆ ಬಂದು ಕಾಡಲ್ಲಿ ಸೇರಿದ್ದ ಕೊಡಗರನ್ನೂ ಪನ್ಯದ ಹೊಲೆಯರನ್ನೂ ಅಂತು 100 ಜನರನ್ನು ಜಮಾಯಿಸಿಕೊಂಡು ಆದವಾನಿಯಿಂದ ಬಂದ ರೈತರ ಮನೆಮಠಗಳನ್ನು ಲೂಟಿ ಮಾಡಿಕೊಂಡಿದ್ದರು.

ಈ ಸಮಾಚಾರವನ್ನು ಪೆರ್ಯಾಪಟ್ಟಣದಲ್ಲಿ ಸೆರೆಯಲ್ಲಿದ್ದ ತಮ್ಮ ರಾಜಕುಮಾರನಾದ ವೀರ ರಾಜೇಂದ್ರನಿಗೆ ಕೊಡಗರು ತಿಳಿಸಲು ರಾಜನು 1788ರಲ್ಲಿ ತನ್ನ ಕುಟುಂಬ ಮಕ್ಕಳು ಸಮೇತ ಅಲ್ಲಿಂದ ತಪ್ಪಿಸಿಕೊಂಡು ತಾವಳಗೇರಿ ಮೂರ್ನಾಡು ಕುರ್ಚಿ ಗ್ರಾಮದಲ್ಲಿ ಬಂದು ಇಳಿದುಕೊಂಡನು.

(ದೊಡ್ಡ) ವೀರರಾಜೇಂದ್ರ ಒಡೆಯ

ವೀರರಾಜನು ಕೊಡಗಿಗೆ ಬಂದ ವರ್ತಮಾನವನ್ನು ನಾಗಪ್ಪೈಯ್ಯನು ಕೋಟಂಗಡಿ ಅರಸನಿಗೆ ತಿಳಿಸಲು, ಪೂರ್ವದಿಂದಲೇ ಕೋಟಂಗಡಿ ಅರಸುಗಳಿಗೆ ಕೊಡಗಿನ ಅರಸುಗಳ ಮೇಲೆ ಇದ್ದ ಹಗೆಯನ್ನು ತೀರಿಸುವುದಕ್ಕೆ ಇದೇ ಸಮಯ ವೆಂದು ವೀರರಾಜನನ್ನು ತನ್ನ ಸಮೀಪಕ್ಕೆ ಉಪಾಯದಿಂದ ಕರೆತರುವ ಹಾಗೆ ಅಪ್ಪಣೆಯನ್ನಿತ್ತರು. ಅದೇ ಮೇರೆ ನೀಚ

ನಾಗಪ್ಪೈಯ್ಯನು ವೀರರಾಜನನ್ನು ಕರೆದುಕೊಂಡು ಹೋಗಿ ಆರಳ ಎಂಬ ಗ್ರಾಮದಲ್ಲಿ ಬಿಟ್ಟು ರಾಜನ ಸುತ್ತಲೂ ಆಯುಧಪಾಣಿಗಳಾದ ನಾಯಮ್ಮಾರರನ್ನು ಪಹರೆ ಇಟ್ಟನು.

ಕೋಟಂಗಡಿ ಅರಸು ರಾಜನನ್ನು ಕಾಣಿಸಿಕೊಳ್ಳದೆ 20 ದಿವಸ ಸತಾಯಿಸಿ, ಕೊನೆಗೆ ವೀರ ವರ್ಮನನ್ನು ದೊಡ್ಡ ವೀರಪ್ಪನು ಕೊಂದದ್ದರಿಂದ ತಲೆಗೆ ತಲೆ ಕೊಡಬೇಕಾಗಿ ಹೇಳಿ ಕಳುಹಿಸಿದನು.

ಇದನ್ನು ಕೇಳಿ ರಾಜನು ಅತ್ಯಂತ ಚಿಂತಾಕ್ರಾಂತನಾಗಿದ್ದ ವೇಳೆಯಲ್ಲಿ ನಾಗಪ್ಪೈಯ್ಯನು ಬಂದು ಸಮಾಧಾನ ಹೇಳಿ, ಮಾರನೆ ದಿವಸ ಕೋಟಂಗಡಿ ಅರಸನ ಭೇಟಿಯಾಗುವಂತೆ ಏರ್ಪಡಿಸಿದನು. ಅದೇ ರೀತಿ ಕೋಟಂಗಡಿ ಅರಸನ ಭೇಟಿಗೆ ಹೋಗಿದ್ದಾಗ್ಯೆ ಬರೆದಿದ್ದ ಒಂದು ಕಾಗದಕ್ಕೆ ವೀರರಾಜನಿಂದ ರುಜುವನ್ನು ಹಾಕಿಸಿ ಅನಂತರ ಅದರ ಅಭಿಪ್ರಾಯವನ್ನು ಓದಿ ತಿಳಿಸಿದನು. ಅದೇನೆಂದರೆ :

ಕೀಲಕ ಸಂವತ್ಸರದ ಪುಷ್ಯ ಮಾಸದಲ್ಲು ಪಾಲೆ ವೀರವರ್ಮರಾಜರಿಗೆ.

ಕೊಡಗಿನ ಸಂಸ್ಥಾನದ ಹಾಲೇರಿ ವೀರಪ್ಪ ಒಡೆಯರು ಬರಸಿಕೊಟ್ಟ ಕಾಗದದ ಕ್ರಮವೆಂತೆಂದರೆ :–

"*ಪ್ರಾಕು ನಿಮ್ಮ ಕಾರೋಣವನ್ನು ನಮ್ಮ ಕಾರೋಣವರು ಕೊಂದ ಪಾಪ ಪರಿಹಾರಕ್ಕಾಗಿ ಪೆರುಮಾಳು ಭಗವತಿಗೆ ನಾವು ಬಿಟ್ಟುಕೊಟ್ಟದ್ದು–ಕಿಗ್ಗಟ್ಟು ಹತ್ತುನಾಡು, ಅಮ್ಮತ್ತಿನಾಡು, ಎಡೆನಾಲ್ಕುನಾಡು. ನಿಮ್ಮ ಕಾರಣವರು ಬಿದ್ದು ಹೋದ ತೋಮರದಲ್ಲಿ ಒಂದು ಕೋಟೆಗೆ ಸ್ಥಾನ ಕೊಡುತ್ತೇವೆ. ಈ ದಿವಸ ನಿಮ್ ಕುಡುಪಿ ತೀರಿತು. ಇನ್ನು ಮುಂದೆ ನಿಮಗೂ ನಮಗೂ ಅನ್ಯೋನ್ಯವೇ ಸರಿ."

ಅನಂತರ ರಾಜನನ್ನು ಕೊಡಗಿಗೆ ಕಳುಹಿಸಿಬಿಟ್ಟನು.

ಹತ್ತು ಹದಿನೈದು ದಿವಸಗಳಲ್ಲಿ ಕೋಟಂಗಡಿ ಅರಸು 300 ಜನ ನಾಯಮ್ಮಾರರ ಸಮೇತ ಘಟ್ಟ ಹತ್ತಿ ಮರೆನಾಡಿನಲ್ಲಿಳಿದುಕೊಂಡನು. ಈ ಸಮಾಚಾರವನ್ನು ರಾಜನು ತಿಳಿದು ತನ್ನ ಆಪ್ತರಾದ ಅಪ್ಪನೆರವಂಡ ಅಚ್ಚಯ್ಯ ಪಟ್ಟಚೆರವಂಡ ಬೋಳುಕನಿಗೆ ಸಹ ಹೇಳಿ ಕಳುಹಿಸಲು, ಅವರು ಕಡಿಯತ್ತುನಾಡಿನ ಆಯುಧ ಪಾಣಿಗಳಾದ ಕೊಡಗರನ್ನು ಬರಪೊಳೆಗೆ ಕರೆತರಲು, ಅವರ ಜೊತೆಗೆ ಇನ್ನು ಕೆಲವರನ್ನು ಸಹ ಕೂಡಿಸಿ 500 ಮಂದಿಯನ್ನು ಸರಿಮಾಡಿ ವೀರರಾಜನು ಕೋಟಂಗಡಿ ಅರಸನ ಹತ್ತಿರ ಹೋಗಿ ಕೊಡಗನ್ನು ನುಗ್ಗಿದ ಕಾರಣವನ್ನು ಕೇಳಿದನು. ಅದಕ್ಕೆ ಕೋಟಂಗಡಿ ಅರಸನು ತನಗೆ ಕರಾರು ಮೇಲೆ ಸಿಕ್ಕಿದ ರಾಜ್ಯದ ವಿಚಾರಣೆ ಬಗ್ಗೆ ಬಂದಿರುವುದಾಗಿ ಹೇಳಿದನು. ಅದನ್ನು ಕೇಳಿ ರಾಜನು ತನ್ನನ್ನು ಬಲಾತ್ಕಾರದಿಂದ ರುಜು ಹಾಕಿಸಿಕೊಂಡ ಕರಾರು ನ್ಯಾಯವಾದು ದಲ್ಲವೆಂತಲೂ, ಬಯನಾಡಿನಲ್ಲಿ ಬಿದ್ದ ದೊರೆ ಮಕ್ಕಳ ತಲೆಗಳ ಪೈಕಿ ಒಂದು ತಲೆಗೆ ವೀರವರ್ಮನ ತಲೆಯಾಯಿತೆಂತಲೂ ಇನ್ನೊಂದು ತಲೆಗೆ ಕೋಟಂಗಡಿ ಅರಸನ ತಲೆಯನ್ನು ಕೊಡಬೇಕೆಂತಲೂ ಕೇಳಿದನು.

ಕೋಟಂಗಡಿ ಅರಸನು ತಾನು ಮಾಡಿದ ಅಪರಾಧವನ್ನು ತನ್ನ ಮನಸ್ಸಿನಲ್ಲಿ ತಂದುಕೊಂಡು ಬರೆದುಕೊಟ್ಟ ಕಾಗದ ಕ್ರಮವೆಂತಂದರೆ :–

"ಕೀಲಕ ಸಂವತ್ಸರದ ಮಾಘ ಶುದ್ಧ 5ರಲ್ಲಿ ಶ್ರೀ ಮತ್ತು ಕೊಡಗಿನ ಸಂಸ್ಥಾನದ ಹಾಲೇರಿ ವೀರಪ್ಪ ಒಡೆಯರಿಗೆ,

* ಕವಲು ಕರಾಳುಗಳ ಒಕ್ಕಣೆಯನ್ನು ತಪ್ಪಿಸದೆ ಹೊಸಗನ್ನಡದ ಶಬ್ದಗಳನ್ನು ಉಪಯೋಗಿಸಿದ್ದೇನೆ.

ಪಾಲೆ ವೀರವರ್ಮರಾಜನು ಬರಸಿಕೊಟ್ಟ ಕ್ರಮವೆಂತಂದರೆ:–

ತಮ್ಮ ಸಂಸ್ಥಾನದ ದೊರೆ ಮಕ್ಕಳು ಇಬ್ಬರನ್ನು ನಾವು ಬಯನಾಡಿನಲ್ಲಿ ಕೊಂದು ಹಾಖಿದ್ದಕ್ಕೆ ಈ ಎರಡು ತಲೆಗಳಲ್ಲಿ ಒಬ್ಬ ದೊರೆ ಮಗನ ತಲೆಗೆ ಪ್ರಾಕು ತೋಮರದಲ್ಲಿ ನಮ್ಮ ಕಾರಣವರ ನಿಮ್ಮ ಕಾರಣವರು ಹೊಡೆದ ತಲೆಗೆ ಒಂದ ಕ್ಕೊಂದು ಸಮವಾದದ್ದು ಹೋಗಲಾಗಿ, ಬಾಕಿ ಮತ್ತೊಂದು ನಿಮ್ಮ ಸಂಸ್ಥಾನದ ದೊರೆ ಮಗನ ತಲೆಗೆ ಬಯನಾಡು ಕಲ್ಪಾತಿ ಪರಿಯಂತರ ನಿಮ್ಮದು ನಮ್ಮದು ಎಂಬುದಾಗಿ ನಿಮಗೂ ನಮಗೂ ವಿವಾದ ಬಿದ್ದಿದೆಯಷ್ಟೆ. ಅದಕ್ಕೆ ನಾವು ಇನ್ನು ಮುಂದೆ ವಿವಾದ ಮಾಡುವುದಿಲ್ಲ. ಆ ಕಲ್ಪಾತಿ ಗಡಿ ಪರಿಯಂತರಕ್ಕೂ ನಿಮ್ಮದೇ ಸರಿ. ನಮಗೆ ಸಮ್ಮಂದವಲ್ಲ. ನಾವು ಪಾಲೆಯಲ್ಲಿ ಬರೆಸಿ ನಿಮ್ಮ ಕೈಯ ಗುರುತು ಹಾಕಿಸಿ ತೆಗೆದುಕೊಂಡ ಕಾಗದಕ್ಕೆ ಇನ್ನು ಮುಂದೆ ಕಾರಣವಿಲ್ಲ. ಈ ದಿವಸ ನಮ್ಮ ನಿಮ್ಮ ಉಭಯಸ್ತರ ಕುಡುಪಿಯು ತೀರಿತು. ಇನ್ನು ಮುಂದೆ ನಿಮಗೆ ನಮಗೆ ಅನ್ಯೋನ್ಯವೇ ಸರಿ.”

ಈ ಪ್ರಕಾರ ಬರೆದು ವೀರರಾಜೇಂದ್ರ ಒಡೆಯನ ಕೈಯಲ್ಲಿ ಕೊಟ್ಟು ಅದೇ ರಾತ್ರಿ ಕೋಟೆ ಅರಸು ತನ್ನ ಸೈನ್ಯ ಸಮೇತ ಘಟ್ಟ ಇಳಿದು ಓಡಿಹೋದನು.

ಇದನ್ನು ಮಾರಣೆ ದಿವಸ ರಾಜನು ತಿಳಿದು ಸರಹದ್ದಿನವರೆಗೆ ನೋಡಿ ಬರಲು ಕೆಲವು ಕೊಡಗರನ್ನು ಕಳುಹಿಸಿದನು. ಕೋಟೆ ಅರಸು ಗಡಿ ದಾಟಿ ಬಿಟ್ಟಿದ್ದನು. ಹುಡುಕಲು ಹೋಗಿದ್ದ ಕೊಡಗರ ಕೈಗೆ ನಾಗಪ್ಪೈಯ್ಯನು ಸಿಕ್ಕಿದನು. ಕೊಡಗರು ಅವನನ್ನು ತಂದು ರಾಜನಿಗೆ ಒಪ್ಪಿಸಲು ರಾಜನು ಅವನ ಕಾಲಿಗೆ ಸಂಕೋಲೆಯನ್ನು ಹಾಕಿ ಸೆರೆಯಲ್ಲಿಟ್ಟನು.

ಆಮೇಲೆ ವೀರರಾಜೇಂದ್ರ ಒಡೆಯನು ಕುಟುಂಬ ಮಕ್ಕಳು ಸಹಿತ ನಾಲ್ಕು ನಾಡಿಗೆ ಹೋಗಿ ಕೇಟೋಳಿರ ಮನೆಯಲ್ಲಿ ಉಳಿದುಕೊಂಡನು.

ಅಲ್ಲಿ 10 ದಿವಸದವರೆಗೆ ಇದ್ದು ಅಲ್ಲಿಂದ ಸಿದ್ಧೇಶ್ವರನ ಗದ್ದಿಗೆ ಬಳಿಗೆ ಬಂದು ಅಲ್ಲಿ ವಾಸವಿದ್ದುಕೊಂಡು ಮೈಸೂರು ಕೊಡಗು ಸರಹದ್ದನ್ನು ಬಿಸಿಲೆ ಘಟ್ಟದಿಂದ ಬಯನಾಡುವರೆಗೆ ದುರಸ್ತು ಮಾಡುತ್ತಾ, ಅಲ್ಲಲ್ಲಿ ಕಾಡು ಸೇರಿದ್ದ ಕೊಡಗರನ್ನು ಜಮಾಯಿಸುತ್ತಾ, ಮುಸಲ್ಮಾನರಿಗೆ ಕೊಟ್ಟಿದ್ದ ಕೊಡಗರ ಭೂಮಿ ಮನೆಗಳನ್ನು ಅಲ್ಲಲ್ಲಿ ಕಿತ್ತು ಕೊಡಗರಿಗೆ ಕೊಡುತ್ತಾ, ಆದವಾನಿ ರೈತರನ್ನು ಸೆರೆಬಿಡಿಸುತ್ತಾ ಮೈಸೂರು ದೇಶವನ್ನು ಅಲ್ಲಲ್ಲಿ ಲೂಟಿ ಮಾಡುತ್ತಾ ವೀರರಾಜೇಂದ್ರ ಒಡೆಯನು ಈ ರೀತಿ ಕಾಲಕ್ಷೇಪವನ್ನು ಮಾಡುತ್ತಿದ್ದನು.

ಟಿಪ್ಪುವಿನ ಅಪ್ಪಣೆ ಮೇರೆ ಇದ್ದ ಮುಸಲ್ಮಾನರು ವೀರರಾಜನ ಹಾವಳಿಯನ್ನು ತಡಿಯಲಾರದೆ ಈ ಸಮಾಚಾರವನ್ನೆಲ್ಲ ಟಿಪ್ಪುವಿಗೆ ತಿಳಿಸಲು ಅವನು ಗುಲಾಮಲ್ಲಿ ಭಕ್ಷಿ ಎಂಬವನ ಕೈಕೆಳಗೆ ಕೊಡಗಿಗೆ ಭಾರಿ ದಂಡನ್ನು ಕಳುಹಿಸಿದನು. ಇವನೊಡನೆ ವೀರರಾಜೇಂದ್ರ ಒಡೆಯನು ಸಿದ್ಧೇಶ್ವರನ ಗದ್ದಿಗೆ ಬಳಿ ಯುದ್ದಮಾಡಿ ಮದ್ದು ಗುಂಡು ಇಲ್ಲದ್ದರಿಂದ ಕೊಡಗರು ಹಿಮ್ಮೆಟ್ಟಲು, ಗುಲಾಮಲ್ಲಿಯು ಕೊಡಗು ದೇಶದ ಒಳನುಗ್ಗಿ ಕಾಡು ಸೇರಿದ್ದ ಕೊಡಗರ ಕುಟುಂಬ ಮಕ್ಕಳನ್ನು ಹಿಡಿಯುತ್ತಿದ್ದನು. ಇವನ ಸಹಾಯಕ್ಕೆ ಚರಕಲರಾಜನು ಕೆಲವು ನಾಯಮ್ಮಾರರನ್ನು ಕಳುಹಿಸಿಕೊಟ್ಟನು. ಈ ನಾಯಮ್ಮಾರರ ದಂಡು ಬಂದು ನಾಲ್ಕು ನಾಡು ಯವ್ವಕಪಾಡಿಯಲ್ಲಿ ಕೊಡಗರೊಡನೆ ಯುದ್ಧಕ್ಕೆ ನಿಂತು ಕೊಡಗರ ಪೆಟ್ಟು ತಾಳಲಾರದೆ ದೇವಸ್ಥಾನಕ್ಕೆ ಬೆಂಕಿ ಕೊಟ್ಟು ಮಲಯಾಳಕ್ಕೆ ಓಡಿ ಹೋದರು.

ಗುಲಾಮಲ್ಲಿಯು ತನ್ನ ಸೈನ್ಯವೆಲ್ಲವನ್ನು ಒಟ್ಟುಗೂಡಿಸಿಕೊಂಡು ಮೇಲೆ ಒತ್ತಿನ ನಾಡುಗಳಲ್ಲಿ ಕೊಡಗರೊಡನೆ ಯುದ್ಧಮಾಡಿ ತನ್ನ ಕಡೆ ಹೆಚ್ಚಾದ ಜನರು ನಷ್ಟವಾದುದರಿಂದ ಮೈದಾನ ನಾಡುಗಳಲ್ಲಿ ಲೂಟಿ ಮಾಡುತ್ತಾ ಇದ್ದನು.

ಕೊಡಗಿನಲ್ಲಿ ಆಗುವ ಸಮಾಚಾರವನ್ನು ಟಿಪ್ಪುವಿನ ಆಡಳತೆಯಲ್ಲಿದ್ದ ಮಲಯಾಳದವರು ಅರಿತು ದಂಗೆ ಎದ್ದರು. ಆ ವರ್ತಮಾನವು ಟಿಪ್ಪುವಿಗೆ ಮುಟ್ಟಿ ಮಲಯಾಳದವರ ಪುಂಡನ್ನು ಅಡಗಿಸಲು ಅಲ್ಲಿಗೆ ಹೋಗುವಂತೆ ಗುಲಾಮಲ್ಲಿ ಭಕ್ಷಿಗೆ ಅಪ್ಪಣೆಯನ್ನಿತ್ತನು.

ಆದುದರಿಂದ ಗುಲಾಮಲ್ಲಿಯು ಮಲಯಾಳಕ್ಕೆ ಹೊರಟನು. ಇವನು ಕೋಡಂತೊರ ಕಂಡಿಗಾಗಿ ಹೋಗುವಾಗ ಕೊಡಗರು ತಮ್ಮಲ್ಲಿ ಮದ್ದು ಗುಂಡು ತೀರುವವರೆಗೂ ಆದಷ್ಟು ತುರುಕರನ್ನು ಕೊಂದು ಹಿಂದಕ್ಕೆ ಬಂದರು.

ಗುಲಾಮಲ್ಲಿಯು ಪಯ್ಯಾವೂರಿಗೆ ಹೋಗಿ ಅಲ್ಲಿಯ ದೇವಸ್ಥಾನವನ್ನು ಸುಟ್ಟು ಅಲ್ಲಲ್ಲಿ ಲೂಟಿ ಮಾಡುತ್ತಿದ್ದನು. ಈ ಸಂಗತಿ ಕೋಟಂಗಡಿ ಅರಸನಾದ ವೀರವರ್ಮನ ಅಣ್ಣನು ತಿಳಿದು, ಹೆದರಿಕೊಂಡು ಅನಂತಶಯನಕ್ಕೆ ಓಡಿಹೋಗಲು ಪ್ರಯತ್ನಪಡುತ್ತಿದ್ದನು. ಇದನ್ನು ಟಿಪ್ಪುವು ತಿಳಿದು ಜಾನ್‌ಕಾಸ್ಪೊರೆಜ್ ಎಂಬ ಫ್ರೆಂಚನ ಮತ್ತು ಫಜೂಲ್‌ಖಾನ್ ಮತ್ತು ಇಬ್ಬರು ಮುಸಲ್ಮಾನರ ಸಂಗಡ ದೊಡ್ಡ ಒಂದು ಸೈನ್ಯವನ್ನು ಕೊಡಗಿನ ಮಾರ್ಗವಾಗಿ ಮಲಯಾಳಕ್ಕೆ ಕಳುಹಿಸಿದನು. ಈ ಸೈನ್ಯವು ಹೆಗ್ಗಳ ಮಾರ್ಗವಾಗಿ ಹೋಗುತ್ತಿರುವಾಗ ವೀರರಾಜನು ತನ್ನ ಕೊಡಗು ಸೈನ್ಯದೊಡನೆ ಅಲ್ಲಿಗೆ ಹೋಗಿ ಬಹಳ ದೊಡ್ಡ ಯುದ್ಧವಾಗಿ ತುರುಕರ ಸೈನ್ಯವು ಚೆಲ್ಲಾಪಿಲ್ಲಿಯಾಗಿ ಫಜೂಲ್‌ಖಾನ್ ತಪ್ಪಿಸಿಕೊಂಡು ಮಲಯಾಳಕ್ಕೆ ಓಡಿಹೋದನು. ಜಾನ್‌ಕಾಸ್ಪೊರೆಜ್ ಮತ್ತು ಅವನ ಕಡೆಯವರು ಯುದ್ಧಕ್ಕೆ ನಿಂತು ಅಲ್ಲಿಯೇ ಸತ್ತುಬಿದ್ದರು.

ಕೊಡಗರು ತುರುಕರ ದಂಡಿನಿಂದ ಸಿಕ್ಕಿದ ಮದ್ದುಗುಂಡು ಮತ್ತು ಇತರ ಸಾಮಾನುಗಳನ್ನು ಕೈ ಸೆರೆ ಸಿಕ್ಕಿದಂತವರ ಕೈಯಿಂದ ಹೊರಿಸಿ ಅವರನ್ನು ಬಾಳೆಲೆ ಮಾರ್ಗವಾಗಿ ಮೈಸೂರು ದೇಶಕ್ಕೆ ಕಳುಹಿಸಿಬಿಟ್ಟರು. ಇವರು ಟಿಪ್ಪುವಿನ ಸ್ವಾಧೀನದಲ್ಲಿದ್ದ ಬಾಳೆಲೆ ಲಕಡಿ ಕೋಟೆಯಲ್ಲಿದ್ದ ತಾಡಮರಿ ಮಲ್ಲಪ್ಪನಾಯಕನಿಗೆ ಈ ವಿಷಯವನ್ನು ತಿಳಿಸಲು, ಮದ್ದು ಗುಂಡು ಮುಂತಾದ ಎಲ್ಲಾ ಸಾಮಾನುಗಳನ್ನು ಅಲ್ಲಿಯೇ ಬಿಟ್ಟು ಅವನು ಓಡಿ ಹೋಗಿ ಪಿರ್ಯಾಪಟ್ಟಣವನ್ನು ಸೇರಿಕೊಂಡನು.

ಟಿಪ್ಪುವು ಈ ವರ್ತಮಾನವನ್ನು ತಿಳಿದು 1790ರಲ್ಲಿ ಕೈವಶವಿರುವ ಜಫೀರ್‌ಬಾದ್ (ಮಡಿಕೇರಿ) ಮತ್ತು ಕುಶಾಲ್‌ನಗರ್* (ಮುಳ್ಳುಸೋಗೆ) ಕೋಟೆಗಳಿಗೂ ಅಬ್ಜಲಾಬಾದ್ (ಭಾಗಮಂಡಲ) ಮತ್ತು ಬೆಪ್ಪುನಾಡು ಲಕ್ಕಡಿ ಕೋಟೆಗಳಿಗೂ ಬೇಕಾದ ಸಾಮಾನು ಸಮೇತವಾಗಿ ತನ್ನ ಭಾವಮೈದುನನಾದ ಬುರಾನುದ್ದೀನ್ ಎಂಬುವವನ ಕೈಕೆಳಗೆ ಭಾರಿ ದಂಡನ್ನು ಕೊಡಗಿಗೆ ಕಳುಹಿಸಿದನು.

ಈ ಬುರಾನುದ್ದೀನನು ಬಂದು ಕುಶಾಲ್‌ನಗರಕ್ಕಿರುವ ಸಾಮಾನುಗಳನ್ನು ಕೊಟ್ಟು, ಅಲ್ಲಿಂದ ಮಡಿಕೇರಿಗೆ ಹೋಗುತ್ತಿರುವಾಗ ವೀರರಾಜನು ಅರ್ಧದಾರಿಯಲ್ಲಿ ಅವನ ಮೇಲೆ ಬಿದ್ದು ಅರ್ಧ ಸಾಮಾನುಗಳನ್ನು ಕಿತ್ತುಕೊಂಡನು. ಇದ್ದ ಸಾಮಾನುಗಳನ್ನು ಮಡಿಕೇರಿಗೆ ತಲಪಿಸಿ ತಿರುಗಿ ಶ್ರೀರಂಗಪಟ್ಟಣಕ್ಕೆ ಹೋಗಿ ನಡೆದ ವಿವರವನ್ನು ಬುರಾನುದ್ದೀನನು ಟಿಪ್ಪುವಿಗೆ ತಿಳಿಸಿದನು.

*** ಮಡಿಕೇರಿ ಮತ್ತು ಭಾಗಮಂಡಲಗಳಿಗೆ ಹೈದರನೆ ಈ ಮುಸ್ಲಿಮ್ ಹೆಸರುಗಳನ್ನು ಹಾಕಿಸಿರಬೇಕು. ಒಮ್ಮೆ ಹೈದರಾಲಿಯು ಮುಳ್ಳುಸೋಗೆಯ ಹತ್ತಿರ ಇದ್ದಾಗ ತನಗೆ ಟಿಪ್ಪು ಹುಟ್ಟಿದ ವಾರ್ತೆಯನ್ನು ಕೇಳಿ ಸಂತುಷ್ಟನಾಗಿ ಈ ಊರಿಗೆ 'ಕುಶಾಲನಗರ'ವೆಂದು ಹೆಸರಿಟ್ಟನೆಂದು ಪ್ರತೀತಿಯಿದೆ. ಬ್ರಿಟಿಷರು ಈ ಊರಿನ ಹೆಸರನ್ನು ಫ್ರೆಜರ್ ಪೇಟೆಯೆಂದು ಮಾರ್ಪಡಿಸಿದರು. (50ನೇ ಪುಟ ನೋಡಿ) ಈಗ ಪುನಃ ಈ ಊರನ್ನು ಕುಶಾಲನಗರವೆಂದು ಇಟ್ಟಿದ್ದಾರೆ.**

ಟಿಪ್ಪುವು ಈ ಸಮಾಚಾರವನ್ನು ತಿಳಿದು ಬಹಳ ಕೋಪಗೊಂಡು ತಾನು ಮಲಯಾಳಕ್ಕೆ ಹೋಗಿ ಅಲ್ಲಿನ ಜನರ ಪುಂಡು ಅಡಗಿಸಿಕೊಂಡಿರುವಲ್ಲಿಗೆ ಬುರಾನುದ್ದೀನನು ಕೊಡಗು ಜನರ ಪುಂಡನ್ನು ಅಡಗಿಸಿ ಅಬ್ಬುಲಾಬಾದ್ ಮತ್ತು ಬೆಪ್ಪುನಾಡು ಲಕ್ಕಡಿಕೋಟೆಗಳಿಗೆ ಇರತಕ್ಕ ಸಾಮಾನುಗಳನ್ನು ಕೊಟ್ಟು ಬರಬೇಕಾಗಿ ಆಜ್ಞಾಪಿಸಿದನು.

ಟಿಪ್ಪುವು ಮಲಯಾಳಕ್ಕೆ ಹೋದ ವರ್ತಮಾನವನ್ನು ಚರಕಲರಾಜನು ತಿಳಿದು ದೇಶವನ್ನು ಬಿಡಲು ಪ್ರಯತ್ನಪಟ್ಟು ಓಡಿಹೋಗುತ್ತಿರುವಾಗ, ಟಿಪ್ಪುವಿನ ಕಡೆಯವರು ಅವನನ್ನು ಹಿಂಬಾಲಿಸಿದ್ದರಿಂದ ಅವನು ಹೆದರಿ ಆತ್ಮಹತ್ಯೆ ಮಾಡಿಕೊಂಡನು. ಸತ್ತುಹೋದ ರಾಜನ ಹೆಣವನ್ನು ಟಿಪ್ಪುವಿಗೆ ಅವನ ಕಡೆಯವರು ಒಪ್ಪಿಸಲು ಅದರ ಕಾಲಿಗೆ ಹಗ್ಗವನ್ನು ಕಟ್ಟಿ, ದಂಡಿನ ಸುತ್ತ ಎಳಸಿ ಒಂದು ಮರಕ್ಕೆ ತೂಗುಹಾಕಿಬಿಟ್ಟನು. ಅದನ್ನು ಕಂಡು, ಕೇಳಿ, ಭಯಪಟ್ಟು, ಮಲಯಾಳದ ಜನರು ಓಡಿಹೋಗಿ ಅನಂತಶಯನದ ರಾಮರಾಜನ ಮರೆಬಿದ್ದರು.

ತನ್ನ ಪ್ರಜೆಗಳನ್ನು ಬಿಟ್ಟುಕೊಡಬೇಕಾಗಿ ರಾಮರಾಜನನ್ನು ಟಿಪ್ಪುವು ಕೇಳಲು, ಮರೆಬಿದ್ದವರನ್ನು ಬಿಟ್ಟುಕೊಡುವುದಿಲ್ಲವಾಗಿ ರಾಮರಾಜನು ಧಿಕ್ಕರಿಸಿದನು. ತಾನು ಅನಂತಶಯನವನ್ನು ಲೂಟಿ ಮಾಡುವೆನೆಂದು ಟಿಪ್ಪುವು ರಾಮರಾಜನನ್ನು ಎಚ್ಚರಿಸಿದನು. ಆದುದರಿಂದ ರಾಮರಾಜನು ಕುಂಪಣಿ ಸರಕಾರದ ಸಹಾಯವನ್ನು ಕೇಳಿಕೊಂಡನು.

ಈ ಮಧ್ಯೆ ಅಂದರೆ 1789ರಲ್ಲಿ ವೀರರಾಜನು ಕುಶಾಲ್‌ನಗರದ ಕೋಟೆಗೆ ಮುತ್ತಿಗೆ ಹಾಕಿ ಅಲ್ಲಿದ್ದ 700 ಜನರಲ್ಲಿ 500 ಜನರನ್ನು ಕೊಂದುಹಾಕಿಬಿಟ್ಟನು. ಈ ಮುತ್ತಿಗೆಯಲ್ಲಿ ಕುಲ್ಲಟ್ಟಿ ಪೊನ್ನಣ್ಣನು ಹೆಚ್ಚಾದ ಪರಾಕ್ರಮ ತೋರಿಸಿದನು.ಕುಶಾಲ್‌ನಗರದ ಕೋಟೆಯ ರಾಜನ ಕೈವಶವಾಯಿತು. ಆಮೇಲೆ ಕೋಟೆಯನ್ನು ಲೂಟಿ ಮಾಡಿ ಅದನ್ನು ಸುಟ್ಟು ಹಾಕಿಬಿಟ್ಟು ರಾಜನು ಹಿಂತಿರುಗಿ ನಾಲ್ಕುನಾಡು ಅರಮನೆಗೆ ಹೋಗಿ ಅಲ್ಲಿ ಉಳಿದುಕೊಂಡನು.

ಮೂರು ತಿಂಗಳೊಳಗೆ ರಾಜನು ಬೆಪ್ಪುನಾಡು ಲಕ್ಕಡಿ ಕೋಟೆಯನ್ನು ಗೆದ್ದು ಅದನ್ನು ಸಹಾ ಸುಟ್ಟು ಬಿಟ್ಟನು.

ಕೈವಶವಾದ ಕೋಟೆಗಳಲ್ಲಿ ಸಿಕ್ಕಿದ ಮದ್ದು ಗುಂಡುಗಳನ್ನು ನಾಲ್ಕುನಾಡು ಅರಮನೆಗೆ ಸಾಗಿಸುತ್ತಾ, ಲೂಟಿ ಮಾಡಿ ಸಿಕ್ಕಿದ ದವಸ ಧಾನ್ಯ ದನಕರುಗಳನ್ನು ತನ್ನ ಪ್ರಜೆಗಳಿಗೆ ಹಂಚಿಕೊಡುತ್ತಾ ತುರುಕರನ್ನು ಈ ದೇಶದಿಂದ ಓಡಿಸುತ್ತಾ ರಾಜನು ಕಾಲವನ್ನು ಕಳೆಯುತ್ತಿದ್ದನು.

ಬೆಪ್ಪುನಾಡು ಕೋಟೆಯು ರಾಜನ ಕೈವಶವಾದ ವಿಷಯವನ್ನು, ಆ ಕೋಟೆಯ ಖಿಲ್ಲೆದಾರನು ಶ್ರೀರಂಗಪಟ್ಟಣಕ್ಕೆ ಹೋಗಿ ಬುರಾನುದ್ದೀನನ ಸಂಗಡ ಹೇಳಲು ಅವನು ಭಾರಿ ಪವುಜ ಸಮೇತ ಮಿಕ್ಕ ಇರುವ ಎರಡು ಕೋಟೆಗಳಿಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಹೊರಟನು. ಈ ಸೈನ್ಯವನ್ನು 3 ಭಾಗವಾಗಿ ಮಾಡಿ ಒಂದು ಭಾಗವು ಸಯ್ಯದ್‌ಹಮೀದ್ ಶಿಪಾದಾರನ ಕೈಕೆಳಗೆ ಅರಕಲಗೋಡು ಮಾರ್ಗವಾಗಿ ಎಡವನಾಡಿನ ಮೇಲೆ ಬರುವಂತೆಯೂ, ಇನ್ನೊಂದು ಭಾಗವು ಶೇಕ್ ಅನ್‌ಸರ್ ಶಿಪಾದಾರನ ಕೈಕೆಳಗೆ ಬಾಳೆಲೆ ಮಾರ್ಗವಾಗಿ ಬಂದು ಅಮ್ಮತ್ತಿಯಲ್ಲಿಳಿದುಕೊಂಡನು. ಎಡವನಾಡಿನ ಮೇಲೆ ಬಂದ ದಂಡಿನೊಡನೆ ಯುದ್ಧ ಮಾಡುವಂತೆ ಕೆಲವು ಮಂದಿ ಕೊಡಗರನ್ನು ಕಳುಹಿಸಿ, ಬುರಾನುದ್ದೀನನ ಸಂಗಡ ಯುದ್ಧ ಮಾಡಲು ರಾಜನು ತಾನೇ ಹೊರಟನು. ಅಷ್ಟರಲ್ಲಿ ಬಾಳೆಲೆ ಮಾರ್ಗವಾಗಿ ಬಂದ ಸೈನ್ಯವು ಕಾವಡಿಗೆ ಬಂದು ಇಳಿದಿತ್ತು. ಇದರ ಮೇಲೆ ಕೊಡಗರು ಬೀಳಲು ಆ ದಂಡು ಓಡಿ ಹೋಗಿ ಹತ್ತಿರ ಅಮ್ಮತ್ತಿಯಲ್ಲಿದ್ದ ಬುರಾನುದ್ದೀನನ ದಂಡಿನೊಟ್ಟಿಗೆ ಸೇರಿಕೊಂಡಿತು. ಅಲ್ಲಿಂದ ಬುರಾನುದ್ದೀನನು ಹೊರಟು ಕಡಿಯತ್ತುನಾಡಿನ ಮೇಲೆ ಹೋಗಿ ಸೂರಂಬಡದಲ್ಲಿಳಿದು

ಬಲ್ಲಮಾವಟಿ ಗ್ರಾಮಕ್ಕಾಗಿ ಭಾಗಮಂಡಲಕ್ಕೆ ತಲುಪಿದನು. ಆದರೆ ಈ ದಂಡಿನ ಮೇಲೆ ಕಡಿಯತ್ತುನಾಡಿನಲ್ಲಿಯೂ ನಾಲ್ಕುನಾಡಿನಲ್ಲಿಯೂ ಕೊಡಗರು ಬಿದ್ದು, ತುರುಕರ ದಂಡು ಬಹಳ ಮಟ್ಟಿಗೆ ಮುರಿದು ಹೋದುದಲ್ಲದೆ ಸಾಮಾನು ಕೆಲಮಟ್ಟಿಗೆ ಮಾತ್ರ ಭಾಗಮಂಡಲ ಕೋಟೆಗೆ ಸೇರಿತು.

ಅಲ್ಲಿಯಣ ಕೋಟೆಗೆ ಸಾಮಾನುಗಳು ಸಾಲದ್ದರಿಂದ ತುಳುನಾಡಿಗೆ ಪವುಜು ಸಮೇತ ಹೋಗುವುದಕ್ಕಾಗಿ ಘಟ್ಟ ಇಳಿಯಲು ಬುರಾನುದ್ದೀನನು ಪ್ರಯತ್ನಿಸುತ್ತಿದ್ದಾಗ ಪಟ್ಟಿಯಲ್ಲಿ ಕೊಡಗರು ಇವನ ಮೇಲೆ ಬಿದ್ದು ಸುಮಾರು 500 ಜನರನ್ನು ಕೊಂದು ಹಾಕಿದರು. ತುಳುನಾಡಿನಿಂದ ಸಾಮಾನು ಸಮೇತ ಬುರಾನುದ್ದೀನನ ಸೈನ್ಯವು ಘಟ್ಟ ಹತ್ತುತ್ತಿರುವಾಗ ತಿರುಗಿ ಕೊಡಗರು ಅವರ ಮೇಲೆ ಬಿದ್ದು ಬಹಳ ಸಾಮಾನುಗಳನ್ನು ಕಿತ್ತುಕೊಂಡರು. ಪುನಹ ಸಾಮಾನುಗಳನ್ನು ತರಲು ಪ್ರಯತ್ನಪಟ್ಟಲ್ಲಿ ಕೊಡಗರು ಅವನ ಮೇಲೆ ಬಿದ್ದದ್ದರಿಂದ, ಅವನು ಹಿಂದಕ್ಕೆ ಬಂದು ಭಾಗಮಂಡಲವನ್ನು ಸೇರಿ ಮಾರಣೆ ದಿನ ಬೆಪ್ಪುನಾಡು ಕೋಟೆಯ ಹತ್ತಿರ ಇಳಿದುಕೊಂಡು ಮಲೆಯಾಳದಲ್ಲಿರುವ ಟಿಪ್ಪುವಿನ ಜೊತೆ ಸೇರಲು ಹೆಗ್ಗಳ ಮಾರ್ಗವಾಗಿ ಹೊರಟನು. ಹೆಗ್ಗಳದಲ್ಲಿ ಕೊಡಗರು ಅವನ ಮೇಲೆ ಬಿದ್ದು ಅವನನ್ನು ಹಿಂದಕ್ಕೆ ಓಡಿಸಿದರು. ಕೊನೆಗೆ ಇವನು ಗದ್ದಿಗೆ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ಸೇರಿಕೊಂಡನು.

ಬುರಾನುದ್ದೀನನು ಸೋತು ಹಿಂದಿರುಗಿದ ವರ್ತಮಾನವನ್ನು ಎಡನಾಡಿನಲ್ಲಿದ್ದ ಸಯ್ಯದ್ ಹಮೀದ್ ಶಿಪಾದಾರನು ಕೇಳಿ ಕೊಡಗರ ದಂಡಿಗೆ ಸೇನಾಧಿಪತಿಯಾಗಿದ್ದ ಹೊಂಬಾಳೆ ನಾಯಕನೊಡನೆ ಕದವನಂ ಬಿಟ್ಟು ಓಡಿಹೋಗಿ ಶ್ರೀರಂಗಪಟ್ಟಣವನ್ನು ಸೇರಿಕೊಂಡನು. ಆಮೇಲೆ ಎಲ್ಲಾ ದಂಡುಗಳು ಗೆಜ್ಜಲಟ್ಟಿ ಘಟ್ಟ ಇಳಿದು ಟಿಪ್ಪುವಿನ ಜೊತೆಯನ್ನು ಕೂಡಿಕೊಂಡವು.

ಮೂರು ತಿಂಗಳು ಕಳೆದ ಮೇಲೆ ಟಿಪ್ಪುವು ತಾನೇ ಮಡಿಕೇರಿ ಕೋಟೆಗೆ ಸಾಮಾನುಗಳನ್ನು ಸಾಗಿಸಿಕೊಂಡು ಬರುತ್ತಿರುವಾಗ ವೀರರಾಜೇಂದ್ರ ಒಡೆಯನು ಹೊರೂರು ನೂರೊಕ್ಲುನಾಡು ನೆಗದಾಳದಲ್ಲಿ ಅವನ ಮೇಲೆ ಬಿದ್ದು ಅವನನ್ನು ಸೋಲಿಸಿ ಅವನು ತಂದಿದ್ದ ಸಾಮಾನುಗಳನ್ನು ಕಿತ್ತುಕೊಂಡು ತನ್ನ ಕಡೆ ಜನರಿಗೆ ಹಂಚಿಕೊಟ್ಟನು.

ಈ ಮಧ್ಯೆ ಕೋಟಂಗಡಿ ಅರಸನ ಮದ್ದತು ಮೇರೆ ತಿರುನೆಲ್ಲಿ ತೆಂಕಮುತ್ತನು ಕೆಲವು ನಾಯಮ್ಮಾರರನ್ನೂ ಮುಳ್ಳುಕುರುಬರನ್ನೂ ಕೂಡಿಸಿಕೊಂಡು ಬಂದು, ಕುರ್ಚಿ ಗ್ರಾಮದಲ್ಲಿದ್ದ ರಾಜನ ಕುಟುಂಬ ಮಕ್ಕಳನ್ನು ಕೊಂದುಹಾಕಿ, ನಗನಾಣ್ಯಗಳನ್ನು ಲೂಟಿ ಮಾಡಿಕೊಂಡು, ಕೋಟೆಗೆ ಬೆಂಕಿ ಕೊಟ್ಟು ಓಡಿಹೋದರು. ಈ ವರ್ತಮಾನವನ್ನು ರಾಜನು ಕೇಳಿ, ಅತ್ಯಂತ ಚಿಂತಾಕ್ರಾಂತನಾಗಿ ಒಂದೂವರೆ ತಿಂಗಳುಗಳವರೆಗೆ ನಾಲ್ಕುನಾಡು ಅರಮನೆಯಲ್ಲಿಯೇ ಇದ್ದನು.

ಅದೇ ವರುಷ ರಾಜನು ಕಾವೇರಿ ಕನಕೆ ಸುಜ್ಯೋತಿ ಎಂಬ ಪುಣ್ಯ ನದಿಗಳು ತ್ರಿವೇಣಿ ಸಂಗಮವಾಗಿ ಹರಿಯುವಂಥದರ ಮಧ್ಯದಲ್ಲಿರುವ ಭಾಗಮಂಡಲ ಕೋಟೆಗೆ ಮುತ್ತಿಗೆ ಹಾಕಿದನು. ಐದು ದಿವಸದಲ್ಲಿ ಈ ಕೋಟೆಯು ರಾಜನ ಕೈವಶವಾಯಿತು. ಈ ಮುತ್ತಿಗೆಯಲ್ಲಿ ರಾಜನು, ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಾಗಿರುವ ಬೇರೆ ಬೇರೆ ದೇವಸ್ಥಾನಗಳ ಮೇಲೆ ಮುಂಬಾರತು ಮೊಟ್ಟೆಯಿಂದ ಮೂರು ಫಿರಂಗಿ ಹಾರಿಸಿದ್ದಲ್ಲಿ, ತಾಂಬ್ರದ ತಗಡು ಕತ್ತರಿಸಿ ಹೋದುದಕ್ಕೆ ಬೆಳ್ಳಿಯ ತಗಡು ಹಾಕಿಸಿದನು.

ಭಾಗಮಂಡಲವು ತುರುಕರ ವಶದಲ್ಲಿದ್ದಾಗ ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಊರ ಬಿಟ್ಟು ಓಡಿಹೋಗಿದ್ದುದರಿಂದ ಪಟ್ಟಮಾಡ ಉತ್ತೈಯ್ಯನೆಂಬುವನು ತನ್ನ ಊರಿನಿಂದ ಒಬ್ಬ ಬ್ರಾಹ್ಮಣ ಹುಡುಗನನ್ನು ತನ್ನ ಹೆಗಲಮೇಲೆ ಕೂರಿಸಿಕೊಂಡು ಹೋಗಿ ಭಾಗಮಂಡಲದ ತ್ರಿವೇಣಿ

ಸಂಗಮದಲ್ಲಿ ಅವನನ್ನು ಸ್ನಾನಮಾಡಿಸಿ, ಆ ಹುಡುಗನಿಗೆ ತಿಳಿದ ಹಾಗೆ ದೇವರಿಗೆ ಪೂಜೆ ಮಾಡಿಸಿ ಬರುತ್ತಿದ್ದನು. ಆಗ ಪ್ರತಿ ದಿನವೂ ನೈವೇದ್ಯಕ್ಕೆ ತನ್ನ ಮನೆಯಿಂದ ಅಕ್ಕಿ ತೆಗೆದುಕೊಂಡು ಹೋಗುತ್ತಿದ್ದುದರಿಂದ, ಈಗಲೂ ಆ ಮನೆಯವರು ವರುಷಂಪ್ರತಿ ದಿನಕ್ಕೆ ಒಂದು ಮಾನ ಅಕ್ಕಿಯ ಮೇರೆ ಅಕ್ಕಿ ಕೊಡುವರು. ಆಗ ಪಟ್ಟಮಾಡ ಮನೆಯು ನಾಲ್ಕುನಾಡು ಅಯ್ಯಂಗೇರಿ ಶ್ರೀಮಂಗಲದಲ್ಲಿತ್ತು.

ಭಾಗಮಂಡಲವು ಕೈಸೇರಿದ ಮೇಲೆ, ರಾಜನು ಕೆಲವು ಕೊಡಗರನ್ನು ತುರುಕರ ವಶವಿರುವ ತುಳುನಾಡನ್ನು ಸಾಧಿಸುವ ಬಗ್ಗೆ ಹೊಂಬಾಳೆ ನಾಯಕನ ಜೊತೆಯಲ್ಲಿ ಕಳುಹಿಸಿದನು. ಇವರು ತುರುಕರೊಡನೆ ಯುದ್ಧಮಾಡಿ ಅವರನ್ನು ಸೋಲಿಸಿ, ಅಮರ ಸೂಳ್ಯಕ್ಕೂ ಕೊಡೆಯಾಲಕ್ಕೂ ನಡುವೆ ಇರುವ ಸೀಮೆಯನ್ನು ಗೆದ್ದು ಆ ಸಂಗತಿಯನ್ನು ರಾಜರಿಗೆ ತಿಳಿಸಿದರು. ಹೊಸದಾಗಿ ಸಂಪಾದಿಸಿದ ಸೀಮೆಗೆ ರಾಜನು ಹೊಂಬಾಳೆ ನಾಯಕನನ್ನೇ ಅಮಲ್ದಾರನಾಗಿ ಮಾಡಿದನು.

1790ರ ಒಳಗೆ ಮಡಿಕೇರಿ ಕೋಟೆಯೊಂದು ಹೊರತು ಕೊಡಗು ರಾಜ್ಯವೆಲ್ಲ ವನ್ನು ವೀರರಾಜೇಂದ್ರ ಒಡೆಯನು ತನ್ನ ಕೈವಶಮಾಡಿಕೊಂಡನು. ಇದರ ಮೇಲೆ ಮಡಿಕೇರಿಯಲ್ಲಿರುವ ತುರುಕರ ಪವುಜಿಗೆ ಸಾಮಾನು ಬರುವುದನ್ನು ನಿಲ್ಲಿಸುವಂತೆಯೂ, ಟಿಪ್ಪುವಿನ ದೇಶವನ್ನು ಕೊಳ್ಳೆಮಾಡುವಂತೆಯೂ, ಮಂಡೇಪಂಡ ಅಪ್ಪಯ್ಯನನ್ನೂ ನಗರದಳ್ಳಿ ಪುಟ್ಟೇಗೌಡನನ್ನೂ ಕಳುಹಿಸಿದನು. ಇವರು ಮಡಿಕೇರಿಗೆ ಸಾಮಾನು ಬರುವ ದಾರಿಯೆಲ್ಲವನ್ನೂ ಕಟ್ಟಿ ಅರಕಲಗೋಡು ತಾಲೋಕು ಕೊಣನೂರನ್ನು ಲೂಟಿ ಮಾಡುತ್ತಿದ್ದಲ್ಲಿ ಆ ರೈತರು, ಟಿಪ್ಪುವಿಗೆ ಕೊಡುವ ಪ್ರತಿ ವರಹಕ್ಕೆ ಒಂದು ರೂಪಾಯಿ ಮೇರೆ ಕೊಡಗು ರಾಜನಿಗೆ ಕೊಡುವಂತೆ ಒಪ್ಪಿಕೊಂಡದ್ದರಿಂದ, ಪುಟ್ಟೇಗೌಡ ಅಪ್ಪಯ್ಯ ಸಹ ಅಲ್ಲಿಂದ ಹೋಗಿ ಹೈಗೂರು ಸೀಮೆಯಲ್ಲಿದ್ದ ತುರುಕರ ದಂಡನ್ನು ಹೊಡೆದು ಓಡಿಸಿ, ಮಂಜರಾಬಾದು ತಾಲೋಕಿನ ಕೆಲವು ಗ್ರಾಮಗಳನ್ನು ಜಯಿಸಿ ಅಲ್ಲಿ ಠಾಣ್ಯ ಹೊಡೆದು ಅಲ್ಲಿ ಸೀಮೆಯ ಬಂದೋಬಸ್ತನ್ನು ನೋಡಿಕೊಂಡಿದ್ದರು.

ಈ ಸಮಯದಲ್ಲಿ ಟಿಪ್ಪುವು ಅನಂತಶಯನ ರಾಮರಾಜನ ಮೇಲೆ ಯುದ್ಧಕ್ಕೆ ಹೋಗಲು ಕುಂಪಣಿ ಸರಕಾರವು ರಾಮರಾಜನ ಕಡೆ ಸೇರಿತು. ಕುಂಪಣಿಯವರ ದಂಡು ಮಲಯಾಳದ ಕಡೆಯಿಂದ ಹೊರಟಿತು. ಆಗ ರಾಬರ್ಟ್ ಟೇಯಿಲರ್ ಎಂಬವನು ತಲಚೇರಿಯಲ್ಲಿ ಅವರ ಕಡೆ ಮುಖ್ಯಸ್ಥನಾಗಿದ್ದನು.

ಅದೇ ಸಮಯದಲ್ಲಿ ವೀರರಾಜೇಂದ್ರ ಒಡೆಯನು ತನಗೆ ಕೆಲವು ಸಾಮಾನುಗಳು ಮುಖ್ಯವಾಗಿ ಒಂದು ಒಳ್ಳೆ ಕುದುರೆ–ಬೇಕಾಗಿದ್ದುದರಿಂದ ತನ್ನ ಹತ್ತಿರ ಇದ್ದ ಮುತ್ತುಭಟ್ಟನೆಂಬುವನನ್ನು ತಲಚೇರಿಗೆ ಕಳುಹಿಸಿದನು. ಈತನು ರಾಜನಿಗೆ ಬೇಕಾದ ಸಾಮಾನುಗಳನ್ನು ತೆಗೆಯುತ್ತಿರುವ ವರ್ತಮಾನವನ್ನು ಟೇಯಿಲರ್ ತಿಳಿದು, ಅವನನ್ನು ಕರೆಸಿ, ಕೊಡಗಿನ ರಾಜನಿಗೂ ಟಿಪ್ಪುವಿಗೂ ಇರುವ ಕಕ್ಷಿಯನ್ನು ಸವಿಸ್ತಾರವಾಗಿ ಕೇಳಿ ತಿಳಿದುಕೊಂಡು, ಟಿಪ್ಪುವು ಕುಂಪಣಿ ಸರಕಾರಕ್ಕೂ ಮತ್ತು ರಾಜನಿಗೂ ಶತ್ರುವಾಗಿರುವುದರಿಂದ ರಾಜನೊಡನೆ ಕುಂಪಣಿ ಸರಕಾರವು ಸ್ನೇಹಾಚಾರದಲ್ಲಿರಬೇಕಾಗಿ ತುಂಬಾ ಅಪೇಕ್ಷೆ ಇರುವುದರಿಂದ, ರಾಜನಿಗೆ ಬೇಕಾಗಿರುವ ಕುದುರೆಯನ್ನು ತಾನು ತರಿಸಿಕೊಡುವುದಾಗಿಯೂ, ಕುಂಪಣಿಯವರ ಫಿರಂಗಿ ಗಾಡಿ ಎಳೆಯುವ ಬಗ್ಗೆ ದೊಡ್ಡ ತರದ ಎತ್ತುಗಳನ್ನು ಕ್ರಯಕ್ಕೆ ಕೊಡಬೇಕಾಗಿಯೂ ಮುತ್ತುಭಟ್ಟನ ಜೊತೆಯಲ್ಲಿ ಹೇಳಿಕಳುಹಿಸಿದ್ದಲ್ಲದೆ ಸ್ನೇಹಭಾವದ ಒಂದು ಕಾಗದವನ್ನು ಬರೆದುಕೊಟ್ಟನು. ರಾಜನು ಕಾಗದವನ್ನು ನೋಡಿ ಎಲ್ಲಾ ಸಂಗತಿಯನ್ನು

ಮುತ್ತುಭಟ್ಟನಿಂದ ಕೇಳಿ ತಿಳಿದು ಕುಂಪಣಿ ಸರಕಾರದೊಡನೆ ಸ್ನೇಹ ಮಾಡಲು ಇಷ್ಟಪಟ್ಟು ಆ ರೀತಿ ತಿಳಿಸಿದನು. ಟೇಯಿಲರು ರಾಜನನ್ನು ತಲಚೇರಿಗೆ ಕರೆತರುವುದಕ್ಕಾಗಿ ಕೇಪ್ಟನ್ ಬ್ರವುನ್ ಎಂಬುವವನನ್ನು ಒಂದು ಕುಂಪಣಿ ಸಿಪಾಯಿ ಸಮೇತ ಕೊಡಗಿಗೆ ಕಳುಹಿಸಿದನು.

1790ರಲ್ಲಿ ರಾಜನಿಗೂ ಟೇಯಿಲರಿಗೂ ತಲಚೇರಿಯಲ್ಲಿ ಭೇಟಿಯಾಗಿ ಆದ ಒಪ್ಪಂದದ ಕ್ರಮವೆಂತೆಂದರೆ :–

"ಶ್ರೀ ಇಂಡ್ಯ ಪ್ರಾಂತ್ಯಕ್ಕೆ ಬಹುಮಾನಪಟ್ಟ ಇಂಗ್ರೇಜಿ ಕುಂಪಣಿ ಹೆಸರಿಗೆ ತಲಚೇರಿ ಕೋಟೆಗೆ ಮೈಯೂರ್ ರಾಬರ್ಟ್ ಟೇಯಿಲರ್ ಸೆಗುಂದಮಾರು ಕೊಡಗಿನ ಹಾಲೇರಿ ವೀರ ರಾಜ ಅರಸುಗಳು ತಮ್ಮ ಒಳಗೆ ಒಪ್ಪಿಗೆಯಾಗಿ ಬರೆದುಕೊಟ್ಟ ನಂಬಿಕೆ ಕಾಗದದ ವಿವರ:–

1. ಸೂರ್ಯಚಂದ್ರರು ಇರುವ ಪರಿಯಂತರಕ್ಕೂ ಇರ್ಕತರ್ಕರ ಕಡೆ ವಿಶ್ವಾಸಕ್ಕೆ ಹೆಚ್ಚು ಕಡಿಮೆ ಬಾರದಂತೆ ನಡೆದು ಬರುವಂಥಾದಕ್ಕೆ ಅಂತರ ಬರಲಿಕ್ಕಿಲ್ಲ.
2. ಟಿಪ್ಪುಸುಲ್ತಾನನಿಗೂ ಅವನ ಕಡೆ ಇರುವ ಪಕ್ಷದವರೂ ಯಾವತ್ತೂ, ಎರಡು ಕಡೆಯವರು, ಅವರು ನಮಗೆ ಶತ್ರು ಎಂಬುದಾಗಿ ಭಾವಿಸಿಕೊಂಡು ಬರಬೇಕು. ಇಂಗ್ರೇಜರಿಗೂ ಅವನಿಗೂ ನಡೆದು ಬರುವಂಥಾ ಲಡಾಯಿಯಲ್ಲು ಅರಸುಗಳಿಗೆ ಸಮಯ ಸಿಕ್ಕಿದರೆ ತಮ್ಮಿಂದ ಆಗುವಷ್ಟು ಶತ್ರುವಿಗೆ ನಾಶಮಾಡುವುದಕ್ಕೆ ಹಾಜರಿರಬೇಕು. ಬೇರೆ ಕೊಡಗು ಮಲೆದಾರಿ ಇಂಗ್ರೇಜಿಯವರ ಪಾಳ್ಯ ಒಂದು ಸಮಯಕ್ಕೆ ಹೋಗುವಾಗ್ಯೆ ಸಮ್ಮತವಿರಬೇಕು. ಯಾತರಿಂದ ಅಂದರೆ ಟಿಪ್ಪುಸುಲ್ತಾನರ ಕಡೆಗೆ ಹೋಗುವ ಸಮಯ ಬಂದರೆ ಆವಾಗ್ಯೆ ನಮ್ಮ ಪಾಳ್ಯದವರಿಗೆ ರಾತೀಪು ಜಿನಸು ನಿಮ್ಮ ಊರಲ್ಲಿರುವಂಥಾದ್ದು ಸಕಾಯ ಕ್ರಯಕ್ಕೆ ಕೊಡಿಸಿ ಸಹಾಯ ಮಾಡಬೇಕು. ಘಟ್ಟದ ಮೇಲೆ ಟಿಪ್ಪುವಿನ ಊರಲ್ಲಿ ನಮಗೂ ಆತನಿಗೂ ಲಡಾಯವಾಗುವಾಗ್ಯೆ ಅರಸುಗಳು ತಮಗೆ ಕೂಡಿದಷ್ಟು ಬಲ ತೆಗೆದುಕೊಂಡು ಇಂಗ್ರೇಜಿಯವರ ಕಡೆಯಲ್ಲಿ ಕೂಡಿ ಇರಬೇಕು.
3. ನಿಮ್ಮ ರಾಜ್ಯದಲ್ಲಿ ಆಗುವಂತ ಸರಕು ಮರ್ಯಾದೆ ಪ್ರಕಾರ ಸಕಾಯ ಕ್ರಯಕ್ಕೆ ಕುಂಪಣಿಗೆ ಕೊಡುವ ಬಗ್ಯೆ ಒಪ್ಪಿಗೆಯಾಗಿದ್ದೇವೆ. ಬೇರೆ ಟೋಪಿಕಾರ ಜಾತಿಗೆ ಯಾರಿಗೂ ವ್ಯಾಪಾರ ಮಾಡುವ ಬಗ್ಯೆ ಒಪ್ಪಿಗೆ ಇಲ್ಲ.
4. ಕುಂಪಣಿಗೆ ಅನ್ಯೋನ್ಯವಿಡಿದು ನಡೆದು ಬರುವಂಥ ಅರಸುಗಳ ಪ್ರಕಾರಕ್ಕೆ ಟಿಪ್ಪುಸುಲ್ತಾನನ ಒಂದು ಹುಕೂಮತ್ತೂ ನಿಮ್ಮ ಮೇಲೆ ನಡೆಯದಂತೆ ಕುಂಪಣಿಯಿಂದ ಆಗುವಂಥ ಪ್ರಯತ್ನ ಮಾಡಿ ನಿಮ್ಮನ್ನು ಇರಿಸಿಕೊಳ್ಳುತ್ತೇವೆ. ಟಿಪ್ಪುವಿಗೂ ನಮಗೂ ಒಂದುವೇಳೆ ಒಳ್ಳೆಯದಾಗಿ ಹೋಗುತ್ತದೆಯಾದರೆ ತಹನಾಮೆ ಬರದು ಇಡುವಾಗ ಅದರಲ್ಲಿ ಕೊಡಗಿನ ರಾಜರು ಇಂಗ್ರೇಜಿ ಕುಂಪಣಿಗೆ ಅನ್ಯೋನ್ಯವಿಡಿದು ನಡೆದು ಬರುವಂಥಾದ್ದು ಅವರ ಮೇಲೆ ಆತನು ಜೋರಾವರಿಯು ನಡಿಸದಂತೆ ಅದರಲ್ಲಿಯೂ ಬರಸಿಯೇವು.
5. ರಾಜರಿಗೆ ಒಂದು ಸಮಯಕ್ಕೆ ಇಲ್ಲಿಗೆ ಬರಬೇಕಾದರೆ ಅವರ ಕುಟುಂಬ ಮುಂತಾಗಿ ಆ ಊರಲ್ಲೂ ಇರುವ ರೈತರ ಕುಟುಂಬ ಮುಂತಾಗಿ ಘಟ್ಟದ ಕೆಳಗೆ ಬಂದಲ್ಲಿ ಇಲ್ಲಿಂದ ಒಂದು ಗಾಡದೆ ಸಿಪಾಯಿಗಳ ಕಳುಹಿಸಿಕೊಟ್ಟು ದಾರಿ ಮಾರ್ಗದಲ್ಲಿ ಒಂದು ಅಟಕಾವು ಆಗದಂತೆ ತಮ್ಮ ತಲಚೇರಿಯಲ್ಲಿ ಒಂದು ಮನೆ ಸಹ ಬಿಡಿಸಿಕೊಟ್ಟು, ರಾಜಸ್ಥಿತಿ ಸೌಖ್ಯವಾಗುವ ಪರಿಯಂತರ ರಕ್ಷಣ್ಯ ಮಾಡಿ ನಿಲ್ಲಿಸಿಕೊಳ್ಳುತ್ತೇವೆ. ಪುನಃ ರಾಜಸ್ಥಿತಿ ಸುಖವಾಗುತ್ತಲೆ ನಿಮ್ಮ ಊರಿಗೆ ಸಂಗಡ ಮನುಷ್ಯರ ಕೂಡಿಸಿ ಚೆನ್ನಾಗಿ ಕಳುಹಿಸಿ

ಕೊಡುವಲ್ಲಿ ಅಂತರವಿಲ್ಲ. ಈ ಕಾರ್ಯಕ್ಕೆ ಅನ್ಯೋನ್ಯ ನಡೆದು ಬರುವಲ್ಲಿ ಎಂದೆಂದಿಗೂ ಹೆಚ್ಚು ಕಡಿಮೆ ಬರದಂತೆ ಇರ್ಕರ್ತರಲ್ಲೂ ಅಂತರ ಬರಲಿಕ್ಕಿಲ್ಲ.

ಈ ಕಾರ್ಯಕ್ಕೆ ಎರಡು ಕಡೆಯವರಿಗೂ ಶ್ರೀ ದೇವರು ಸೂರ್‍ಯ ಚಂದ್ರ ಭೂಮಿ ಸಾಕ್ಷಿ.

"ಸಾಧಾರಣ ಸಂವತ್ಸರ ಆಶ್ವೀಜ ಬ॥೫ರಲ್ಲು"

ಈ ಮೇಲಣ ರೀತಿ ಒಪ್ಪಂದವು ಆದ ಮೇಲೆ ವೀರರಾಜೇಂದ್ರ ಒಡೆಯನು ಕೊಡಗಿಗೆ ಬಂದನು.

ಆಮೇಲೆ ಮಡಿಕೇರಿ ಕೋಟೆಗೆ ಸಾಮಾನುಗಳನ್ನು ತೆಗೆದುಕೊಂಡು ಖಾದರ್‌ಖಾನ್ ಖೈಸಗಿ ಎಂಬವನು ಬರುತ್ತಿರುವಲ್ಲಿ, ವೀರರಾಜೇಂದ್ರ ಒಡೆಯನು ಅವನನ್ನು ಬೂದಿಚಾವಡಿಯಲ್ಲಿ ಅಡ್ಡ ಕಟ್ಟಿ ತುರುಕರ ದಂಡನ್ನು ಯುದ್ಧದಲ್ಲಿ ಸೋಲಿಸಿದನು. ಆಗ ಕೊಡಗರು ತುರುಕರ ದಂಡಿನಲ್ಲಿರುವ ಸಾಮಾನುಗಳನ್ನು ಲೂಟಿ ಮಾಡುವುದಕ್ಕೆ ಅಪ್ಪಣೆ ಕೇಳಿದಲ್ಲಿ, ಖಾದರ್‌ಖಾನ್ ಖೈಸಗಿಯನ್ನು ಕೊಲ್ಲದೆ ತಂದು ಕೊಡುವುದಾದರೆ ಅಪ್ಪಣೆ ಕೊಡಬಹುದಾಗಿ ಹೇಳಲು, ಕೊಡಗರ ಖಾದರ್‌ಖಾನ್ ಖೈಸಗಿಯನ್ನು ಹಿಡಿದುಕೊಂಡು ಬಂದು ರಾಜನಿಗೆ ಒಪ್ಪಿಸಿದರು.

ಪೆರ್ಯಾಪಟ್ಟಣದಲ್ಲಿ ಖೈದಿಯಲ್ಲಿದ್ದಾಗ ರಾಜನು ನಂಜರಾಜ ಪಟ್ಟಪ್ರಾಂತ್ಯಕ್ಕೆ ಬೇಟೆಗೆ ಹೋಗಿದ್ದಲ್ಲಿ ರಾತ್ರಿಯಾಗಿ ಹಿಂದಕ್ಕೆ ಹೋಗಲು ಅನುಕೂಲವಾಗದೆ ಇರುವಾಗ ಖಾದರ್‌ಖಾನ್ ಖೈಸಗಿಯು ರಾಜನನ್ನು ಕುಶಾಲ್‌ನಗರಕ್ಕೆ ಕರೆದುಕೊಂಡು ಹೋಗಿ ಎರಡು ಹೊತ್ತಿನ ಅಡುಗೆಗೆ ಇರುವ ಸಾಮಾನುಗಳನ್ನು ಕೊಟ್ಟು ಉಪಕಾರ ಮಾಡಿದ್ದರಿಂದ ಪ್ರತ್ಯುಪಕಾರವಾಗಿ ಅವನನ್ನೂ ಅವನ ನೆಂಟರಿಷ್ಟರನ್ನೂ ಹಿಂತಿರುಗಿ ಹೋಗಬಹುದಾಗಿ ಅಪ್ಪಣೆ ಕೊಟ್ಟನು. ಆದರೆ ಖಾದರ್‌ಖಾನ್ ಖೈಸಗಿಯು ಈ ಉಪಕಾರಕ್ಕೆ ಕೃತಜ್ಞನಾದರೂ ತಾನು ತಂದ ಸಾಮಾನು ಸರಂಜಾಮುಗಳನ್ನು ಮಡಿಕೇರಿ ಕೋಟೆಗೆ ತಲುಪಿಸದೆ ಹಿಂತಿರುಗಿ ಹೋದರೆ ತನ್ನನ್ನು ತನ್ನ ಕುಟುಂಬ ಮಕ್ಕಳು ಸಮೇತವಾಗಿ ಟಿಪ್ಪುವು ನಾಶಪಡಿಸುವುದು ನಿಶ್ಚಯವೆಂದು ಹೇಳಿ ದುಃಖಿಸಲಾಗಿ, ಮಡಿಕೇರಿಗೆ ಇರತಕ್ಕ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ತಲುಪಿಸಿ ಮಡಿಕೇರಿಯಲ್ಲಿ ತುರುಕರ ಪವುಜು ಸಮೇತ ಕೊಡಗು ದೇಶವನ್ನು ಬಿಟ್ಟು ಹೋಗಬೇಕಾಗಿ ಅಪ್ಪಣೆಯಿತ್ತು ಇವರ ಜೊತೆಯಲ್ಲಿ ಕಾರ್ಯಕಾರ ಕೊಂಗೆರ ಅಯ್ಯಣ್ಣನನ್ನು ಕಳುಹಿಸಿಕೊಟ್ಟನು. ಆದರೆ, ಮಡಿಕೇರಿಯಲ್ಲಿದ್ದ ಪವುಜಿನ ಖಿಲ್ಲೆದಾರ ಜಾಫರ್ ಆಲಿ ಬೇಗ್ ಎಂಬುವವನು, ರಾಜನು ಇಷ್ಟು ದಯ ತೋರಿಸಿದ್ದರಿಂದ, ತಂದ ಸಾಮಾನುಗಳು ತೀರುವವರೆಗೂ ಇದ್ದು, ಕೋಟೆಯನ್ನು ರಾಜನಿಗೆ ಒಪ್ಪಿಸಿ ಹೋಗುವುದಾಗಿ ಬೇಡಿಕೊಂಡನು. ಅದಕ್ಕೆ ರಾಜನು ಸಮ್ಮತಿಸಿದನು.

ಈ ಸಂಗತಿಯನ್ನು ಕುಂಪಣಿ ಸರಕಾರವು ತಿಳಿದು ರಾಜನು ಮೋಸಗಾರನೆಂದು ಸಂಶಯಪಟ್ಟು ವಿಚಾರಣೆ ಮಾಡಿದಲ್ಲಿ, ರಾಜನು ಉಪಕಾರಕ್ಕೆ ಪ್ರತ್ಯುಪಕಾರ ಮಾಡಿದ್ದಲ್ಲದೆ, ಟಿಪ್ಪುವಿನ ಪಕ್ಷವನ್ನು ವಹಿಸಿಲ್ಲವೆಂದು ತಿಳಿದುಬಂತು.

ಈ ಸಮಯದಲ್ಲಿ ಬೊಂಬಾಯಿ ಗವರ್ನರಾಗಿದ್ದ ಜನರಲ್ ಆಬರ್‌ಕ್ರಾಂಬಿಯು ತಲಚೇರಿಗೆ ಬಂದು ರಾಜನನ್ನು ಭೇಟಿಯಾಗಬೇಕಾಗಿ ಇಷ್ಟಪಟ್ಟು ತಲಚೇರಿಗೆ ಕರೆಸಿದನು. ಈ ಮಧ್ಯದಲ್ಲಿ ಕಣ್ಣನೂರು ಬೀಬಿಯು ಕುಂಪಣಿಯ ಪವುಜನ್ನು ಮೋಸದಿಂದ ಕೊಲ್ಲಿಸಿದಕ್ಕಾಗಿ ಕುಂಪಣಿಯವರು ಕಣ್ಣನೂರು ಕೋಟೆಯನ್ನು ಹಿಡಿದುಕೊಂಡರು. ಕಣ್ಣನೂರು ಬೀಬಿಯು ಕಷ್ಟದಲ್ಲಿ ಬಿದ್ದನೆಂದು ತಿಳಿದು ಕೊಡಗು ರಾಜನನ್ನು ಬೇಡಲು, ತನ್ನ ಪೂರ್ವಿಕನಾದ ಸಿರಿಬಾಯಿ ದೊಡ್ಡ ವೀರಪ್ಪನ ದಳವಾಯಿ ಬೋನಿರ ಮುತ್ತಣ್ಣನಿಗೆ ಕಣ್ಣನೂರು ಆಲಿರಾಜನು ಮಾಡಿದ ಉಪಕಾರವನ್ನು

ಮನಸ್ಸಿಗೆ ತಂದುಕೊಂಡು, ಬೀಬಿಯು ಮಗನನ್ನು ರಾಜ್ಯಭ್ರಷ್ಟನಾಗಿ ಮಾಡಬಾರದಾಗಿ ಗವರ್ನರನ್ನು ಕೇಳಿಕೊಂಡಿದ್ದರಿಂದ, ಕುಂಪಣಿಯವರು ಕಣ್ಣನೂರು ಕೋಟೆಯನ್ನು ಬೀಬಿಗೆ ಬಿಟ್ಟುಕೊಟ್ಟರು.

ಆಮೇಲೆ ರಾಜನು ಕೊಡಗಿಗೆ ಬಂದನು. ಅಷ್ಟರಲ್ಲಿ ಮಡಿಕೇರಿಯಲ್ಲಿದ್ದ ತುರುಕರ ಪವುಜಿಗೆ ಸಾಂಆನುಗಳೇನೂ ಇಲ್ಲದೆ ಕೋಟೆಯನ್ನು 1790ರಲ್ಲಿ ರಾಜನಿಗೆ ಒಪ್ಪಿಸಿ ಜಾಫರ್ ಆಲಿ ಬೇಗ್ ಹೊರಟು ಹೋದನು. ಈ ಪವುಜಿಗೆ 3 ತಿಂಗಳಿಂದ ಸಂಬಳವು ಸಿಕ್ಕಿದ್ದರಿಂದ ಇವರಿಗೆ 1,000 ವರಹವನ್ನು ಕೊಟ್ಟು ರಾಜನು ಇವರನ್ನು ಕೊಡಗಿನಿಂದ ಕಳುಹಿಸಿಬಿಟ್ಟನು. ಕೊಡಗು ದೇಶವೆಲ್ಲವು ವೀರರಾಜೇಂದ್ರ ಒಡೆಯನ ಸ್ವಾಧೀನವಾಯಿತು.

ಇಂಗ್ಲೀಷರ ಸೈನ್ಯವು ಕೊಡಗು ದೇಶದ ಮೇಲೆ ದಾಟಿ ಟಿಪ್ಪುವಿನ ಮೇಲೆ ಯುದ್ಧಕ್ಕೆ ಹೋಗುವಾಗಲೂ, ಹಿಂತಿರುಗಿ ಬರುವಾಗಲೂ ರಾಜನು ಇಂಗ್ಲೀಷರಿಗೆ ಹೆಚ್ಚಾದ ಸರಬರಾಯಿ ಮಾಡಿದನು.

ಪುನಃ ಇಂಗ್ಲೀಷರ ಸೈನ್ಯವು 1791ನೆಯ ಇಸವಿಯ ಕಡೆ ಭಾಗದಲ್ಲಿ ಹೆಗ್ಗಳಕ್ಕೆ ಬಂದು ಇಳಿದುಕೊಂಡಿತು. ರಾಜನು ಈ ಸೈನ್ಯಕ್ಕೆ ಸರಬರಾಯಿ ಮಾಡುತ್ತಿದ್ದುದ್ದನ್ನು ಟಿಪ್ಪುವು ತಿಳಿದು ರಾಜನು ಖಾದರ್ ಖಾನ್ ಖೈಸಗಿಯನ್ನು ಪ್ರಾಣಸಮೇತ ಬಿಟ್ಟದ್ದರಿಂದ ಅವನ ಕೈಯಲ್ಲಿ ತಾನೇ ಒಂದು ಕಾಗದವನ್ನು ಬರೆದುಕೊಟ್ಟು, ಮುಖ್ಯ ದಿವಾನನಾಗಿದ್ದ ಮೀರಸಾಧಕನಿಂದ ಒಂದು ಕಾಗದ ಕರಣೀಕ ಪೂರ್ಣಯ್ಯನಿಂದ ಒಂದು ಕಾಗದ ಅಂತು ಮೂರು ಕಾಗದಗಳನ್ನು ಕೊಟ್ಟು ಇಂಗ್ಲೀಷರನ್ನು ಸ್ನೇಹ ಮಾಡಬಾರದಾಗಿಯೂ ತಾವೇ ಹತ್ತಿರ ಇರುವುದರಿಂದ ಸ್ನೇಹಾಚಾರದಲ್ಲಿರಬೇಕಾಗಿಯೂ, ಇದಕ್ಕೆ ಸಮ್ಮತವಾದರೆ ಕೊಡಗಿಗೆ ಮುಟ್ಟಿರುವ ಹೆಗ್ಗಡ ದೇವನಕೋಟೆ, ಪಿರ್‍ಯಾಪಟ್ಟಣ, ಬೆಟ್ಟದಪುರ, ಕೊಣನೂರು, ಅರಕಲಗೋಡು ಸಹ ಬಿಟ್ಟು ಕೊಡುವುದಾಗಿ ಹೇಳಿ ಕಳುಹಿಸಿದನು. ರಾಜನು ಈ ಕಾಗದಗಳನ್ನು ನೋಡಿ ಮೊದಲು ಹೀಗೆ ನಂಬಿಕೆ ಭಾಷೆಯನ್ನು ಕೊಟ್ಟು ಕೊಡಗು ದೇಶವೆಲ್ಲವನ್ನು ಹಾಳು ಮಾಡಿದ್ದರಿಂದ ತನಗೆ ಟಿಪ್ಪುವಿನ ಸ್ನೇಹ ಬೇಡವಾಗಿ ತಿಳಿಸಿದನು.

ಹೆಗ್ಗಳದಿಂದ ಇಂಗ್ಲೀಷರ ಸೈನ್ಯವು ಹೊರಟು ಮೈಸೂರಿಗೆ ಹೋಗುವಾಗ ಕಿಗ್ಗಟ್ಟು ನಾಡು ತಾಲೋಕು ಅಮಲ್ದಾರನಾಗಿದ್ದ ಕೇಟೋಳಿ ಅಚ್ಚುವಣ್ಣನನ್ನು ಇವರ ಸೈನ್ಯಕ್ಕೆ ಸರಬರಾಯಿ ಮಾಡುವುದಕ್ಕಾಗಿ ರಾಜನು ನೇಮಕಮಾಡಿದನು. ಇಂಗ್ಲೀಷರ ಜೊತೆಯಲ್ಲಿ ರಾಜನು ಶ್ರೀರಂಗ ಪಟ್ಟಣಕ್ಕೆ ಹೋಗಿದ್ದನು. ಆದರೆ ಸರಬಯರಾಯಿ ಉಸ್ತುವಾರಿ ಬಗ್ಯೆ ಇವನನ್ನು ಹಿಂದಕ್ಕೆ ಕಳುಹಿಸಿಬಿಟ್ಟರು.

1792ರಲ್ಲಿ ಇಂಗ್ಲೀಷರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಆ ಗಡಿಬಿಡಿಯಲ್ಲಿ 12 ಸಾವಿರ ಕೊಡಗರು ಮತ್ತು ಕೆಲವು ಕೊಂಕಣಿ ಕ್ರಿಸ್ತಾನರು ಸಹ ಕೊಡಗು ದೇಶಕ್ಕೆ ಓಡಿಬಂದುಬಿಟ್ಟರು. ಅನೇಕರು ಸಿಡುಬಿನಿಂದಲೂ ಅನ್ನಪಾನವಿಲ್ಲದೆಯೂ ಸತ್ತು ಹೋಗಿದ್ದರು. ಓಡಿ ಬಂದ ಜನರಿಗೆ ಎರಡು ತಿಂಗಳ ಮಟ್ಟಿಗೆ ಊಟಕ್ಕೆ ಬೇಕಾದ ಸಾಮಾನುಗಳನ್ನು ರಾಜನು ಅರಮನೆ ಯಿಂದ ಕೊಟ್ಟು ಕೊಡಗರಿಗೆ ಅವರು ಮೊದಲು ಇದ್ದ ಸ್ಥಳ ಮನೆ ಮಾರುಗಳನ್ನು ಕೊಟ್ಟಿದ್ದಲ್ಲದೆ, ಕೊಂಕಣಿ ಕ್ರಿಸ್ತಾನರಿಗೆ ಎಡೆನಾಲ್ಕುನಾಡು ತಾಲೋಕಿನಲ್ಲಿ ಭೂಮಿಯನ್ನು ಕೊಟ್ಟು ಈ ದೇಶದಲ್ಲಿ ನೆಲೆಗೊಳಿಸಿದನು.

ಆಮೇಲೆ ರಾಜನು ಕೊಡಗರ ಸೈನ್ಯವನ್ನು ತೆಗೆದುಕೊಂಡು ಹೋಗಿ ಐಗೂರು ಸೀಮೆ ತಾಲೂಕಿನ ಅರೆಕೆರೆ ಎಂಬ ಗ್ರಾಮದಲ್ಲಿಳಿದುಕೊಂಡು ಟಿಪ್ಪುವಿನ ಕಡೆಯವರಿಗೆ ತೆಗೆದುಕೊಂಡು

ಹೋಗುತ್ತಿರುವ ಸಾಮಾನುಗಳನ್ನು ಕಿತ್ತುಕೊಂಡು ಇಂಗ್ಲೀಷರಿಗೆ ಕೊಡುತ್ತಿದ್ದನು.

1792ನೇ ಮಾರ್ಚಿನಲ್ಲಿ ಇಂಗ್ಲೀಷರಿಗೂ ಟಿಪ್ಪುವಿಗೂ ರಾಜಿಯಾಯಿತು. ಕೊಡಗು ರಾಜನು ಇಂಗ್ಲೀಷರ ಪರಾ ವಹಿಸಿ ಟಿಪ್ಪುವಿಗೆ ವಿರೋಧವಾಗಿ ನಿಂತದ್ದರಿಂದ ಟಿಪ್ಪುವು ಕೊಡಗು ರಾಜನ ಮೇಲೆ ಇನ್ನು ಮುಂದೆ ಶರಾರತ್ತು ಮಾಡದಂತೆ ಒಪ್ಪಂದ ಮಾಡಿಸಬೇಕಾಗಿ ಜನರಲ್ ಆಬರ್‌ಕ್ರಾಂಬಿಯು ಲಾರ್ಡ್ ಕಾರ್ನ್‌ವಾಲಿಸ್‌ಗೆ ಅರಿಕೆ ಮಾಡಿದಲ್ಲಿ ಅವನು ಅದೇ ರೀತಿ ಟಿಪ್ಪುವಿಗೆ ತಿಳಿಸಿದನು. ಅದಕ್ಕೆ ಟಿಪ್ಪುವು ಅಸಮಾಧಾನದಿಂದ ಒಪ್ಪಿಕೊಂಡು, ಲಿಂಗರಾಜನ ಕಾಲದಲ್ಲಿ ವರುಷ ಒಂದರ 24,000 ರೂಪಾಯಿಗಳನ್ನು ಕೊಡುತ್ತಿದ್ದದ್ದು ತನಗೆ ಇನ್ನೂ ಹಕ್ಕಿದೆಯೆಂದು ತಾನೇ ನೆನಸಿಕೊಂಡು ತನಗೆ ಸಿಕ್ಕುತ್ತಿಲ್ಲದಿದ್ದರೂ ಆ ಹಣವನ್ನು ಇನ್ನುಮುಂದೆ ಇಂಗ್ಲೀಷ್‌ನವರು ತೆಗೆದುಕೊಳ್ಳಬಹುದಾಗಿ ಒಪ್ಪಿಕೆ ಬರೆದು ಕೊಡಗು ರಾಜನ ಮೇಲೆ ಇದ್ದ ಕೋಪವನ್ನು ತೀರಿಸಿಕೊಂಡನು.

ಇಂಗ್ಲೀಷರಿಗೂ ಟಿಪ್ಪುವಿಗೂ ರಾಜಿಯಾದ ವರ್ತಮಾನವು ರಾಜನಿಗೆ ಅರಕೆರೆ ಯಲ್ಲಿದ್ದಾಗ ತಿಳಿದುಬಂತು. ಅದನ್ನು ಕೇಳಿ ಒಡನೆ, ಅಲ್ಲಿ ಪುಟ್ಟೇಗೌಡನನ್ನೂ ಮಂಡೇಪಂಡ ಅಪ್ಪಯ್ಯನನ್ನೂ ಬಿಟ್ಟು ಸೈನ್ಯ ಸಮೇತ ನಾಲ್ಕುನಾಡು ಅರಮನೆಯಲ್ಲಿ ಬಂದು ಸೇರಿಕೊಂಡನು.

ರಾಜಿಯಾದ ಮೇಲೆ ಬೊಂಬಾಯಿಗೆ ಹೋಗುವ ಇಂಗ್ಲೀಷ್ ಸೈನ್ಯದೊಡನೆ ಜನರಲ್ ಆಬರ್ ಕ್ರಾಂಬಿಯು ಕೊಡಗಿನ ಮಾರ್ಗವಾಗಿ ಹೊರಟು ಹೆಗ್ಗಳದಲ್ಲಿಳಿದು ಕೊಂಡನು. ಅವನನ್ನು ರಾಜನು ಭೇಟಿ ಮಾಡಿದಲ್ಲಿ, ಟಿಪ್ಪುವಿಗೂ ಇಂಗ್ಲೀಷರಿಗೂ ರಾಜಿಯಾಗಿ ಮಾಡಿಕೊಂಡ ಒಡಂಬಡಿಕೆಯ ತಪಶೀಲನ್ನು ಹೇಳಿದನು. ಅದಕ್ಕೆ ರಾಜನು, ತಾನು ಟಿಪ್ಪುಸುಲ್ತಾನನಿಗೆ ಅಂಥ ಹಣ ಎಂದೂ ಕೊಟ್ಟಿಲ್ಲವಾಗಿಯೂ, ತಾನು ಮೈಸೂರು ಸಂಸ್ಥಾನದಿಂದ ಗೆದ್ದ ರಾಜ್ಯವನ್ನು ಬಿಟ್ಟುಕೊಡುವುದಿಲ್ಲ ವಾಗಿಯೂ, ತನಗೆ ಅಂಥ ರಾಜಿಗೆ ಸಮ್ಮತವಿಲ್ಲವಾಗಿಯೂ ಹೇಳಿದನು. ಆಬರ್‌ಕ್ರಾಂಬಿಯು ಇದನ್ನು ಕೇಳಿ ಚಿಂತೆಗೊಂಡು, ಕೊಡಗಿನ ಮತ್ತು ಮೈಸೂರಿನ ಸರಹದ್ದನ್ನು ನಿಶ್ಚಯ ಮಾಡುವಂತೆ ಒಬ್ಬ ಇಂಜಿನಿಯರನ್ನು ಕಳುಹಿಸಿಕೊಡುವು
ದಾಗಿಯೂ ಬೊಂಬಾಯಿಗೆ ಹೋಗಿ ಪುನಹ ಬಂದ ಮೇಲೆ ರಾಜನ ಮನಸಿಗೆ ತೃಪ್ತಿಯಾಗುವಂತೆ ಕರಾರು ಬರೆದುಕೊಡುವುದಾಗಿಯೂ ಸಮಾಧಾನ ಹೇಳಿ ಹೊರಟುಹೋದನು.

ಈ ಜನರಲ್ ಸರ್ ರಾಬರ್ಟ್ ಆಬರ್‌ಕ್ರಾಂಬಿಯು 1791ರಲ್ಲಿ ಶ್ರೀರಂಗ ಪಟ್ಟಣಕ್ಕೆ ಹೋಗುವಾಗ ವೀರರಾಜೇಂದ್ರ ಒಡೆಯನೂ ಅವನೂ ಮಗ್ಗುಲದಲ್ಲಿ ಒಂದು ಡೇರೆಯೊಳಗೆ ಕೂತುಕೊಂಡು ಸ್ನೇಹಚಾರವಾಗಿ ಪ್ರಸ್ತಾಪಿಸಿದ ನೆನಪಿಗಾಗಿ 1792ರಲ್ಲಿ ಅದೇ ಸ್ಥಳದಲ್ಲಿ ಒಂದು ಪೇಟೆಯನ್ನು ಕಟ್ಟಿ ವೀರರಾಜೇಂದ್ರ ಪೇಟೆ ಎಂದು ಹೆಸರಿಟ್ಟನು.

1770ರಲ್ಲಿ ಕೊಡಗು ರಾಜರಾಗಿದ್ದ ಮುದ್ದುರಾಜ ಮುದ್ದೈಯ್ಯ ರಾಜರೊಡನೆ ಹೈದರಾಲಿಯು ಯುದ್ಧಕ್ಕೆ ನಿಂತು ಸೋತುಹೋಗಿ ಪಂಜ್ಯೆ ಮತ್ತು ಬೆಳ್ಳಾರೆ ಮಾಗಣೆಗಳನ್ನು ಕೊಡಗಿಗೆ ಬಿಟ್ಟುಕೊಟ್ಟದ್ದು ಸರಿಯಷ್ಟೆ. ಟಿಪ್ಪುವಿಗೂ ಇಂಗ್ಲೀಷರಿಗೂ ರಾಜಿಯಾದ ಮೇಲೆ ಅವುಗಳನ್ನು ಬಿಟ್ಟುಕೊಡಬೇಕಾಗಿ ಟಿಪ್ಪುವು ಕೇಳಿದ್ದರಿಂದ, ಅವುಗಳನ್ನು ಕೊಡಗು ರಾಜನು ಮೈಸೂರು ಸಂಸ್ಥಾನಕ್ಕೆ ಬಿಟ್ಟುಕೊಟ್ಟನು. ಆದರೆ ಅದರಿಂದ ತೃಪ್ತಿಯಾಗದೆ ಅಮರ ಸೂಳ್ಯ ಮಾಗಣೆಗಳನ್ನು ಬಿಟ್ಟುಕೊಡುವುದಾಗಿ ಕೇಳಿದ್ದರಿಂದ, ರಾಜನು ಅವುಗಳನ್ನು ಬಿಟ್ಟುಕೊಡಲು ಸಮ್ಮತಿಸದೆ ಉಭಯಕಕ್ಷಿಗಾರರ ಸ್ನೇಹಿತರಾದ ಇಂಗ್ಲೀಷರಿಗೆ ಇದನ್ನು ತಿಳಿಸಿದನು.

1793ನೇ ಮಾರ್ಚಿ ತಿಂಗಳಲ್ಲಿ ಆಬರ್‌ಕ್ರಾಂಬಿಗೂ ರಾಜನಿಗೂ ಕಣ್ಣನೂರಿನಲ್ಲಿ ಭೇಟಿಯಾಗಿ 24,000 ರೂಪಾಯಿಯ ವಿಷಯ ಬಹಳವಾಗಿ ಚರ್ಚೆಯಾಗಿ ಆಬರ್‌ಕ್ರಾಂಬಿಯು ಬಹಳವಾಗಿ ನೊಂದುಕೊಂಡು, ಹಲವು ಬಗೆಯಿಂದಲೂ ರಾಜನನ್ನು ಬೋಧಿಸಿ ಆ ಹಣವನ್ನು ಕೊಡುವಂತೆ

ಒಪ್ಪಿಕೊಳ್ಳಬೇಕಾಗಿ ನಾನಾತರದಿಂದ ಕೇಳಿಕೊಂಡನು. ಕುಂಪಣಿ ಸರಕಾರಕ್ಕೆ ತಾನು ಹಣವನ್ನು ಕೊಟ್ಟರೆ ಕುಂಪಣಿ ಸರಕಾರವು ತನಗೆ ರಾಜ್ಯವನ್ನು ಕೊಟ್ಟು ತನ್ನಿಂದ ಕಪ್ಪವನ್ನು ಹೊಂದಿಕೊಳ್ಳುತ್ತಾರೆಂದು ಜನರು ಹೇಳಿಯಾರೆಂದು ರಾಜನು ಆಕ್ಷೇಪಿಸಿದಲ್ಲಿ, ರಾಜನು ಕೊಡುವುದು ಕಪ್ಪಕಾಣಿಕೆಯಲ್ಲವೆಂತಲೂ ಸ್ನೇಹಾಚಾರದಿಂದ ಕೊಡುವುದೆಂತಲೂ ಹೇಳಿ ಆಬರ್‌ಕ್ರಾಂಬಿಯು ರಾಜನನ್ನು ಒಪ್ಪಿಸಿ ಈ ಕೆಳಗಿನ ರೀತಿ ಭಾಷಾ ಪತ್ರಿಕೆಯನ್ನು ಬರೆದುಕೊಟ್ಟನು.

1. ರಾಜರವರು ಟಿಪ್ಪು ಸುಲ್ತಾನರ ಸಂಗಡ ಯುದ್ಧಮಾಡಿ, ತಮ್ಮ ಕೊಡಗಿನ ಸೀಮೆಯನ್ನು ಸ್ವಾಧೀನ ಮಾಡಿಕೊಂಡರು. ಅದರಲ್ಲಿ ಕೆಲವು ಸೀಮೆ ಬಾಕಿ ಇದ್ದಂಥಾದ್ದನ್ನು ತಮ್ಮ ಹಿಮ್ಮತ್ತಿನಿಂದಲೇ ಸ್ವಾಧೀನ ಮಾಡಿಕೊಂಡರು. ಇದಕ್ಕೆ ಸರಕಾರ ಕುಂಪಣಿ ಕಡೆಯಿಂದ ಏನೊಂದೂ ಮದ್ದತು ಮಾಡಲಿಲ್ಲ. ಈ ಪ್ರಕಾರ ಇರುತ್ತಿದ್ದಲ್ಲಿ ಇಂಗ್ರೇಜಿ ಸರಕಾರಕ್ಕೂ ಟಿಪ್ಪುಸುಲ್ತಾನರಿಗೂ ಆದ ಮೊದಲಿನ ಲಡಾಯದಲ್ಲಿ ದೊರೆಗಳವರು ಇಂಗ್ರೇಜಿ ಸರಕಾರಕ್ಕೆ "ನೀವು ಯಾವುದಕ್ಕೂ ಯೋಚನೆ ಮಾಡುವ ಕೆಲಸವಿಲ್ಲ. ಏನೊಂದು ಸಹಾಯ ಸಂಪತ್ತು ಬೇಕಾದರೂ ನಾವು ಮಾಡಿಕೊಡುತ್ತೇವೆ." ಎಂತ ಕಬೂಲು ಹೇಳಿದ್ದರಿಂದ ಈ ಮದ್ದತುಗಾರಿಯನ್ನು ಸರಕಾರದಲ್ಲು ಕಬೂಲು ಮಾಡಿ ರಾಜರ ಕಡೆಯಿಂದಲೂ ನಮ್ಮ ಕಡೆಯಿಂದಲೂ ಒಪ್ಪಿ ಕುಶಿಯಾಗಿ ಸರಕಾರ ಕುಂಪಣಿ ಕಡೆಯಿಂದ ತಲಚೇರಿ ಕೋಟೆ ಮೆಸ್ತ್ರರಾಬರ್ಟ್ ಟೇಯಿಲರ್ ಸಾಹೇಬರ ಮಾರೀಪತ್ತಿನಿಂದ ತಪಮಾನೆಯನು ಬರಸಿ ತಲಚೇರಿ ಸರಕಾರದ ದಪ್ತರದಲ್ಲು ಮಡಗಿದೆ.
2. ರಾಜರು ಅಂತಃಕರಣ ಪೂರ್ವಕವಾಗಿ ಯುದ್ಧವನ್ನು ತಾವು ಮಾಡಿದರು. ಬೊಂಬಾಯಿ ಸಂಸ್ಥಾನದ ಕೆಲವು ಪವುಜು ನಮ್ಮ ಹುಕುಮತ್ತಿನಲ್ಲಿತ್ತು. ಆ ಲಷ್ಕರಿಗೆ ಬೇಕಾದ ಎತ್ತು ಅಕ್ಕಿ ರಸದು ಮುಂತಾಗಿ ಯಾವತ್ತು ಕೊಟ್ಟ ಬಹಳ ಮೆಹನತ್ತೂ ಮದ್ದತು ಮಾಡಿದರು. ಈ ಪ್ರಕಾರ ಕುಮ್ಮಕ್ಕು ಮಾಡದಿದ್ದರೆ ಪವುಜು ಮುಂದಕ್ಕೆ ಸಾಗುವುದಕ್ಕೆ ಪ್ರಯಾಸವಿತ್ತು. ಈ ಪವುಜಿಗೆ ಕೊಟ್ಟಂತ ರಸದು ಎತ್ತಿಗೆ ಸಹ ಇದರ ಕ್ರಯ ರಾಜರವರು ತಮ್ಮ ಮನಃಪೂರ್ವಕವಾಗಿ ತೆಗೆದುಕೊಳ್ಳುವುದಿಲ್ಲವೆಂತ ನಿಶ್ಚಯ ಮಾಡಿ ಇದ್ದಾರೆ.
3. ಲಡಾಯ ಪ್ರಾರಂಭವಾದಾರಭ್ಯ ಲಡಾಯ ಅಖೈರು ಪರಿಯಂತರದಲ್ಲು ರಾಜರವರು ಅಂತಃಕರಣ ಪೂರ್ವಕವಾಗಿ ಕುಂಪಣಿ ಸರಕಾರದ ಸಂಗಡ ದೋಸ್ತಿ ಮಡಗಿದ್ದರಿಂದ ಆ ದೋಸ್ತಿಗೆ ವಿಕಲ್ಪ ಮಾಡಬೇಕು ಎಂಬುದಾಗಿ ಟಿಪ್ಪುಸುಲ್ತಾನರು ಕುಂಪಣಿಗೆ ತಿಳಿಯದ ಹಾಗೆ ಅನೇಕ ಹಿಕಮತ್ತುಗಳ ನಡೆಸುತ್ತಾ ಇದ್ದರು. ಆದಾಗ್ಯೂ ಆ ಮಾತಿಗೆ ರಾಜರು ಒಡಂಬಡಲಿಲ್ಲ.
4. ಹೋದ ಮಾರ್ಚಿ ತಿಂಗಳಲ್ಲಿ ಶ್ರೀರಂಗಪಟ್ಟಣ ಸಲ್ಲ ಸನ್ನದು ಕರಾರು ಆದ ಸಮಯದಲ್ಲಿ ಲಾರ್ಡ್‌ಕಾರ್ನ್‌ವಾಲೀಸ್ ಸಾಹೇಬರವರು ರಾಜರವರ ಬಹುಮಾನ ಗುಣಾತಿಶಯ ನಿಷ್ಪ್ರಪಂಚಪೂರ್ವಕವಾಗಿ ಇರುವುದನ್ನು ತಿಳಿದು ರಾಜರವರು ಆತಂಕವಿಲ್ಲದೆ ಟಿಪ್ಪುಸುಲ್ತಾನರ ಅಂಗೇಜು ಇಲ್ಲದೆ ಸ್ವತಂತ್ರವಾಗಿ ಇರಬೇಕು ಎಂತ ನಿಶ್ಚೈಸಿ ರಾಜರವರಿಗೂ ಅವರ ದೇಶಕ್ಕೂ ಕುಂಪಣಿ ಸರಕಾರದ ಆಶ್ರಯದಲ್ಲಿ ತೆಗೆದುಕೊಳ್ಳಬೇಕು ಎಂಬುದಾಗಿ ಮೊಕರೂರು ಮಾಡಿದರು. ಈ ಬಗ್ಯೆ ಟಿಪ್ಪುಸುಲ್ತಾನರು ಬಹಳ ವಿರೋದವಾದಂಥ ಮಾತನ್ನು ಹೇಳಿದರು. ಆ ಮಾತು ಯಾವತ್ತೂ ಕಂಡನೆ ಮಾಡಿದಲ್ಲಿ ಅದರ ಮೇಲೆ ಟಿಪ್ಪುಸುಲ್ತಾನರು ಕೊಡಗಿನ ಸೀಮೆಯಿಂದ ವರುಷಂಪ್ರತಿಯಲ್ಲು ಕಂಡನೆ 8,000 ವರಹ ತಮಗೆ ಬರುತ್ತಿತ್ತು. ಅದನ್ನು ಕುಂಪಣಿ ಸರಕಾರಕ್ಕೆ ತೆಗೆದುಕೊಳ್ಳಬೇಕೆಂಬುದಾಗಿ ಹೇಳಿದರು.

5. ರಾಜರವರು ಹೇಳಿದರು "ಯಾವಾಗ್ಯೂ ತಮ್ಮ ಸೀಮೆಯಿಂದ 8,000 ವರಹ ಕಂಡನೆ ಟಿಪ್ಪುಸುಲ್ತಾನರಿಗೆ ಕೊಡಲಿಲ್ಲ. ಕುಂಪಣಿ ಸರಕಾರದ ಸ್ನೇಹ ಮಾದ್ದತಿನ ಉದ್ದಿಶ್ಯ ನಮ್ಮ ಕುಶಿಯಿಂದ ವರುಷಂ ಪ್ರತಿಯಲ್ಲು 8,000 ವರಹ ಕೊಟ್ಟೆವು"ಎಂಬುದಾಗಿ,
6. ದೊರೆಗಳವರು ತಮ್ಮ ರಾಜ್ಯ ಪರಿಪಾಲನೆ ಮಾಡಿಕೊಳ್ಳುವಲ್ಲಿ ಸರಕಾರ ಕುಂಪಣಿ ಕಡೆಯಿಂದ ಯಾವಾಗಲಾದರೂ ತಂಟೆತಕರಾರು ಆಗಬಾರದು. ಏನು ಕಾರಣ ಅಂದರೆ ರಾಜರವರು ಬಹಳ ಧೈರ್ಯದಿಂದ ತಮ್ಮ ರಾಜ್ಯದ ಪ್ರಜೆ ಸಂರಕ್ಷಣೆ ಮಾಡಿಸಿ ಪ್ರಜಾವೃದ್ಧಿ ಮಾಡಿಸುವಂಥಾದಕ್ಕೆ ಸಮರ್ಥರಿದ್ದಾರೆ.

   ತಾಜಾ ಕಾಲಂ. ಸದರಿ ಬರದ ವರಹ ಒಂದಕ್ಕೆ ರೂಪಾಯಿ ಮೂರರ ಪ್ರಕಾರ ಮಹಾ ರಾಜರವರು ವರ್ಷಂಪ್ರತಿಯಲ್ಲು ತಲಚೇರಿಗೆ 24,000 ರೂಪಾಯಿ ಕೊಡಬೇಕು. ಈ ರೀತಿ ಒಪ್ಪಂದ ಬರೆದು ಆಬರ್‌ಕ್ರಾಂಬಿಯು ವೀರರಾಜನಿಗೆ ಕೊಟ್ಟು ಕಲ್ಕತ್ತಕ್ಕೆ ಹೋದನು.

ಟಿಪ್ಪುವು ಇಂಗ್ಲೀಷರೊಡನೆ ಆದ ಒಡಂಬಡಿಕೆಯ ಮೇಲೆ ರಾಜಿಯಲ್ಲಿ ಇರಲು ಇಷ್ಟಪಡದೆ ಪುನಹ ಯುದ್ಧಕ್ಕೆ ಸನ್ನಾಹ ಮಾಡುತ್ತಿದ್ದುದ್ದನ್ನು ವೀರರಾಜನು ಅರಿತು ಇಂಗ್ಲೀಷರಿಗೆ ತಿಳಿಸಿದನು.

ಈ ಮಧ್ಯೆ ಟಿಪ್ಪುವು ವೀರರಾಜೇಂದ್ರ ಒಡೆಯನನ್ನು ಕೊಲ್ಲಿಸುವುದಕ್ಕೆ ರಾಜನ ಬಂಧು ವರ್ಗದ ಒಬ್ಬ ಲಿಂಗರಾಜನೆಂಬುವನನ್ನೂ ಮತ್ತು ಇಬ್ಬರು ಶಿಸ್ತು ಗುಂಡು ಹೊಡೆಯುವವರನ್ನೂ ರಾಜನು ಮಡಿಕೇರಿಗೆ ಹೋಗುವ ದಾರಿಯಲ್ಲಿ ಅಡಗಿಸಿದ್ದರು. ಆದರೆ ಶಿಸ್ತು ಹೊಡೆಯುವವರು ರಾಜನ ಕೈಗೆ ಸಿಕ್ಕಲು, ಅವರನ್ನು ಇಂಗ್ಲೀಷರ ಹತ್ತಿರ ತಲಚೇರಿಗೆ ಕಳುಹಿಸಿದನು. ಅವರನ್ನು ಸಾಕ್ಷಿ ಬಗ್ಗೆ ಜೀವಂತರಾಗಿ ಇಟ್ಟಿರಬೇಕೆಂದು ಇಂಗ್ಲೀಷರು ತಿಳಿಸಿದ ಮೇರೆ ಅವರ ಕಾಲುಗಳನ್ನು ಕುಯಿದು ವೀರರಾಜೇಂದ್ರ ಪೇಟೆಯಲ್ಲಿ ಪಹರೆಯಲ್ಲಿಟ್ಟನು.

ರಾಜನಿಗೆ ಪಟ್ಟದ ರಾಣಿಯಲ್ಲಿ ಗಂಡು ಮಕ್ಕಳಿಲ್ಲದ್ದರಿಂದ 1796ರಲ್ಲಿ ಕರಣೀಕ ಸುಬ್ಬೈಯ್ಯನ ತಂಗಿಯಾದ ಮಹದೇವ ರಾಣಿಯನ್ನು ಮದುವೆ ಮಾಡಿಕೊಂಡನು.

1799ರಲ್ಲಿ ಟಿಪ್ಪುವಿಗೂ ಇಂಗ್ಲೀಷರಿಗೂ ಪುನಹ ಯುದ್ಧಕ್ಕೆ ಸುರು ಆಗಿ ಇಂಗ್ಲೀಷ್ ಸೈನ್ಯವು ಕೊಡಗಿನ ಮೇಲೆ ಹೋಗುವದಕ್ಕಾಗಿ ಒಂದು ಮಲಯಾಳ ಸರಹದ್ದಿನ ಕಲ್ಲು ಹೊಳೆಯ ಹತ್ತಿರ ಇಳಿದಿದ್ದಲ್ಲಿ ಪಹರೆಯವರ ಮೇಲೆ ಮಲಯಾಳದ ಮಾಪಿಳ್ಳೆಯವರು ಗುಂಡು ಹಾರಿಸಿ ತೊಂದರೆ ಮಾಡಿದ್ದನ್ನು ಇಂಗ್ಲೀಷರು ರಾಜನಿಗೆ ತಿಳಿಸಲು, ರಾಜನು 300 ಜನ ಕೊಡಗರನ್ನು ಕಳುಹಿಸಿ ಅವರ ಪುಂಡನ್ನು ನಿಲ್ಲಿಸಿದನು.

ಟಿಪ್ಪುವು ಪಿರ್‍ಯಾಪಟ್ಟಣಕ್ಕೆ ಬಂದು ಇಂಗ್ಲೀಷರೊಡನೆ ಸಿದ್ಧೇಶ್ವರನ ಬೆಟ್ಟದ ಹತ್ತಿರ ಯುದ್ಧ ಮಾಡಿ ಸೋತು ಪಿರ್‍ಯಾಪಟ್ಟಣಕ್ಕೆ ಓಡಿ ಹೋಗಿ ಅಲ್ಲಿಂದ ಶ್ರೀರಂಗಪಟ್ಟಣವನ್ನು ಸೇರಿಕೊಂಡನು.

ಆ ಮೇಲೆ ರಾಜನು ನಾಲ್ಕುನಾಡು ಅರಮನೆಗೆ ಬಂದು ಮೂರು ದಿವಸ ಇದ್ದನು. ಅಷ್ಟರಲ್ಲಿ ಅರಕಲಗೋಡಿನ ಸೂರ ಎಂಬ ಬ್ರಾಹ್ಮಣನು ಅರಕಲಗೋಡು ಬಸುವಾಪಟ್ಟಣ ಮತ್ತು ಕೊಣನೂರುಗಳಿಂದ ಜನರನ್ನು ಜಮಾಯಿಸಿ ಕೊಡಗನ್ನು ನುಗ್ಗಿ ತೊರೆನೂರು ಹೆಬ್ಬಾಲೆ ಶಿರಂಗಾಲ ಗ್ರಾಮಗಳನ್ನು ಲೂಟಿಮಾಡಿ ಮನೆಗಳನ್ನೆಲ್ಲಾ ಸುಟ್ಟು ಓಡಿ ಹೋದನು. ಈ ವರ್ತಮಾನವನ್ನು ರಾಜನು ಕೇಳಿ ಚಿಂತಾಕ್ರಾಂತನಾಗಿ ಮೈಸೂರು ಸಂಸ್ಥಾನವನ್ನು ಲೂಟಿ ಮಾಡುವದಕ್ಕಾಗಿ ಕರಣೀಕ ಸುಬ್ಬಯ್ಯನನ್ನೂ ಕಾರ್‍ಯಕಾರ ಬಿದ್ದಂಡ ಬೋಪುವನ್ನೂ ಕೊಡಗರ ಸೈನ್ಯದೊಡನೆ ಕೊಡೆಯಾಲ ತಾಲೋಕಿಗೂ, ಇನ್ನೊಂದು ಸೈನ್ಯವನ್ನು ಈಶ್ವರಯ್ಯನ ಜೊತೆಯಲ್ಲಿ ಹೆಗ್ಗಡದೇವನ

ಕೋಟೆಗೂ ಕಳುಹಿಸಿದನು.

ಕೊಡೆಯಾಲದ ಕಡೆಗೆ ಹೋದ ಸೈನ್ಯವು ಲೂಟಿ ಮಾಡುತ್ತಿದ್ದುದ್ದನ್ನು ರಾಜನು ತಿಳಿದು, ಆದಷ್ಟು ಮಟ್ಟಿಗೆ ಲೂಟಿ ಮಾಡದೆ ಒಪ್ಪಂದ ಮಾಡಿ ದೇಶವನ್ನು ಸಂಪಾದಿಸಬೇಕಾಗಿ ಹೇಳಿ ಕಳುಹಿಸಿದನು. ಅದೇ ರೀತಿ ಮಂಗಳೂರು ತಾಲೋಕು ಬಾರಕೂರು ಬಗ್ವಾಡಿ ಪರಿಯಂತರ ದೇಶವನ್ನು ಜೈಸಿ 500 ಮಂದಿ ಕೊಡಗರ ಸಮೇತ ಕಾರ್ಯಕಾರ ಬಿದ್ದಂಡ ಬೋಪುವು ವೀರಖಂಬದಲ್ಲಿ ನಿಂತನು. ಈ ವರ್ತಮಾನವನ್ನು ತುರುಕರು ತಿಳಿದು ದೊಡ್ಡದೊಂದು ಸೈನ್ಯದೊಡನೆ ವೀರ ಖಂಬಕ್ಕೆ ಬಂದರು. ಅಷ್ಟರಲ್ಲಿ ಕರಣೀಕ ಸುಬ್ಬಯ್ಯನು ಮುಂದುವರಿಸಿ ಬಿಟ್ಟಿದ್ದನು. ತುರುಕರು ದೊಡ್ಡ ಪವುಜು ತಂದ ವರ್ತಮಾನವನ್ನು ಬೋಪುವು ತಿಳಿದು, ಚಿಂತಾಕ್ರಾಂತನಾಗಿ ತನ್ನ 500 ಜನರಿಂದ ವೀರಖಂಬವನ್ನು ಕಾಪಾಡುವುದು ಅಸಾಧ್ಯ ಕೆಲಸವೆಂದು ತಿಳಿದು, ತಾನೇ ತುರುಕರ ದಂಡಿನ ಮೇಲೆ ಬಿದ್ದನು. ತುರುಕರು ಕೊಡಗರ ಪೆಟ್ಟು ತಾಳಲಾರದೆ ದಿಕ್ಕಾಪಾಲಾಗಿ ಓಡಿಹೋದರು. ತುರುಕರ ಸೈನ್ಯದೊಡನೆ ಇದ್ದ ಕೃಷ್ಣರಾಜನೆಂಬವನನ್ನು ಬೋಪುವು ಕೈಸೆರೆ ಹಿಡಿದು ತಮ್ಮ ದೊರೆಯಾದ ವೀರರಾಜೇಂದ್ರ ಒಡೆಯನ ಹತ್ತಿರ ಕಳುಹಿಸಿಕೊಟ್ಟನು.

ಕರಣೀಕ ಸುಬ್ಬಯ್ಯನ ಜೊತೆಯಲ್ಲಿ ಹೋದ ಸೈನ್ಯದ ಮೇಲೆ ಬಂಟವಾಳದಲ್ಲಿ ತುರುಕರು ಬಿದ್ದು ಸೋತು ಹಿಮ್ಮೆಟ್ಟಿದರು. ಉದ್ಯಾವರದಲ್ಲಿ 500 ಕೊಡಗರೊಡನೆ ಕರ್ನಾಟಕ ಜನರು, ಕಂದಾಚಾರದ ಜನರು, ನಾಯಮ್ಮಾರರು, ಮಾಪಿಳ್ಳೆಯವರು ಅಂತು ಕೊಡಗು ಸೈನ್ಯವು ಕೊಡೆಯಾಲದ ಆಚೆಗೆ ಬಾರಕೂರು ಬಗ್ವಾಡಿ ಪರಿಯಂತರವೂ, ಈಚೆಗೆ ಹೊಸಂಗಡಿ ಘಟ್ಟ ಪರಿಯಂತರವೂ, ಸೀಮೆಯನ್ನು ಸಂಪಾದಿಸಿ ಅಲ್ಲಲ್ಲಿ ಠಾಣ್ಯ ಇಟ್ಟರು. ಆಮೇಲೆ ಬೆಳ್ಳಾರೆ ಕೋಟೆಯನ್ನು ಮುತ್ತಿಗೆ ಹಾಕಿ ಎರಡು ಮೂರು ದಿವಸದಲ್ಲಿ ಅದನ್ನು ತೆಗೆದುಕೊಂಡರು. ಮೂಡ ಕೊಡೆಯಾಲದ ಕೋಟೆಯನ್ನು ಸ್ವಲ್ಪ ಮಾತ್ರ ಲಡಾಯ ಮಾಡಿ ಕಿತ್ತುಕೊಂಡರು.

ಇತ್ತಲಾಗಿ ಈಶ್ವರೈಯ್ಯನ ಜೊತೆಯಲ್ಲಿ ಹೋದ ಸೈನ್ಯವು ಬಸುವಾಪಟ್ಟಣದ ಕೋಟೆಯನ್ನು ಹಲ್ಲಾ ಮಾಡಿ ತೆಗೆದುಕೊಂಡು ಗಡಿಯಲ್ಲಿದ್ದ ಕೆಲವು ಊರುಗಳನ್ನು ಸಂಪಾದಿಸಿಕೊಂಡಿತು.

1799ನೇ ಇಸವಿ ಮೇ 4ರಲ್ಲಿ ಶ್ರೀರಂಗಪಟ್ಟಣವನ್ನು ಇಂಗ್ಲೀಷರು ಮುತ್ತಿಗೆ ಹಾಕಿದರು. ಆ ಯುದ್ಧದಲ್ಲಿ ಟಿಪ್ಪುಸುಲ್ತಾನನು ಮಾಡಿದನು.

ಹೈದರಾಲಿಯು ಟಿಪ್ಪುಸುಲ್ತಾನನು ಸಹ ಕೊಡಗು ದೇಶದಲ್ಲಿ ಮಾಡಿದ ಹಾವಳಿಯಿಂದ ನೊರೊಕ್ಕಲು, ಅರವತ್ತೊಕ್ಕಲು, ಐವತ್ತೊಕ್ಕಲು, ನಲವತ್ತೊಕ್ಕಲು, ಸಹ ಇದ್ದ ಗ್ರಾಮಗಳಲ್ಲಿ ಅಷ್ಟು ಒಕ್ಕಲುಗಳು ಇಲ್ಲದ್ದರಿಂದ ಒಬ್ಬ ಚರಿತ್ರಕನು ನೂರೊಕ್ಕಲು ಬೆಟ್ಟ ಅಂದರೆ ನೂರು ಕಲ್ಲುಗಳಿಂದ ಕೂಡಿದ ಬೆಟ್ಟ ಎಂದು ಬರೆದನು.

ರಾಜನು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಏನು ಬೇಕೆಂದು ಇಂಗ್ಲೀಷರು ಕೇಳಿದಲ್ಲಿ, ಇಂಗ್ಲೀಷರ ಸ್ನೇಹವು ತನ್ನ ಪುತ್ರಪೌತ್ರ ಪಾರಂಪರ್ಯವಾಗಿ ಸೂರ್ಯಚಂದ್ರರು ಇರುವ ಪರಿಯಂತರವೂ ಇರುವಂತೆ ಕುಂಪಣಿ ಸರಕಾರದ ನಿಶಾನಿಗಾಗಿ ಒಂದು ಕತ್ತಿಯನ್ನು ಕೊಡಬೇಕಾಗಿ ಕೇಳಿಕೊಂಡನು. ಆದರೂ ರಾಜನು ಕೊಡುತ್ತಿದ್ದ 24,000 ರೂಪಾಯಿಯ ಬದಲಿಗೆ ವರುಷಂಪ್ರತಿ ಒಂದು ಆನೆಯನ್ನು ಕೊಟ್ಟರೆ ಸಾಕೆಂದು ಕುಂಪಣಿ ಸರಕಾರವು ರಾಜನಿಗೆ ತಿಳಿಸಿ 1799ನೇ ಅಕ್ಟೋಬರಿನಲ್ಲಿ ಆ ರೀತಿ ಒಪ್ಪಂದ ಮಾಡಿಕೊಂಡರು.

ಕರಣೀಕ ಸುಬ್ಬೈಯ್ಯನಿಗೂ ಕಾರ್ಯಕಾರ ಬೋಪುವಿಗೂ ಮತ್ತು ಈಶ್ವರೈಯ್ಯನಿಗೂ ಹೊಸದಾಗಿ

ಕಟ್ಟಿಕೊಂಡ ರಾಜ್ಯವನ್ನು ಇಂಗ್ಲೀಷರಿಗೆ ಒಪ್ಪಿಸಿ ಬರಬೇಕೆಂದು ರಾಜನೂ ಅಪ್ಪಣೆ ಮಾಡಿದನು.

ಮೈಸೂರು ದೇಶವನ್ನು ಮೈಸೂರು ರಾಜವಂಶದವರಿಗೆ ಕೊಡುವಂತೆ ನಿಶ್ಚಯಿಸಿದರೆಂದು ರಾಜನು ತಿಳಿದು ಪಿರ್ಯಾಪಟ್ಟಣದ ಉದ್ದೂರು ಕೊಡಗರಹಳ್ಳಿ ಎಂಬಲ್ಲಿವರೆಗೆ ಪೂರ್ವದಲ್ಲಿ ಕೊಡಗಿಗೆ ಸೇರಿದ್ದುದರಿಂದ ಅಲ್ಲಿಯವರೆಗೆ ಕೊಡಗಿಗೆ ಬಿಟ್ಟುಕೊಡಬೇಕಾಗಿ ರಾಜನು ಇಂಗ್ಲೀಷ್ ಸರಕಾರವನ್ನು ಕೇಳಿದನು. ಆದರೆ ಪಿರ್ಯಾಪಟ್ಟಣವನ್ನು ಮೈಸೂರು ಸಂಸ್ಥಾನಕ್ಕೆ ಬಿಟ್ಟು ತುಳುನಾಡುವಳಿತವಾದ ಕೆಲವು ಮಾಗಣೆಗಳನ್ನು ಕೊಡಗಿಗೆ ಬಿಟ್ಟುಕೊಟ್ಟರು.

1806ರಲ್ಲಿ ಲಾರ್ಡ್ ವೆಲ್ಲೆಸ್ಲಿಯು ಕೊಡಗು ರಾಜನು ಕೇಳಿದ ಕತ್ತಿಯನ್ನು ಕಳುಹಿಸಿಕೊಟ್ಟನು. ಅದನ್ನು ರಾಜನು ನೋಡಿ ತನ್ನ ಪುತ್ರ ಪೌತ್ರ ಪಾರಂಪರ್ಯವಾಗಿ ಬಹುಮಾನಾರ್ಥವಾಗಿ ಕಟ್ಟಿಕೊಳ್ಳುತ್ತೇವೆಂದು ಜವಾಬು ಬರೆದನು.

ಮೊದಲನೆ ಮೈಸೂರು ಯುದ್ಧದ ಸಮಯದಲ್ಲಿ ಕೆರ್ಪ್ಪ ಮಹನಿಯೆಂಬವನನ್ನು ಕೊಡಗು ರಾಜನಿಗೆ ವಕೀಲನಾಗಿ ಇಂಗ್ಲೀಷರು ಕೊಡಗು ದೇಶದಲ್ಲಿಟ್ಟಿದ್ದರು. ಇನ್ನು ವಕೀಲನು ಅವಶ್ಯ ವಿಲ್ಲವೆಂದು ಮಹನಿಯನ್ನು ವರ್ಗ ಮಾಡಿಬಿಟ್ಟರು.

ಕೊಡಗಿನ ಮತ್ತು ಮೈಸೂರಿನ ಸರಹದ್ದಿನ ವಿವಾದವನ್ನು ಇಂಗ್ಲೀಷರ ಮೂಲಕ ತೀರಿಸಿ ಕೊಂಡರು. ಕುಮಾರಧಾರೆಯಿಂದ ಹಿಡಿದು, ಮುಗ್ಗುಡೆ, ಹೆಗ್ಗಡೆ ದೇವನಕೋಟೆ, ವಯನಾಡು, ಕೇದಕೆ ಮುಂಡಿಗೆ ಹಳ್ಳದಕೆರೆ ಪರಿಯಂತರ ಕಲ್ಲುಗಳನ್ನು ನೆಟ್ಟು ಇರುತ್ತಾರೆ. ಈ ಕಲ್ಲುಗಳ ಒಂದು ಭಾಗದಲ್ಲಿ ಕೊಡಗಿನ ಸಂಸ್ಥಾನದ ಮುದ್ರೆಯೂ ಇನ್ನೊಂದು ಭಾಗದಲ್ಲಿ ಮೈಸೂರು ಸಂಸ್ಥಾನದ ಮುದ್ರೆಯೂ ಮೇಲ್ಭಾಗದಲ್ಲಿ ಕುಂಪಣಿ ಸರಕಾರದ ಮುದ್ರೆಯೂ ಇವೆ.

1795ರಲ್ಲಿ ವೀರರಾಜೇಂದ್ರ ಒಡೆಯನು ನಾಲ್ಕುನಾಡು ಅರಮನೆಯನ್ನು ಕಟ್ಟಿಸಿ ಗೃಹಪ್ರವೇಶ ಮಾಡಿದನು. ಅದೇ ರೀತಿ 1808ರಲ್ಲಿ ಮಡಿಕೇರಿಯಲ್ಲಿ ಒಂದು ಅರಮನೆಯನ್ನು ಕಟ್ಟಿಸಿ ಅದರ ಸಹ ಗೃಹ ಪ್ರವೇಶ ಮಾಡಿದನು.

ವೀರರಾಜೇಂದ್ರ ಒಡೆಯನಿಗೆ ಪಟ್ಟದ ರಾಣಿಯಲ್ಲಿ ಗಂಡು ಮಕ್ಕಳಿಲ್ಲ. ಮೊದಲನೇ ರಾಣಿಯಲ್ಲಿ ಹಿಟ್ಟಿದ ರಾಜಮ್ಮಾಜಿಯನ್ನು ಸೋದೆ ಬಸವಲಿಂಗ ರಾಜನಿಗೆ ಧಾರೆ ಎರೆದು ಕುಂಪಣಿ ಸರಕಾರದ ಬೊಂಬಾಯಿ ಬ್ಯಾಂಕಿನಲ್ಲಿ ಒಂದು ಲಕ್ಷ ರೂಪಾಯಿಯನ್ನಿಟ್ಟು ಅದರ ಬಡ್ಡಿ 6 ಸಾವಿರ ರೂಪಾಯಿಯನ್ನು ಪ್ರತಿ ವರುಷವೂ ಕೊಡುವಂತೆ ಏರ್ಪಾಡು ಮಾಡಿದನು. ಎರಡನೇ ಮಹದೇವಮ್ಮ ರಾಣಿಯಲ್ಲಿ ದೇವಮ್ಮಾಜಿ, ಮುದ್ದಮ್ಮಾಜಿ, ರಾಜಮ್ಮಾಜಿ ಮತ್ತು ಮಹದೇವಮ್ಮಾಜಿ ಎಂಬ ನಾಲ್ಕು ಹೆಣ್ಣು ಮಕ್ಕಳು ಹುಟ್ಟಿದರು.

1807ರಲ್ಲಿ ತನ್ನ ಮೋಹದ ರಾಣಿಯಾದ ಮಹದೇವಮ್ಮ ರಾಣಿಯು ಸತ್ತು ಹೋದುದರಿಂದ, ಪುತ್ರ ಸಂತಾನದ ನಿರೀಕ್ಷೆಯು ಅಡಗಿಹೋಯಿತು. ಇವಳ ಹೆಸರಿನಲ್ಲಿ ಮಡಿಕೇರಿಯಲ್ಲಿ ಒಂದು ಪೇಟೆಯನ್ನು ಕಟ್ಟಿ ಅದಕ್ಕ ಮಹದೇವ ಪೇಟೆಯೆಂದು ಹೆಸರಿಟ್ಟನು.

ದೇವಮ್ಮಾಜಿಯನ್ನು ಒಬ್ಬ ಕೊಡಗನಿಗೆ ಮದುವೆ ಮಾಡಲಾಯಿತು. ಈ ಕೊಡಗನಿಗೆ ಲಿಂಗಧಾರಣೆಯನ್ನು ಮಾಡಿ ಮಲ್ಲಪ್ಪನೆಂಬ ಹೆಸರು ಹಾಕಿದರು.

ತಾನು ಸತ್ತ ಮೇಲೆ ದೇವಮ್ಮಾಜಿಯು ಪಟ್ಟಕ್ಕೆ ಬರಬೇಕೆಂದೂ ಅವಳಲ್ಲಿ ಗಂಡು ಮಗನು ಹುಟ್ಟಿದರೆ ಅವನು ರಾಜನಾಗಬೇಕೆಂದೂ, ಇಲ್ಲದಿದ್ದರೆ ಮುದ್ದಮ್ಮಾಜಿಯಲ್ಲಾಗಲೀ ರಾಜಮ್ಮಾಜಿಯಲ್ಲಾಗಲೀ ಅಥವಾ ಮಹದೇವಮ್ಮಾಜಿ ಯಲ್ಲಾಗಲೀ ಗಂಡು ಮಕ್ಕಳು ಹುಟ್ಟಿದರೆ

ಅವರು ಪಟ್ಟಕ್ಕೆ ಬರಬೇಕೆಂದೂ, ಇವರ್‍ಯಾರಲ್ಲಿಯೂ ಗಂಡು ಮಕ್ಕಳು ಹುಟ್ಟದಿದ್ದರೆ ತನಗೆ ಸಾಮಾನ್ಯ ಸ್ತ್ರೀಯಲ್ಲಿ ಹುಟ್ಟಿದ ರಾಜಶೇಖರಪ್ಪ, ಶಿಶುಶೇಖರಪ್ಪ ಮತ್ತು ಚಂದ್ರಶೇಖರಪ್ಪನೆಂಬವರಲ್ಲಿ ಜ್ಯೇಷ್ಠ ಭಾಗವನ್ನನುಸರಿಸಿ ಪಟ್ಟಕ್ಕೆ ಬರಬೇಕೆಂದೂ ವೀರರಾಜೇಂದ್ರ ಒಡೆಯನು ಮರಣ ಶಾಸನವನ್ನು ಬರೆದಿಟ್ಟು 1809ರಲ್ಲಿ ತೀರಿಹೋದನು.

ವೀರರಾಜೇಂದ್ರ ಒಡೆಯನು ಮಹಾಪರಾಕ್ರಮಶಾಲಿಯು ಆದರೆ ಇವನು ಸಾಯುವ ಕಾಲ ದಲ್ಲಿ ತನಗೆ ಗಂಡು ಸಂತಾನವು ಇಲ್ಲದಿದ್ದರಿಂದ ತಾನು ಸಂಪಾದಿಸಿದ ರಾಜ್ಯವನ್ನು ದಾಯಾದಿಗಳು ಕಿತ್ತುಕೊಳ್ಳುವರೆಂಬ ಹೆದರಿಕೆಯಿಂದ ಅನೇಕ ಕೊಲೆ ಪಾತಕಗಳನ್ನು ಮಾಡಿದನೆಂದು ಹೇಳುವರು.

ದೇವಮ್ಮಾಜಿ

ವೀರರಾಜೇಂದ್ರ ಒಡೆಯನು ಸತ್ತ ಮೇಲೆ ರಾಜನ ಮರಣ ಶಾಸನದಂತೆ ತನ್ನ ಮೋಹದ ರಾಣಿಯ ಹಿರೀ ಮಗಳಾದ ದೇವಮ್ಮಾಜಿಯು ಸಿಂಹಾಸನ ವನ್ನೇರಿದಳು. ಸೋದೆ ರಾಜನು* ಮುಖ್ಯ ದಿವಾನನಾದನು. ಆದರೆ ದೊಡ್ಡ ವೀರರಾಜೇಂದ್ರ ಒಡೆಯನ ತಮ್ಮನಾದ ಲಿಂಗರಾಜನು ತನಗೆ ರಾಜ್ಯಭಾರವನ್ನು, ಕೊನೆಗೆ ದಿವಾನಗಿರಿಯನ್ನು ಸಹ ಕೊಡದೆ ಹೋದುದರಿಂದ ಅತ್ಯಂತ ಚಿಂತಾ ಕ್ರಾಂತನಾಗಿ, ಕೊಡಗು ದೇಶದ ತಕ್ಕ ಮುಖ್ಯಸ್ಥರನ್ನು ತನ್ನಂತೆ ಮಾಡಲು ತೊಡಗಿದನು.

ಈ ಸಮಯದಲ್ಲಿ ಒಂದು ದರಬಾರು ಆಯಿತು. ಅಲ್ಲಿ ಕೆಲವರು ಸೋದೆರಾಜನ ಬದಲಿಗೆ ಲಿಂಗರಾಜನೇ ಮುಖ್ಯ ದಿವಾನನಾಗಿರಬೇಕೆಂದು ಅಭಿಪ್ರಾಯಪಟ್ಟರು. ಆದರೆ ದೊಡ್ಡ ವೀರರಾಜೇಂದ್ರ ಒಡೆಯನು ಮಾಡಿದ್ದ ಏರ್ಪಾಡನ್ನು ಬದಲಿಸಲು ಕೊಡಗರು ಸಮ್ಮತಿಸಲಿಲ್ಲ. ಆಶಾಭಂಗನಾದ ಲಿಂಗರಾಜನು ತನ್ನ ಕಾರ್ಯವು ಕೈಗೂಡಲಿಲ್ಲವೆಂದು ದುಃಖಪಟ್ಟುಕೊಂಡು ತನ್ನ ಹಾಲೇರಿ ಅರಮನೆಗೆ ಹೋಗುತ್ತಿರುವಾಗ ಚವುರಿರ ಕಾರ್‍ಯಪ್ಪ ದಿವಾನನು ಇವನನ್ನು ಕಂಡು ದುಃಖದ ಕಾರಣವನ್ನು ಕೇಳಲು, ಸೋದೆ ರಾಜನ ಬದಲಾಗಿ ತನ್ನನ್ನು ದಿವಾನನಾಗಿ ಮಾಡಲು ಕೊಡಗರು ಒಪ್ಪದ ಸಂಗತಿಯನ್ನು ಅತ್ತುಕೊಂಡು ಹೇಳಿದನು. ಅದನ್ನು ಕೇಳಿದ ಕಾರ್‍ಯಪ್ಪನು ಲಿಂಗರಾಜನನ್ನು ಪಟ್ಟದಲ್ಲಿ ಕೂರಿಸು ವೆನೆಂದು ಅಭಯವನ್ನು ಕೊಟ್ಟು ಅವನನ್ನು ಹಿಂದಕ್ಕೆ ಕರೆದುಕೊಂಡು ಬಂದು ಪರದೇಶಿಯನಾದ ಸೋದೆ ರಾಜನ ಬದಲಿಗೆ ಲಿಂಗರಾಜನೇ ಮುಖ್ಯ ದಿವಾನ ನಾಗಿರಬೇಕಾಗಿ ಹಟತ್ತಾಗಿ ಹೇಳಿದ್ದರಿಂದ, ಕೊಡಗಿನ ತಕ್ಕ ಮುಖ್ಯಸ್ಥರು ಅದಕ್ಕೆ ಒಪ್ಪಿಕೊಂಡು ಲಿಂಗರಾಜನನ್ನು ಮುಖ್ಯ ದಿವಾನನಾಗಿ ಮಾಡಿದರು.

ಸೋದೆ ರಾಜನು ತನ್ನ ಹೆಂಡತಿಗೆ ಒಂದು ಲಕ್ಷ ರೂಪಾಯಿ ಕೊಟ್ಟು ದಾರಿ ಖರ್ಚಿಗೆ ನಾಲ್ಕು ಸಾವಿರ ರೂಪಾಯಿ ಕೊಟ್ಟರೆ ತನ್ನ ದೇಶಕ್ಕೆ ಹೋಗುವುದಾಗಿ ಹೇಳಿ, ಹಣವನ್ನು ಹೊಂದಿಕೊಂಡು ಸೋದೆ ರಾಜ್ಯಕ್ಕೆ ತೆರಳಿದನು.

*** ಸೋದೆ ರಾಜನ ದಿವಾನಗಿರಿಯಲ್ಲಿ ಕೆದಮುಳ್ಳೂರ ಮಾಳೇಟಿರ ಮಾದಯ್ಯನಿಗೆ ದಿವಾನನು ಏನೋ ಒಂದು ತಪ್ಪಿಗೆ ಹೊಡಿಸಿದ ಪೆಟ್ಟಿನಿಂದ ಮಾದಯ್ಯನು ಸ್ಥಿರತಪ್ಪಿ ಹೋದನಾಗಿಯೂ, ಇದೇ ಸೋದೆ ರಾಜನನ್ನು ದಿವಾನ ಗಿರಿಯಿಂದ ತೆಗೆದು ಹಾಕುವುದಕ್ಕೆ ಮುಖ್ಯ ಕಾರಣವೆಂದೂ ಹೇಳುವರು. ಈ ಮಾದಯ್ಯನಿಗೆ ಕುಂಜಲಗೇರಿ ಗ್ರಾಮದ ಚೊಟ್ಟೇರ ಭೂಮಿಯನ್ನೂ, ಇವನ ತಮ್ಮ ಕಾರಿಚ್ಚನಿಗೆ ಬೆಳ್ಳಿಮಾಡು ಗ್ರಾಮದ ಮಾತಂಡ ಭೂಮಿಯನ್ನೂ ಲಿಂಗರಾಜನು ಕೊಡಿಸಿದನು.**

ಲಿಂಗರಾಜೇಂದ್ರ ಒಡೆಯ

ಮುಖ್ಯ ದಿವಾನನಾಗಿದ್ದ ಲಿಂಗರಾಜನು 1811ರಲ್ಲಿ ರಾಣಿ ದೇವಮ್ಮಾಜಿಯಿಂದ ರಾಜ್ಯಭಾರವನ್ನು ವಹಿಸಿಕೊಂಡು ತಾನೇ ಕೊಡಗಿಗೆ ರಾಜನಾದನು. ಇವನನ್ನು ರಾಜನಾಗಿ ಅಂಗೀಕರಿಸಲು ಇಂಗ್ಲೀಷರು ಸಮ್ಮತಿಸದಿದ್ದರೂ ಇದಕ್ಕೆ ವಿರೋಧಿಸಲು ಇಷ್ಟಪಡಲಿಲ್ಲ.

1681ರಲ್ಲಿ ಮುದ್ದುರಾಜನು ಮಡಿಕೇರಿಯಲ್ಲಿ ಕಟ್ಟಿದ್ದ ಕೋಟೆಯನ್ನು ಟಿಪ್ಪು ಸುಲ್ತಾನನು ಹೊಸದಾಗಿ ಕಟ್ಟಿಸಿ 1709ರವರೆಗೆ ಅಲ್ಲಿ ತನ್ನ ಸೈನ್ಯವನ್ನು ಇಟ್ಟಿದ್ದನು. ಲಿಂಗರಾಜೇಂದ್ರ ಒಡೆಯನು 1812ರಲ್ಲಿ ಇದನ್ನು ಪುನಹ ಕಟ್ಟಲು ಸುರುಮಾಡಿ 1814ರಲ್ಲಿ ಪೂರೈಸಿದನು.

ಇದಲ್ಲದೆ ದೊಡ್ಡ ವೀರರಾಜೇಂದ್ರ ಒಡೆಯನನ್ನು ಸಮಾಧಿ ಮಾಡಿದ ಸ್ಥಳದಲ್ಲಿ ಒಂದು ಚೆಲೋದಾದ ಗದ್ದಿಗೆಯನ್ನು ಕಟ್ಟಿಸಿದನು. ಮತ್ತು ಮಡಿಕೇರಿ ಕೋಟೆಯ ಮುಂದೆ ಓಂಕಾರೇಶ್ವರನನ್ನು ಪ್ರತಿಷ್ಠೆ ಮಾಡಿ ಅಲ್ಲಿ ಸೊಗಸಾದ ಒಂದು ದೇವಸ್ಥಾನವನ್ನು ಕಟ್ಟಿಸಿದನು.

ತಾನು ಸತ್ತರೆ ಮಗನಾದ ಚಿಕ್ಕ ವೀರರಾಜನಿಗೆ ಪಟ್ಟವನ್ನು ಕಟ್ಟಬೇಕಾಗಿ ತನ್ನ ಮುಖ್ಯ ದಿವಾನನಾಗಿದ್ದ ಚವುರೀರ ಕಾರ್ಯಪ್ಪನಿಗೆ ಲಿಂಗರಾಜನು ಹೇಳಲು, ಚಿಕ್ಕವೀರರಾಜನು ಹುಡುಗನಾಗಿಯೂ ರಾಜನೀತಿ ತಿಳಿಯದವನಾಗಿಯೂ ಇರುವುದರಿಂದ ಅವನಿಗೆ ಪಟ್ಟವನ್ನು ಕಟ್ಟಲು ಆಗುವುದಿಲ್ಲವಾಗಿ ಕಾರ್ಯಪ್ಪನು ನಿರಾಕರಿಸಿದನು. ಆದುದರಿಂದ ರಾಜನು ಸಿಟ್ಟುಗೊಂಡು ತನ್ನನ್ನು ಗುಂಡು ಹೊಡೆಯಲು ಬಂದದ್ದಾಗಿ ಕಾರ್ಯಪ್ಪನ ಮೇಲೆ ತಪ್ಪು ಹೊರಿಸಿ ಉಡುವತ್ತು ಮೊಟ್ಟೆಯ ಹತ್ತಿರ ಸಿದ್ಧಿ ಕಾಡಿನಲ್ಲಿ ಸಿಲುಬೆಗೆ ಹಾಕಿಸಿ ಇವನ ಹೆಂಡತಿಯನ್ನು ಹೊಲೆಯರ ಜಾತಿಗೆ ತಳ್ಳಿಸಿಬಿಟ್ಟನು. ಕಾರ್ಯಪ್ಪನು ಸಿಲುಬೆಯಲ್ಲಿ 15 ದಿವಸ ಜೀವಂತನಾಗಿದ್ದು, "ನಾನ್ ಆಲ್‌ಕ್ ಮದ್ದ್ ಕೆಟ್ಟುವದ್ ಬುಟ್ಟಿತ್ ಅಂಗರೆಕ್ ಮದ್ದ್ ಕೆಟ್ಟ್‌ನ" ಎಂದು ಹೇಳಿ ಪ್ರಾಣಬಿಟ್ಟನು. ಇವನ ಹೆಂಡತಿಯು ತನ್ನನ್ನು ಕಾಪಾಡಬೇಕೆಂದು ತನ್ನ ಅಣ್ಣ ಪಟ್ಟಮ್ಮಾಡ ಚೆಟ್ಟಿಚ್ಚ ದಿವಾನನ ಕಾಲನ್ನು ಹಿಡಿದ ಳೆಂದು, ಇವನನ್ನು ಮೂರು ತಿಂಗಳವರೆಗೆ ಶೆರೆಕೊಟ್ಟಿಗೆಯಲ್ಲಿ ಹಾಕಿಸಿಬಿಟ್ಟನು. ಕಾರ್ಯಪ್ಪ ದಿವಾನನ ಹೆಂಡತಿಯು ಆರು ದಿವಸದವರೆಗೆ ಮಡಿಕೇರಿ ಹತ್ತಿರ ಶಿಕಾರಿ ಉಕ್ಕುಡದಲ್ಲಿದ್ದವಳು ಅನ್ನ ನೀರು ಮುಟ್ಟದೆ ಸತ್ತು ಹೋದಳು. ಚೆಟ್ಟಿಚ್ಚ ದಿವಾನನು ಮೂರು ತಿಂಗಳ ಮೇಲೆ ಬಿಡುಗಡೆ ಮಾಡಿದರೂ ಶೆರೆ ಕೊಟ್ಟಿಗೆಯಲ್ಲಿ ರಕ್ತ ಭೇದಿ ಕಾಯಿಲವು ಹಿಡಿದು ಅದರಲ್ಲಿಯೇ ಸತ್ತುಹೋದನು.

ಲಿಂಗರಾಜನು 1820ರಲ್ಲಿ ಸತ್ತು ಹೋದನು. ಇವನ ರಾಣಿಯು ಸತಿಯಾಗಿ ಸತ್ತಳು. ಇವಳು ಕಾಂತಮೂರ್ನಾಡು ಪಳಂಗಡ ಅಪ್ಪಣ್ಣನ ದೇವಕ್ಕನೆಂಬ ಮಗಳು. ಇವರಿಬ್ಬರನ್ನೂ ದೊಡ್ಡ ವೀರರಾಜೇಂದ್ರ ಒಡೆಯನನ್ನು ಸಮಾಧಿ ಮಾಡಿದ ಸ್ಥಳದ ಹತ್ತಿರವೇ ಮಡಗಿ, ಇವರ ಮಗನಾದ ಚಿಕ್ಕ ವೀರರಾಜನು ದೊಡ್ಡ ವೀರರಾಜೇಂದ್ರನಿಗೆ ಲಿಂಗರಾಜನು ಕಟ್ಟಿಸಿದ್ದ ರೀತಿಯೇ ಗದ್ದಿಗೆಯನ್ನು ಕಟ್ಟಿಸಿದನು.

ಲಿಂಗರಾಜನು ರಾಜ್ಯಭಾರಕಾರ್ಯ ಪ್ರವೀಣನು. ಇವನು ಮಾಡಿದ ಮುಲ್ಕಿ ಏರ್ಪಾಡು ಅತ್ಯಂತ ವಿಶೇಷವಾಗಿದೆ. ಹಿಂದು ಶಾಸ್ತ್ರ ಪ್ರಕಾರ ರಾಜನಿಗೆ ಭೂಮಿಯ ಉತ್ಪತ್ತಿಯಿಂದ ಒಂದು ಆರನೆ ಪಾಲಿಗೆ ಹಕ್ಕಿದ್ದರೂ ತನ್ನ ಪ್ರಜೆಗಳು ನೆಮ್ಮದಿಯಾಗಿರಬೇಕೆಂದು ಒಂದು ಹತ್ತನೆ ಪಾಲು ಕಂದಾಯವನ್ನು ಏರ್ಪಡಿಸಿ ಭೂಮಿ ಬಾಣೆಗಳನ್ನು ನ್ಯಾಯವಾಗಿ ಅಳತೆ ಮಾಡಿ ಮಣ್ಣಿಗೆ ಸರಿಯಾದ ಕಂದಾಯವನ್ನು ಹಾಕಿ ಕಳುಹಿಸಿದಾಗಿಯೂ ಈ ಜನರು ಕಲ್ಲನ್ನು ಮುಟ್ಟಿ ಹೂಣುವಾಗ ಈ ರೀತಿ ಹೇಳುತ್ತಿದ್ದರಾಗಿಯೂ ಹೇಳುವರು.

"ಇಟ್ಟ ಕಲ್ಲ್ ಪೊರಿಕೇಂಗಿನೊ, ಮೇಲೆ ಕಲ್ಲ್ ಇಡೇಂಗಿನೊ, ಅದ್‌ರ್ ನೀಕಿ ಕದ್‌ರೆಡಿಕೇಂಗಿನೊ ಕೆಜ್ಜತೇಂಗಿ–ಕಲ್ಲ್ ಕಾವೇರಿ ಪಿಲ್ಲ್ ಭೂಮಿಯಾಣೆ, ಸೂರ್ಯ ಚಂದ್ರಂಡಾಣೆ, ಪಾಲೇರಿ ಒಡೆಯಂಡಾಣೆ, ಅವಂಡ ಮಣ್ಣ್ ಮನಸ್ಥಾನತ್ ಉಪ್ಪ್‌ಬೆಚ್ಚ ನೆಲಪೋಲೆ ಉಳ್ಳಿಪೊರಿಚ ಕಳಪೋಲೆ ಆಯಿತ್ ಅಂಬೇ ತುಂಬೇ ಮೊಳತ್ ಪೋಕು"

ಲಿಂಗರಾಜೇಂದ್ರ ಒಡೆಯನು ಮಾಡಿದ ಹುಕುಂ ನಾಮಗಳನ್ನು ನೋಡಿದರೆ ಇವನು ಪ್ರಜಾಕ್ಷೇಮ ಚಿಂತಕನಾಗಿದ್ದನೆಂದು ಕಂಡು ಬರುತ್ತದೆ.

ಚಿಕ್ಕ ವೀರರಾಜೇಂದ್ರ ಒಡೆಯ

ತಂದೆ ಸಾಯುವಾಗ ವೀರರಾಜನು 20 ವಯಸ್ಸಿನ ಹುಡುಗನು. ಇವನು ಮೂರ್ಖನು, ಹೇಡಿಯು ಮತ್ತು ಕಾಮಿಯು. ಇವನು ಮಾಡಿದಂಥ ಪ್ರಜಾಹಿಂಸೆಯು ಇಷ್ಟಷ್ಟೆಂದು ಹೇಳಲಾಗುವುದಿಲ್ಲ. ತನ್ನ ಕುಟುಂಬದಲ್ಲಿ ಒಬ್ಬನನ್ನಾದರೂ ಬಿಡದೆ ಕೊಂದು ಹಾಕಿದನು. ಕೆಲವು ಚರಿತ್ರಕರು ಇವನನ್ನು ಹುಚ್ಚನೆಂದು ಹೇಳುವುದಕ್ಕೆ ಹಿಂಜರಿಯಲಿಲ್ಲ.

ಇವನ ಪಟ್ಟದ ರಾಣಿಯು ಬೆಪ್ಪುನಾಡು ಕುಂಜಲಗೇರಿ ಗ್ರಾಮದ ಮುಕ್ಕಾಟಿರ ಕುಟ್ಟಯ್ಯನ ಮಗಳು. ತನಗೆ ಹೆಂಡತಿ ಇದ್ದರೂ ಸಹ ಮದುವೆಯಾದವಳೇ ಆಗಲಿ ಮದುವೆಯಾಗದವಳೇ ಆಗಲಿ ತನಗೆ ಮನಸಿಗೆ ತೋರಿದ ಹೆಂಗಸನ್ನು ಅರಮನೆಗೆ ಕರೆಸಿಕೊಳ್ಳುತ್ತಿದ್ದನು. ಹೆತ್ತಿರುವ ಹೆಂಗಸರ ಮೊಲೆ ಹಾಲನ್ನು ಕುಡಿಯುತ್ತಿದ್ದನು. ಇವನು ಮಾಡುವ ದುರಾಚಾರಕ್ಕೆ ಕುಂಟ ಬಸುವನೆಂಬ ಮಂತ್ರಿಯು ಹಿಮ್ಮತ್ತುದಾರನಾಗಿದ್ದನು.

ಕುಂಟ ಬಸುವನು ಹಜಾಮ ಜಾತಿಯವನೆಂದು ಹೇಳುವರು. ಇವನು ಲಿಂಗರಾಜನ ನಾಯಿ ನೋಡುವ ಚಾಕರಿಯಲ್ಲಿದ್ದು ಜಮೆದಾರನಾಗಿ ಕೊನೆಗೆ ಮಂತ್ರಿಯಾದನು.

ಇಂಗ್ಲಿಷ್ ಸರಕಾರವು ಈ ರಾಜನು ಮಾಡುವ ದುಷ್ಕೃತ್ಯಕ್ಕೆ ಪದೇ ಪದೇ ಆಕ್ಷೇಪಿಸುತ್ತಿದ್ದರೂ ಇವನು ತನಗೆ ಮನಸು ಬಂದದ್ದು ಮಾಡುತ್ತಲೇ ಇದ್ದನು.

ಅಮ್ಮತ್ತಿನಾಡು ಬೋಂದದ ಮುಕ್ಕಾಟಿರ ಅೈಪ್ಪಣ್ಣನೆಂಬುವನಿಗೆ ಲಿಂಗ ರಾಜೇಂದ್ರ ಒಡೆಯನು ಲಿಂಗಧಾರಣೆ ಮಾಡಿಸಿ ಚನ್ನ ಬಸುವನೆಂಬ ಹೆಸರು ಹಾಕಿ, ತನ್ನ ಮಗಳು ದೇವಮ್ಮಾಜಿಯನ್ನು ಅವನಿಗೆ ಮದುವೆ ಮಾಡಿ ಹೆರವನಾಡು ಅಪ್ಪಂಗಳದಲ್ಲಿ ಜಹಗೀರು ಕೊಟ್ಟು ಇರಿಸಿದ್ದನು. ಈ ಚನ್ನಬಸುವನು ಪಿತಲಾಟ ಗಾರನೆಂದು ರಾಜನು ತಿಳಿದು, ದೇವಮ್ಮಾಜಿಯನ್ನು ಚನ್ನ ಬಸುವನ ಸ್ವಾಧೀನಕ್ಕೆ ಬಿಡದೆ ಎಂಟು ವರ್ಷದವರೆಗೆ ಪಹರೆಯಲ್ಲಿಟ್ಟಿದ್ದನು. ಆದರೆ 1832ರಲ್ಲಿ ಈ ಚನ್ನಬಸುವನು ತನ್ನ ಹೆಂಡತಿ ಸಮೇತರಾಗಿ ಮೈಸೂರಿಗೆ ಓಡಿಹೋಗಿ ಇಂಗ್ಲಿಷರ ಮರೆಬಿದ್ದನು. ಚನ್ನಬಸುವನೂ ಅವನ ಹೆಂಡತಿಯೂ ರಾಜನ ಮೇಲೆ ಇಲ್ಲದ್ದು ಸಲ್ಲದ್ದು ಹೇಳಿದ್ದಲ್ಲದೆ ತಂಗಿಯಾದ ದೇವಮ್ಮಾಜಿಯನ್ನು ಕೂಡಿ ನಡಿಯಬೇಕಾಗಿ ರಾಜನು ಹಟ ಮಾಡುತ್ತಿದ್ದನಾಗಿ ಹೇಳಿದರು. ರಾಜನು ಕ್ರೂರನು ಮತ್ತು ಕಾಮಾತುರನಾಗಿದ್ದುದರಿಂದ ಇಂಗ್ಲಿಷರು ಇವರು ಹೇಳಿದ್ದೆಲ್ಲವನ್ನು ನಿಜವೆಂದು ನಂಬಿಕೊಂಡರು.

ರಾಜನು ತನ್ನ ತಂಗಿಯನ್ನು ಮತ್ತು ಬಾವನನ್ನು ಹಿಂದಕ್ಕೆ ಕಳುಹಿಸಿಕೊಡಬೇಕಾಗಿ ಬಹಳವಾಗಿ ಕೇಳಿಕೊಂಡನು. ಬಿಟ್ಟರೆ ಇವರನ್ನು ಕೊಂದುಬಿಟ್ಟಾನೆಂಬ ಹೆದರಿಕೆ ಯಿಂದ ಬಿಟ್ಟುಕೊಡಲು ಇಂಗ್ಲಿಷರು ಸಮ್ಮತಿಸಲಿಲ್ಲ.

ವೀರರಾಜನು ಕೋಪಗೊಂಡು ಇಂಗ್ಲಿಷರ ಶತ್ರುಗಳ ಸ್ನೇಹವನ್ನು ಬೆಳೆಸಲು ತೊಡಗಿದನು.

ಕ್ರೂರ ಕೃತ್ಯಗಳನ್ನು ನಡಿಸಬಾರದಾಗಿಯೂ, ಕೊಲೆಪಾತಕಗಳನ್ನು ನಡಿಸಿದ ಕಾರಣಗಳನ್ನು ಮತ್ತು ಸಂಖ್ಯೆಯನ್ನು ಇಂಗ್ಲಿಷ್ ಸರಕಾರಕ್ಕೆ ತಿಳಿಸಬೇಕಾಗಿಯೂ ಪದೇ ಪದೇ ವಾಗ್ದಂಡನೆ ಮಾಡಿದರೂ ರಾಜನು ಗಮನಿಸದೆ ಮನಸೋ ಇಚ್ಚೆ ಕೆಲಸ ಮಾಡುತ್ತಲೇ ಇದ್ದನು. ಇಂಗ್ಲಿಷರು ಇವನ ಕ್ರೂರಕೃತ್ಯಗಳನ್ನು ಸಹಿಸಲಾರದೆ ನಾಗಪುರದ ರೆಸಿಡೆಂಟಾಗಿದ್ದ ಗ್ರೆಹ್ಯಾಂ ಎಂಬುವನನ್ನು ರಾಜನ ಹತ್ತಿರ ಹೋಗಲು ಅಪ್ಪಣೆ ಇತ್ತರು.

1833ರಲ್ಲಿ ತಲಚೇರಿಯಲ್ಲಿ ವರ್ತಕನಾಗಿದ್ದ ದಾರಾಸೇಟ್ ಎಂಬ ಪಾರ್ಸಿಯನ್ನೂ ಮಲಬಾರಿನ ಕಲೆಕ್ಟರ ಶಿರಸ್ತೆದಾರನಾಗಿದ್ದ ಕುಲ್‌ಪುಟ್ಟಿ ಕರ್ನಾಕರ ಮೇನ್ನನ್ನೂ ಸಹ ರಾಯಭಾರಿಗಳಾಗಿ ಗ್ರೆಹಾಂ ಕೊಡಗು ರಾಜನ ಹತ್ತಿರ ಕಳುಹಿಸಿದನು. ರಾಜನು ಕರ್ನಾಕರ ಮೇನನ್ನನು ಕೈದಿಯಲ್ಲಿಟ್ಟು ತನ್ನ ತಂಗಿಯನ್ನು ಮತ್ತು ಬಾವನನ್ನು ಬಿಟ್ಟ ಹೊರತು ಇವನನ್ನು ಬಿಟ್ಟು ಕೊಡುವುದಿಲ್ಲವಾಗಿ ಇಂಗ್ಲಿಷರಿಗೆ ತಿಳಿಸಿದನು. ಎರಡು ಕಡೆಯವರು ಯುದ್ಧಕ್ಕೆ ಸಿದ್ಧರಾದರು.

ಇಂಗ್ಲಿಷರು ಕೊಡಗನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿದ್ದರು. ಪೂರ್ವರಿಂದ ಒಂದು ಸೈನ್ಯವು ಹೆಬ್ಬಾಲೆಗಾಗಿಯೂ ಇನ್ನೊಂದು ಸೈನ್ಯವು ರಂಗಸಮುದ್ರಕ್ಕಾಗಿಯೂ, ಉತ್ತರದಿಂದ ಒಂದು ಸೈನ್ಯವು ಶನಿವಾರಸಂತೆಗಾಗಿಯೂ, ದಕ್ಷಿಣದಿಂದ ಒಂದು ಸ್ಯೆನ್ಯವು ಹೆಗ್ಗಳಕ್ಕಾಗಿಯೂ, ಪಶ್ಚಿಮದಿಂದ ಒಂದು ಸೈನ್ಯವು ಸುಳ್ಯಕ್ಕಾಗಿಯೂ ನುಗ್ಗಲು ಏರ್ಪಡಿಸಿದರು.

ಇಂಗ್ಲಿಷರ ಸೈನ್ಯವನ್ನು ಎದುರಿಸಲು ಕೊಡಗು ಸೈನ್ಯವನ್ನು ಕಳುಹಿಸಿ, ರಾಜನು ನಾಲ್ಕುನಾಡು ಅರಮನೆಯಲ್ಲಿ ಅಡಗಿಕೊಂಡನು.

ಹೆಬ್ಬಾಲೆ ಗಡಿಯನ್ನು ನೂರು ಮಂದಿ ಮಹಮ್ಮದಿಯರು ಕಾದಿದ್ದರು. ಅಲ್ಲಿ ಒಬ್ಬ ಕೊಡಗ ಕಾರ್ಯಕಾರನೂ ಕೆಲವು ಮಂದಿ ಕೊಡಗರು ಮಾತ್ರ ಇದ್ದರು. ಇವರು ಇಂಗ್ಲೀಷರೊಡನೆ ಯುದ್ಧ ಮಾಡಲಾರದೆ ಹಿಮ್ಮೆಟ್ಟಿದ್ದರು. ರಂಗಸಮುದ್ರಕ್ಕಾಗಿ ಬಂದ ಸೈನ್ಯವು ಅಲ್ಲಿದ್ದ ಕೊಡಗರನ್ನು ಸೋಲಿಸಿ ವೀರರಾಜೇಂದ್ರ ಪೇಟೆಗೆ ಹೋಗಲು ಮುಂದರಿಸಿತು. ಉತ್ತರದಿಂದ ಬಂದ ಇಂಗ್ಲೀಷ್ ಸೈನ್ಯವು ಹಾರಂಗಿ ಹೊಳೆ ಬಳಿ ಮಾತಂಡ ಅಪ್ಪಚ್ಚನ ಕೈಕೆಳಗಿದ್ದ ಕೊಡಗರ ಸೈನ್ಯದೊಡನೆ ಯುದ್ಧ ಮಾಡಿ ಸೋತು ಶನಿವಾರಸಂತೆ ಕಡೆಗೆ ಹಿಂತಿರುಗಿತು. ಹೆಗ್ಗಳಕ್ಕಾಗಿ ಬಂದ ಸೈನ್ಯವು ಮುಂದರಿಸಲಾರದೆ ಗಟ್ಟದ ಕೆಳಗಡೆಯಲ್ಲಿಯೇ ಇತ್ತು. ಸುಳ್ಯಕ್ಕಾಗಿ ಬಂದ ಸೈನ್ಯವು ಕೊಡಗರೊಡನೆ ಯುದ್ಧಮಾಡಿ ಸೋತು ಹಿಂದಕ್ಕೆ ಓಡಿಹೋಯಿತು.

ಈ ಮಧ್ಯೆ ವೀರರಾಜನು ಇಂಗ್ಲೀಷರೊಡನೆ ಯುದ್ಧವನ್ನು ನಿಲ್ಲಿಸಿ ರಾಜಿಯಿಂದ ಅವರನ್ನು ಕರೆದುಕೊಂಡು ಬರಬೇಕಾಗಿ ತನ್ನ ನಾಲ್ಕು ದಿವಾನರ ಪೈಕಿ ಒಬ್ಬನಾದ ಲಕ್ಷ್ಮಿನಾರಣಯ್ಯನನ್ನು ಕಳುಹಿಸಿದನು. 1834ನೇ ಇಸವಿ ಏಪ್ರಿಲ್ ತಾರೀಕು 5ರಲ್ಲಿ ಅಪ್ಪಾರಂಡ ಬೋಪಣ್ಣ ದಿವಾನನು 400 ಜನ ಕೊಡಗರು ಸಮೇತ ಲೆಫ್ಟೆನೆಂಟ್ ಕರ್ನಲ್ ಫ್ರೇಜರನ್ನು ಕುಶಾಲ್‌ನಗರದಲ್ಲಿ ಕರೆದುಕೊಂಡು ಬಂದನು. ಆದುದರಿಂದ ಕುಶಾಲ್‌ನಗರಕ್ಕೆ ಫ್ರೇಜರ್‌ಪೇಟೆಯೆಂದು ಹೆಸರು ಹಾಕಿದರು.

ಮಾರಣೆ ದಿವಸ ಇಂಗ್ಲಿಷರು ಮಡಿಕೇರಿ ಕೋಟೆಗೆ ನುಗ್ಗಿ ಕೊಡಗು ರಾಜನ ಬಾವುಟವನ್ನು ಕಿತ್ತು ತಮ್ಮ ಬಾವುಟವನ್ನು ಏರಿಸಿದರು.

ಇಂಗ್ಲಿಷರು

ಚಿಕ್ಕವೀರರಾಜೇಂದ್ರ ಒಡೆಯನ ಅನೇಕ ದುಷ್ಕೃತ್ಯಗಳಿಗೆ ಕಾರಣಭೂತನಾದ ಕುಂಟಬಸುವನು

ಈ ಯುದ್ಧಕ್ಕೆ ಸಹ ಕಾರಣನೆಂದು ಇಂಗ್ಲೀಷರು ನೆನಸಿ ಅವನನ್ನು ಹಿಡಿದು ತಂದು ಕೊಟ್ಟವರಿಗೆ 1,000 ರೂಪಾಯಿ ಇನಾಂ ಕೊಡುವುದಾಗಿ ಪ್ರಕಟಿಸಿದರು. ನಾಲ್ಕುನಾಡಿನಲ್ಲಿ ಅಡಗಿಕೊಂಡಿದ್ದ ಇವನನ್ನು ಆಗಿನ ಕಗ್ಗೋಡುನಾಡು ಕಚೇರಿವರೆಗೆ ಹಿಡಿದು ತಂದರು. ಇವನು ಅಲ್ಲಿ ಆತ್ಮಹತ್ಯೆ ಮಾಡಿಕೊಂಡನು. ರಾಜನು ಇವನನ್ನು ಗುಟ್ಟಾಗಿ ಕೊಲ್ಲಿಸಿಬಿಟ್ಟನೆಂದೂ ಹೇಳುವರು.

ಮಿಕ್ಕ ಮೂವರು ದಿವಾನರಾದ ಚೆಪ್ಪುಡಿ ಪೊನ್ನಪ್ಪ, ಅಪ್ಪಾರಂಡ ಬೋಪಣ್ಣ ಮತ್ತು ಲಕ್ಷ್ಮೀನಾರಣಯ್ಯ ಸಹ ಇಂಗ್ಲೀಷರ ಮೊರೆಹೊಕ್ಕರು.

ಆಮೇಲೆ ಇಂಗ್ಲಿಷರು ದಿವಾನರನ್ನೂ ಕೊಡಗು ದೇಶದ ತಕ್ಕ ಮುಖ್ಯಸ್ಥರನ್ನೂ ಕರೆಸಿ ಕೊಡಗು ದೇಶದ ಮುಂದಿನ ಆಡಳತೆಯ ವಿಷಯವಾಗಿ ಏನು ಅಭಿಪ್ರಾಯವೆಂದು ಕೇಳಿದಲ್ಲಿ, ಕೊಡಗರೆಲ್ಲರೂ ಕೊಡಗನ್ನು ಕುಂಪಣಿ ಸರಕಾರವೇ ಆಳಬೇಕಾಗಿಯೂ, ರಾಜನನ್ನು ಮಡಿಕೇರಿಯಲ್ಲಿಯೇ ಇಡಬೇಕಾಗಿಯೂ ಅಭಿಪ್ರಾಯಪಟ್ಟರು. ಆದರೆ ರಾಜನನ್ನು ಕೊಡಗಿನಲ್ಲಿಡಲು ಇಂಗ್ಲಿಷರು ಸಮ್ಮತಿಸಲಿಲ್ಲ. ಇವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ಕಾಶಿಗೆ ಕಳುಹಿಸಿಬಿಟ್ಟರು.

ತದನಂತರ ಕೊಡಗನ್ನು ಕುಂಪಣಿ ಸರಕಾರದ ರಾಜ್ಯಕ್ಕೆ ಸೇರಿಸಿ ಈ ಕೆಳಗಿನ ಇಸ್ತಿಹಾರನ್ನು ಪ್ರಸಿದ್ಧಪಡಿಸಿದರು.

"ಕೊಡಗು ದೇಶದ ನಿವಾಸಿಗಳು ಬ್ರಿಟಿಷ್ ಸರಕಾರದ ಅಧೀನದಲ್ಲಿರಬೇಕೆಂದು ಇಷ್ಟಪಡುವುದರಿಂದ ವೀರರಾಜೇಂದ್ರ ಒಡೆಯರಿಂದ ಆಳಲ್ಪಡುತ್ತಿದ್ದ ಈ ದೇಶವನ್ನು ಘನವುಳ್ಳ ಕುಂಪಣಿ ಸರಕಾರದ ತಾಬೆಗೆ ವರ್ಗಮಾಡಲು ಇಂಡಿಯ ದೇಶದ ಗವರ್ನರ್ ಜನರಲ್ ಸಾಹೇಬರವರು ಸಂತೋಷಪಡುತ್ತಾರೆ.

ಈ ದೇಶದ ನಿವಾಸಿಗಳನ್ನು ಪುನಹ ಸ್ವದೇಶೀ ರಾಜರ ಆಳಿಕೆಗೆ ಬಿಟ್ಟುಕೊಡುವುದಿಲ್ಲವಾಗಿಯೂ, ಇವರ ಮುಲ್ಕಿ ಮತ್ತು ಮತ ಸಂಬಂಧವಾದ ಎಲ್ಲಾ ಪದ್ಧತಿಗಳನ್ನು ಬಹುಮಾನದಿಂದ ಅಂಗೀಕರಿಸಲ್ಪಡುವುದಾಗಿಯೂ ಮತ್ತು ಇವರ ಭದ್ರತೆ ಸುಖ ಕ್ಷೇಮಗಳನ್ನು ಹೆಚ್ಚಿಸಲು, ಬ್ರಿಟಿಷ್ ಸರಕಾರದವರು ಯಾವಾಗಲೂ ಸಂತೋಷಪಡುವರಾಗಿಯೂ ಇದರ ಮೂಲಕ ಖಂಡಿತವಾಗಿ ತಿಳಿಸಲ್ಪಟ್ಟಿದೆ.

ಮಡಿಕೇರಿ **S(d), J. S. Fraser**

7ನೇ ಮೇ 1834 Lt. Col. and Political Agent

ಕಾಶಿಯಲ್ಲಿ ವೀರರಾಜನಿಗೆ ಮಾಹೆಯಾನ 6,000 ರೂಪಾಯಿ ಪೆನ್‌ಷನ್ ಕೊಡುತ್ತಿದ್ದರು. ಇವನು 1852ರಲ್ಲಿ ತನ್ನ ಮಗಳು ಗೌರಮ್ಮ ಸಮೇತ ಇಂಗ್ಲೆಂಡಿಗೆ ಹೋದನು.ಅಲ್ಲಿ ಗೌರಮ್ಮನು ಕ್ರೈಸ್ತಮತವನ್ನು ಅವಲಂಬಿಸಿದಳು. ಆಗ ವಿಕ್ಟೋರಿಯಾ ಮಹಾರಾಣಿಯು ಅವಳಿಗೆ ಧರ್ಮಮಾತೆಯಾಗಿ ನಿಂತು ವಿಕ್ಟೋರಿಯ ಗೌರಮ್ಮ ಎಂಬ ಹೆಸರನ್ನು ಕೊಟ್ಟಳು.

ದೊಡ್ಡ ವೀರರಾಜೇಂದ್ರ ಒಡೆಯನು ತನ್ನ ಮಗಳು ದೇವಮ್ಮಾಜಿಯ ಹೆಸರಿನಲ್ಲಿ ಬ್ರಿಟಿಷ್ ಸರಕಾರದಲ್ಲಿ ಇಟ್ಟಿದ್ದಂಥ 6,80,000 ರೂಪಾಯಿಗೆ ತಾನೇ ಹಕ್ಕುದಾರನೆಂದು ವೀರರಾಜನು ಕುಂಪಣಿ ಸರಕಾರದ ಮೇಲೆ ದಾವೆ ಹಾಕಿ ಸೋತು ಹೋದನು. ಇವನು ಪುತ್ರಸಂತಾನವಿಲ್ಲದೆ, 1864ರಲ್ಲಿ ಇಂಗ್ಲೇಡಿನಲ್ಲಿಯೇ ಸತ್ತುಹೋದನು. ಇಲ್ಲಿಗೆ ಇಕ್ಕೇರಿ ರಾಜವಂಶವು ಸಮಾಪ್ತವಾಯಿತು.

ಇಂಗ್ಲಿಷರು ಕೊಡಗನ್ನು ಆಳುವುದಕ್ಕೆ ಸುರು ಮಾಡಿದ ಮೇಲೆ ಲೆಫ್ಟಿನೆಂಟ್ ಕರ್ನಲ್ ಫ್ರೇಜರೇ ಕೊಡಗಿನ ಮೊದಲಿನ ಕಮಿಶರರಾದರು. ಈತನು ಕೊಡಗಿನ ಪೂರ್ವ ಪದ್ಧತಿಯನ್ನು ತಿಳಿದು ಆಗ ಕೊಡಗಿನ ಸುಪರಿಂಟೆಂಡೆಂಟ್ ಆಗಿದ್ದ ಲೆಫ್ಟೆನೆಂಟ್ ಲಿ ಹಾರ್ಡಿಗೆ ಕಾಗದ ಬರೆದು ಈ ಕೆಳಗಿನ ಇಸ್ತಿಹಾರನ್ನು ಬಹಿರಂಗಪಡಿಸಿ ಕೊಡಗು ದೇಶದಲ್ಲಿ ದನಕರುಗಳನ್ನು ಕೊಲ್ಲುವುದನ್ನು ಸ್ಪಷ್ಟವಾಗಿ ಮನ್ನ ಮಾಡಿದನು.

ಅಯ್ಯಾ,

ಹಸುಗಳನ್ನಾಗಲೀ, ಎತ್ತುಗಳನ್ನಾಗಲೀ ಆಹಾರ ನಿಮಿತ್ತವಾಗಿ ಕುಯುವುದು ಕೊಡಗು ದೇಶದ ಜನರ ಧರ್ಮ ಸಂಬಂಧವಾದ ಭಕ್ತಿಗೆ ಹೆಚ್ಚಾದ ನೋವು ಮಾಡುತ್ತದೆಂದು ವಿಚಾರತ್ವೇನ ತಿಳಿದು ಬಂದಿರುವುದರಿಂದ, ಈ ದೇಶದ ಯಾವ ಕಡೆಯಲ್ಲಿಯೂ, ಯುರೋಪಿಯನ್ನರಾಗಲೀ, ಸ್ವದೇಶಿಯನ್ನರಾಗಲೀ ಇಂಥ ಕೆಲಸವನ್ನು ಮಾಡುವುದನ್ನು ನಿಲ್ಲಿಸಬೇಕಾಗಿ ನಿಮ್ಮನ್ನು ಈ ಮೂಲಕ ಕೇಳಿಕೊಳ್ಳೋಣಾಗಿದೆ.

ಮಡಿಕೇರಿ **S(d), J. S. Fraser Lt. Col.**

16ನೇ ಜನವರಿ 1835 And Commissioner

ಈ ಕಾಗದಕ್ಕನುಗುಣವಾಗಿ ಸನ್ 1835ನೇ ಇಸವಿ ಜನವರಿ 18ನೇ ತಾರೀಕಿ ನಲ್ಲಿ ಲೆಫ್ಟೆನೆಂಟ್ ಕರ್ನಲ್ ಪ್ರೇಜರ್ ಸಾಹೇಬರವರ ದಸ್ಕತ್ತಿನೊಡನೆ ಇಸ್ತಿಹಾರನ್ನು ಹುಟ್ಟಿಸಿ ಬಹಿರಂಗ ಪಡಿಸಿದರು.

ಕೊಡಗು ರಾಜನು ರಾಜ್ಯಭ್ರಷ್ಟನಾಗಿ ಹೋಗುವುದಕ್ಕಿಂತ ಮೊದಲು, ಕಲ್ಯಾಣಪ್ಪ ಅಪರಂಪರನೆಂಬ ಸನ್ಯಾಸಿ ವೇಷದಾರಿಯು, ಕೊಡಗಿನಲ್ಲಿ ಅಲ್ಲಲ್ಲಿ ಸಂಚರಿಸುತ್ತಿದ್ದನು. ಇಂಗ್ಲಿಷರು ಕೊಡಗನ್ನು ಮುತ್ತಿದಾಗ ಇವನು ಇಂಗ್ಲಿಷರೊಡನೆ ಇದ್ದನೆಂತಲೂ, ಇವನು ದೊಡ್ಡ ವೀರರಾಜೇಂದ್ರ ಒಡೆಯನ ತಮ್ಮ ಅಪ್ಪಾಜಿಯ ಮಗನಾದ ವೀರಪ್ಪನೆಂತಲೂ ವರ್ತಮಾನವು ಹುಟ್ಟಿತು. ಇವನು ಪುನಹ 1835ರಲ್ಲಿ ಕೆಲವು ಶಿಷ್ಯರೊಡನೆ ಕೊಡಗು ದೇಶವನ್ನು ಸಂಚರಿಸುತ್ತಿದ್ದನು. ಈ ಶಿಷ್ಯರು ಅಪರಂಪರನೇ ವೀರಪ್ಪನೆಂತಲೂ ಇವನು ಕೊಡಗು ದೇಶದ ಪಟ್ಟಕ್ಕೆ ಅರ್ಹನೆಂತಲೂ ಬಹಿರಂಗ ಪಡಿಸಿದರು. ಇವನನ್ನು ದಿವಾನ ಲಕ್ಷ್ಮಿನಾರಣಯ್ಯನು ಪ್ರೋತ್ಸಾಹಗೊಳಿಸನೆಂದು ತಿಳಿದು ಬಂದುದರಿಂದ ಇಂಗ್ಲಿಷರು ಲಕ್ಷ್ಮಿನಾರಣಯ್ಯನನ್ನು ಹಿಡಿದು ಬೆಂಗಳೂರಿಗೆ ಕಳುಹಿಸಿ ಅಲ್ಲಿ ಬಂದಿಖಾನೆಯಲ್ಲಿಟ್ಟರು.

ದಿವಾನ ಲಕ್ಷ್ಮಿನಾರಾಣಯ್ಯನ ತಮ್ಮನು ಮತ್ತು ಅಪರಂಪರನು ಸುಳ್ಯದಲ್ಲಿ ದಂಗೆ ಎದ್ದು ಮಂಗಳೂರಿಗೆ ಹೋಗಿ ಅಲ್ಲಿ ಖಜಾನೆಯನ್ನು ಲೂಟಿ ಮಾಡಿದರು. ಈ ಸಮಯದಲ್ಲಿ ಕೊಡಗು ದೇಶದ ಗೌಡುಗಳು ಮತ್ತು ಶಿವಾಚಾರದವರು ಅಪರಂಪರನ ಹೆಸರಿನಲ್ಲಿ ದಂಗೆ ಏಳಲು ಏರ್ಪಡಿಸಿದರು. ಕೊಡಗರು ಏನು ಮಾಡಬೇಕೆಂದು ಗೊತ್ತಿಲ್ಲದೆ ಗಾಬರಿಯಲ್ಲಿದ್ದರು. ಎಲ್ಲವೂ ಇಂಗ್ಲಿಷರ ತಿಳುವಳಿಕೆಗೆ ಬಂದು ಅಪ್ಪಾರಂಡ ಬೋಪಣ್ಣ ದಿವಾನನು ಈ ಕಾಟಕಾಯಿಯನ್ನು ಅಡಗಿಸಿಬಿಟ್ಟನು.

ಇದಕ್ಕೆ ಇಂಗ್ಲಿಷ್ ಸರಕಾರವು ಸಂತೋಷಪಟ್ಟು, ಮಂಗಳುರು ಖಜಾನೆ ಲೂಟಿಯಲ್ಲಿ ದಂಗೆಕೋರರಿಗೆ ಸಿಕ್ಕಿದ 20,000 ರೂಪಾಯಿಗಳನ್ನು ಕಾಟಕಾಯಿಯನ್ನು ಅಡಗಿಸಿದವರಿಗೆ ಬಟವಾಡೆ ಮಾಡಲು ಅಪ್ಪಣೆ ಮಾಡಿದರು. ಕೊಡಗರು ಹಣವನ್ನು ತೆಗೆದುಕೊಳ್ಳಲು ಸಮ್ಮತಿಸದಿದ್ದರಿಂದ, ಜಹಗೀರು, ಉಂಬಳಿ, ಪೆನ್‌ಷನ್ ಪದಕ ಸಹ ಕೊಡಲ್ಪಟ್ಟವು.

ಈ ಕಾಟಕಾಯಿಯಲ್ಲಿ ಈ ಕೆಳಗಿನವರು ವಿಶೇಷವದ ಧೀರತ್ವವನ್ನು ತೋರಿಸಿದ ರೆಂದು ಆಗ ಬೆಂಗಳೂರಿನಲ್ಲಿ ಕಮಿಶರನಾಗಿದ್ದ ಕರ್ನಲ್ ಮಾರ್ಕ್ ಕಬ್ಬನ್ ಸಾಹೇಬರು ಇಂಡ್ಯಾ ಸರಕಾರಕ್ಕೆ 1837ನೇ ಇಸವಿ ಮೇ ತಾರೀಕು 9ರಲ್ಲಿ ಕಳುಹಿಸಿ ಕಾಗದದಲ್ಲಿ ನಮೂದಿದೆ.

ಸುಬೇದಾರ ಕೊರವನ ಬಿದ್ದೈಯ್ಯ.
ಮಾಜಿ ಸುಬೇದಾರ ಮಂಡೇಪಂಡ ಮೊಣ್ಣೈಯ್ಯ, ಚೆಂಬೆಬೆಳಿಯೂರು.
ಸುಬೇದಾರ ಮಾತಂಡ ಅಪ್ಪಚ್ಚು.
ಮಾಜಿ ಸುಬೇದಾರ ಕೊಲ್ಲಿರ ಅಚ್ಚೈಯ್ಯ.
ಮಾಜಿ ಸುಬೇದಾರ ಪೊರಿಕೆರ ಅೈಯ್ಯಪ್ಪ.
ಮಾಜಿ ಸುಬೇದಾರ ಕರಿನೆರವನ ಮುದ್ದೈಯ್ಯ.
ಮಾಜಿ ಸುಬೇದಾರ ಚಟ್ಟೋಳಿ ಅಪ್ಪೈಯ್ಯ.
ಜಹಗೀರ್‌ದಾರ ಚಾಬೂಮಿಯ.
ಹಜೂರ್ ಮುನಿಷಿ ಮಂಡೇಪಂಡ ತಿಮ್ಮೈಯ್ಯ, ಚೆಂಬೆಬೆಳಿಯೂರು.
ಹಜೂರ್ ಮುನಿಷಿ ಬಿಟ್ಟಿಯಂಡ ನಂಜಪ್ಪ,
ದಿವಾನ್ ಕಚೇರಿ ಮುನಿಷಿ ಐಚೆಟ್ಟಿ ಅೈಯ್ಯಣ್ಣ.
ಮಾಜಿ ಪಾರುಪತ್ಯಗಾರ ಮಡೆಯನ ದೇವ್ವೈಯ್ಯ.
ಮಾಜಿ ಪಾರುಪತ್ಯಗಾರ ಕೊಳುವನ ದೇವ್ವೈಯ್ಯ.
ಪಾರುಪತ್ಯಗಾರ ತಾತಪಂಡ ಸುಬ್ಬೈಯ್ಯ.
ಮಾಜಿ ಪಾರುಪತ್ಯಗಾರ ಮಂಡೇಟಿ ಸುಬ್ಬೈಯ್ಯ.
ಪಾರುಪತ್ಯಗಾರ ಕೋಚನ ದೊಡ್ಡೈಯ್ಯ.
ಮಾಜಿ ಪಾರುಪತ್ಯಗಾರ ಮುಕ್ಕಾಟಿ ನಂಜಪ್ಪ, ಕುಂಜಲಗೇರಿ.
ಪಾರುಪತ್ಯಗಾರ ಅಜ್ಜಿಕುಟ್ಟಿ ಕಾಳೈಯ್ಯ.
ಪಾರುಪತ್ಯಗಾರ ಕಾರಿ ಸುಬ್ಬೈಯ್ಯ.
ಮಾಜಿ ಪಾರುಪತ್ಯಗಾರ ಗುಡ್ಡಾಂಡ ಚಿಟ್ಟಿ, ನಾಂಗಾಲ.
ಮಾಜಿ ಪಾರುಪತ್ಯಗಾರ ನಾಟೋಳನ ನಂಜಪ್ಪ, ಕಡಿಯತ್ತೂರು.
ಮಾಜಿ ಪಾರುಪತ್ಯಗಾರ ಕಲ್ಲುಮಾಡ ಸುಬ್ಬೈಯ್ಯ.
ಮಾಜಿ ಪಾರುಪತ್ಯಗಾರ ಮುಕ್ಕಾಟಿರ ಅಚ್ಚೈಯ್ಯ, ಮೂರ್ನಾಡು ಬಾಡಗ.
ಮಾಜಿ ಜಮೇದಾರ ಚಾರಿಮಂಡ ಉತ್ತೈಯ್ಯ.
ಬಳ್ಳಾರಪಂಡ ಮುತ್ತಣ್ಣ.
ತೋಟೆರ ಮಾದು.
ಇಟ್ಟಿರ ಮಂದಪ್ಪ, ಅಂಜಿಗೇರಿನಾಡು.
ಕಂಜಿತಂಡ ಅಪ್ಪೈಯ್ಯ.
ಪಟ್ಟಮಾಡ ಸೋಮೈಯ್ಯ.
ಅಣ್ಣಡಿ ತಿಮ್ಮೈಯ್ಯ.
ಮಾಳೆಂಡ ಮಾಣಿಚ್ಚ.
ಚುವಚಾಳಿ ಭೀಮು.
ಪಕ್ರೆ ಆಲಿ.
ಬಲ್ಲಚಂಡ ಪೊನ್ನಪ್ಪ.

ಕಾಟಕಾಯಿಯನ್ನು ಅಡಗಿಸಿದ ಮೇಲೆ ಅಪರಂಪರನನ್ನು ಬೆಂಗಳೂರಿನಲ್ಲಿ ಸೆರೆಯಲ್ಲಿಟ್ಟು ಮೂವತ್ತು ವರುಷದ ನಂತರ ಖೈದಿಯಿಂದ ಬಿಟ್ಟರು. ಇವನು 1870ರಲ್ಲಿ ಸತ್ತುಹೋದನು.

1857ರಲ್ಲಿ ಹಿಂದು ದೇಶದಲ್ಲಿ ಎದ್ದ ದೊಡ್ಡ ದಂಗೆಯಲ್ಲಿ, ಕೊಡಗರು ಇಂಗ್ಲೀಷ್ ಸರಕಾರಕ್ಕೆ ರಾಜಭಕ್ತಿಯನ್ನು ತೋರಿಸಿ ಕತ್ತಿ ಕೋವಿ ಸಮೇತ 500 ಮಂದಿ ಕೊಡಗರು ಪಿರ್ಯಾಪಟ್ಟಣದಲ್ಲಿ ಕಾದಿದ್ದರು. ದಂಗೆಯು ಅಡಗಿದ ಮೇಲೆ ಹಿಂತಿರುಗಿ ಬಂದರು.

ತದನಂತರ ಕೊಡಗು ಕಮೀಷರನಾಗಿದ್ದ ಜನರಲ್ ಕಬ್ಬನ್ ಸಾಹೇಬರು ಯುದ್ಧ ಸನ್ನದ್ಧರಾಗಿರುವಂತಹ ಕೊಡಗ ವೀರನೊಬ್ಬನ ನಕ್ಷೆ ಸಮೇತವಿದ್ದ ದೊಡ್ಡ ಬಿರುದಿನ ಮುದ್ರೆಯೊಡನೆ ಈ ಕೆಳಗಿನ ಇಸ್ತಿಹಾರನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಪ್ರಸಿದ್ಧಿಗೊಳಿಸಿದರು.

"ಈ ಚಿಕ್ಕ ವೀರ ಜನಾಂಗದವರ ಉನ್ನತ ಲಕ್ಷಣವಾದ ಘನವನ್ನೂ, ರಾಜಭಕ್ತಿಯನ್ನೂ ಧೀರತ್ವವನ್ನೂ ನೆನಸಿಕೊಂಡು ಮತ್ತು ಬ್ರಿಟಿಷ್ ಸರಕಾರದ ಸಹಾಯದಲ್ಲಿ ವಿಶೇಷವಾದ ರಾಜಕಾರ್ಯಗಳನ್ನು ಮಾಡಿರುವುದನ್ನು ಆಲೋಚಿಸಿಕೊಂಡು ಇಂಡ್ಯಾ ಸರಕಾರವು ನನ್ನಲ್ಲಿಟ್ಟ ಅಧಿಕಾರ ಶಕ್ತಿಯಿಂದ, ಆಯುಧಗಳನ್ನು ಹಿಡಿಯಬಾರದೆಂಬ ಕಾನೂನು ಈ ಪ್ರತಾಪವುಳ್ಳ ಕೊಡಗು ಜನರಿಗೆ ಲಗಾವು ಆಗುವುದಿಲ್ಲವೆಂದೂ ಎಲ್ಲರೂ ಅರಿಯುವಂತೆ ಪ್ರಸಿದ್ಧಗೊಳಿಸುವುದು ನನಗೆ ಸಂತೋಷಕರವಾದ ಕೆಲಸವಾಗಿರುತ್ತದೆ"

(Sd.), M. Cubbon,

26th February 1861 — Commissioner

1920ನೇ ಇಸವಿಯಲ್ಲಿ ಆಯುಧದ ಕಾನೂನುಗಳನ್ನು ಪುನಹ ಬದಲಾಯಿಸಿದಾಗ ಆಯುಧಗಳನ್ನು ಹಿಡಿಯಬಾರದೆಂಬ ಕಾನೂನು ಪೂರ್ವದಂತೆಯೇ ಕೊಡಗು ಜನರಿಗೆ ಲಗಾವು ಆಗಬಾರದೆಂದು, ಆಗ ಕೊಡಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಎಫ್.ಎಲ್.ಬ್ರಿಗ್‌ಸ್ಟಾಕ್ ಸಾಹೇಬರು ಹಠಾತ್ತಾಗಿ ಬರೆದ ಮೇರೆ ಆಗ ಚೀಫ್ ಕಮಿಶನರಾಗಿದ್ದ ಎಚ್. ವಿ. ಕಾಬ್ ಸಾಹೇಬರು ಮಂಜೂರು ಮಾಡಿಸಿದರು.

೨. ಕೊಡಗರ ಪದ್ಧತಿ

ಹುಟ್ಟುವುದು

ಹೆರುವುದು : ಕೊಡಗತಿಯು ಹೆತ್ತ ಒಡನೆ ಜೀವವಿರುವ ಗಂಡು ಮಗುವಾದರೆ ಒಂದು ಗುಂಡು ಹಾರಿಸಬೇಕು. ಅರಳಿಲೆಯ ದಂಟಿನಿಂದ ಮಾಡಿದ ಒಂದು ಅಂಬು ಬಿಲ್ಲನ್ನು ಮಗುವಿನ ಕೈಗೆ ಹಿಡಿಸಬೇಕು. ಹೆಣ್ಣು ಮಗುವಾದರೆ "ತಳಿಯಮಣಿ" ಹೊಡಿಯಬೇಕು.

ಮಗುವನ್ನು ಮೀಯಿಸಿ ಆದ ಒಡನೆ ಸ್ವಲ್ಪ ಬೆಲ್ಲ ತುಪ್ಪ ಮತ್ತು ಒಳ್ಳೆಮೆಣಸನ್ನು ಮಿಶ್ರಮಾಡಿ "ಬೆಲ್ಲ ಅಲಿವನ್ನಕ್ಕೆ ಅಲಿ; ನೆಯ್ ಉರುವನ್ನಕೆ ಉರ್; ಮಳುವನ್ನಕೆ ತಂಪಾಯಿತಿರ್" ಎಂದು ಹೇಳಿ ತಿನ್ನಿಸಬೇಕು.

ಸೂತಕ : ಹೆತ್ತ ಕುಟುಂಬದಲ್ಲಿ 7 ದಿವಸ ಸೂತಕವಿರುತ್ತದೆ. ಸೂತಕವಿದ್ದರೂ ಮದುವೆ ಮಾಡಬಹುದು; ಹುತ್ತರಿ ಮತ್ತು ಕೈಲ್ ಪೊಳ್ದ್ ಹಬ್ಬಗಳಲ್ಲಿ "ಮಂದು"ಗಳಿಗೆ ಹೋಗಲೂ ಕುಣಿಯಲೂಬಹುದು. ದೇವಸ್ಥಾನಗಳಿಗೆ ಹೋಗಕೂಡದು. 7ನೇ ದಿವಸದಲ್ಲಿ ಮನೆಯನ್ನು ಶುದ್ಧ ಮಾಡಬೇಕು. 12ನೇ ದಿವಸದಲ್ಲಿ ಮನೆಯನ್ನು ತೀರ್ಥದಲ್ಲಿ ಪ್ರೋಕ್ಷಿಸುವುದುಂಟು. ಬಾಳಿಕೆ ಹೋದ ಹೆಂಗಸು ತವರು ಮನೆಯಲ್ಲಿ ಹೆತ್ತರೂ ಇತರ ಮನೆಯವಳಾದ ಹೆಂಗಸು ಹೆತ್ತರೂ ಹೆತ್ತ ಮನೆಯಲ್ಲಿ ಮಾತ್ರ ಸೂತಕವಿದ್ದರೂ ಬೇರೆ ಕಡೆಯಲ್ಲಿರುವ ಕುಟುಂಬಸ್ಥರಿಗೆ ಈ ಸೂತಕ ವ್ಯಾಪಿಸುವುದಿಲ್ಲ. ಆದರೆ ಅವಳ ಸೂತಕವು ಅವಳ ಬಾಳಿಕೆ ಮನೆಯ ಕುಟುಂಬಕ್ಕೆ ವ್ಯಾಪಿಸುತ್ತದೆ.

ಹೆಸರು : ಹನ್ನೆರಡನೇ ದಿವಸದಲ್ಲಿ ಮಗುವಿಗೆ ಹೆಸರನ್ನು ಹಾಕಬೇಕು. ಈ ದಿವಸ ತಾಯಿಯು ಮತ್ತು ಮಗುವು ಸ್ನಾನವನ್ನು ಮಾಡಿ ಆದ ಮೇಲೆ ಮಗುವನ್ನು ತೊಟ್ಲಿಗೆ ಹಾಕಬೇಕು. ಇದುವರೆಗೆ ಮಗುವನ್ನು ಪೆಟ್ಟಿಗೆಯ ಮುಚ್ಚಳ ಮುಂತಾದ್ದರಲ್ಲಿ ಹಾಕುವರು. ಅದರಲ್ಲಿ ಮಗುವಿನ ಹೊಕ್ಕಳನ್ನು ಕೊಯಿದ ಕತ್ತಿಯನ್ನು 12 ದಿನಗಳವರೆಗೆ ಹಾಕಿರಬೇಕು.

ಮಗುವನ್ನು ತೊಟ್ಲಿಗೆ ಹಾಕುವ ಮೊದಲು, ಗಂಡಾದರೆ ಸೊಂಟಕ್ಕೆ, ಕೈಗೆ ಮತ್ತು ಕಾಲಿಗೆ, ಹೆಣ್ಣಾದರೆ ಕೈಗೆ ಮಾತ್ರ ಕರಿ ದಾರವನ್ನು ಕಟ್ಟಬೇಕು. ಆಮೇಲೆ ದೀಪಕ್ಕೆ ಅಕ್ಕಿ ಹಾಕಿ ಒಂದು ಮುಕ್ಕಾಲಿ ಮಣೆಯ ಮೇಲೆ ಒಳ್ಳೆಣ್ಣೆ, ತೆಂಗಿನೆಣ್ಣೆ, ಹಸುವಿನ ತುಪ್ಪ ಅಥವಾ ಕೈಯೆಣ್ಣೆ ದೀಪ ಮಡಗಿ ಕತ್ತಿಯಲ್ಲಿ ಕಾಡಿಗೆಯನ್ನು ಮಾಡಿ ಮಗುವಿನ ಕಣ್ಣಿಗೆ ಹಾಕಬೇಕು. ಕತ್ತಿಯನ್ನೂ ಮೂರು ವೀಳ್ಯದೆಲೆಗಳನ್ನೂ ದೀಪದ ಹತ್ತಿರ ಇಡಬೇಕು. ಆಮೇಲೆ ತೊಟ್ಟಿಕಲ್ಲಿನ ಗುಂಡುಕಲ್ಲನ್ನು ತೊಟ್ಟಿನಲ್ಲಿ ಹಾಕಿ "ಕಲ್ಲಾಯುಷ್ಯಾಯಿತ್ ಬದ್‌ಕ್" ಎಂದು ಹೇಳುತ್ತಾ ಮೂರು ದಪ ತೊಟ್ಟಿ ನಲ್ಲಿಯೂ, ಮೂರು ದಪ ನೆಲದ ಮೇಲೂ, ಮೂರು ಮೂರು ಮುತ್ತೈದೆಯರು ಅಥವಾ ಕನ್ಯೆಯರು ಉರುಳಿಸಿ, ಮಗುವನ್ನು ತೊಟ್ಟಿನಲ್ಲಿ ಹಾಕಿ ಯಾವ ಹೆಸರನ್ನು ಹಾಕಬೇಕೋ ಆ ಹೆಸರಿನಿಂದ "ಲೈಯ್ಯಣ್ಣ, ಲೈಯ್ಯಣ್ಣ* ಪಾಲ್ ಕೂಳುಂಬಕ್ ಏಳ್" ಎಂದು ಹೇಳುವರು.

ಕೆಲವು ಶಬ್ದಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಿಕ್ಕಾಗದ್ದರಿಂದಲೂ, ಮಾಡಿದರೂ ನ್ಯಾಯವಾದ ಅರ್ಥ ಕೊಡದೆ ಇರುವುದರಿಂದಲೂ ಇನ್ನು ಮುಂದೆ ಅಲ್ಲಲ್ಲಿ ಕೊಡಗು ಶಬ್ದಗಳನ್ನು ಉಪಯೋಗಿಸುತ್ತೇನೆ.

*** ಹೆಸರು ಉದಾಹರಣೆಗಾಗಿ ಕೊಟ್ಟುದಾಗಿದೆ.**

ಆಮೇಲೆ ಒಂದು ಚಿನ್ನದ ನಾಣ್ಯದಲ್ಲಿ ಸ್ವಲ್ಪ 'ಪೆರೆಯನ್ನು' (ಹಾಲಿನ ಕೆನೆ) ಮಗುವಿಗೆ ತಿನ್ನಿಸಬೇಕು.

ಹೆತ್ತ ಒಡನೆ ಬಾಣಂತಿಯು ಆಭರಣಗಳೆಲ್ಲವನ್ನು ತೆಗೆದು ಬಿಟ್ಟು 61 ದಿವಸದವರೆಗೆ ಆರೈಕೆಯಲ್ಲಿರಬೇಕು.

ನೀರು ತೆಗೆಯುವುದು : ಗಂಗೆ ಪೂಜೆ 61ನೇ ದಿವಸದಲ್ಲಿ ಹೆತ್ತ ಹೆಂಗಸು ಎಂದಿನಂತೆ ಸ್ನಾನ ಮಾಡಿ, ಮಡಿ ಬಟ್ಟೆಗಳನ್ನುಟ್ಟು ಆಭರಣಗಳನ್ನು ಧರಿಸುವಳು. ಆ ಸಮಯದಲ್ಲಿ ಬಚ್ಚಲು ಮನೆಯಲ್ಲಿ ಇವಳಿಗೆ ನೀರು ಕಾಯಿಸುವುದಕ್ಕೆ ಇಟ್ಟಿದ್ದ ಕಡಾಯವನ್ನು ತೆಗೆದುಬಿಡಬೇಕು. ಆ ಕಡಾಯವನ್ನು ತಣ್ಣಗೆ ಮಾಡಿ "ಕಡಾಯತ್‌ರ ಅಡಿ ತಂಪಾನನ್ನಕೆ ನ್‌ಡ ಕೆಲ ತಂಪಾಡ್" ಎಂದು ಹೇಳುವರು. ಆಮೇಲೆ ಗಂಗೆ ಪೂಜೆಯನ್ನು ಮಾಡಲು ಬಾವಿಗೆ ಹೋಗಬೇಕು.

ಬಾವಿಗೆ ಹೋಗಿ ಬಾವಿಯ ದಡದಲ್ಲಿ ಮೂರು "ತೋರಳೆ" ಸೊಪ್ಪುಗಳನ್ನು ದಂಟು ಪಶ್ಚಿಮಕ್ಕಾಗಿ ಬೇರೆ ಬೇರೆಯಾಗಿ ಮಡಗಿ, ಅವುಗಳ ಮೇಲೆ ಸ್ವಲ್ಪ ಸ್ವಲ್ಪ ಅಕ್ಕಿಯನ್ನು ಹಾಕಬೇಕು. ಆಮೇಲೆ ಮೂರು ವೀಳ್ಯದೆಲೆಗಳ ಮೇಲೆ ಮೂರು ಅಡಿಕೆಗಳನ್ನು ಇಟ್ಟು ಬಾವಿಗೆ ಸ್ವಲ್ಪ ಸ್ವಲ್ಪ ಅಕ್ಕಿಯನ್ನು ಮೂರು ದಪ ಹಾಕಿ, ವೀಳ್ಯದೆಲೆಗಳನ್ನು ಮಗುಚದಂತೆ ಬಾವಿಗೆ ಹಾಕಬೇಕು. ಆ ಮೇಲೆ ಬಾಣಂತಿ ಯಾಗಿದ್ದವಳು ಮೂರು ದಪ ಹಾಕಿ, ವೀಳ್ಯದೆಲೆಗಳನ್ನು ಮಗುಚದಂತೆ ಬಾವಿಗೆ ಹಾಕಬೇಕು. ಆ ಮೇಲೆ ಬಾಣಂತಿಯಾಗಿದ್ದವಳು ಮೂರು ಬಗಸೆ ನೀರು ಕುಡಿದು ಎರಡು ಚೆಂಬುಗಳನ್ನು ನೀರು ತುಂಬಿಸಿ ತನ್ನ ತಲೆಯ ಮೇಲೆ ಒಂದರ ಮೇಲೆ ಒಂದಿಟ್ಟು ಮನೆಗೆ ತೆಗೆದುಕೊಂಡು ಹೋಗಿ ಅಡುಗೆ ಮನೆಯಲ್ಲಿಟ್ಟು, ಬಾಡೆ ಮನೆಯಲ್ಲಿಟ್ಟಿರುವ * ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಬೇಕು. ಇವಳ ಜೊತೆಯಲ್ಲಿ ಬಾವಿಯಿಂದ ಇನ್ನಿಬ್ಬರು ಕನ್ಯೆಯರು ಅಥವಾ ಮುತ್ತೈದೆಯರು ಒಂದೊಂದು ಪಾತ್ರದಲ್ಲಿ ನೀರು ತರಬೇಕು. ತಾಯಿಯು ಮತ್ತು ಇಬ್ಬರು ನೀರು ತರುವಾಗ ಮಗುವನ್ನು ಬಾಡೆಯ ಮನೆಯಲ್ಲಿ ಒಂದು ಚಾಪೆಯ ಮೇಲೆ ತಲೆ ಪೂರ್ವಕ್ಕಾಗಿ ಮುಖಪೂರ್ತಿ ಕಾಣುವಂತೆ ಮಲಗಿಸಬೇಕು. ಆಮೇಲೆ ಊಟ ಉಪಚಾರಗಳನ್ನು ಮಾಡುವರು.

61 ದಿವಸವಾದ ನಂತರ ನೀರು ತೆಗೆದು ಮಗುವು ಇದ್ದರೆ ದೇವಸ್ಥಾನಕ್ಕೆ ಹೋಗುವುದುಂಟು. ಇತ್ತೀಚೆಗೆ ಹೆಸರು ಹಾಕುವುದನ್ನು ನೀರು ತೆಗೆಯುವುದನ್ನೂ ಹೆಚ್ಚು ವೈಭವದಿಂದ 61ನೇ ದಿವಸದಲ್ಲೇ ಮಾಡುವುದು ರೂಢಿಗೆ ಬಂದಿದೆ.

ಕುಞ್ಞೆರ್ರ ಕೈಕ್ ಪಣ ಕೊಡ್‌ಪ – ನೆಂಟರಿಷ್ಟರು ಬಂದರೆ ಮಗುವಿಗೆ ಹಣ ಕೊಡುವುದುಂಟು.

ತೊಟ್ಟ್‌ಪಣ ಕೆಟ್ಟ್‌ವ (ಕಚ್ಚೆಪಣ ಕೆಟ್ಟ್‌ವ) – ಹೆಣ್ಣು ಮಗುವಿಗೆ ಹಣ ಕೊಡುವಂಥ ನೆಂಟರು, ಆ ಮಗುವನ್ನು ತನ್ನ ಮಗನಿಗಾಗಲೀ ಮೊಮ್ಮಗನಿಗಾಗಲೀ ಕೊಡ ಬೇಕೆಂದು ಕೇಳಿ, ಮಗುವಿನ ತಂದೆತಾಯಿಗಳು ಸಮ್ಮತಿಸಿದರೆ, ಮಗುವಿನ ಕೈಗೆ ಹಣ ಕೊಡುವುದರ ಬದಲಾಗಿ ತೊಟ್ಲಿನ ಹಗ್ಗಕ್ಕೆ ಕಟ್ಟಬೇಕು. ಅಂಥ ಮಗುವನ್ನು ದೊಡ್ಡದಾದ ಮೇಲೆ ಅದೇ ಹುಡುಗನಿಗೆ ಕೊಡಬೇಕು.

ಬಾಲಲೀಲೆ

1. ಜೂವ, ಜೂವ, ಕುಞ್ಞಿಯೇ,
   ಕುಞ್ಞೆರಪ್ಪ ಬಪ್ಪಕ

*** ಸೀಮೆ ಎಣ್ಣೆ ದೀಪ ಉಪಯೋಗಿಸಬಾರದು.**

ಕೊಟ್ಟಿ ತೆಂಗೆ ಕೋಂದಕ್ಕು–ಜೂ!

2. ಜೂವ ಃಪೂವ ಕುಞ್ಞಿಯೇ
ಕುಞ್ಞಿರಪ್ಪ ಬಪ್ಪಕ
ಚೆಪ್ಪ್ ವೊಲೆ ಕೋಂದಕ್ಕು–ಜೂ!

3. ಜೂವ ಃಪೂವ ಕುಞ್ಞಿಯೇ
ಕುಞ್ಞಿರಣ್ಣ ಬಪ್ಪಕ
ಚಿಟ್ಟೆ ಪಃಕ್ಕ ಕೋಂದಕ್ಕು–ಜೂ!

4. ಜೂವ ಃಪೂವ ಕುಞ್ಞಿಯೇ
ಕುಞ್ಞಿರಕ್ಕ ಬಪ್ಪಕ
ಚಟ್ಟಿ ಪುಃಟ್ ಕೋಂದಕ್ಕು–ಜೂ!

ಕುಟ್ರು ಕುಟ್ರು ತೋರೇಕ
ಎಚ್ಚಕ್ ಮಕ್ಕಳ ಪೆತ್ತಿಯ?
ನಾಲಂಜಿ ಮಃಕ್ಕಳ ಪೆತ್ತ
ಪೆತ್ತ ಮಕ್ಕಳೆಃಲ್ಲಿಯ?
ಕೊಂಬ್‌ಡ ಃಓಡಿಲ್ ಬೆಚ್ಚ
ಕಾಕೆ ಕೊಂಡೋಚೋ? ಪೋಕೆ ಕೊಂಡೋಚೋ?

---

1. ಕಾಕು ಕಃಕೇಕ
ಕಾಕೆರ ಃಮಂಗ್‌ಲ ಎಕ್ಕೇಕ?
ನಾಳೆ ಪೊಃಲಾಕ ನಾರಾಚೆ
ಕರ್ಕ್ಳಿ! ಃಕ್ಕ್ಳಿ!! ಕರ್ಕ್ಳಿ!!!

2. ಕಾಕು ಮಃಲ್ಲಕ
ಎಣ್ಣೆ ನಃಕ್ಕ ಚೆಣ್ಣಕ
ಕಾಕೆರ ಕುಞ್ಞಿ ಪೊಳೆ ಕುತ್ತ ಪೋಚಿ;
ಕ್‌ಡ್‌ವಃಡ ಕುಞ್ಞಿ ಪೊಳೆಮರಿಯ ಪೋಚಿ;
ನಂಗಡ ಕುಞ್ಞಿ ಮನೆಕ್ ಬಾತ್
ಕರ್ಕ್ಳಿ! ಃಕ್ಕ್ಳಿ!! ಕರ್ಕ್ಳಿ!!!

ತಪ್ಪಾಲಪ್ಪ! ತಃವ್ವಾಲ!
ತಪ್ಪ ಕುಡಿಕೇಲ್ ಎನ್ನುಂಡ್?
ಚಾಮಿಕ್ ಬೆಃಚ್ಚ ಪಾಲುಂಡ್
ನಾಕ್ ತಂದ್‌ರ್ ಕುಡ್‌ಚಿರುವಿ.
ತವ್ವ ಕುಡಿಕೇಲ್ ಎನ್ನುಂಡ್?
ಚಾಮಿಕ್ ಬೆಃಚ್ಚ ಮೋರುಂಡ್

ನಾಕ್ ತಂದ್‌ರ್ ಕುಡ್‌ಚಿರುವಿ.
ಚಿಣ್ಣಿಬೆರ ಚಿಂಡಾಣಿ
ಮೋದಿರ ಪೊನ್ನಾಣಿ
ನಡು ಬೆರ ನಾಣ್ಯೇಕ
ಕೋಟೆರ ಚಿಟ್ಟೇಕ
ಮೋರ್‌ಕ್ ಪೋಪ ಮುರುಟೇಕ

ಕೋಳಿ ಕುಞ್ಞಿ! ಕೋಳಿ ಕುಞ್ಞಿ!! ನಾಕೋರ್ ಪಾಟ್ ಪಾಡ್
ನಾನೆನ್ನತ ಪಾಟ್ ಪಾಡುವ, ಪಿಂಯೊ! ಪಿಂಯೊ!!

ಚೆಂಬ ಚೆಂಬ ಚೆಂಬೆಡ್‌ತ,
ಚೆಂಬಂಡ ಮಂದಿ ದುಡಿಯೆಡ್‌ತ,
ಮಾಣಿಕ ಮಂಡ ಮಣಿಯೆಡ್‌ತ,
ಬೊಳ್ಳಿ ಪಣಿಕ ತೆರೆಯೆಡ್‌ತ,
ಕಾಪಳ ಕುಟ್ಟಿ ಕೊಂಬೆಡ್‌ತ,
ಅೈಯ್ಯಪ್ಪ ಕ್ಣ್ಣ ಕೋಲೆಡ್‌ತ,
ಪೂವಕ ಮೂಡಿ ತುಣಿಯೆಡ್‌ತ,
ನಾನೊರ್ ಚಟ್ಟುವ ಪುಟ್ಟೆಡ್‌ತ,
ಪಾಲ ಕಡಪಕ ಬುದ್ದೇ ಪೋಚಿ!

ತಟ್ಟಾಂಡಾಣೆಲ್ ತಾರ್ ಕೊಡಂದೆ
ಉದಿಯಾಂಡಾಣೆಲ್ ನೂರ್ ಕುದ್‌ರೆ
ಪಂಡೇತಜ್ಜಂಡ ಪಡೆ ಬಂದ ಕಾಲ
ಕಾಪ್‌ಲ್ ಕೋಳಿನ ಕಣ್ಣಿಯೂ ಕಾಚಿ
ಕಣ್ಣಿ ಕುಡಿಪಕ್ ಚೆಳ್ಳಿಕ್ ಪೋನ,
ಚೆಳ್ಳಿಲೊರ್ ಕೋಟಂಜಿ ಕಂಡ,
ಕೋಟಂಜಿ ತಳ್ಳುವಕ್ ಕೋಲ್‌ಕ್ ಪೋನ,
ಕೋಲ್‌ಲೊರ್ ತೇನ್‌ನ ಕಂಡ,
ತೇನ್‌ನ ಕೆತ್ತುವಕ್ ಮತ್ತ್‌ಕ್ ಪೋನ,
ಮತ್ತ್‌ಲೊರ್ ಚೋರೆನ ಕಂಡ,
ಚೋರೆನ ಕತ್ತುವಕ್ ಕೊಲ್ಲಿಕ್ ಪೋನ,
ಕೊಲ್ಲಿಲೊರ್ ಆಮೆನ ಕಂಡ,
ಆಮೆನ ಕೆಟ್ಟುವಕ್ ಬಳ್ಳಿಕ್ ಪೋನ,
ಬಳ್ಳಿ ಬಲಿಪಕ ಬರೆಕುತ್ತ ಬುದ್ದ.
ಬರೆ ಎನ್ನ ತಾತ್? ಮಣ್ಣ್ ತಾತ್,
ಮಣ್ಣೆನ್ನ ಮಾಡಿಯ? ಏರಿಕ್‌ಟ್ಟ,
ಏರಿಯೆನ್ನ ತಾತ್? ಪಿಲ್ಲ್ ತಾತ್,

ಪಿಲ್ಲೆನ್ನ ಮಾಡಿಯ? ಪಯ್ಯುಕ್‌ಟ್ಟ,
ಪಯ್ಯು ಎನ್ನ ತಾತ್? ಪಾಲ್ ತಾತ್,
ಪಾಲೆನ್ನ ಮಾಡಿಯ? ಪಟ್ಟಂಗೊಡ್'ತ,
ಪಟ್ಟೆನ್ನ ತಾತ್? ಪೂಂಗುರಿತಾತ್,
ಪೂಂಗುರಿ ಎಲ್ಲಿಯ? ಮಾವಿಕ್ ಕೊಡ್'ತ,
ಮಾವಿಯೆಂತ ತಾತ್? ಮೋವಳ ತಾತ್,
ಮೋವಳೆಲ್ಲಿಯ ? ಮಂಗ್'ಲ ಕೈಚಂಡ.!

ಬಾತವ್ವ ಬಾತವ್ವ ಬೋಜಕ್ಕ ಮೂಡಿ
ಕಾತ್ ಮಳೆಯಿಲ್ ನೆಲ್‌ಂದಂಡೆ ಬಾತ್॥

ಕಾಲ್‌ಲ್ ಕಾಸರ ಮಿನಿಮಿನಿ ಕಾಂಬ
ಬೋಳೆಲ್ ಅಡ್ಡಿಗೆ ಫಳಫಳ ಕಾಂಬ॥ ಬಾತವ್ವ ॥

ಅಪ್ಪಂಗ್ ಉಳ್ಳೊರ್ ಕುಪ್ಪಿಕಳ್ಳ್ ಕೋಂದ
ಕುಪ್ಪಿಕಳ್ಳ್ ಕೋಂದ ಕೊರಿಯೆರಚಿ ಕೋಂದ॥ ಬಾತವ್ವ ॥

ಮಕ್ಕಕ್ ಉಳ್ಳೊರ್ ಪಾಪುಟ್ಟ್ ಕೋಂದ
ಪಾಪುಟ್ಟ್ ಕೋಂದ ಕೋಳಿ ಕರಿ ಕೋಂದ॥ ಬಾತವ್ವ ॥

ಮದುವೆ

ಹುಡುಗನು ಮತ್ತು ಹುಡುಗಿಯು ಗಂಡ ಹೆಂಡತಿಯಾಗಿರತಕ್ಕಷ್ಟು ವಯಸ್ಸಾದ ಮೇಲೆ ಮದುವೆ ಮಾಡುವರು. ಸಣ್ಣ ಮಕ್ಕಳಿಗೆ "ಕೊದಿ ಮಂಗ್'ಲ" ಮಾಡುವುದೂ ಉಂಟು.

ಕನ್ನಿಮಂಗ್'ಲ, ಕೂಡಾವಳಿ ಮಂಗ್'ಲ, ಕುತ್ತಿಕ್ ನಿಪ್ಪದ್ (ಒಕ್ಕಪರಚೆ), ಪಚ್ಚಡಕ್ ನಡಪದ (ಮಕ್ಕಪರಚೆ), ನರಿಮಂಗ್'ಲ, ಕೆಮ್ಮಿಕುತ್ತಿ ಮಂಗ್'ಲ, ಬಾಳೆಕ್ ಮಂಗ್'ಲ ಎಂಬ ಏಳುತರದ ಮದುವೆಗಳಲ್ಲಿಯೂ ಹುಡುಗನಿಗೆ ಮುಹೂರ್ತವು ಉಂಟು.

ಹುಡುಗಿಗೆ ಕನ್ನಿಮಂಗ್'ಲ, ಕುತ್ತಿಕ್ ನಿಪ್ಪದ್, ಪಚ್ಚಡಕ್ ನಡಪದ್, ನರಿಮಂಗ್'ಲ ಮತ್ತು ಪೈತಾಂಡೆಕೆಳಪದ್ ಎಂಬ ಐದು ತರದ ಮದುವೆಗಳಲ್ಲಿ ಮುಹೂರ್ತ ವುಂಟು. ಹುಡುಗಿಯರಿಗೆ ಕೆಮ್ಮಿಕುತ್ತಿ ಮಂಗ್'ಲ ಮತ್ತು ಬಾಳೆಕ್ ಮಂಗ್'ಲ ಇಲ್ಲ ಮತ್ತು ಕೂಡಾವಳಿ ಮದುವೆಯಲ್ಲಿ ಮುಹೂರ್ತವಿಲ್ಲ.

ಕನ್ನಿಮಂಗ್'ಲ

ಕನ್ಯೆಯಾಗಿರುವ ಹುಡುಗಿಯನ್ನು ಮದುವೆ ಮಾಡಿ ತರುವುದಕ್ಕೆ ಕನ್ನಿಮಂಗ್'ಲವೆಂದು ಹೆಸರು.

ಜಾತಕ ನೋಡುವುದು : ಗಂಡಿಗೂ ಹೆಣ್ಣಿಗೂ ಜಾತಕಗಳಿದ್ದರೆ, ಸರ್ವ ಸಾಧಾರಣವಾಗಿ ಜಾತಕಗಳನ್ನು ನೋಡುವರು. ಗಂಡಿನ ಜಾತಕವನ್ನು ಹೆಣ್ಣಿನ ಮನೆಗೆ ತರಿಸಿಕೊಳ್ಳುವರು. ಆದರೆ ಹೆಣ್ಣಿನ ಜಾತಕವನ್ನು ಗಂಡಿನ ಮನೆಗೆ ಕಳುಹಿಸಿಕೊಡಬೇಕಾಗಿ ಕೇಳಕೂಡದು.

ಜಾತಕ ನೋಡಿ "ಒತ್ತ್ ಬುದ್ದತೇಂಗಿ" (ಸರಿ ಬಿದ್ದಲ್ಲಿ) ಮದುವೆ ಮಾಡುವರು.

ಹೂವು ತೆಗೆಯುವುದು : ಜಾತಕವಿಲ್ಲದಿದ್ದರೆ ಹೂವು ತೆಗೆಯುವುದುಂಟು. ಇದರ ಕ್ರಮವು ಒಂದೊಂದೂ ಕಡೆಯಲ್ಲಿ ಒಂದೊಂದು ತರಹವಿರುತ್ತದೆ. ಹೇಗೂ ಕೆಂಪು ಹೂವು ತೆಗೆದರೆ ಕೆಟ್ಟದೆಂದೂ, ಬಿಳಿ ಹೂವು ತೆಗೆದರೆ ಒಳ್ಳೆಯ ದೆಂದೂ ತಿಳಿದುಕೊಂಡಿರುವರು.

ರಾಶಿ ಮಡಗುವುದು : ಜಾತಕವಿಲ್ಲದಿದ್ದರೆ, ಹುಡುಗನ ಮತ್ತು ಹುಡುಗಿಯ ನಕ್ಷತ್ರಗಳನ್ನು ಹೇಳಿ ಕಣಿಯನಿಂದ ನೋಡಿಸುವರು. ಕಣಿಯನ ಹೇಳಿಕೆಯ ಮೇರೆ ಮದುವೆ ಮಾಡುವುದೂ ನಿಲ್ಲಿಸುವುದೂ ಉಂಟು.

ಮದುವೆ ಮಾಡುವ ಸಂಗತಿಗಳಲ್ಲಿ ಮೇಲ್ಕಂಡವುಗಳನ್ನು ಅನುಸರಿಸದೆ "ಮನ ಒತ್ತತ್ತೇಂಗಿ ಗಣ ಒತ್ತತ್" ಎಂದು ಮದುವೆ ಮಾಡುವುದು ಸರ್ವ ಸಾಧಾರಣವಾಗಿದೆ.

ಪೊಣ್ಣ್ ಪರೆಯುವದ್ : ತಕ್ಕಂತ ಹುಡುಗಿಯು ಇರುವಂಥ ಸ್ಥಳವನ್ನು ತಿಳಿದುಕೊಂಡು ಗಂಡಿನ ಮನೆಯವನೊಬ್ಬನ ಜೊತೆಗೆ ಅರುವನನ್ನು (ಅರುವ ಎಂದರೆ ಅರಿತವ, ಪದ್ಧತಿಗಳನ್ನು ತಿಳಿದವ, ಹುಡುಗನ ಮನೆಯವರಲ್ಲದೆ ಹತ್ತಿರ ಮನೆಯವರಲ್ಲಿ ಬುದ್ಧಿವಂತನಾಗಿರಬೇಕು. ಪೂರ್ವದಲ್ಲಿ ಇದು ವಂಶಪಾರಂಪರ್ಯವಾಗಿತ್ತು. ಒಂದು ಕುಳಕ್ಕೆ ಇನ್ನೊಂದು ಕುಳದವರು ಅರುವರಾದರೆ ಆ ಕುಳಕ್ಕೆ ಮೊದಲಿನ ಕುಳವು ಅರುವನಾಗಬೇಕು) ಕೂಡಿಸಿಕೊಂಡು ಹೆಣ್ಣಿನ ಮನೆಗೆ ಹೋಗಿ ಕೊಡುವ ತರುವ ವಿಷಯವಾಗಿ ಮಾತು ನಿಷ್ಕರ್ಷೆ ಮಾಡಿ, ಒಪ್ಪಿಗೆಯಾದರೆ "ಕುರಿ" ಮಾಡುವ ದಿವಸವನ್ನು ನಿಶ್ಚಯಿಸುವರು.

ಕುರಿ ಮಾಡುವುದು : ಕುರಿ ಮಾಡಲು ಗಂಡಿನ ಕಡೆಯವನೊಬ್ಬನು, ಅವನ ಅರುವ, ಮತ್ತೊಬ್ಬನು ಅಂತು ಮೂರು ಜನರು ಹೆಣ್ಣಿನ ಮನೆಗೆ ಹೋಗಬೇಕು. ಅವರು ಬರುವ ದಿವಸ ಹೆಣ್ಣಿನ ಮನೆಯ ಯಜಮಾನನು ತನ್ನ ಅರುವನನ್ನೂ ತನಗೆ ಬೇಕಾದವರನ್ನೂ ಸೇರಿಸಿಕೊಂಡಿರಬೇಕು. ಕುರಿ ಮಾಡಲು ಬಂದ ಜನರಿಗೆ ಸತ್ಕಾರಗಳನ್ನು ಮಾಡಿ ಫಲಾಹಾರಗಳನ್ನು ಕೊಟ್ಟು ಕಣಿಯನಿದ್ದರೆ ಅವನಿಂದ "ನಾಳ್ ಮುಹೂರ್ತ" ನೋಡಿಸಬೇಕು. ಕಣಿಯನು ಉಭಯ ಕಡೆಯವರ ಮುಂದೆ ನಾಳ್ ಮುಹೂರ್ತವನ್ನು ನೋಡಿ "ಲಗ್ನಪತ್ರಿಕೆ"ಯನ್ನು ಬರೆದು ಕೊಡುವನು. ಅವನಿಗೆ ಗಂಡಿನ ಕಡೆಯವರು ಹಣ ಕೊಡಬೇಕು.

ಅಷ್ಟರಲ್ಲಿ "ನೆಲ್ಲಕ್ಕಿ ನಡುಬಾಡೆ"ಯನ್ನು ಗುಡಿಸಿ, ಸೆಗಣಿ ನೀರನ್ನು ಪ್ರೋಕ್ಷಿಸಿ, ಬಾಡೆಯಲ್ಲಿ ಒಂದು "ತಳಿಯಕ್ಕಿ ಬೊಳ್‌ಚ" ಇಟ್ಟಿರಬೇಕು. ಅದರ ಮುಂದೆ ಗಂಡಿನ ಪಂಗಡದವರು ಒಂದು ಸಾಲಾಗಿಯೂ ಹೆಣ್ಣಿನ ಪಂಗಡದವರು ಒಂದು ಸಾಲಾಗಿಯೂ ನಿಂತುಕೊಳ್ಳಬೇಕು. ಆಮೇಲೆ ಉಭಯ ಕಡೆಯವರ ಅರುವರು ಈ ಕೆಳಗಿನ ರೀತಿ ಹೇಳಬೇಕು.

ಗಂಡಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ ಅರುವನೂ, ಸಾಲ್ ಕೆಟ್ಟಿ ನಿಂದಿರಾ?

ಹೆಣ್ಣಿನ ಅರುವ : ನಿಂದತ್.

ಗಂಡಿನ ಅರುವ : *ನಡಿಕೇರಿಯಂಡ ಒಕ್ಕಡ ಐಯ್ಯಣ್ಣಂದೆಣ್ಣುವ ಕುಞ್ಞಿಕ್ ಪಟ್ಟಮಾಡ ಒಕ್ಕಡ ಮಾಚಮ್ಮಂದೆಣ್ಣುವ ಕುಞ್ಞಿನ ತಂದ್ ಬೆಂದು ಪರಂದಿತ್, ಸಾಲ್ ಬಾಕೆ ಕೇಟಲ್ಲಿ ತಪ್ಪಾಂಗ್ ಅಡ್ಡಿಯಿಲ್ಲೆಂದ್ ಎಣ್ಣ್‌ನಾಂಗೊಕ್ಕನೆ ಎಂಗ ಬಂದಿತ್, ಮಂಗ್‌ಲ ಕುರಿಚಿತ್ ತರಂಡೂಂದ್ ಕೇಟವ.

ಹೆಣ್ಣಿನ ಅರುವ : ಪಟ್ಟಮಾಡ ಒಕ್ಕಡ ಮಾಚಮ್ಮಂದೆಣ್ಣುವ ಕುಞ್ಞಿನ ನಡಿಕೇರಿಯಂಡ

*** ಹೆಸರು ಉದಾಹರಣೆಗಾಗಿ ಕೊಟ್ಟುದಾಗಿದೆ.**

ಒಕ್ಕಡ ಆೈಯ್ಯಣ್ಣಂದೆಣ್ಣುವ ಬೈಂಬಂಗ್ ತಂದ್ ಬೆಂದು ಪರಂದಿತ್, ಸಾಲ್ ಬಾಕೆ ಕೇಟಲ್ಲಿ, ಪಂಡಿಯತ ನಡಪೋಲೆ ನಾಳ್ ಮುಹೂರ್ತ ನೋಟ್‌ನಲ್ಲಿ ತಪ್ಪ ಕೊವ್ವಂದೆಣ್ಣಿತ್ ತಕ್ಕ್ ಬಾಕ್ ತ್ೇಂದಿತ್ ಇಂದೇಕ್ ಎಟ್ಟ್‌ದಿನತ್ ಆೈಯ್ಯಣ್ಣಂದೆಣ್ಣುವ ಬೈಂಬ ಅವಂಡ ಇಲ್ಲವನೊ, ಬೆಂದುನೊ, ಅಂಗನೊ, ಅರುವನೊ, ಊರ್‌ನೊ, ನಾಡ್‌ನೊ ಎಲ್ಲಾ ಕೂಟಿತ್ ಅವಂಡ ಮನೆಲ್ ಮುಹೂರ್ತ ಕೈಚಿತ್ ಈ ಮನೆಕ್ ಮಂಗ್‌ಲಾಡಿ ಬಂದಕ ಆೈಯ್ಯಣ್ಣಂದೆಣ್ಣುವ ಬೈಂಬಂಗೂ ಈ ಒಕ್ಕಡ ಮಾಚಮ್ಮಂದೆಣ್ಣುವ ಕುಞ್ಞಿಕೂ ಮುಹೂರ್ತ ಕೈಚಿತ್ ಇಳ್‌ಪಿಕೊಡ್‌ಪಾಂಗ್ ಅಡ್ಡಿ ಇಲ್ಲೆ. ಅಲ್ಲಿ ಕೆತ್ತಣೆ ಆೈಯ್ಯಣ್ಣಂದೆಣ್ಣುವ ಬೈಂಬಂಗೂ ಮಾಚಮ್ಮಂದೆಣ್ಣುವ ಕುಞ್ಞಿಕೂ ಅಯಿಂಗಡ ಇಲ್ಲವಂಗೂ ಬೆಂದುಕೂ, ಅಂಗಂಗೂ ಅರುವಂಗೂ, ಒರೂ ತಟ್ಟ್ ಮುಟ್ಟ್ ಬರತನ್ನನೆ ನಡತಿತ್ ತಪ್ಪ ಭಾರ ಕಾವೇರಿಯಮ್ಮೆಕೂ ದಂಡ್ ಒಕ್ಕಡ ಗುರುಕಾರಣವಂಗಕೂ ಕೂಡಿತುಂಡ್.

ಗಂಡಿನ ಅರುವ : ಆನಕ್ಕಿಕ ನಡಿಕೇರಿಯಂಡ ಒಕ್ಕಡ ಆೈಯ್ಯಣ್ಣಂದೆಣ್ಣುವ ಬೈಂಬಂಗ್ ಪಟ್ಟ ಮಾಡ ಒಕ್ಕಡ ಮಾಚಮ್ಮಂದೆಣ್ಣುವ ಕುಞ್ಞಿನ ಮಂಗ್‌ಲ ಕುರಿಚಿತ್ ತಂದಾಂಗೊಕ್ಕನೆ ಇಂದೇಕೆಟ್ಟ್ ದಿನತ್ ಮಂಗ್‌ಲಾಡಿ ಪಾಡಿ ಬಂದಕ ಎಂಗಕ್ ಒರೂ ತಟ್ಟ್ ಮುಟ್ಟ್ ಇಲ್ಲತೆ ಈ ಕಾರ್ಯತ್‌ನ ತಿದ್ದಿತ್ ನೀಕಿತಪ್ಪ ಅರುವನಾರ್ ಗೂವ?

ಹೆಣ್ಣಿನ ಅರುವ : ನಾನನ್ನೆ.

ಗಂಡಿನ ಅರುವ : ನಿಂಗ ದಾಡ?

ಹೆಣ್ಣಿನ ಅರುವ : ಎಂಗ ಕಲ್ಮಾಡಂಡ.

ಗಂಡಿನ ಅರುವ : ಮಣ್ಣುರುವನಾ? ಪೊನ್ನರುವನಾ?*

ಹೆಣ್ಣಿನ ಅರುವ : ಮಣ್ಣರುವ ಅಥವಾ (ಪೊನ್ನರುವ)

ಗಂಡಿನ ಅರುವ : ಇದರಿ ಸಾಕ್ಷಿಪಣ (ಎಂದು ಹೇಳಿ ಒಂದು ಹಣವನ್ನು ಕೊಡುವಂತೆ ಕೈ ನೀಡಿ) ನಡಿಕೇರಿಯಂಡ ಆೈಯ್ಯಣ್ಣಂದೆಣ್ಣುವ ಬೈಂಬಂಗ್ ಮಂಗ್‌ಲ ಕುರಿಚಿ ತಂದ ಪಟ್ಟಮಾಡ ಮಾಚಮ್ಮಂದೆಣ್ಣುವ ಕುಞ್ಞಿ, ಕ್‌ಳೆಯೋ ಮೇಲೆಯೋ ಪೋತನ್ನಕೆ ನೋಟಿಯವ ಭಾರ ನಿಂಗಡದಾಯಿತುಂಡ್ (ಎಂದು ಹೇಳಿ ಕೈಯಲ್ಲಿದ್ದ ಹಣವನ್ನು ಬಿಡಬೇಕು)

ಹೆಣ್ಣಿನ ಅರುವ : ಬಾತ್.

ಗಂಡಿನ ಅರುವ : ಈಡ್ ಬೆಚ್ಚವಲುವಾ?

ಹೆಣ್ಣಿನ ಅರುವ : ಕ್‌ಮರಿಯಾದಿ ಪ್ರಕಾರ.

*** ಮಣ್ಣ್ ಅರುವ ಅಂದರೆ ಮಣ್ಣಿಗೆ ಅರುವಾಮೆ ಕೊಟ್ಟ ಏರ್ಪಾಡಾದಂಥ ಕುಳ; ಪೊನ್ನ್ ಅರುವ ಅಂದರೆ ಚಿನ್ನ ಕೊಟ್ಟು ಅರುವನನ್ನು ಏರ್ಪಡಿಸಿಕೊಂಡಂಥ ಕುಳ. ಒಂದು ಊರಿಗೆ ಒಂದು ಹೊಸ ಕುಳವು ಬಂದರೆ ಅಥವಾ ಒಂದು ಕುಳವು ಕ್ಷೀಣವಾಗಿ ಹೋದರೆ ಬಂದ ಕುಳಕ್ಕೆ ಅಥವಾ ಮೊದಲಿದ್ದ ಕುಳಕ್ಕೆ ಅರುವನು ಬೇಕಾಗಿರುವುದರಿಂದ 3 ಅಚ್ಚಿ ಚಿನ್ನವನ್ನು ಕೊಟ್ಟು ಊರಲ್ಲಿ ಯಾವುದಾದರೂ ಒಂದು ಕುಳವನ್ನು ಅರುವನಾಗಿ ಏರ್ಪಡಿಸಿಕೊಂಡರೆ ಅಂಥ ಕುಳವು ಪೊನ್ನರುವನಾಗುವುದು. ಇತ್ತೀಚೆಗೆ ಸರಿಯಾದ ಅರುವನು ಈ ಸಂದರ್ಭದಲ್ಲಿ ಇಲ್ಲದೆ ಹೋದರೆ ಅಲ್ಲಿರುವ ಒಬ್ಬ ತಿಳಿದವನನ್ನು ಪೊನ್ನರುವನಾಗಿ ಮಾಡಿಕೊಳ್ಳುವುದುಂಟು.**

ಆಗ ಗಂಡಿನ ಅರುವನೇ ಆಗಲೀ ಮನೆಯವನೇ ಆಗಲೀ ದೀಪಕ್ಕೆ ನಮಸ್ಕರಿಸಿ, ತಳಿಯಕ್ಕಿ ಬೊಳಕಿಗೆ ಐದು ಹಣವಾಗಲೀ ಒಂದು ರೂಪಾಯಿಯಾಗಲೀ ಒಂದು ಆಭರಣವಾಗಲೀ ಹಾಕಬೇಕು.

ಆಮೇಲೆ ಊಟ ಉಪಚಾರಗಳನ್ನು ತೀರಿಸಿ ಹೊರಟು ಹೋಗಬೇಕು.

ಅವರು ಹೆಣ್ಣಿನ ಮನೆಯಲ್ಲಾಗಲೀ ಇತರರ ಮನೆಯಲ್ಲಾಗಲಿ ಆ ರಾತ್ರಿ ಉಳಿಯದೆ ಹಿಂದಕ್ಕೆ ತಮ್ಮ ಮನೆಗೇನೆ ಹೋಗಬೇಕು.

ಮದುವೆಗೆ ಕುರಿಯಾದ ಮೇಲೆ ಗಂಡಾಗಲೀ ಹೆಣ್ಣಾಗಲೀ ಹೊಳೆ ಇಳಿದು ದಾಟಬಾರದು. ಗಂಡಿನ ಮತ್ತು ಹೆಣ್ಣಿನ ಮನೆಗಳನ್ನು ದೇವಸ್ಥಾನದೋಪಾದಿಯಲ್ಲಿ ಕಾಣಬೇಕು. ಈ ಮನೆಗಳಿಗೆ "ಚಾವು" ವರ್ತಮಾನ ಹೇಳಕೂಡದು. ತಪ್ಪಿ ಹೇಳಿದರೂ ಈ ಮನೆಗಳಿಂದ "ಕೆಲ್ಲಟ್ಟಿ"ಯಾಗಲೀ, ಮುರಿಯಾಗಲೀ "ಸಮೆಯ"ವಾಗಲೀ ತೆಗೆದುಕೊಂಡು ಹೋಗಕೂಡದು. "ಪನ್ನಂದ್"ಗೇ ಆಗಲಿ "ಮಾದ"ಕ್ಕೇ ಆಗಲಿ "ಪೊಡಿ ಬಾಳೆ" ತೆಗೆದುಕೊಂಡು ಹೋಗುವುದಾಗಲೀ ಕಳುಹಿಸುವುದಾಗಲೀ ಕೂಡದು.

ಆದರೆ ಹೆಣ್ಣಿನ ಅಥವಾ ಗಂಡಿನ ಮನೆತನದವರೇ "ಕರಿಕ್ ಮುರಿಪ" ದಿವಸಕ್ಕಿಂತ ಮೊದಲು ಸತ್ತು ಹೋದರೆ ಹನ್ನೊಂದು ದಿವಸದವರೆಗೆ ಸೂತಕವು ತಪ್ಪದೆ ಇರುವುದರಿಂದ ಅದರ ಮಧ್ಯೆ ಮದುವೆಯನ್ನೂ ಮಾಡಕೂಡದು.

"ಕರಿಕ್ ಮುರಿಪ" ದಿವಸ, ಮದುವೆ ದಿವಸ ಅಥವಾ "ಬೈ ಮಂಗಲ" ದಿವಸ, ಸತ್ತು ಹೋದರೆ ಸಾವನ್ನು ಮನೆಯ ಹಿಂದಿನ ಬಾಗಿಲಿಗಾಗಿ ತೆಗೆದುಕೊಂಡು ಹೋಗಬೇಕು. "ಚಾವು ಪೊಲೆ" ತೆಗೆಯಕೂಡದು. ಒಂದು ವೇಳೆ ಚಾವುಪೊಲೆ ತೆಗೆದರೂ ಮದುವೆ ಮಾಡಿದರೆ ಮದುವೆ ಮಾಡಿದವನು ತಪ್ಪಿತಕ್ಕೆ ಗುರಿಯಾಗುವುದಿಲ್ಲ. "ಚಾವುಪೊಲೆ" ತೆಗೆದವನೇ ತಪ್ಪಿತಕ್ಕೆ ಗುರಿಯಾಗುವನು.

ತಿತಿ ಕರ್ಮಾಂತರಗಳನ್ನು ಮಾಡದಷ್ಟು ಸಣ್ಣ ಮಕ್ಕಳು ಸತ್ತರೆ ಮದುವೆ ಮಾಡಬಹುದು.

ಮದುವೆ ಹತ್ತಿರ ಬಂದುಬಿಟ್ಟರೆ ಸೂತಕದ ದೆಸೆಯಿಂದ ಮದುವೆಯನ್ನು ನಿಲ್ಲಿಸುವುದು ಬಹಳ ನಷ್ಟಕ್ಕೆ ಕಾರಣವಾಗುವುದರಿಂದ ಈ ಕೆಳಗಿನ ಕ್ರಮವನ್ನು ಅನುಸರಿಸಬಹುದು.

1. ಏಳನೇ ದಿವಸದಲ್ಲಿ ತಿತಿ ಕರ್ಮಾಂತರಗಳನ್ನು ಮಾಡಿ ಮುಗಿಸಿದರೆ ಆ ಮೇಲೆ ಮದುವೆ ಮಾಡಬಹುದು.
2. "ಚಾವು ಪೊಲೆ" ತೆಗಿಯದೆ ಮದುವೆಯನ್ನು ತೀರಿಸಿ ಆಮೇಲೆ "ಚಾವುಪೊಲೆ" ತೆಗೆದು ತಿತಿ ಕರ್ಮಾಂತರಗಳನ್ನು ಮಾಡಬಹುದು.
3. ಸೂತಕವಿರುವ ಮನೆಯಲ್ಲಿ ಮದುವೆ ನಿಲ್ಲಿಸಿ, ಸೂತಕವಿಲ್ಲದಿರುವ ಮನೆಯಲ್ಲಿ ಮದುವೆ ಮಾಡಬಹುದು. ಮದುವೆ ಮೆರವಣಿಗೆ ಹೊರಡಲು ಸೂತಕ ತೀರಬೇಕು.

ಕರಿಕ್ ಮುರಿಪ–ಪಂದಪಣಿ–ಊರ್ ಕೂಡುವ: ಮದುವೆಗೆ ಒಂದು ದಿವಸಕ್ಕೆ ಮೊದಲು "ಕರಿಕ್ ಮುರಿಪ" ದಿವಸವೆಂತಲೂ, "ಪಂದಪಣಿ" ದಿವಸವೆಂತಲೂ "ಊರ್ ಕೂಡುವ" ದೆಂತಲೂ ಅನ್ನುವರು.

ಈ ಆಚಾರವನ್ನು ಸಾಧಾರಣವಾಗಿ ಹುಡುಗನ ಮನೆಯಲ್ಲಿ ಬೇರೆ ಹುಡುಗಿಯ ಮನೆಯಲ್ಲಿ ಬೇರೆ ಆಚರಿಸುವರು. ಇತ್ತೀಚೆಗೆ ರೂಢಿಗೆ ಬಂದಿರುವ ದಂಪತಿ ಮುಹೂರ್ತ ಮಾಡಿದರೆ

ಒಂದೇ ಸ್ಥಳದಲ್ಲಿ ಕರಿಕ್ ಮುರಿಪದನ್ನು ಹುಡುಗನ ಮತ್ತು ಹುಡುಗಿಯ ಮನೆಯವರು ಆಚರಿಸುವರು.

ಈ ದಿವಸ ಊರಿನವರಿಗೆ ಮದುವೆಯನ್ನು ಈ ಕೆಳಗಿನ ರೀತಿ ಹೇಳುವರು.

"ನಾಳೆ ದಿವಸ ನಡಿಕೇರಿಯಂಡ ಅೈಯ್ಯಣ್ಣನ ಮದುವೆ ಪಟ್ಟಮಾಡ ಮನೆಯಿಂದ ಹೆಣ್ಣು. ಈ ದಿವಸ ಈ ಮನೆಯಿಂದ ಒಬ್ಬ ಗಂಡಸೂ ಒಬ್ಬ ಹೆಂಗಸೂ, ನಾಳೆ ದಿವಸ ಮನೆಯವರೆಲ್ಲರೂ ಬರಬೇಕೆಂದು ತಿಳಿಸುವುದಕ್ಕೆ ಬಂದಿದ್ದೇನೆ."

"ತ್'ೕಕೆ"[1] ಮನೆಗೆ ಮದುವೆ ಹೇಳಬಾರದು.

ಚಾಂಡಾಳರಿಂದ ಮದುವೆಯನ್ನು ಹೇಳಿಸಬಾರದು. ಹೇಳಿಸಿದರೆ ಮದುವೆಗೆ ಹೋಗದಿದ್ದರೆ ತಪ್ಪಾಗುವುದಿಲ್ಲ. ಶೂದ್ರರಿಂದ ಮದುವೆಯನ್ನು ಹೇಳಿಸಬಹುದು.

ಊರಲ್ಲಿ ಕುಳವಾರು ಒಬ್ಬ ಗಂಡಸು ಒಬ್ಬ ಹೆಂಗಸು ಮಧ್ಯಾಹ್ನದ ಊಟವನ್ನು ತೀರಿಸಿ, ಮದುವೆ ಮನೆಗೆ ಹೋಗಬೇಕು. "ಕರಿಕ್ ಮುರಿಪ" ಕೆಲಸವನ್ನು ಊರವರು ಮಾಡಬೇಕು. ಚಪ್ಪರದ ಕೆಲಸವನ್ನು ಅರುವನು ಮಾಡಬೇಕು. ಇದರಿಂದ ಚಪ್ಪರದ ಕೆಲಸಕ್ಕೆ ಬೇರೆ ಜನರು ಸೇರಕೂಡದೆಂದು ಅರ್ಥವಲ್ಲ. ಮನೆಗೆ ಹತ್ತುವ ಮೆಟ್ಲಿನ ಮೇಲಕ್ಕೆ ಚಪ್ಪರ ಹಾಕಬೇಕು. ಮೆಟ್ಲಿನ ಉಭಯ ಕಡೆಗಳಲ್ಲಿ ಚಪ್ಪರದ ಕಂಬಗಳಿಗೆ ಗೊನೆಯಿರುವ ಬಾಳೆ ಗಿಡಗಳನ್ನು ಕಟ್ಟಿಸಬೇಕು. ಅಲ್ಲದೆ ಮಾವಿನ ಎಲೆಗಳಿಂದ ಕೂಡಿದ ತೋರಣವಿರಬೇಕು.

ಚಪ್ಪರವು 5 ಕಾಲುಗಳಿಂದ ಕೂಡಿದ್ದಾಗಿರಬೇಕು. ಒಂದು ಕಾಲಾದರೂ ಹಾಲು ಬರುವ ಮರದ್ದಾಗಿರಬೇಕು.

ಚಪ್ಪರಕ್ಕಾಗಲೀ ಅಲಂಕಾರಕ್ಕಾಗಲೀ ಬೈನೆ[2] ಮರದ ಸೊಪ್ಪನ್ನು ಉಪಯೋಗಿಸಕೂಡದು.

ಬಾಳೆಯ ಪದಾರ್ಥವನ್ನಾಗಲೀ ದೋಸೆಯ ಹಿಟ್ಟನ್ನಾಗಲೀ ಎಸರು ಪಾಯಸವನ್ನಾಗಲೀ ಯಾವ ವಿಧದಿಂದಲೂ ಮದುವೆಯು ತೀರುವವರೆಗೆ ಮಾಡಕೂಡದು.

ಹುಡುಗಿಯು ಕರಿಕ್ ಮುರಿಪ ದಿವಸ ಸಾಯಂಕಾಲ ಸ್ನಾನ ಮಾಡಿ ಕಂಬಿ ಇರುವ ಬಿಳೀ ಮಡಿ ಸೀರೆಯನ್ನುಟ್ಟಿರಬೇಕು. ಹುಡುಗನು ಬಿಳೀ ಕುಪ್ಪಸ, ಕೆಂಪು ದಟ್ಟಿ ಧರಿಸಿ ತಲೆಗೆ ಕೆಂಪು ವಸ್ತ್ರವನ್ನು ಕಟ್ಟಿಕೊಳ್ಳಬೇಕು.

ಕರಿಕ್ ಮುರಿಪ ಮತ್ತು ಪಂದಪಣಿ ಕೆಲಸಗಳು ತೀರಿದ ಮೇಲೆ ನಾಲ್ಕು ಜನ ಊರವರು ಮದುವೆ ಹಾಡನ್ನು ಈ ಕೆಳಗಿನ ರೀತಿ ಹಾಡಬೇಕು.

ಮಂಗ್'ಲಪಾಟ್

ಬಾಳೋ ಬಾಳೋ ಸಂಜಾದಿ
ಪಾಡುವ ಮೊಳಿಯೇದ್?
ಅಲ್ಲತ್ತೇದು ಅಲ್ಲಲ–
ಜಬ್ಬೂಮಿರ ಮೀದಲ್

ಏದ್ ದೇಶ ಚೊಲ್ಲುಳ್ಳ?
ನೋಟಿ ನೋಟಿ ಕಾಂಬಕ್ಕ
ಈ ಭೂಮಿರ ಮೀದಲ್
ಪೊಮ್ಮಾಲೆ ಕೊಡವಾಪ.

---

1. ತ್'ೕಕೆ – ಸತ್ತಸೂತಕ
2. ಬೈನೆ ಮರ – ಪನೆ ಮರ

ಪೊಮ್ಮಾಲೆ ಕೊಡವುಲ್
ಏದ್ ನಾಡ್ ಚೊಲ್ಲುಳ್ಳ?
ಅಲ್ಲತ್ತೇದು ಅಲ್ಲಲ–
ಚೆಂಡೋಲೆ ಕಡಿಯೋನ್.
ನಾಡಾಪಾದಿ ಊರಾಪ
ಈ ನಾಡ್ ನಡುವುಲ್
ಕನ್ನಡಿ ಕರಡೋನ್.
ಈ ಊರ್ ನಡುವುಲ್
ಊರಾಪಾದಿ ಒಕ್ಕಳೊ
ಪಾಲೇರಿ ಒಡೆಯಂಡ
ಪಟ್ಟತಾನೆ ನಿಂದೋಲೆ
ಪೊಮ್ಮಾಲೆ ನಡಿಕೇರಿಯ.
ಈ ಒಕ್ಕಮನೆಯಿಲ್
ಇಂದ್ ನಾನೆಂದೇಣ್ಣುವ
ದೇವ್ವೈಯ್ಯ ಬಯಿಂಬನು
ದೇವ್ವೈಯ್ಯಂಡ ಕೊಂಡೋಳು
ಭೂಮಿ ದೇವಿ ನಂಜವ್ವ
ತಾಂದೇವನೂ ದೇವಿಯೂ
ತಣ್ಣನೆ ಪೊಲವಕ್ಕ,
ಮೂಲಕನ್ನಿ ನಂಜವ್ವ
ಮಕ್ಕ ಪೊಲೆ ಕಂಡತ್–
ಕೆಟ್ಟ್‌ನ ಕೆರೆ ಪೋಲೆ
ಕೋತಿ ಬೆಚ್ಚ ನೀಪೋಲೆ
ಆ ಪೊಲೆಯೊ ನಿಂದಿತ್
ಆರು ನಾಲು ಕೂಡಣೆ
ತಿಂಗ ಪತ್ತ್ ತೇಂದತ್.
ತಿಂಗ ಪತ್ತ್ ತೇಂದಲ್ಲಿ
ದುಂಬ್‌ನ ಕುಳಿಯಮೆ.
ಅನ್ನನಿಪ್ಪ ಕಾಲತ್
ನಲ್ಲೋರಾಚೆ ನಾಳಾಯಿ
ಅೈಯ್ಯಪ್ಪ ಚನಿಯಾಚೆ
ಸೂರಿಯಂಡುದಯಕ್
ಪೊನ್ನ್ ಚಂಗೊಡಂದತ್!
ಆಣಾ? ಪೊಣ್ಣಾ? ನೋಟಣೆ
ಮಾಣಿಕ ಪರಂಬೋಲೆ
ತಿತ್ತ್‌ಡ ತೆಡಿ ಪೋಲೆ
ಆಣಾಯಿ ಪರಂದತ್

ನೀಲಕೊಡಿ ನಂಜವ್ವ
ಆಂಬೆತ್ತಿತೆಳತತ್.
ಬೀರಿಯ ಪರಕಣೆ
ದೇವ್ವೈಯ್ಯ ಬಯಿಂಬನ್
ಚಂದೋಳ ಪೆರ್‌ಜಾಯಿ
ನೆಯಿತೋಕ್ ಕಯಿಕೊಂಡ್
ತಿತ್ತ್ ಬೊಡಿ ಬೆಚ್ಚತ್
ಈನಂಗುಂಡ್ ಪೋಬಾಂದ್
ಬೀರಿಯತ್ ಕುಞ್ಞಿರ
ಕೆಂದಾವರೆ ಕೈಯಿಕ್
ಅಂಬ್ ಬಿಲ್ಲ್‌ಟ್ಟತ್.
ಈನಂಗುಂಡ್ ಪೋಬಾಂದ್
ಪನ್ನೆರಂಡ್ ನಾಳ್‌ಲ್
ಕುಞ್ಞಿಕ್ ಪೆದಲ್‌ಟ್ಟ
ಎನ್ನೆಣ್ಣಿತರಿವಿರ?
ಅಲ್ಲತೊಂದು ಅಲ್ಲಲ
ಕೆಂಗುದ್‌ರೆ ಅೈಯ್ಯಣ್ಣ.
ಚೀಲ ನಲ್ಲ ಅೈಯ್ಯಣ್ಣ
ಅಪ್ಪಂಡ ಕಳಿ ಕುಞ್ಞಿ
ಅವ್ವಂಡ ಕೊದಿ ಕುಞ್ಞಿ
ಕುಞ್ಞಿ ಕುಞ್ಞಿಂದೆಣ್ಣಿತ್
ಕುಞ್ಞಿಕಾಳೆ ತೇಂದತ್;
ಕುಪ್ಪೆಲ್ ಕರಿ ಕೇಂಬ್
ಆತಾತ್ ಬೊಳಂದೋಲೆ
ಅೈಯ್ಯಾಂಡೆಕರೆಯಾಳ್
ಪೈತಾಂಡೆಕ್ ತೇಂದಾಳ್.
ಕಾಲನ್ನನೆ ಪೋಪಕ್ಕ
ಓಂದಾಂಡೊ ಕೊರುವಿಲ್ಲೆ.
ಆನಕ್ಕಿಕ ಸಂಜಾದಿ
ನಲ್ಲೋರಾಚೆ ನಾಳಾಯಿ
ಬೇರಕಾರ ಅೈಯ್ಯಣ್ಣ
ಬೊಳ್ಳ ತೆಂಗೆ ನೀಪೋಲೆ
ಉಳ್ಳ್ ಬೇರ ಕೊಂಡಲ್ಲಿ
ಎಳ್ಳಚ್ಚಕೊರು ಕಂಡ
ಅದೆನ್ನಂದರಿವಿರ?
“ಕುಟ್ಟುವತ್ ಚಿಂಗಾರ
ಇಟ್ಟಣಿವಕಾಳಿಲ್ಲೆ

ಪೊಟ್ಟಿಲುಳ್ಳ ಪಟ್ಟೊಳಿ
ಬೀಜುಡ್‌ಪಕಾಳಿಲ್ಲೆ
ಪೊಂಬತ್ತಾಯ ನೆಲ್ಲ್‌ನ
ಉಂಡೊಯಿಪಕಾಳಿಲ್ಲೆ;
ತನ್ನ ಪೋಲೆ ಬಾಲಂಗ
ಪೊಂಗೆಟ್ಟಿ ನಲಿವಕ
ನಾನಿನ್ನನೆ ಬದ್ದಿನೊ
ಒಕ್ಕಕ್ ಮೊರಡಾಗ–
ಪೊಣ್ಣಿಲ್ಲತ ಮುಂಬಾಚೆ
ಬದ್ದಿನೋ ಫಲವಿಲ್ಲೆ;
ಪಾಲಿಲ್ಲತ ಕೊಕ್ಕಚಿ
ಕೊಂಡಿನೊ ಫಲವಿಲ್ಲೆ;
ಮೋರಿಲ್ಲತ ತಂಗೊಳ್
ಉಂಡಿನೊ ಫಲವಿಲ್ಲೆ;
ಪೂವಿಲ್ಲತ ಚಪ್ಪಯ್ಯ
ನಟ್ಟಿನೊ ಫಲವಿಲ್ಲೆ;
ನೀರಿಲ್ಲತ ನೀಕೆರೆ
ತೋಡಿನೋ ಫಲವಿಲ್ಲೆ
ಚೆಂಡಿಲ್ಲತ ಚೇಲೆನ
ಕೆಟ್ಟಿನೊ ಫಲವಿಲ್ಲೆ;
ಮಕ್ಕಳಿಲ್ಲತೊಕ್ಕಾಮೆ
ಕೆಜ್ಜಿನೊ ಫಲವಿಲ್ಲೆ"
ಎಂದೆಣ್ಣಿ ನೆನತಿತ್
ಬುದ್ಧಿಕಾರ ಅೈಯ್ಯಣ್ಣ
ತನ್ನ ಪೆತ್ತ ಅವ್ವಂಗ್
ಈ ಸುದ್ದಿನರಿಪಿತ್
ಈ ಬಾಕ್ ಪರಂದತ್
"ಕೇಳ್ ಕೇಳ್ ಪೆತ್ತವ್ವ,
ಪೊಂದೇಡಿ ನಡಪಿನೊ"
ಎಂದೆಣ್ಣಿ ಪರಂದತ್;
ಅದ್ ಕೇಟ ಪೆತ್ತವ್ವ
ಪೊಂದೆಳಿ ತೆಳಿಚಿತ್
ಚೆಂಡ್ ಪೋಲೆ ಕೂಪೊದಿ
ಕಾಸ್ ಪೋಲೆ ಒಟ್ಟಿಯು
ಕುಞ್ಞಿಕ್ ಕೊಡ್‌ತತ್.
ಅದ್ ಕಂಡ ಅೈಯ್ಯಣ್ಣ
ಮಣ್ಣರುವ ಬಾಲನ

ಬಟ್ಟೆಕೊತ್ತೊರಾಳಾಯಿ
ಕೂಟ್‌ಕ್ ತೊಣೆಯಾಯಿ
ಗೆಜ್ಜೆ ತಂಡ್ ಕೈಲಾಯಿ
ನಲ್ಲೋರಾಚೆ ನಾಳಾಯಿ
ಪೊಂದೇಡಿ ಪೊರಟತ್.
ವೈಯ್ಯನೆ ಪೊರಡಣೆ
ಬೊಳ್ಳಿಮಾಡ ಪಟ್ಟಿಲ್
ಏಳಾಳಿಂಜ ಪಜ್ಜಿಯ
ಚಾಂಡಾಳ ಪೋಲೆ ಮಕ್ಕ
ಬೊಳ್ಳೋಟೆರ ಕೂಟೆಲ್
ಚಾಣಂಗೊಂಡ್ ನಿಂದಿಂಜ
ಕಣ್ಣೊಡನೆ ಕಂಡತ್;
ಅಲ್ಲಿಂಜಿ ಪೊರಟಿತ್
ಮುಮ್ಮಡಕಂಡೋಣಿಲ್
ಏಳಾಳುಳ್ಳ ಕನ್ನಿಯ
ದುಂಬ್‌ನ ಕಲತ್‌ಲ್
ನೀಲಕೊಡಿ ನೀರಾಯಿ
ಸಾಲ್ ಕೆಟ್ಟಿ ಬಪ್ಪಾನ
ಕಣ್ಣೊಡನೆ ಕಂಡಿತ್
ಚಂದೋಳ ಪೆರ್‌ಜಾಯಿ
ಅಲ್ಲಿಂಜಿ ಪೊರಟಿತ್
ಪೊಂದೇಡಿ ನಡಂದತ್–
ಕುಟ್ಟತ್ ಮಲೆಯಿಂಜಿ
ಬೊಟ್ಟತ್ ಮಲೆಯೋಳ,
ಬೊಟ್ಟತ್ ಮಲೆಯಿಂಜಿ
ಕಾನಕಂಡಿ ಬಕ್ಕೋಳ,
ಕಾನಕಂಡಿ ಬಕ್ಕಂಜಿ
ಬೊಳ್ಳೆಮಾನಿ ಕಟ್ಯೋಳ
ಕೆಂಬಕ್ಕಿ ಕಿರ್‌ಕೊಟ್ಟ
ಬಾನ ಸುತ್ತಿ ಬಂದೋಲೆ
ಚೇಲನಲ್ಲ ಅೈಯ್ಯಣ
ಕೊಡುಮಲೆಕೊರ್‌ತೊರ
ಪೊಂದೇಡಿ ನಡಂದತ್.
ಪೊಂದೇಡಿ ನಡಂದಿತ್
ಅೈಯ್ಯಣ್ಣ ಬಯಿಂಬಂಡ
ಅಂಗಾಲಡಿ ತೋಪೋಚಿ;
ಚುಳ್ಳಬೆದ್ ಪಟ್ಟಿತ್

ಉಟ್ಟಿ ಮಂಡ್ಯೊಣಂಗ್‌ಚಿ;
ಇಟ್ಟಿ ಕುತ್ತಿ ನಿಂದಿತ್
ಇಟ್ಟಿರ ಮೊನೆ ತೇಂಜ;
ಅಂಬ್‌ಲತೆಳತಿತ್
ಕುಪ್ಪಿಯತಡಿ ತೇಂಜ;
ತನ್ನ ಪೋಲೆ ಬಾಲಂಗ್
ಉತ್ತರ ಪರಂದಿತ್
ಕೋಳಿ ಕೊರ ತಗ್ಗ್‌ನ.
ಚಿಕ್ಕಿ ಪೋನ ಬಾಲನ್
ನೂತನತ್ ನೋಟಣೆ
ಒಕ್ಕ ಸರಿ ಬಂದವಂಡ
ಆಳ್ ಸರಿ ಬಂದ್‌ಲೆ;
ಆಳ್ ಸರಿ ಬಂದವಂಡ
ಕೊಟ್ಟ್ ಸರಿ ಬಂದ್‌ಲೆ;
ಕೊಟ್ಟ್ ಸರಿ ಬಂದವಂಡ
ಚೋಮ ಸರಿ ಬಂದ್‌ಲೆ;
ಚೋಮ ಸರಿ ಬಂದವಂಡ
ಮಾವ ಸರಿ ಬಂದ್‌ಲೆ;
ಮಾವ ಸರಿ ಬಂದವಂಡ
ಮಾವಿ ಸರಿ ಬಂದ್‌ಲೆ;
ಮಾವಿ ಸರಿ ಬಂದವಂಡ
ಬಾವ ಸರಿ ಬಂದ್‌ಲೆ;
ಬಾವ ಸರಿ ಬಂದವಂಡ
ಭೂಮಿ ಸರಿ ಬಂದ್‌ಲೆ;
ಎಲ್ಲಾ ಸರಿ ಬಂದವಂಡ
ಪೊಂಗ ಸರಿ ಬಂದ್‌ಲೆ;
ಇನ್ನನೆ ಕೊರುವಾಚಿ.
ಬಾಲಂಗೊತ್ತ ಪೊಂಗಳ
ಎಲ್ಲಿಂಜೂ ದೊರಕತೆ
ಊರ್ ಕೇರಿ ಸುತ್ತಿತ್
ಚಿಕ್ಕಿ ಚಿಕ್ಕಿ ಚೋತಿತ್
ಚೋತ್ ಚೋತ್ ಚುಣ್ಣಾಯಿ
ಬೇಂಗ್ ನಾಡ್‌ಕೆತ್ತ್‌ಚಿ.
ಆ ನಾಡ್ ನಡುವಲ್
ಉರ್ ಪೆದ ಚೊಲ್ಲುಳ್ಳ
ಬೊಳ್ಳಿ ಕೊಡೆ ಬೇಂಗೂರ್.
ಆ ಊರ್ ನಡುವ್‌ಲ್

ಅಂಬ್‌ಲ ಕರೆಯಿಲ್
ಚಿತ್ತಾಲ್ ಮದುವಡಿ
ಬೇರಂಗೊಂಡೆಳತತ್.
ಅಕ್ಕಣೆಕ್ ಸಂಜಾದಿ
ಅೈಯ್ಯೆರಪ ಮಾಜೋಗಿ
ಅಂಗಯಿ ಚೆರಟ್ಯಾಯಿ
ಮೊಳಕ್ಕೈ ದೇವರಾಯಿ
ನಾಡೆರಂದ್ ಬಂದಿತ್
ಅೈಯ್ಯಣ್ಣನ ಕಾಂಬಕ
ಈ ಬಾಕ್ ಪರಂದತ್
“ಆರ್ ನೀನ್ ಬಾಲನೆ?
ಏದ್ ದಿಕ್ಕ್ ಬಂದಿಯ?
ಎನ್ನಾಂಡ ಮೊಳಿಗೊಂಡ್
ಕಂಡೆ ಕೊಜ್ಜ ಕೇಂಬ್‌ಡ
ಸುಳಿ ಬಾಡಿ ಪೋನೋಲೆ
ನಾಗ ಮೊಗ ಬಾಡಿಯ?
ಬೇಜಾರತೆಳತಿಯ?”
ಎಂದೆಣ್ಣಿತ್ ಕೇಕಣೆ
ಬುದ್ಧಿಕಾರ ಅೈಯ್ಯಣ್ಣ
ಈ ಬಾಕ್ ಪರಂದತ್
“ಕೇಳೊ, ಕೇಳೊ, ಮಾಜೋಗಿ,
ಬಟ್ಟೆ ಪೋಕ್ ಬೈ ಪೋಕ್
ಇಲ್ಲಿ ಬಂದೆಳತಿಯ.
ಆನಕ್ಕಿಕ ಜೋಗಿಯೇ
ಒಂದ್ ನಾನ್ ಕೇಪಿನೊ
ಗೊತ್ತುಂಡೇಂಗಿ ಎಣ್ಣೊಮ್ಮ–
ಈ ನಾಡ್ ನಡುವುಲ್
ಮಾರುವೋರ್ ಎತ್ತುಂಡ?
ಕೂಡುವೋರ್ ಪೊಣ್ಣುಂಡ?”
ಎಂದೆಣ್ಣಿತ್ ಕೇಕಣೆ
ಚೀಲ ನಲ್ಲ ಮಾಜೋಗಿ
ತಾನೆನ್ನ ಪರಂದತ್
“ಕೇಳ್ ಕೇಳ್ ಬಾಲನೆ,
ಮಾರಿ ಪೋಪ ಎತ್ತೆಲ್ಲ
ಕುಂಬಿಯತ್ ಮಾರ್‌ಚಿ;
ಬಾಕೆ ಪೋಪ ಪೊಣ್ಣೆಲ್ಲ
ಮೀನಿಯಾರ್ ತಿಂಗತ್

ಬಾಳ್ ಬಾಕೆ ಪೋಚಿಲ"*
ಎಂದೆಣ್ಣಿ ಪರೆಯಣೆ
ಕೆಂಗುದ್‌ರೆ ಅೈಯ್ಯಣ್ಣ
ಈ ಬಾಕ್ ಪರಂದತ್
"ಚೊಡಿ ಬೋಂಡ ಜೋಗಿಯೇ,
ನಡಿಕೇರಿಯಂಡ ಒಕ್ಕ
ಆ ಒಕ್ಕ ಮನೆಯಿಲ್
ದೇವೈಯ್ಯ ಬಯಿಂಬಂಡ
ಒಂದನೆ ಪುಲಿಪುತ್ರ
ಅೈಯ್ಯಣ್ಣ ಪೆದಲಾಯಿ
ಈ ದೇಶಕೊರ್ ತೊರ
ಪೊಂದೇಡಿ ನಡೆಂದೆನೊ;
ನಾಕೊತ್ತೊರ್ ಪೊಂಗಳ
ಎಲ್ಲೆಲ್ಲಿಯೂ ಕ್‌ಟ್ಟ್‌ಲೆ;
ಬಾಳ್ ಬಾಕೆ ಪೋನೋಳೊ
ತಣ್ಣನೆ ಪೊಲವಡ್;
ನಾಕೊತ್ತ ಪೊಣ್ಣುಂಡೇಂಗಿ
ಆಂಜಿ ನೋಟಿತೆಣ್ಣೊಮ್ಮ"
ಎಂದೆಣ್ಣಿ ಪರೆಯಣೆ
ಅೈಯ್ಯೆರಪ ಮಾಜೋಗಿ
ಈ ಬಾಕ್ ಪರಂದತ್
"ಉಯಿ! ಅಂದಕ ಬಾಲನೆ
ಪೋಡಿ ಬೋಂಡ ಬೈಂಬನೆ!
ಚೆಪ್ಟ್‌ಕೊತ್ತ ಮುಚ್ಚ್‌ನ
ಮಾಲೆಕೊತ್ತ ಕೀಲ್‌ನ
ನೀಕೊತ್ತೊರ್ ಪೊಂಗಳ
ನಾನ್ ಕಂಡ್ ಬೆಚ್ಚಿಯೆ
ಅಲ್ಲತೆಲ್ಲಿ ಅಲ್ಲಲ
ನೋಟ್‌ನಕ ಕಾಂಬಲ್ಲಿ
ಕಾಕ್‌ನಕ ಕೇಪಲ್ಲಿ
ಪಟ್ಟ್‌ಪೋಲೆ ಪಟ್ಟಮ
ಆ ಒಕ್ಕ ಮನೆಯಿಲ್
ಇಂದ್ ನಾನ್‌ಂದೆಣ್ಣುವ
ಪೊನ್ನಪ್ಪ ಬಯಿಂಬನು

ಪೊನ್ನಪ್ಪಂಡ ಕೊಂಡೋಳು
ಭೂಮಿದೇಮಿ ಉಮ್ಮವ್ವ
ತಣ್ಣನೆ ಪೊಲವಕ್ಕ
ಪುಟ್ಟ್‌ಚಿ ಕೊದಿಕುಞ್ಞಿ
ನೀಲ ಕೊಡಿ ಮಾಚಮ್ಮ
ಎಂದೆಣ್ಣಿ ಪೆದಲುಳ್ಳ
ಭೂಮಿದೇವಿ ಪೊಂಗಳೊ
ಮೈನೆರಂದಿತೀರಾಂಡ್
ಕೋಪ್‌ಕ್‌ೇಂದ್ ಮೂವಾಂಡ್
ಅೈಯ್ಯಾಂಡ್ ಮನೆ ಬೆಚ್ಚ;
ಮಾಚಮ್ಮ ಕುಮಾರಿಯೊ
ಕಟ್ಟೊಳೆ ಕಡೆಯತೆ,
ಎಚ್ಚಿ ಚೀಪೆ ತ್‌ಂಡತೆ,
ಎಚ್ಚಿ ಬಟ್ಟೊಲಂಬತೆ,
ಇಟ್ಟೇಣಿ ಮರಿಯತೆ,
ನೇರ ಮೊಗ ನೋಟತೆ,
ಬಂದ ಬಂದ ಬಾಲಂಡ
ಮೈ ಪಚ್ಚಡ ಕೊವ್ವತೆ,
ಕೂಡ ಬಂದ ಬಾಲಂಗ್
ಕಲ್ಲೆಡ್‌ತೆರಿವಲ;
ಕಲ್ಲೆಡ್‌ತೆರಿಂಜದ್
ಕೋಲೆಯಡ ಮಕ್ಕಕ್
ಕಕ್ಕಟ್‌ಕ್ ಕಲ್ಲಾನ;
ಈನಂಗುಂಡ್ ಪೋರೇಂಗಿ
ತಂಡೆಡ್‌ತೆರಿವಲ;
ತಂಡೆಡ್‌ತೆರಿಂಜದ್
ಚಾಂಡಾಳ ಪೊಲೆಯಕ್
ಕಾಜು ಬೇಲಿ ತೀನಾಚಿ;
ಅನ್ನತ ನೆಲೆಯಾಪ.
ಕೇಳೊ ಕೇಳೋ ಬಾಲನೆ,
ನೀಲ ಕೊಡಿ ಮಾಚಮ್ಮ
ಏಳರೆರ ಒಳ್‌ಲ್
ಕನ್ನಿ ಮೂಲೆ ಕೋಂಬರೆ
ಆಂಡೋಳ್‌ಲೆಳತಿತ್

---

* ಕುಂಬಿಯಾರು ತಿಂಗಳಲ್ಲಿ ಎತ್ತು ಕ್ರಯಕ್ಕೆ ತೆಗೆದುಕೊಳ್ಳುವುದು ಬಹಳ ಕಮ್ಮಿ. ಮೀನಿಯಾರು ತಿಂಗಳಲ್ಲಿ ಮದುವೆ ಆಗಕೂಡದು. ಆದುದರಿಂದ ಜೋಗಿ ಹೇಳಿದ್ದನ್ನು ಕೇಳಿ ಜೋಗಿಗೆ ಸಿಟ್ಟು ಬಂದಿದೆಯೆಂದು ತಿಳಿದುಕೊಂಡನು.

ಬೋಳೆ ಪಟ್ಟಿ ಕೈಕೊಂಡ್
ಸೀಮೆ ಕುರಿ ಪೊಲ್ಲುವ;
ಭೂಮಿ ದೇವಿ ಮಾಚಮ್ಮ
ನೀಕೊತ್ತೋರ್ ಪೊಣ್ಣೆನ್ನೆ"
ಎಂದೆಣ್ಣಿ ಪರೆಯಣೆ
ಚೀಲನಲ್ಲ ಅೈಯ್ಯಣ್ಣ
ಚಂದೋಳ ಪೆರ್‌ಜಾಯಿ
ಚಂಜಾದಿನ ಕೂಟಿತ್
ಅಲ್ಲಿಂಜಿ ಪೊರಟಿತ್
ಚಾಚಿ ಮೆಲ್ಲೆ ಪೋಯಿತ್
ಪಟ್ಟಮಾಡ ಒಕ್ಕಡ
ಮುಮ್ಮಡಕಂಡೋಣೆಲ್
ತಂಡೂರಿ ಮರಿಂಜತ್.
ತಂಡೂರಿ ಮರಿವಕ
ನೀಲಕೊಡಿ ಮಾಚಮ್ಮ
ಗೆಜ್ಜೆ ತಂಡೊಲಿ ಕೇಟ್
"ಆಡ ಚೋಮ ಬಂದದೊ"!
ಎಂದೆಣ್ಣಿ ನೆನತಿತ್
ಓಡಿ ಬಂದ್ ನೋಟಣೆ
ಕಾಜುಮ್ಮೆ ಕಣಿವೆಲ್
ಪುಂಡಡ ಸಿರೆ ಸಿರೆ
ನೇರ ಬಂದುದಿಚೋಲೆ,
ಬೊಳ್ಳಿಮಾಡ ಪಟ್ಟೆಲ್
ಬಾಲ ಬಂದೊಳಪಾಂಜ.
ಅದ್ ಕಂಡ ಮಾಚಮ್ಮ
ಓಡಿ ಪಾರಿ ಪೋಯಿತ್
ಕೆತ್ತ್‌ಂಗಲ್ಲ್ ಗುಡ್ಡತ್
ಚಂಜೋಲೆ ತಳತಿಂಜ
ತನ್ನಡಣ್ಣ ದೇವಂಡ
ಏಳುಳ್ಳ ಕಡಿನಾಯ
ಕೂಟ್‌ಲ್ ತಲೆ ನಾಯಿ
ಚಂಗ್ ಪಲ್ಲ್ ಬೊಳ್ಳುಕ್
ಈ ಬಾಕ್ ಪರಂದತ್.
"ಒಂದ್ ಕೇಳ್ ಬೊಳ್ಳುವೊ,
ಇಕ್ಕ ಬಂದ ಬೆಂದುವೊ
ನಾಕಾಯಿತ್ ಬಂದಿನೊ
ನೀ ಕಡಿಪಕಾಗಲ;
ನಾಟಕಾಯಿ ಬಂದಿನೊ
ಪಾರಿತ್ ಕಡಿಚೋಳೊ"
ಎಂದೆಣ್ಣಿ ಪರಂದಿತ್
ಚಂಜೋಲೆ ಕಯಿಚತ್.
ಅಕ್ಕಣೆಕ್ ಬೊಳ್ಳುವೊ
ಬೊಗ್ಗನೆ ಪೊಲಿಂಜಿತ್
ಪಾರಿ ಪಾರಿ ಪೋಪಕ
ಕೆಂಗುದ್‌ರೆ ಅೈಯ್ಯಣ್ಣ
ಕ್‌ಬ್ಬೂಮಿಕೆರಂಗಿತ್
ಕಲ್ಲ್‌ಪರ ಕೈಕೊಂಡ್
ಮಂತ್‌ರ ಜಪಿಸಿತ್
ಕಲ್ಲೊಂದ್ ಕನಿಕಣೆ
ಚಂಗ್ ಪಲ್ಲ್ ಬೋಳ್ಳುವೊ
ಪೂಬಾಲ್ ಕೊಯತಿತ್
ಕಾಲ್‌ಕ್ ತೊರ ಬುದ್ದ.
ಅದ್ ಕಂಡ ಅೈಯ್ಯಣ್ಣ
ಪೂಂದೆಳಿ ತೆಳಿಚಂಡ್
ನಾಯಿ ಮಿಞ್ಞ ತಾಂಬಯ್ಯ
ತಾನನ್ನನೆ ಪೋಯಿತ್
ಮಚ್ಚಿ ಮನೆಕೇರ್‌ನ.
ಮಚ್ಚಿ ಮನೆಕೇರಿತ್
ಮಾಂಜವುರಿ ಕೈಯ್ಯಾಲೆ
ಕೆಂಬಲಚಿರ್ರೈಮರ
ಚಿತ್ತ್‌ರತ್ ಕಂಬಕ್
ಬೆಂದಾಂಗಿತೆಳತತ್,
ಅಕ್ಕಣೆಕ್ಕ್ ಸಂಜಾದಿ
ನೀಲಕೊಡಿ ಮಾಚಮ್ಮ
ಕನ್ನಡಿ ಕ್‌ಡಿಕೆಲ್
ಬಾಲ ಬೋಜ ನೋಟ್‌ನ;
ಬಾಲ ಬೋಜ ನೋಟಣೆ
ಎಳ್ಳೋಳ ಕೊರುವಿಲ್ಲೆ;
"ಕ್‌ಟ್ಟ್‌ಚೆಂಗಿ ಕೂಡಲು"
ಎಂದೆಣ್ಣಿ ನೆನತಿತ್,
ಉಂಬಳ ಮನೆಯಿಂಜಿ
ದುಂಬ್‌ನ ಕಲತ್‌ಂಜ
ಬೊಳ್ಳಿ ಚೆಂಬ್ ನೀರಾಯಿ
ಸುಬ್ಬರಾಯ ದೇವಂಡ

ಪೀಲಿಯಂಡ ಮೈಲ್‌ಡ
ಮೈಲ್‌ಡ ನಡೆ ಪೋಲೆ
ಆಡಿಲಾಡಿ ಬಂದಿತ್
ಬಾಲ ಮಿಞ್ಞ ನೀಬೆಚ್ಚ,
          ಕೇಳೋ ಕೇಳೋ ಸಂಜಾದಿ
ಕೆಂಗುದ್‌ರೆ ಅಯ್ಯಣ್ಣ
ಮಾಚಮ್ಮನ ಕಂಡಿತ್
"ಚೀಲನಲ್ಲ ಮಾಜೋಗಿ
ಎಣ್ಣ್‌ನದ್ ನೇರೆನ್ನೆ"
ಎಂದೆಣ್ಣಿ ನೆನತಿತ್
ಬೆಚ್ಚ ನೀರೆಡ್‌ತ್‌ಲೆ;
ಬೋರೆ ನೀರ್ ಕೇಟ್‌ಲೆ.
ಅದ್ ಕಂಡ ಮಾಚಮ್ಮ
ಈ ಬಾಕ್ ಪರಂದತ್
"ಅಲ್ಲ ಕೇಳಿ ಬೆಂದುವೆ
ಇದೆನ್ನೊರದಿಯಾಪ.
ಬೆಚ್ಚ ನೀರೆಡ್‌ತ್‌ಲೆ;
ಮೇಲೆ ನೀರ್ ಕೇಟ್‌ಲೆ;
ಎನ್ನಾಂಡ ಮೊಳಿಗೊಂಡ್?"
ಎಂದೆಣ್ಣಿತ್ ಕೇಕಣೆ,
ಬುದ್ಧಿಕಾರ ಅೈಯಣ್ಣ
ಈ ಬಾಕ್ ಪರಂದತ್
"ಉಯಿ! ಅಂದಕ ಪೊಂಗಳೆ,
ಇಂದ್ ನೀರ್ ಬೆಚ್ಚೋಲೆ
ಎಂದೂ ನೀರ್ ಬೆಪ್ಪೇಂಗಿ
ಬೆಚ್ಚ ನೀರೆಡ್‌ಪಿನೊ
ಮೇಲೆ ನೀರ್ ಕೇಪಿನೋ."
ಎಂದೆಣ್ಣಿ ಪರೆಯಣೆ
ನೀಲ ಕೊಡಿ ಮಾಚಮ್ಮ
ಈ ಬಾಕ್ ಪರಂದತ್
"ಊಯಿ! ಅಂದಕ ಬೆಂದುವೆ,
ಇಂದ್ ಬಂದ ನಿಂಗಳೊ
ಎಂದೂ ನಿಂಗ ಬಂದಿನೊ
ಎಂದೂ ನೀರ್ ಬೆಪ್ಪಿನೊ".
ಎಂದೆಣ್ಣಿ ಪರೆಯಣೆ
ಬುದ್ಧಿನಲ್ಲ ಅೈಯ್ಯಣ್ಣ
ಪೊಂದೆಳಿ ತೆಳಿಚಿತ್,

ಬೆಚ್ಚ ನೀರೆಡ್‌ತಿತ್
ಮೇಲೆ ನೀರ್ ಕೇಟಿತ್
ಕಾಲೂ ಮೂಡೂ ಕತ್ತಿತ್
ಆಂಗಿ ಜೂಂಗಿ ಬಕ್ಕಣೆ
ಬುದ್ಧಿನಲ್ಲ ಮಾಚಮ್ಮ
ಕಿನ್ನೋಲೆ ಪಲಂಬ್‌ಟ್ಟ್
ಬೊಳ್ಳಿಡೋರ್ ತಟ್ಟೆಲ್
ಮುಕ್ಕೋಟ್ ಕೊಡಿಯಲೆ
ಚಿಕ್ಕಂಗೋಟಡಕೆಯು
ಕಲ್ಲ್‌ಚುಣ್ಣ ಕೂಟಿತ್
ಕಪ್ಪಲೋಟ ಚಪ್ಪ್‌ನ
ಎಲ್ಲ ಕೂಟಿ ಬೆಚ್ಚತ್.
ಅದ್ ಕಂಡ ಅೈಯ್ಯಣ್ಣ
ಒಪ್ಪ್‌ಕೆಲೆ ಬೆಚ್ಚಾನ
ಬೋಜಕೆಲೆ ತಿಂದತ್.
ಕೇಳೊ ಕೇಳೊ ಸಂಜಾದಿ,
ತಿಂದೆಲೆ ತಿರುವುಕೊ?
ಚಿಕ್ಕಡಕೆ ಚೊಕ್ಕ್‌ಕೊ?
ಕಲ್ಲ್‌ಚುಣ್ಣ ಕಾರಕೊ?
ಪೇತಪ್‌ಡಮಲ್‌ಕೊ?
ನಾನರಿಂಜಿ ಕೊಂಡ್‌ಲೆ
ನೂತನತ್ ಬಂಬನ್
ಚಾಚಿ ಬೆಚ್ಚಿ ಕಾಕ್‌ಚಿ.
"ಉಯಿ! ಎನ್ನಡ ಪೊಂಗಳೆ!
ನಿನ್ನಡಪ್ಪ ಪೊನ್ನಪ್ಪ–
ಎನ್ನಡೋರ್ ಮಾವೈಯ್ಯ
ಏದ್ ದಿಕ್ಕ್ ಪೋನದೊ?"
ಎಂದೆಣ್ಣಿತ್ ಕೇಕಣೆ
ಚೀಲ ನಲ್ಲ ಮಾಚಮ್ಮ
"ಇದೆನ್ನ ಕದೆ ಜೀಯ?
ಈ ಬಯಿಂಬನಾರಾಪ?
ಚಾಚಿ ಬೆಚ್ಚಿ ಕಾಕುವ!"
ಎಂದೆಣ್ಣಿ ನೆನತಿತ್
ಈ ಬಾಕ್ ಪರಂದತ್
"ಎನ್ನಡಪ್ಪ ಪೊನ್ನಪ್ಪ
ಊರ್ ಕೇರಿ ಬಾಲಡ
ಬುದ್ದ ನ್ಯಾಯ ತ್‌ಪಂಜಿ

ಮೇಲೆ ನ್ಯಾಯ್‌ಡ್‌ವಕ್
ಊರ್ ಮಿಙ್ಙ ಅಂಬ್‌ಲ
ಅಂಬ್‌ಲಕ್ ಪೋಯಿತ್"
ಎಂದೆಣ್ಣೆ ಪರೆಯಣೆ
ಕೆಂಗುದ್‌ರೆ ಅೈಯ್ಯಣ್ಣ
ಈ ಬಾಕ್ ಪರಂದತ್
"ಉಯಿ! ಎನ್ನಡ ದೇವಿಯೆ!
ನಿನ್ನಡೋರ್ ಪೆತ್ತವ್ವ–
ಎನ್ನಡೋರ್ ತಮ್ಮಾವಿ
ಏದ್ ಬಟ್ಟೆ ಪೋನದೊ?"
ಎಂದೆಣ್ಣಿತ್ ಕೇಕಣೆ
"ಎನ್ನಡೋರ್ ಪೆತ್ತವ್ವ
ಕುಂಬಾರಡ ಕೇರಿಕ್
ಕೆಂಗಲಕ್ ಪೋಯಿತ್"
ಎಂದೆಣ್ಣೆ ಪರೆಯಣೆ
ಬುದ್ಧಿಕಾರ ಅೈಯ್ಯಣ್ಣ
ತಾನೆನ್ನ ಪರಂದತ್
"ನಿನ್ನಡಣ್ಣ ದೇವ್ವೈಯ್ಯ–
ಎನ್ನಡೋರ್ ಬಾವ್ವೈಯ್ಯ
ಏದ್ ಬಟ್ಟೆ ಪೋನದೋ?
ಎಂದೆಣ್ಣಿತ್ ಕೇಕಣೆ
ಬುದ್ಧಿನಲ್ಲ ಪೊಂಗಳೊ
ತಾನೆನ್ನ ಪರಂದತ್
"ಎನ್ನಡೋರ್ ಅಣ್ಣೈಯ್ಯ
ನುಪ್ಪತ್ತಾರ್ ಚೋಮನ
ಸಣ್ಣಕ್ಕಿ ನೆರತಿತ್
ಮಾಣಿಕ ಮಲೆನಾಡ್
ಪೊಂಬಣಕ್ ಪೋಯಿತ್"
ಎಂದೆಣ್ಣೆ ಪರಂದತ್.
ಓರಂದೀರಂಡೆಣ್ಣಣೆ
ಮಾವ ಬಂದಡೆಯಣ
ಗೆಜ್ಜೆ ತಂಡೊಲಿ ಕೇಟ;
ಮಾವ ಬಂದ್ ಸೇರಣೆ
ಮಾವಂಗೊತ್ತ ಆಜಾರ
ಕಾತೊಟ್ಪ್ ತಲೆ ಬೆಚ್ಚ.
ಓರಂದೀರಂಡೆಣ್ಣಣೆ
ಮಾವಿ ಬಂದಡೆಯಣ
ಕುಪ್ಪಿಬಳೆ ಸದ್ದಾನ;
ಕೆಂಗಲ ಧನಿ ಕೇಟ;
ಮಾವಿ ಬಂದ್ ಸೇರಣೆ
ಮಾವಿಕೊತ್ತ ಆಜಾರ
ಕಾತೊಟ್ಪ್ ತಲೆ ಬೆಚ್ಚ.
ಓರಂದೀರಂಡೆಣ್ಣಣೆ
ಬಾವ ಬಂದಡೆಯಣ
ಚೋಮಂಡ ಕನೆ ಕೇಟ;
ಮಾಲೆ ಮುರೊಲಿ ಕೇಟ;
ಬಾವ ಬಂದ್ ಸೇರಣೆ
ಬಾವಂಗೊತ್ತ ಆಜಾರ
ಕೈಮಲಂಗಿ ತೊತ್ತತ್.
ಮಾವ ಮಾವಿ ಬಾವ್ವೈಯ್ಯ
ಎಲ್ಲಾ ಬಂದ್ ಸೇರಿತ್
ನಾಟಾಚಾರ ಚೆಮ್ಮಾನ.
ಈನಂಗುಂಡ್ ಪೋರಾಂದ್
ಪೊನ್ನಪ್ಪ ಬಯಿಂಬನ್
"ಪಂಡಿಯ ಪಳೆ ಬೆಂದು
ಬಾರತೊಕ್ಕ ಬಂದದೊ
ಎನ್ನಾಂಡ ಮೊಳಿಯಾಲೆ?"
ಎಂದೆಣ್ಣಿತ್ ಕೇಕಣೆ
ಬುದ್ಧಿಕಾರ ಅೈಯ್ಯಣ್ಣ
ಪೊನ್ನಪ್ಪನ ನೋಟಿತ್
ಚಾಚೆ ಬೆಚ್ಚಿ ಕಾಕಿತ್
ಈ ಬಾಕ್ ಪರಂದತ್
"ಉಯಿ! ಎನ್ನಡ ಮಾವೈಯ್ಯ
ಈ ಒಕ್ಕ ಮನೆಯಿಲ್
ಸಾಲ್ ಬಾಕೆ ಪೋಪೋರ್
ಮೈನೆರಂದ ಪೊಣ್ಣುಂಙ್
ಎಂದೆಣ್ಣಿತರಿಂಜಿತ್
ಇಲ್ಲಿ ನಾನ್ ಬಂದಿಯ"
ಎಂದೆಣ್ಣೆ ಪರಂದತ್.
ಆ ಬಾಕ್‌ನ ಕೇಪಕ್ಕ
ಚೀಲ ನಲ್ಲ ಪೊನ್ನಪ್ಪ
ಪೊನ್ನಪ್ಪಂಡ ಕೊಂಡೋಳು
ಭೂಮಿ ದೇವಿ ಉಮ್ಮವ್ವ
ಉಳ್ಳ ಬೇರ ಕೊಂಡಿತ್

ಕೆಂಗುದ್‌ರೆ ಪೊನ್ನಪ್ಪ
ಈ ಬಾಕ್ ಪರಂದತ್
"ಕೇಳಿ ಕೇಳಿ ಬೆಂದುವೆ,
ಎಂಗಡ ಪಡಿಚವನ್
ನಿಂಗ ದಂಡ್ ಕುಞ್ಞ್ಯಳ
ದೇವ ದೇವಿಂದೆಣ್ಣಿತ್
ಬಾವಂಡುಂದುಳ್‌ಪಿನೊ
ತಪ್ಪಾಂಗ್ ಕೊರುವಿಲ್ಲೆ"
ಎಂದೆಣ್ಣಿ ಪರಂದಿತ್
ಮಾಣಿಕ ಮಲೆನಾಡ್
ಪುಂಡಡಾಣೆ ಕಾಪೊರೆ
ಅಚ್ಚುತ ಕಣಿಯಂಗ್
ಓಲೆ ಆಳ್ ಬುಟ್ಟತ್.
ಅದ್ ಕಂಡ ಅಚ್ಚುತ
ನೀರ್ ಬಯ್ಯ ಮೀಂಬೋಲೆ
ಚೂದ್ ಬಯ್ಯ ನೂಪೋಲೆ
ಆಳ್ ಬಯ್ಯ ಬಂದಿತ್
ಪಟ್ಟಮಾಡ ಒಕ್ಕಡ
ಮಚ್ಚಿ ಮನೆಕೇರ್‌ಚಿ.
ಅಕ್ಕಣೆಕ್ ಸಂಜಾದಿ
ಭೂಮಿ ದೇವಿ ಉಮ್ಮವ್ವ
ತಚ್ಚಡಿಚ ಕಯ್ಯಾಲೆ
ಒಡ್‌ಕಿತು ತಳಿಚಿತು
ಕಿನ್ನೋಲೆ ಪಲಂಬ್‌ಟ್ಟ್
ಬೊಳ್ಳಿಕ್‌ಂಡಿ ನೀಬೆಚ್ಚಿ
ಬೊಳ್ಳಿ ತಟ್ಟೆ ಬೆಚ್ಚತ್.
ಅದ್ ಕಂಡ ಅಚ್ಚುತ
ಕಾಲೂ ಮೂಡೂ ಕತ್ತಿತ್
ಒಪ್ಪಾರತೆಳತಿತ್
ನಾಚಾಟಾರ ಚೆಮ್ಮಾಯಿ
ಓರಂದೀರಂಡೆಣ್ಣಣೆ
ಬಂದ ಕದೆ ಕೇಟತ್.
ಅದರಿಂಜ ಅಚ್ಚುತ
ಕವುಡಿ ಪಾಕ್ ಕೈಕೊಂಡ್
ಬೊಳ್ಳಲುವು ತೊರಿಂಜಿತ್
ತಾಯಲುವು ನೀಕಿತ್
ಮೂಮ ಬಾತಿ ಬೆಪ್ಪಂಜಿ
ನಲ್ಲರಿವ್ ನೋಟ್‌ಚಿ.
ನಲ್ಲರಿವ್‌ಕೊಂಡಲ್ಲಿ
"ಕೊವ್ವಾಂಗು ಕೊಡ್‌ಪಾಂಗು
ಎಳ್ಳೋಳ ಕೊರುವಿಲ್ಲೆ"
ಎಂದೆಣ್ಣಿ ಪರಂದತ್.
ಎಂದೆಣ್ಣಿ ಪರೆಯಣೆ
ಚಂದೋಳ ಪೆರ್‌ಜಾಯಿ
ನಾಳ್ ಮೂರ್ತ ನೋಟ್‌ಚಿ.
ನಾಳ್ ಮೂರ್ತ ನೋಟಣೆ
"ಆಚೆಕ್ಕಾಚೆ ಎಟ್ಟಾಚೆ
ಮಂಗ್‌ಲ ಕುರಿಯಾಂಡು"
ಎಂದೆಣ್ಣಿ ಪರಂದತ್.
ಅದರಿಂಜ ಪೊನ್ನಪ್ಪ
ಮಣ್ಣರುವ ಬಾಲನೊ
ತನ್ನಡೂರ್ ಊರೋನೊ
ಆಳಯಿಚಿ ಕಾಕಿತ್
ನೆಲ್ಲಕ್ಕಿ ನಡುಬಾಡೆ
ಒಡ್‌ಕಿತ್ ತಳಿಚಿತ್
ಪೊಂಬೊಳಕ್ ಬೆಚ್ಚಿತ್
ಆಚೆಕ್ಕಾಚೆಕೆಟ್ಟಾಚೆ
ಮಂಗ್‌ಲ ಕುರಿಯಾಯಿ
ಪಂಡಿಯ ನಡಪೋಲೆ
ಕೈಮುಟ್ಟಿ ಕಡಂದತ್.
ಈನಂಗುಂಡ್ ಪೋರಾಂದ್
ಉಂಡಿತು ಕುಡಿಚಿತು
ತಕ್ಕಾರ ಪೆರ್‌ಜಾಯಿ
ಕೆಂಗುದ್‌ರೆ ಅೈಯ್ಯಣ್ಣ
ತಾನು ತಾಂಡ ಸಂಜಾದಿ
ವೈಯ್ಯನೆ ಪಿರಿಂಜಿತ್
ತಮ್ಮನೆಕ್ ಬಕ್ಕಣೆ
ಅೈಯ್ಯಣ್ಣಂಡ ಪೆತ್ತವ್ವ
ಭೂಮಿ ದೇವಿ ನಂಜವ್ವ
ಬೊಳ್ಳಿ ಚೆಂಬ್ ನೀರಾಯಿ
ಓಡಿ ಪಾರಿ ಬಕ್ಕಣೆ,
ಬುದ್ಧಿನಲ್ಲ ಅೈಯ್ಯಣ್ಣ
ತನ್ನ ಪೆತ್ತ ಅವ್ವಂಡ
ಕಾತೊಟ್ಟ್ ತಲೆಬೆಚ್ಚ;

ಈನಂಗುಂಡ್ ಪೋರಾಂದ್
ಬೊಳ್ಳಿ ಚೆಂಬ್ ನೀರ್‌ನ
ಕೈಕೆಡ್‌ತ್‌ಕೊಂಡಿತ್
ಕಾಲೂ ಮೂಡೂ ಕತ್ತಿತ್
ಒಪ್ಪಾರತೆಳತತ್.
ಅಕ್ಕಣೆಕ್ ನಂಜವ್ವ
ನೆಲ್ಲಕ್ಕಿ ನಡುವುಲ್
ಕುಞ್ಞಿ ಮಿಞ್ಞ ಕೂಬೆಚ್ಚ.
ಮಂಜಿ ಪೋಲೆ ನೈಬೂಕಿ
ಮುತ್ತ್ ಪೋಲೆ ಉಪ್ಪಟ್ಟ್
ಕೈಪಂಜೆ ಕರಿಯಿಟ್ಟ.
ಅದ್ ಕಂಡ ಕೈಯ್ಯಣ್ಣ
ಕೈಯ್ಯಣ್ಣಂಡ ಸಂಜಾದಿ
ನೆಯ್ಯೊಲಂಬಿತೋರಡಿ
ಮೋರೊಲಂಬಿತೋರಡಿ
ಉಂಡಿತೂ ಕುಡಿಚಿತೂ
ಒಪ್ಪಾರತೆಳತತ್.
ಅದ್ ಕಂಡ ನಂಜವ್ವ
ಈ ಬಾಕ್‌ನ ಕೇಟತ್
"ಉಯಿ! ಎನ್ನಡ ಕುಞ್ಞಿಯೇ
ನೀ ಪೋನೋರ್ ಬಟ್ಟೆಲ್
ಕಾರಿಯ ಕೈ ಕೂಡ್‌ಚ?"
ಎಂದೆಣ್ಣಿತ್ ಕೇಕಣೆ
ಚೀಲ ನಲ್ಲ ಕೈಯ್ಯಣ್ಣ
ಈ ಬಾಕ್ ಪರಂದತ್.
"ಕೇಳೊ ಕೇಳೊ ಪೆತ್ತವ್ವ
ನಿನ್ನಡ ದಯತ್‌ಲ್
ಕಾರಿಯತೆ ನಾ ಬಂದ;
ಆಚೆಕ್ಕಾಚೆ ಎಟ್ಟಾಚೆ
ಮಂಗ್‌ಲ ಕುರಿಯಾಚಿ.
ಆನಂಗುಂಡ್ ಅವ್ವೆಯ್ಯ
ಮಂಗ್‌ಲಕ್ ಸನ್ನಾಯ
ಎಲ್ಲಾ ಜೋಡು ಕೂಟಂಡು;
ದೂರತುಳ್ಳ ಬೆಂದುಕ್
ಓಲೆ ಆಳಯಕಂಡು;
ಪಕ್ಕಲುಳ್ಳ ಬೆಂದುಕ್
ನಾನೆ ಪೋಯಿತೆಣ್ಣುವಿ
ಎಂದೆಣ್ಣಿ ಪರಂದತ್.
ಆ ಬಾಕ್‌ನ ಕೇಪದು
ಕೈಯ್ಯಣ್ಣಂಡ ಪೆತ್ತವ್ವ
ಚಂದೋಳ ಪೆರ್‌ಜಾಯಿ
ಮಂಗ್‌ಲಕ್ ಸನ್ನಾಯ
ಒಂದ್ ತೊಟ್ಟ್ ನೂರೋಳ
ತೇಡಿ ನೋಟಿ ಕೂಟ್‌ಚಿ.
ಕೆಂಗುದ್‌ರೆ ಕೈಯ್ಯಣ್ಣ
ಕಾಳೆ ಪಂದಿ ತೇಡ್‌ಚಿ;
ಚಿಂಗ ಬಾಳೆ ಕೆತ್ತ್‌ಚಿ;
ದೂರತುಳ್ಳ ಬೆಂದುಕ್
ಓಲೆ ಆಳ್ ಬುಟ್ಟಿತ್
ಪಕ್ಕಲುಳ್ಳ ಬೆಂದುಕೂ
ತನ್ನಡೋರ್ ಊರೋಂಗೂ
ತಾನೇ ಪೋಯಿತೆಣ್ಣ್‌ಚಿ.
ಓರಂದೀರಂಡೆಣ್ಣಣೆ
ಪೆಬ್ಬೆ ಬಂದೊಳಪಾಂಜ.
ಮಂಗ್‌ಲತ್ ಚೊಲ್ಲಾಲೆ
ಇಂದಿಯ ದಿನತ್‌ಲ್
ಊರ್‌ಕೇರಿ ಬಾಲರೂ
ಮುಲ್ಲೆ ಪೂವ್ ಪೊಂಗಳೂ
ಒಕ್ಕಲಣ್ಣ ಬಂದಿತ್
ಪಂದ ಪಟ್ಟೆಲ್‌ಟ್ಟಿತ್
ಕಾಳೆ ಪಂದಿ ಕೆತ್ತಿತ್
ಚಿಪ್ಪರತೆ ಮಾಡ್‌ಚಿ.
ಓರಂದೀರಂಡೆಣ್ಣಣೆ
ಸಣ್ಣಕ್ಕಿರ ಕೂಳಾಯಿ
ಪಂದಿ ಕರಿ ತಾನಾಯಿ
ಕೈಪಂಜೆ ಕರಿಯಾಯಿ
ಉಂಡತ್ ಕುಡಿಚತ್.
ಈನಂಗುಂಡ್ ಪೋಠಾಂದ್
ಪತ್ತಿರ ಮರಿಯಾದಿ
ಚಿಂಗ್‌ರಿ ಪೊರಿಯಕ್ಕಿ
ಚಿಂಗ ಬಾಳೆ ಪಣ್ಣಾಯಿ
ಮುಕ್ಕೋಟ್ ಕೊಡಿಯಲೆ
ಚಿಕ್ಕಂಗೋಟಡಕೆಯು
ಊರ್‌ಪತ್ತಿ ಬೆಚ್ಚಿತ್

ದೇವೈಯ್ಯ ಬಯಿಂಬನ್
ನೆಲ್ಲಕ್ಕಿ ನಡುಬಾಡೆ
ಅಲ್ಲಿ ಬಂದ್ ನಿಂದಿತ್
ಈ ಬಾಕ್ ಪರಂದತ್
"ಉಯಿ! ಎನ್ನಡ ಊರೋನೆ
ಪಂಡಿಯ ನಡಪೋಲೆ
ಊರ್ ಪತ್ತಿ ಬೆಚ್ಚಿಯ;
ಪೋರತಾನ ಕೇಟೋಲು"
ಎಂದೆಣ್ಣಿ ಪರೆಯಣೆ
ಊರ್ ಕೇರಿ ಬಾಲರೊ
ಚಂದೋಳತ್ ಚಾಯೋಡೆ
ಅತ್ತಿಪತ್ತಿ ಬೇಂಗಿತ್
ವೈಯ್ಯನೆ ಪೊರಟತ್
ಎಂದೆಣ್ಣಿತ್ ಪಾಡುವ;
ಈ ಪಾಟ್‌ನ ಬೆಕ್ಕನ.
ಬೆಪ್ಪಕೊಮ್ಮೆಡ್‌ಪಕ್ಕ
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೋ!

ಈ ಪದವು ಮುಗಿದ ಮೇಲೆ ಮನೆಯವರು ಮತ್ತು ಊರವರು ಸಹ ಊಟ ಮಾಡಿ ಊರವರು ಊರುಪತ್ತಿ ತೆಗೆದುಕೊಂಡು ತಂತಮ್ಮ ಮನೆಗಳಿಗೆ ಹೋಗುವರು.

ಊರುಪತ್ತಿ : ಊರುಪತ್ತಿಯನ್ನು ತಪ್ಪದೆ ಮನೆಯ ಯಜಮಾನನೇ ಕೊಡಬೇಕು. ನಿರ್ವಾಹವಿಲ್ಲದ ಪಕ್ಷದಲ್ಲಿ ಇವನ ಪ್ರತಿನಿಧಿಯು ಕೊಡಬೇಕು. ಊರಿನ ಪ್ರತಿ ಕುಳಕ್ಕೆ 5 ವೀಳ್ಯದೆಲೆ 5 ಅಡಿಕೆ 1/2 ಪಾವಿನಷ್ಟು ಹುರುಕಲು, ಒಂದು ಬಾಳೆಹಣ್ಣು ಮತ್ತು ಒಂದು ಚೂರು ತೆಂಗಿನಕಾಯಿಗಿಂತ ಕಡಿಮೆ ಇರಕೂಡದು. ಇವುಗಳನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ತಂದಿಟ್ಟು, ಯಜಮಾನನು, ಊರವರನ್ನು ಸೇರಿಸಿ ಊರುಪತ್ತಿ ತೆಗೆದುಕೊಳ್ಳಬೇಕಾಗಿ ಹೇಳಬೇಕು. ಊರವರು ಊರು ಪತ್ತಿಯನ್ನು ತೆಗೆದುಕೊಂಡು ಹೋಗುವರು.

ಪೆಟ್ಟಿಗೆ ತುಂಬಿಸುವುದು : ಊರವರು ಹೋದಮೇಲೆ, ಮನೆಯವರೆಲ್ಲರನ್ನೂ ಸೇರಿಸಿ ಹುಡುಗಿಗೆ ಕೊಡತಕ್ಕ ಬಟ್ಟೆ ಬರಿ ಕಂಚು ಮುಟ್ಟು ಮುಂತಾದವುಗಳನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ಇಟ್ಟು ಪೆಟ್ಟಿಗೆಗೆ ತುಂಬಿಸಬೇಕು. ಗಂಡಿನ ಮನೆಯವರು ಈಡು ಮಡುಗುವಾಗ ಏನಾದರೂ ಆಭರಣವನ್ನು ಮಡಗಿದ್ದರೆ ಅದನ್ನು ಸಹ ಪೆಟ್ಟಿಗೆಗೆ ಹಾಕಬೇಕು.

ಮೇಲ್ಕಟ್ಟು : ಮುಹೂರ್ತದ ದಿವಸ ಬೆಳಿಗ್ಗೆ ಅಗಸನು ಬಂದು ಮನೆಯ ಮುಂಭಾಗದಲ್ಲಿ ಹಾಕಿರುವ ಚಪ್ಪರದಿಂದ ನೆಲ್ಲಕ್ಕಿ ನಡುಬಾಡೆಯ ತಲೆಯವರೆಗೂ ಬಿಳೀ ಮಡಿ ಬಟ್ಟೆಯಿಂದ ಮೇಲ್ಕಟ್ಟು ಕಟ್ಟಬೇಕು. ಹೆಚ್ಚಾಗಿಯೂ ಕಟ್ಟಿಸಿಕೊಳ್ಳುವುದುಂಟು.

ಮುಹೂರ್ತಕ್ಕೆ ಕೂರುವ ಸ್ಥಳದಲ್ಲಿ ಮೇಲ್ಕಟ್ಟನ್ನು ಒಂದು ಕೆಂಪು ರೇಷ್ಮೆ ಬಟ್ಟೆಯಿಂದ ಮುಚ್ಚಬೇಕು. ಈ ಕೆಂಪು ರೇಷ್ಮೆ ಬಟ್ಟೆಯ ಒಂದು ಮೂಲೆಗೆ ಒಂದು ಹಣ್ಣು ಬಾಳೆ ಗೊನೆಯೂ, ಇನ್ನೊಂದು ಮೂಲೆಗೆ ಒಂದು ತೆಂಗಿನ ಕಾಯಿಯೂ, ಮತ್ತೊಂದು ಮೂಲೆಗೆ ಒಂದು ಬೆಳ್ಳರಿ ಕಾಯಿಯೂ, ಬೇರೊಂದು ಮೂಲೆಗೆ ಮೂರು ವೀಳ್ಯದೆಲೆಯೂ ಕಟ್ಟಿ ಮಧ್ಯಕ್ಕೆ ಮೂರು ಅಡಿಕೆಯಾಗಲೀ ಅಥವಾ ಅಡಿಕೆ ಹೂವಾಗಲೀ ತೂಗಹಾಕಬೇಕು.

ಮುಹೂರ್ತವು ಮಧ್ಯಾಹ್ನದ ಸಮಯದಲ್ಲಿ ಆಗುತ್ತದೆ. ನಾಳ್ ಮುಹೂರ್ತವು ಮೊದಲೇ ನಿಶ್ಚಯ ಮಾಡಿರುವುದರಿಂದ, ಆ ಸಮಯಕ್ಕೆ ಸರಿಯಾಗಿ ಹುಡುಗನು ಕ್ಷೌರ ಮಾಡಿಯೂ ಹುಡುಗಿಯೂ ಬಳೆ ತೊಡಿಸಿಯೂ ಸ್ನಾನ ಮಾಡಿ ಬರಬೇಕು.

ಕ್ಷೌರ : ಹುಡುಗನು ಬಿಳಿ ಕುಪ್ಪಸ ಧರಿಸಿಕೊಂಡು ಕೆಂಪು ವಸ್ತ್ರ ವನ್ನು ತಲೆಗೆ ಕಟ್ಟಿಕೊಳ್ಳಬೇಕು.

ದಟ್ಟಿಯ ಬದಲಿಗೆ ಸೊಂಟಕ್ಕೆ ಕುಪ್ಪಸದ ಮೇಲೆ ವಸ್ತ್ರವನ್ನು ಕಟ್ಟಿಕೊಳ್ಳಬಹುದು. ಆಮೇಲೆ ಹುಡುಗನ ಕೈಯನ್ನು ಅರುವನು ಅಥವಾ ಬೋಜಕಾರನು ಹಿಡಿದುಕೊಂಡು ಅವನು ಮಾಡಬೇಕಾದ ಕೆಲಸಗಳನ್ನೆಲ್ಲಾ ಅವನಿಗೆ ತಿಳಿಸುತ್ತಾ ಇರಬೇಕು.

ಮೊದಲು ಕನ್ನಿ ಮೂಲೆ ಕೋಣೆಯಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಅಲ್ಲಿಂದ ಬಂದು ಕನ್ನಿ ಕಂಬಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ, ಅಲ್ಲಿಂದ ನೆಲ್ಲಕ್ಕಿ ನಡುಬಾಡೆಯಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಅಲ್ಲಿ ಸೇರಿರುವ ಹಿರಿಯರೆಲ್ಲರ ಕಾಲು ಮುಟ್ಟಿ ನಮಸ್ಕರಿಸಿ ಅಲ್ಲಿಂದ ಕ್ಷೌರ ಮಾಡಿಸಿಕೊಳ್ಳಲು ಹೋಗಬೇಕು.

ಕ್ಷೌರ ಮಾಡುವಲ್ಲಿ ಒಂದು ಚಾಪೆ ಹಾಕಿ ಅದರ ಮೇಲೆ ಒಂದು ಮುಕ್ಕಾಲಿಮಣೆಯನ್ನು ಮಡಗಿ ಅದರ ಹತ್ತಿರ ಒಂದು ಕಂಚಿನ ಗಂಗಳದಲ್ಲಿ ಸ್ವಲ್ಪ ಹಾಲು ಹುಯಿದು, ಒಂದು "ಪುತ್ತರಿ ಪಚ್ಚಿ"ಯಲ್ಲಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಚಿಪ್ಪು ಬಾಳೆ ಹಣ್ಣು ಸಹ ಮಡಗಿರಬೇಕು.

ಕ್ಷೌರಕ್ಕೆ ಗಂಗಳದಲ್ಲಿರುವ ಹಾಲನ್ನೇ ಉಪಯೋಗಿಸಿಕೊಳ್ಳಬೇಕು. ಕ್ಷೌರಕ್ಕೆ ಈ ಹಾಲನ್ನು ಗರಿಕೆ ಹುಲ್ಲಿನಿಂದ ಮುಖಕ್ಕೆ ಬ್ರಷ್‌ನಿಂದ ಸವರುವಂತೆ ಸವರಬೇಕು. ನೀರನ್ನು ಉಪಯೋಗಿಸಕೂಡದು. ಕ್ಷೌರ ಮಾಡಿದ ಕೂದಲನ್ನು ಗಂಗಳಕ್ಕೆ ಹಾಕಿಕೊಳ್ಳಬೇಕು. ನೆಲಕ್ಕೆ ಬೀಳಿಸಬಾರದು. ಇದು ಗಲ್ಲ, ಮೀಸೆ ಕಟ್ಟು, "ಕೊಂಬಂಜವರ" ಆಗಬೇಕು. ಹುಡುಗನು ಎದ್ದ ಮೇಲೆ ಇನ್ನಿಬ್ಬರಾದರೂ ಅದೇ ಸ್ಥಳದಲ್ಲಿ ಕ್ಷೌರ ಮಾಡಿಸಿಕೊಳ್ಳಬೇಕು. ಗಂಗಳದಲ್ಲಿರುವ ಹಾಲನ್ನು ಅದರಲ್ಲಿರುವ ಕೂದಲು ಸಮೇತ ಹಾಲು ಬರುವ ಒಂದು ಮರದ ಬುಡಕ್ಕೆ ಹಜಾಮನು ಹುಯ್ಯಬೇಕು.

ಹುಡುಗನು ಕಟ್ಟಿದ್ದ ಕೆಂಪು ವಸ್ತ್ರವನ್ನೂ, ಕೆಳಗಿದ್ದ ಚಾಪೆಯನ್ನೂ, ಪುತ್ತರಿ ಪಚ್ಚಿಯಲ್ಲಿದ್ದ ಅಕ್ಕಿ ಮುಂತಾದವುಗಳನ್ನೂ, ಕಂಚಿನ ಗಂಗಳವನ್ನೂ, ಒಂದು ಹಣವನ್ನೂ ಹಜಾಮನಿಗೆ ಕೊಡಬೇಕು. ಪುತ್ತರಿ ಪಚ್ಚಿಯವನ್ನು ಕೊಡಬಾರದು. ಕಂಚಿನ ಗಂಗಳವನ್ನು ಕೊಡಲು ಅನುಕೂಲವಿಲ್ಲದಿದ್ದರೆ ಅದರ ಬದಲಿಗೆ ಐದು ಹಣವನ್ನು ಕೊಡಬೇಕು.

ಬಳೆ ಹಾಕಿಸುವುದು : ಹುಡುಗನನ್ನು ಕ್ಷೌರಕ್ಕೆ ಅರುವನು ಕರೆದುಕೊಂಡು ಹೋದ ಪ್ರಕಾರವೇ ಹುಡುಗಿಯನ್ನು ಅರುವನ ಮನೆಯ ಮುತ್ತೈದೆಯು ಅಥವಾ ಬೋಜಕರತಿಯು ಬಳೆ ಹಾಕಿಸಲಿಕ್ಕೆ ಕರೆದುಕೊಂಡು ಹೋಗಬೇಕು. ಹುಡುಗಿಯು ಕೂರುವುದಕ್ಕೆ ಒಂದು ಚಾಪೆಯನ್ನು ಹಾಸಿರಬೇಕು. ಹಜಾಮನ ಹತ್ತಿರ ಮಡಗಿದ್ದಂತೆಯೇ ಬಳೆಗಾರನ ಹತ್ತಿರವೂ ಪುತ್ತರಿ ಪಚ್ಚಿಯದಲ್ಲಿ ಅಕ್ಕಿ ಮುಂತಾದವುಗಳನ್ನು ಮಡಗಿರಬೇಕು. ಹುಡುಗಿಯು ಒಂದು ಜೊತೆಯಾದರೂ ಕರಿಮುತ್ತೈದೆ ಬಳೆಗಳನ್ನು ಹಾಕಿಸಿಕೊಳ್ಳಬೇಕು. ಹುಡುಗಿಯು ಏಳುವಾಗ ಅಲ್ಲಿರುವ ಬಳೆಗಳನ್ನು ಎರಡು ಕೈಗಳಿಂದಲೂ ಮುಟ್ಟಿ ನಮಸ್ಕರಿಸಬೇಕು. ಹುಡುಗಿಯು ಎದ್ದ ಒಡನೆ ಇನ್ನು ಇಬ್ಬರಾದರೂ ಕರಿ ಮುತ್ತೈದೆ ಬಳೆಗಳನ್ನು ಹಾಕಿಸಿಕೊಳ್ಳಬೇಕು.

ಹುಡುಗಿ ಕೂತಿದ್ದ ಚಾಪೆಯನ್ನೂ ಪುತ್ತರಿ ಪಚ್ಚೆಯಲ್ಲಿದ್ದ ಸಾಮಾನುಗಳನ್ನೂ ಐದು ಹಣವನ್ನೂ ಬಳೆಗಾರನಿಗೆ ಕೊಡಬೇಕು.

ಸ್ನಾನ : ಕ್ಷೌರ ಮಾಡಿಸಿಕೊಂಡ ಮೇಲೆ ಹುಡುಗನನ್ನು ಅರುವನೂ ಅಥವಾ ಬೋಜಕಾರನೂ ಬಳೆ ಹಾಕಿಕೊಂಡ ಮೇಲೆ ಹುಡುಗಿಯನ್ನು ಅರುವನ ಮನೆ ಹೆಣ್ಣೂ ಅಥವಾ ಬೋಜಕರತಿಯು ಸ್ನಾನಕ್ಕೆ ಬಚ್ಚಲು ಕೊಟ್ಟಿಗೆಗೆ ಕರೆದುಕೊಂಡು ಹೋಗಬೇಕು. ಹುಡುಗನನ್ನಾಗಲೀ,

ಹುಡುಗಿಯನ್ನಾಗಲೀ ಮೂರು ಮುತ್ತೈದೆಯರು ನೀರು ಹುಯಿದು ಮೀಯಿಸಬೇಕು.

ಉಡುಪು : ಹುಡುಗನಿಗೆ ಅವನ "ಬೋಜಕಾರನೂ" ಹುಡುಗಿಗೆ ಅವಳ "ಬೋಜಕರತಿ"ಯೂ ಉಡುಪನ್ನು ತೊಡಿಸಬೇಕು.

ಹುಡುಗನಿಗೆ ಬಿಳಿ ಅಥವಾ ಕೆಂಪು ರೇಷ್ಮೆ ಕುಪ್ಪಸ, ಕೆಂಪು ರೇಷ್ಮೆ ದಟ್ಟಿ "ಪಾನಿ ಮಂಡೆ ತುಣಿ", "ಪೀಚೆ ಕತ್ತಿ", "ತೊಡಂಗ್", "ಒಡಿಕತ್ತಿ", ಅರೆ ಚಂಜೋಲೆ, ಮಾಲೆ, ಕಟ್ಟಿ ಬಳೆ, ಕೈ ಬೆರಳುಂಗುರ, ಕಡಕು, ಕೆಂಪು ಮುಸುಕೂ; ಹುಡುಗಿಗೆ ಕಡಗ, ಸರಪಣೆ, ಕರಿಮಣಿ, ಮಾಲೆ, ಓಲೆ, ಪಾಡಗ, ಪಿಲ್ಲಿ, ಕಾಲ್‌ಸರ, ಗಗ್ಗರ, ಕೈಬೆರಳುಂಗುರ, ಕೆಂಪು ಸೀರೆ, ಕೆಂಪು ರವಿಕೆ, ಕೆಂಪು ಮುಸುಕೂ ಸಹ ಇರಬೇಕು. ಅಲಂಕಾರ ಪೂರ್ತಿಯಾದ ಒಡನೆ ವಿಭೂತಿ ಧರಿಸಬೇಕು. ಎಲೆ ಅಡಿಕೆ ತಿನ್ನಬೇಕು.

ಅಪ್ಪರಲ್ಲಿ "ಕೊಂಬು ಕೊಟ್ಟು" ವಾದ್ಯ ಮೊದಲಾದವು ಆಗಬೇಕು.

ಹುಡುಗನು ಗೆಜ್ಜೆ ತಂಡನ್ನು ಹಿಡಿದುಕೊಳ್ಳಬೇಕು.

ಹುಡುಗನ ಜೊತೆಯಲ್ಲಿ ಬೋಜಕಾರನೂ ಹುಡುಗಿಯ ಜೊತೆಯಲ್ಲಿ ಬೋಜಕರತಿಯೂ ಬಿಳೀ ಗೌಸವಿರುವ ಕೊಡೆಯನ್ನು ಹಿಡಿದುಕೊಂಡಿರಬೇಕು. ಮನೆಗೆ ಹತ್ತುವಾಗ ಕೊಡೆಯನ್ನು ಮುಚ್ಚಿಬಿಡಬೇಕು.

ಹಟ್ಟಿಯಿಂದ ಮುಹೂರ್ತಕ್ಕೆ ಕೂರುವಲ್ಲಿಗೆ ಅಗಸನು ಬಿಳೀ ಬಟ್ಟೆಯನ್ನು ಹಾಸುತತಾ ಹೋಗಬೇಕು. ಹುಡುಗನು ಅಥವಾ ಹುಡುಗಿಯು ಅದರ ಮೇಲೆ ನಡೆದುಕೊಂಡು ಹೋಗಬೇಕು. ಬಟ್ಟೆಗೆ ಮೆಟ್ಟಿದ ಮೇಲೆ ಒಬ್ಬ ಕನ್ಯೆಯು ಅಥವಾ ಮುತ್ತೈದೆಯು ಹುಡುಗನ ಅಥವಾ ಹುಡುಗಿಯ ಕಾಲು ತೊಳೆಯಬೇಕು.

ಕಟ್ಟಳೆಗಳನ್ನು ಬಲಕಾಲುಗಳಿಂದಲೇ ದಾಟಬೇಕು.

ಹುಡುಗನನ್ನಾಗಲೀ ಹುಡುಗಿಯನ್ನಾಗಲೀ ಸ್ನಾನ ಮನೆಯಿಂದ ಮುಹೂರ್ತ ಸ್ಥಳಕ್ಕೆ ಕರೆದುಕೊಂಡು ಹೋಗುವಾಗ ಸ್ನಾನ ಮನೆಯಿಂದ ತಳಿಯಕ್ಕಿ ಬೆಳಕನ್ನು ಒಬ್ಬ ಕನ್ಯೆಯು ಹಿಡಿದುಕೊಂಡು ಮುಂದೆ ಹೋಗುತ್ತಾ ಮನೆಯ ಮೆಟ್ಟಲು ಹತ್ತುವಲ್ಲಿ ಇನ್ನೊಂದು ದೀಪವನ್ನು ಇನ್ನೊಬ್ಬ ಕನ್ಯೆಯು ಹಿಡಿದುಕೊಂಡು ನಿಂತಿರಬೇಕು. ನಾಲ್ಕು ಜನರು ದುಡಿಯನ್ನು ಹೊಡೆಯುತ್ತಾ ಈ ಕೆಳಗಿನ ರೀತಿ "ಬಟ್ಟೆಪಾಟ್" ಹಾಡುತ್ತಾ ಮುಂದೆ ಹೋಗಬೇಕು. ಪೂರ್ವದಲ್ಲಿ ನಾಲ್ಕು ಹೆಂಗಸರು ಸಹ ತಾಳ ಹೊಡೆದುಕೊಂಡು ಇದೇ ಹಾಡನ್ನು ಹಾಡುತ್ತಾ ಮುಂದೆ ಹೋಗುತ್ತಿದ್ದರು.

ಬಟ್ಟೆಪಾಟ್

ಲೇಲಾ, ಲೇ, ಲಾಲೇಲ, ಲೇಲೇಲ, ಲೇಲೊ,
ಲೇಲೇಲೊ ಪಾಡಿ ತರಕೊವ್ವ ಎಂಗ;
ತಪ್ಪತ್ತೆ ನಾವ್ ತರತೋಡೆ ಬಾರೊ
ಏಂಗಂಡು ತೊಂಡೆ, ಕೊರತಂಡು ನಾವು;
ಏಂಗಿನೊ ನಿನ್ನ ಪಲರು ತುದಿಕು;
ಅಲ್ಲೇಂಗಿ ನಿನ್ನ ಪಲರು ಪಳಿಯು.
ನೀಕ್ ಕೈ ಕೂಲಿ ನಾ ತಪ್ಪ ತೊಂಡೇ;

ಏಳ್ ಮೊದ್‌ರತೆ ಕೂತಪ್ಪ ತೊಂಡೇ.
ಕೊಲ್ಲಿ ತೇನು ಕೂಟಿ, ಕೋತೇನೂ ಕೂಟಿ;
ಕಬ್ಬಡ ಮೋರೆಲ್ ಮೂಲಿ ತೇಂಗೂಟಿ.
ಕಜ್ಜಿ ಪುಳಿಪೋರ್ ಮೂಲಿ ತೇಂಗೂಟಿ
ಕಾಡ್‌ಲ್ ಬಲ್ಲಿಯ ಪೊಂದೇನುಂಗೂಟಿ.
ನಂದಮೊದ್‌ಪ್ಪ ಕಲತೇನೂಂಗೂಟಿ;
ಕುಪ್ಪೆಲ್ ನಟ್ಟ ಕೈಬ್‌ಡ ನೀರ್;
ಚತ್ತೆ ಬಡುವಂಡ ಚೆರ್ ಬೆಲ್ಲಕೂಟಿ;
ಎಮ್ಮೆ ಪೆರೆ ಮೋರ್ ಪಯ್ಯುಡ ಪಾಲ್,
ಇಂಜಿ ಪುಳಿ ಮೋರ್ ಸಾಮೆಡ ಕೂಳ್;
ಏಳ್ ಮೊದ್‌ರತೆ ಕೂತಂದ ತೊಂಡೆ.
ಕೂಳುಂಡ ಬಾಯಿಕೆಲೆ ಬೋಗ ತಪ್ಪಿ;
ಉದ್ದ ತೊಡಿಯತ್ ಉದ್ದಿಯ ಮಾವು,
ಉದ್ದಿಯ ಮಾವುಲ್ ಕೇರೆ ಕೊಡಿಯೊ,
ಕೇರೆ ಕೊಡಿ ತಿಂದ ನಾವ್ ತರಿಪ;
ಕುಂಬ್‌ಲೆಲೆ ತಿಂದ ಕೈಪ ಪುಳಿಪ;
ಕಟ್ಟೊಳೆ ಕಂಡಿಲ್ ಪೂಳೆ ಮುರ್‌ಕ್
ಪೂಳೆ ಮುರ್‌ಕ್‌ಲ್ ಸಣ್ಣ ಕೊಡಿಯೊ
ಸಣ್ಣ ಕೊಡಿಯಿಲ್ ಕೊಡಿಯೆಲೆ ತಪ್ಪಿ.
ಮಾಣಿ ಮಲೆನಾಡ್ ಕಲ್ಲ ಕೆರೆಯೊ
ಕಲ್ಲ ಕೆರೆಡೇರಿ ನೀಲ ಕವುಂಗ್–
ನೀ ಬೂಕಿ ಚಾಕ್‌ನ ನೀಲ ಕವುಂಗ್,
ನೀಲ ಕವುಂಗ್ ಮುರುವನಡಕೆ,
ಮುರುವನಡಕೆ ಕೊಲೆಯೋಡೆ ತಪ್ಪಿ;
ಕಪ್ಪಲೋಡಿ ಬಂದ ಚಪ್ಪಲೆ ತೊಪ್ಪ್;
ಚತ್ತೆಬಡುವಂಡ ಚಣ್ಣೂರ್ ಕೂಟಿ
ನಾಲು ಕೂಟಿ ತಿಂದ ಕ್ವೆಯ್ಯೋರ್ ಬಾಯಿ !
ಅಕ್ಕಲೆ ಕಾಣಿ ಧನಿ ಬಂದ ತೊಂಡೆ
ಏಂಗಂಡು ತೊಂಡೆ ಕೊರತಂಡು ನಾವು.

ಹೀಗೆ ಹಾಡುತ್ತಾ ಹೋಗವಾಗ ಓಣಿಗೆ ತಲುಪಿದರೆ ಈ ಕೆಳಗಿನ ರೀತಿ ಹಾಡಬೇಕು.

ಕ್ವೆಯ್ಯೋರ್ ಒಕ್ಕಡ ಓಣಿ ಪಣಿಯೊ
ಪಾಂಡವ ಪಾರೆಲ್ ಓಣಿ ಪಡತ;
ಕ್ವೆಯ್ಯೋರ್ ಒಕ್ಕಡ ಕಕ್ಕಟ್ಟ್ ಬೋಜ
ಕಾಡ್ ಕಲ್ಲ್‌ಂಗುಂಡ್ ಕಕ್ಕಟ್ಟ್ ಕೆಜ್ಜ;
ಕ್ವೆಯ್ಯೋರ್ ಒಕ್ಕಡ ಬಕ್ಕ ಪೊರೆಯೊ;
ಕೆತ್ತ್‌ನ ಕಲ್ಲೊಂಡ್ ಬಕ್ಕ ಪಣಿಯೊ;
ಬಕ್ಕ ಕಡಕಣೆ ಚೋಮ್ಮೆಯ್ಯ ಪಟ್ಟಿ,

ಆಮಾಡೆ ಕಲ್ಲೊಂಡ್ ಪಟ್ಟಿ ಪಡತ;
ತ್ಯೆಯ್ಯೋರ್ ಒಕ್ಕಡ ಮೊಟ್ಟ್ ಪಣಿಯೊ
ಮಾಣಿಕ ಕಲ್ಲೊಂಡ್ ಮೊಟ್ಟ್ ಪಡತ;
ಮೊಟ್ಟ್ ಮರಿಯಣೆ ಕೈಯ್ಯಾಲೆ ಕಂಡ;
ಮಾಂಜೌರಿ ಕೈಯ್ಯಾಲೆ ಜಾಟಿ ಕಡಂದ,
ಕೈಯ್ಯಾಲೆ ಜಾಟಣೆ ಕಟ್ಟೊಳೆ ಕಂಡ,
ಚಾಲೀಯ ಕಟ್ಟೊಳೆ ಜಾಟಿ ಕಡಂದ;
ತ್ಯೆಯ್ಯೋರ್ ಒಕ್ಕಡ ಮನೆಡ ಬೋಜ!
ಅಞ್ಞೂರ್ ತಚ್ಚಾಯಿರಿ ತ್ಯೆಯ್ಯಾಂಡ್ ಕೆಜ್ಜ;
ಪೊನ್ನ್ಂಗೊಂಡುತ್ತರ ಬೊಳ್ಳಿರ ಬುಟ್ಟ,
ಸಾಲ್ ಕಟ್ಟೈಮರ ಚಿತ್ತ್ರ ಕಂಬ್,
ಚಿತ್ತ್ರ ಕಂಬ್‌ಲ್ ಎನ್ನೆಲ್ಲೆಳ್‌ತ್?
ಪಕ್ಕಿ ಎಳ್‌ತುಂಡ್ ಪಾಂಬೆಳ್‌ತುಂಡ್,
ವಾಮನ ದೇವಂಡ ರೂಪ ಬರಂದ,
ಕಲ್ಲಳೆ ದೇವಂಡ ರೂಪ ಬರಂದ,
ಕಾಡ್‌ಲ್ ಪೆಗ್ಗಾಟಿ ರೂಪ ಬರಂದ,
ಊಕಾಡ್ ಕೇಮಂಡ ರೂಪ ಬರಂದ,
ಕೂವಳ ಕೋಳಿರ ರೂಪ ಬರಂದ
ಕಾವಳ ಪೂಞ್ಞೆರ ರೂಪ ಬರಂದ
ನಾದತ್ತ ದೇವಂಡ ರೂಪ ಬರಂದ.
ಪಿಲ್ಲ್‌ಟ್ಟ ಪಿಪ್ಪೊರೆ ಪಟ್ಟ್ ಪೊರೆಯೊ.
ನಾತರ ಮಣ್ಣ್‌ಲ್ ತೇಕ ಪಣಿಯೋ,
ಪಾಪೋಲೆ ಬೊಳ್ತೋರ್ ಬೊಳ್ಳೆ ಮಣ್ಣುಂಡ್,
ಮಂಜ ನರತ್‌ಲ್ ಮಂಜ ಮಣ್ಣುಂಡ್,
ಅಞ್ಞಣ ಪೋಲೆ ಕರತ ಮಣ್ಣುಂಡ್
ಚೋರೆ ತುಳಿಪೋಲೆ ಚೋಂದ ಮಣ್ಣುಂಡ್,
ನಾಲ್ ತರ ಮಣ್ಣ್ ಕೂಟಿತ್ ತೇಚ.
ನೆಲ್ಲಕ್ಕಿ ತೇಚಿತ್ ಕೈಯ್ಯಾಲೆ ತೇಚ,
ಕೈಯ್ಯಾಲೆ ತೇಚಿತ್ ಮುಂಬರ ತೇಚ;
ಸೂರಿಯ ದೇವಂಡ ರೂಪ ಬರಂದ,
ನೀರ್‌ಲ್ ತಾವರೆ ರೂಪ ಬರಂದ,
ಕೆತ್ತುವ ಕತ್ತಿರ ರೂಪ ಬರಂದ,
ಕೆಂಬತ್ತಿ ಪೂವ್‌ರ ರೂಪ ಬರಂದ,
ನೀರ್‌ಲ್ ಬೊಳ್ಳಾಮೆ ರೂಪ ಬರಂದ,
ಒಗ್ಗುವ ಪಾಂಬ್‌ಡ ರೂಪ ಬರಂದ,
ಕೆಂಗಲ ತೇನ್‌ಡ ರೂಪ ಬರಂದ,
ನಂದಿಯ ಕಾಳೆರ ರೂಪ ಬರಂದ,

ತನ್ನಡ ದೇವಂಡ ರೂಪ ಬರಂದ,
ಕೂಡನ್ನೆ ತಾಂಡೋರ್ ರೂಪ ಬರಂದ.
ಕೈಯ್ಯೋರ್ ಒಕ್ಕಡ ಮನೆಡ ಬೋಜ.
ನಾ ಬಪ್ಪಕೆಕ್ಕೋಲು ನಲ್ಲದೆ ಕಂಡ,
ಬೊಳ್ಳೋಡ್ ಮುಕ್ಕಾಲಿ ಬೊಳ್ಳಿ ತಳಿಯ,
ಬೊಳ್ಳಿ ತಳಿಯತ್ ಸಣ್ಣಕ್ಕಿ ಬೋಜ,
ಸಣ್ಣಕ್ಕಿ ಮೀದಲ್ ಪೊನ್ನ್ ಬೊಳಕ್,
ಪೊನ್ನ್ ಬೊಳಕ್‌ಲ್ ಪಯ್ಯುಡ ನೆಯ್ಯ್.
ಪಯ್ಯುಡ ನೆಯ್ಯು ಪರತಿ ತಿರಿಯು,
ಪರತಿ ತಿರಿಂಗುಂಡ್ ಕತ್ತುವ ತಿತ್ತ್-
ತೆಕ್ಕೂ ಬಡಕೂ ತೆಡ್ ಪೊಜ್ಜ ಪೋಲೆ
ಕೇಕೂ ಪಡಿಞಾರೂ ಮೀಂಬಾಂಜ ಪೋಲೆ.
ಒಕ್ಕಕೊತ್ತಾಜಾರ ಪಾಡ್‌ಚಿ ಎಂಗ
ಆಜಾರ ಪಾಡಿತ್ ಬೆಕ್ಕನ ಎಂಗ
ಲೇಲಾಲೇ, ಲಾಲೇಲ, ಲೇಲೇಲೊ, ಲೇಲೊ!

ಹುಡುಗನು ಅಥವಾ ಹುಡುಗಿಯು ಬಚ್ಚಲು ಮನೆಯಿಂದ ಬರುವುದಕ್ಕೆ ಮುಂದಾಗಿಯೇ ಅರುವನ ಮನೆ ಹೆಣ್ಣು ಬಾಡೆಯಲ್ಲ ದೀಪ ಹತ್ತಿಸಿರಬೇಕು. ಮುಹೂರ್ತಕ್ಕೆ ಕೂರುವ ಸ್ಥಳದ ಬಲಕ್ಕೂ ಎಡಕ್ಕೂ "ಕುತ್ತ್‌ಬೊಳ್‌ಚ" ಹತ್ತಿಸಿಡುವುದೂ ಉಂಟು. ತಳಿಯಕ್ಕಿ ಬೊಳ್‌ಚ ಉರಿಯುತ್ತಿರಬೇಕು.

ಅರುವನ ಮನೆ ಹೆಣ್ಣು ಮುಹೂರ್ತಕ್ಕೆ ಕೂರುವ ಸ್ಥಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎರಡು ಅಥವಾ ಮೂರು ಚಾಪೆಯನ್ನು ಹಾಸಬೇಕು. ಅದರ ಮೇಲೆ ಅಗಸನು ಒಂದು ಜಂಬುಕಾನವನ್ನು ಹಾಸಬೇಕು. ಅದರ ಮೇಲೆ ಅಗಸನು ಒಂದು ಕೆಂಪು ವಸ್ತ್ರವನ್ನು ಹಾಕಬೇಕು. ಆಮೇಲೆ ಅರುವನ ಹೆಣ್ಣು ಮಧ್ಯದಲ್ಲಿ ಮಡಗಿದ ಮುಕ್ಕಾಲಿಯ ಎರಡು ಕಡೆಗಳಲ್ಲಿಯೂ ಎರಡು ಮುಕ್ಕಾಲಿಗಳನ್ನಿಟ್ಟು ಅವುಗಳ ಮೇಲೆ ಒಂದೊಂದು ಬೆಳ್ಳಿಯ ಅಥವಾ ಕಂಚಿನ ಗಂಗಳವನ್ನಿಟ್ಟು ಅವುಗಳಲ್ಲಿ ಆಗುವಷ್ಟು ತುಂಬ ಬಿಳಿ ಅಕ್ಕಿಯನ್ನು ಹಾಕಿ ಅವುಗಳ ಒಂದರ ಮೇಲೆ ಒಂದು ಗಿಂಡಿಯಲ್ಲಿ ತುಂಬಾ ಹಾಲು ಮಡಗಿರಬೇಕು.

ತೊಟ್ಟಿ ಮನೆಯೊಳಗೆ ಮಹೂರ್ತವಾದರೆ ತೊಟ್ಟಿಗೆ (ಮಂದಿಗೆ) ಮೂರು ಪ್ರದಕ್ಷಿಣೆ ಬರಬೇಕು. ಅಲ್ಲವಾದರೆ ಕೂರುವ ಮುಕ್ಕಾಲಿ ಮಣೆಗೆ ಪ್ರದಕ್ಷಿಣೆ ಬರಬೇಕು.

ಮುಂದಿನಲ್ಲಿ ಮುಹೂರ್ತವಾಗುವುದಾದರೆ ಮದುಮಗ ಅಥವಾ ಮದುಮಗಳನ್ನು ಐಮರವನ್ನು ಎತ್ತಿ ದಾಟಿಸಬೇಕು. ಮುಕ್ಕಾಲಿ ಮಣೆಯಲ್ಲಿ ಕೂರುವುದಕ್ಕಿಂತ ಮೊದಲು ಮುಕ್ಕಾಲಿಯ ಹಿಂದೆ ನಿಂತು ಮುಕ್ಕಾಲಿಗೆ ಮೂರು ದಪ ಅಕ್ಕಿ ಹಾಕಿ ಮುಕ್ಕಾಲಿಯನ್ನು ಮುಟ್ಟಿ ನಮಸ್ಕರಿಸಿ ಮುಕ್ಕಾಲಿಯನ್ನು ಬಲಗಾಲಿನಿಂದ ದಾಟಿ ಕೂತುಕೊಳ್ಳಬೇಕು.

ಮುಹೂರ್ತದ ಸಮಯದಲ್ಲಿ ಹುಡುಗನ ಬಲಭಾಗದಲ್ಲಿ ಬೋಜಕಾರನು ಕೂತು ಹುಡುಗಿಯ ಹಿಂದುಗಡೆ ಬೋಜಕರತಿಯು ನಿಂತು ಇರಬೇಕು.

ಒಂದೇ ಮನೆಯಲ್ಲಿ ಅದೇ ದಿನ ಒಬ್ಬ ಹುಡುಗನದು ಮತ್ತು ಹುಡುಗಿಯದು ಮದುವೆ

ಆಗುವುದಾದರೆ ಬೇರೆ ಬೇರೆ ಸಮಯದಲ್ಲಿ ಅಥವಾ ಬೇರೆ ಬೇರೆ ಸ್ಥಳಗಳಲ್ಲಿ ಮುಹೂರ್ತವನ್ನು ಮಾಡಬೇಕು. ಎರಡು ಅಥವಾ ಹೆಚ್ಚು ಹುಡುಗರದು ಅಥವಾ ಎರಡು ಅಥವಾ ಹೆಚ್ಚು ಹುಡುಗಿಯರದು ಒಂದೇ ಸ್ಥಳದಲ್ಲಿ ಒಂದೇ ಸಮಯದಲ್ಲಿ ಮುಹೂರ್ತವನ್ನು ಮಾಡಬಹುದು.

ಅಭ್ಯಾಗತರ ಸತ್ಕಾರ : ಮನೆಗೆ ಊರವರೇ ಆಗಲಿ ನೆಂಟರೇ ಆಗಲಿ ಬಂದ ಒಡನೆ "ಬಂದಿರಾ" ಎಂದು ಕೇಳಿ, ಕೊಡುವರಾದರೆ ಉಭಯಸ್ಥರ ಕಿರಿಯವರು ಹಿರಿಯರ ಕಾಲನ್ನು ಮುಟ್ಟಿ ನಮಸ್ಕರಿಸಿ ಕಾಲು ತೊಳೆಯುವುದಕ್ಕೆ ನೀರು ಕೊಟ್ಟು ಎಲೆ ತಟ್ಟೆಯನ್ನು ಮಡುಗಬೇಕು. ಅವರನ್ನು ಕರೆದುಕೊಂಡು ಹೋಗಿ ಏನಾದರೂ ತಿಂಡಿ ಕೊಡುವುದೂ ಉಂಟು.

ಕೇಟಾಮೆ : ಪೂರ್ವದಲ್ಲಿ ಅಂದರೆ ಸುಮಾರು 50 ವರ್ಷಗಳ ಹಿಂದೆ ಒಂದು ಮದುವೆಗೆ ಹೋಗುವ ನೆಂಟರಿಷ್ಟರು ಆ ಮದುವೆಗೆ ಬೇಕಾದ ಎಲ್ಲಾ ಸಾಮಾನುಗಳನ್ನು ತೆಗೆದುಕೊಂಡು ಕೊಂಬು ಕೊಟ್ಟು ವಾದ್ಯದೊಡನೆ ಹೊತುತ್ತಿದ್ದುದಕ್ಕೆ ಕೇಟಾಮೆ ಅನ್ನುತ್ತಿದ್ದರು. ಕೇಟಾಮೆ ತೆಗೆದುಕೊಂಡು ಹೋಗುವವರು ಉಪ್ಪು ಮತ್ತು ಸಾಸುವೆಯನ್ನು ತೆಗೆದುಕೊಂಡು ಹೋಗಕೂಡದು. ಕೇಟಾಮ ತಂದವರಿಗೆ ಬಾಳೆ ಬಿರುದನ್ನು ಕೊಟ್ಟು ಮರ್ಯಾದೆಯಿಂದ ಕರೆದುಕೊಂಡು ಹೋಗಿ ಮರ್ಯಾದೆಯಿಂದ ಬಿಡುತ್ತಿದ್ದರು. ಇದರ ಸಶೇಷವೇ ಪೆಟ್ಟಿಗೆ ತೆಗೆದುಕೊಂಡು ಹೋಗುವುದು.

ಬಾಳೆ ಬಿರುದು : ಬಾಳೆ ಬಿರುದೆಂದರೆ ಸುಮಾರು ಒಂದು ಗಜ ಉದ್ದದ ಬಾಳೆ ದಿಂಡುಗಳನ್ನು ಸಣ್ಣ ಸಣ್ಣ ಗೂಟಗಳಿಗೆ ಹೊಡೆದು ಮನೆಗೆ ಹತ್ತಿ ಬರುವ ದಾರಿಯ ಬದಿಯಲ್ಲಿ ನಿಲ್ಲಿಸಿ, ಅವುಗಳ ತಲೆಗಳನ್ನು ಬಾಳೆ ತಟ್ಟೆಗಳಿಂದ ಮುಚ್ಚಿ ಅವುಗಳ ಮೇಲೆ ಸಾಧಾರಣ ಬೆರಳಗಲ ಬೆರಳುದ್ದ ಮೂರು ಮೂರು ಬಾಳೆ ತಟ್ಟೆಯಿಂದ ಮಾಡಿದ ಬಾಣಗಳನ್ನು ಸಿಕ್ಕಿಸಿ ಹೂವು ಮಡಗಿರುವುದು.

ಬಾಳೆಗೆ ಅರ್ಹರಾದವರಿಗೆ ಬಾಳೆಯನ್ನು ತಪ್ಪದೆ ಕೊಡಬೇಕು. ಯಾವನೊಬ್ಬನೂ ಬಾಳೆ ಬಿರುದಿಗೋಸ್ಕರ ಕಾದಿರಲಾರದವನಾದುದರಿಂದ ತಕ್ಕಂಥ ಮನುಷ್ಯನು ಬಂದರೆ ತಕ್ಷಣವೇ ತಿಳಿಸುವಂತೆ ಬಾಳೆ ಬಿರುದಿನ ಹತ್ತಿರ ಒಬ್ಬನನ್ನು ನಿಲ್ಲಿಸಿರುವರು. ತಕ್ಕಂಥ ಮನುಷ್ಯನು ಬಂಡ ಒಡನೆ, ವಾದ್ಯದುಡಿ ಸಮೇತ ಊರವರು ಕೆಲವರು ಮನೆಯವನೊಬ್ಬನು ಮತ್ತು ಅರುವನು ಅಲ್ಲಿಗೆ ಒಂದು ಚಾಪೆ, ಒಂದು ಚೆಂಬು ನೀರು, ವೀಳ್ಯದೆಲೆ, ಅಡಿಕೆ ಸಹ ತೆಗೆದುಕೊಂಡು ಹೋಗಬೇಕು. ಬಾಳೆಯ ಬಿರುದಿನ ಹತ್ತಿರ ತಲುಪಿದ ಮೇಲೆ ಹಾಡನ್ನು ನಿಲ್ಲಿಸಿ, ನೆಂಟರಿಗೆ ನೀರು ಕೊಟ್ಟು, ಚಾಪೆಯನ್ನು ಹಾಸಿ, ಅದರಲ್ಲಿ ಕೂತುಕೊಳ್ಳಬಹುದಾಗಿ ಹೇಳಬೇಕು. ಆಮೇಲೆ ಅರುವನು ಮೂರು ಅಥವಾ ಐದು ವೀಳ್ಯದೆಲೆಗಳನ್ನು ತೆಗೆದುಕೊಂಡು ಅದರ ಮೇಲೆ ಅಷ್ಟೇ ಅಡಿಕೆಗಳನ್ನಿಟ್ಟು ಬಾಳೆಯ ಪಶ್ಚಿಮದಲ್ಲಿ ನಿಂತು ಪೂರ್ವದಲ್ಲಿ ನಿಂತಿರುವ ನೆಂಟರಿಗೆ ಕೊಡಬೇಕು. ನೆಂಟರು ಅದನ್ನು ತೆಗೆದುಕೊಂಡು ಅದರ ಮೇಲೆ ಎರಡು ಹಣವನ್ನು ಹಾಕಿ ಹಿಂತಿರುಗಿ ಕೊಡಬೇಕು. ಅದನ್ನು ಹೊಂದಿಕೊಂಡು ನೆಂಟರಿಗೆ ಕೊಡಬೇಕು. ನೆಂಟರು ಅದನ್ನು ತೆಗೆದುಕೊಂಡು ಅದರ ಮೇಲೆ ಎರಡು ಹಣವನ್ನು ಹಾಕಿ ಹಿಂತಿರುಗಿ

---

* **ಮುಹೂರ್ತಕ್ಕೆ ಮೊದಲು ಬಾಳೆಗಳನ್ನು ಕೊಡಬಾರದೆಂದು ಕೆಲವರು ತಿಳಿದುಕೊಂಡಿರುವರು. "ಕೇಟಾಮೆ" ತಂಡದವರಿಗೆ ಬಾಳೆಗಳನ್ನು ಕೊಡದೆ ಮನೆಗೆ ಕರೆದುಕೊಂಡು ಹೋಗಕೂಡದು. ಈಗಲೂ ಸಹ ನಡೆದು ಬರುವ "ಪೆಟ್ಟಿಗೆ" ತಂದವರಿಗೂ ಸೋದರ ಮಾವನಿಗೂ ಬಾಳೆಯನ್ನು ತಪ್ಪದೆ ಕೊಡಬೇಕು. ಮುಹೂರ್ತಕ್ಕೆ ಮೊದಲು ಬಾಳೆಯನ್ನು ಕೊಡುವುದರಿಂದ ಇತರ ಕೆಲಸಗಳಿಗೆ ಅಡಚಣೆಯಾಗುತ್ತದೆಂದು ಹಿಂತಿರುಗಿ ನೆಂಟರು ಹೋಗುವಾಗ ಬಾಳೆ ಕೊಟ್ಟು ಸುಧಾರಿಸುವುದುಂಟು.**

ಕೊಡಬೇಕು. ಅದನ್ನು ಹೊಂದಿಕೊಂಡು ನೆಂಟರಿಗೆ ಮೂರು ಬಾಳೆಗಳನ್ನು ತೋರಿಸಿ ಅವರಿಗೆ ಒಂದು ಒಡಿ ಕತ್ತಿಯನ್ನು ಕೊಡಬೇಕು.*

ಅರಪುವ ತರ–ದೇವಳ ಕಾಕುವ : ನೆಂಟರು, ಜೊತೆಗೆ ತಮ್ಮ ಊರಿನ ಜನರಿದ್ದರೆ ತಮ್ಮ ಊರಿನಲ್ಲಿರುವ ಪದ್ಧತಿ ಮೇರೆ ದೇವರನ್ನು ಪ್ರಾರ್ಥಿಬೇಕು. ಒಬ್ಬನೇ ಆದರೆ ಮದುವೆ ಮನೆಯ ಊರವರಂತೆ ದೇವರನ್ನು ಪ್ರಾರ್ಥಿಸ ಬಹುದೆಂದು ಹೇಳುವರು ಆಗ ಮದುವೆ ಮನೆಯವರು ತಮ್ಮ ಊರ ಪದ್ಧತಿ ಮೇರೆ ದೇವರನ್ನು ಪ್ರಾರ್ಥಿಸಬೇಕು.

ದೇವರನ್ನು ಪ್ರಾರ್ಥಿಸುವಾಗ ತಲೆಗಳಲ್ಲಿರುವ ರುಮಾಲು ಮತ್ತು ವಸ್ತ್ರವನ್ನು ತೆಗೆದುಬಿಡಬೇಕು.

ಇಷ್ಟವಿದ್ದರೆ ನೆಂಟರು ತಾವೇ ಬಾಳೆಯನ್ನು ಕಡಿಯುವರು. ಇಲ್ಲವಾದರೆ ತಮಗೆ ಇಷ್ಟ ಬಂದವನಿಗೆ ಕತ್ತಿಯನ್ನು ಕೊಡುವರು. ಬಾಳೆಗಳನ್ನು ಕಡಿಯುವವನು ಬಾಳೆಗಳಿಗೆ ಪ್ರದಕ್ಷಿಣೆ ಬರಬೇಕು. ಪ್ರದಕ್ಷಿಣೆ ಬರುವಾಗ ಬಾಳೆಗಳ ತಲೆಗಳಲ್ಲಿರುವ ಅಂಬುಗಳನ್ನೂ ಹೂವುಗಳನ್ನೂ ಕತ್ತಿಯಿಂದ ಹಾರಿಸಬೇಕು. ಆದರೆ ಅವುಗಳು ಬೀಳಲೇಬೇಕೆಂದಿಲ್ಲ.

ಬಾಳೆ ಕಡಿದು ನೆಂಟರನ್ನು ಮನೆಗೆ ಕರೆದುಕೊಂಡು ಹೋಗುವಾಗ ಬಟ್ಟೆ ಪಾಟನ್ನು ಹಾಡುತ್ತಾ ಹೋಗಬೇಕು. ವಾದ್ಯವಾಗುತ್ತಾ ಇರಬೇಕು. ಅಂಗಳಕ್ಕೆ ನೆಂಟರು ತಲುಪಿದ ಒಡನೆ, ನೆಂಟರು ಬರುವ ದಾರಿಗೆ ಅಗಸನು ಬಿಳಿ ಬಟ್ಟೆಯನ್ನು ಹಾಸುತ್ತಾ ಕೈಯ್ಯಾಲೆಗೆ ಹೋಗಬೇಕು. ಬಿಳಿ ಬಟ್ಟೆಯನ್ನು ಮೆಟ್ಟಿದ ಮೇಲೆ ಒಬ್ಬ ಕನ್ಯೆಯು ಬಂದು ನೆಂಟರ ಕಾಲನ್ನು ತೊಳೆಯಬೇಕು. ಆಗ ನೆಂಟರು ಅವಳ ಕೈಯಲ್ಲಿರುವ ಚೆಂಬಿಗೆ ಒಂದು ಹಣ ಹಾಕಬೇಕು. ಅಗಸನಿಗೆ ಒಂದು ಹಣ ಕೊಡಬೇಕು. ಮೆಟ್ಲು ಹತ್ತುವಲ್ಲಿ ಎರಡು ಕಡೆಗಳಲ್ಲಿಯೂ ತಳಿಯಕ್ಕಿ ಬೊಳಕು ಹಿಡಿದಿರಬೇಕು. ಅವುಗಳಿಗೆ ಒಂದೊಂದು ಹಣ ಹಾಕಬೇಕು.

ಮೂರು ಬಾಳೆಗೆ ಸಿಕ್ಕಿದ ಎರಡು ಹಣವನ್ನು ಅರುವನು ಮನೆಯ ಯಜಮಾನನಿಗೆ ಕೊಡಬೇಕು. ಹಾಗೆ ಸಿಕ್ಕಿದ ಹಣದ ತಥಾರ್ಧವನ್ನು ಯಜಮಾನನು ಆ ಊರಿನ ದೇವರ ಭಂಡಾರಕ್ಕೆ ಹಾಕಬೇಕು.

ಕೊಡಗರಲ್ಲದವರಿಗೂ ಹೆಂಗಸರಿಗೂ ಬಾಳೆ ಬಿರುದು ಕೊಡಕೂಡದು.

ಮುಹೂರ್ತ : ಮಣೆಯ ಮೇಲೆ ಕೂತುಕೊಂಡ ಒಡನೆ, ಹುಡುಗಿಯ ಅಥವಾ ಹುಡುಗನ ಮಡಲಿಗೆ ಒಂದು ಕೆಂಪು ವಸ್ತ್ರವನ್ನು ಹಾಸಬೇಕು. ಹುಡುಗನ ಒಡಿಕತ್ತಿಯನ್ನು ತೆಗೆದುಬಿಡಬೇಕು.

ಹಣ ಕೊಡುವುದು : ಹೆಂಗಸರು ಮೊದಲು ಹಣ ಕೊಡಬೇಕು. ಹೆಂಗಸರಲ್ಲಿ ಮೊದಲು ಹಣ ಕೊಡುವ ಮೂವರೂ ಮುತ್ತೈದೆಯರು ಅಥವಾ ಕನ್ಯೆಯರು ಆಗಿರಬೇಕು. ಮೊದಲು ಹಣ ಕೊಡುವವರು "ಪೊಂಬಣ"ವನ್ನೇ ಕೊಡಬೇಕು. ಅವರವರ ಯಥಾನುಶಕ್ತಿಯಾಗಿ ಮೂವರು ಅಥವಾ ಐವರು ಚಿನ್ನವನ್ನು ಕೊಡುವುದುಂಟು.

ಹಣ ಕೊಡುವ ವಿಧಾನ ಹೇಗೆಂದರೆ : ಎರಡು ಕಡೆಗಳಲ್ಲಿಯೂ ಮಡಗಿರುವ ಗಂಗಳಗಳಿಂದ ಸ್ವಲ್ಪ ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡು ಹುಡುಗನ ಅಥವಾ ಹುಡುಗಿಯ ತಲೆಯ ಮೇಲೆ ಎರಡು ಕೈಗಳನ್ನು ಜೋಡಿಸಿ ಸ್ವಲ್ಪ ಸ್ವಲ್ಪವಾಗಿ ಮೂರು ದಪ ಅಕ್ಕಿ ಹಾಕಬೇಕು. ಸದ್ಯಕ್ಕೆ ಎಡದ ಕೈಯನ್ನು ಬಲದ ಕೈಯ ಹತ್ತಿರವಾದರೂ ಇಟ್ಟುಕೊಳ್ಳವರು. ಕೆಲವು ಹತ್ತಿರದ ನೆಂಟರು ಮತ್ತು

* ಹುಡುಗನು ಅಥವಾ ಹುಡುಗಿಯು ಆ ಹಾಲನ್ನು ಕುಡಿಯಲೇಬೇಕೆಂದಿಲ್ಲ. ಗಿಂಡಿಯನ್ನು ಬಾಯಿಗೆ ಇಟ್ಟು ಮೆತ್ತಗೆ ನೂಕಿಬಿಡಬಹುದು.

ವಯಸ್ಸು ಪಟ್ಟವರು ಮೊದಲು ಮದುವಣಿಗನ ಮೊಣಕಾಲುಗಳನ್ನು ಮುಟ್ಟಿ, ಅಲ್ಲಿ ಸ್ವಲ್ಪ ಅಕ್ಕಿ ಬಿಟ್ಟು, ಹೆಗಲನ್ನು ಮುಟ್ಟಿ ಅಲ್ಲಿ ಸ್ವಲ್ಪ ಅಕ್ಕಿ ಬಿಟ್ಟು, ತಲೆಗೆ ಅಕ್ಕಿ ಹಾಕುವರು. ಈ ಪ್ರಕಾರ ಮೂರು ದಪ ಮಾಡುವರು. ಆಮೇಲೆ ಗಿಂಡಿಯಲ್ಲಿರುವ ಹಾಲನ್ನು ಸ್ವಲ್ಪ ಕುಡಿಸಬೇಕು* ಮತ್ತು ಹಣ ಕೊಡಬೇಕು. ಮೂರಾಣೆಗಿಂತ ಕಡಿಮೆ ಕೊಡಬಾರದು.

ಬಟ್ಟೆ ಇನಾಂ ಕೊಟ್ಟರೆ ಅದರ ಜೊತೆಯಲ್ಲಿ ಒಂದು ಹಣವನ್ನಾದರೂ ಕೊಡುವರು. ಒಡವೆ ಕೊಟ್ಟರೆ ಅದರ ಜೊತೆಯಲ್ಲಿ ಹಣ ಕೊಡುವುದಿಲ್ಲ.

ಹುಡುಗನು ಅಥವಾ ಹುಡುಗಿಯು ತನಗೆ ಸಿಕ್ಕಿದ ಹಣವನ್ನು ತನ್ನ ಮಡಲಲ್ಲಿ ಮಡಗಿಕೊಳ್ಳುವುದಿಲ್ಲವಾದರೆ ಹತ್ತಿರ ಮಡಗಿರುವ ಇನ್ನೊಂದು ತಟ್ಟೆಗೆ ಚುರುಕಾಗಿ ಹಾಕಿ ತನಗೆ ಹಿರಿಯವರಾದ ಕೊಡವರ ಮತ್ತು ಕೊಡಗತಿಯರ ಕಾಲನ್ನು ಮೂರು ದಪ ಮುಟ್ಟಿ ನಮಸ್ಕರಿಸಬೇಕು. ತನಗಿಂತ ಕಿರಿಯರು ತನ್ನ ಕಾಲು ಹಿಡಿದರೆ "ಆರ" (ಆಶೀರ್ವಾದ) ಮಾಡಬೇಕಿಲ್ಲ.

ತನ್ನ ತಾಯಿಯು ಕೊಟ್ಟ ಹಣವನ್ನು ಮದುವಣಿಗನು "ಅಳ್ಳ ಮಡಲಲ್ಲಿ" ಇಟ್ಟುಕೊಳ್ಳಬೇಕು. ತನ್ನ ಮಡಲಲ್ಲಾಗಲೀ, ತಟ್ಟೆಯಲ್ಲಾಗಲೀ ಇಟ್ಟುಕೊಳ್ಳಕೂಡದು. ಹುಡುಗಿಯಾದರೆ ತಾಯಿಯೇ "ಮೊಲೆಕಟ್ಟಿ"ನಲ್ಲಿ ಕಟ್ಟುವಳು. ಒಂದು ವೇಳೆ ಕೈಗೆ ಕೊಟ್ಟರೆ ತನ್ನ "ಅರೆಕಟ್ಟಿ"ನಲ್ಲಿ ಇಟ್ಟುಕೊಳ್ಳಬೇಕು. ಇದು ಚೀಲಪಣವಾಗಿಯೇ ಇರಬೇಕು.

ಮುಹೂರ್ತದ ಸಮಯದಲ್ಲಿ ತಪ್ಪದೆ ವಾದ್ಯವಿರಬೇಕು. ಗಂಡಸರು ದುಡಿ ಹೊಡೆದುಕೊಂಡೂ, ಹೆಂಗಸರು ತಾಳ ಹೊಡೆದುಕೊಂಡೂ ಹಾಡುತ್ತಿರಬೇಕು.

ಹುಡುಗನು ಅಥವಾ ಹುಡುಗಿಯು ಬಚ್ಚಲು ಮನೆಯಿಂದ ಬರುತ್ತಿರುವಾಗ ಹಾಡುವವರು ಮುಂದೆ ಹಾಡುತ್ತಾ ಬರುತ್ತಿದ್ದು ಮುಹೂರ್ತಕ್ಕೆ ಕೂತ ಒಡನೆ ಬಟ್ಟೆ ಪಾಟನ್ನು ನಿಲ್ಲಿಸಿ ಮದುವೆ ಹಾಡನ್ನು ಗಂಡಸರು ಕೂತುಕೊಂಡು ಹಾಡಬೇಕು. ಹೆಂಗಸರು ನಿಂತುಕೊಂಡು ಹಾಡಬೇಕು.

* ಮದುವೆ ಹಾಡನ್ನು ಸುರುವಿನಿಂದಲೇ (63ನೇ ಪುಟ ನೋಡಿ) ಹಾಡಿ ಈ ರೀತಿ ಮುಂದುವರಿಸಬೇಕು.

ಬಾಳೊ ಕೇಳೊ ಸಂಜಾದಿ
ಸಂಜಾದಿ ಮನವೇಂಗಿ
ಇಂದಿಯ ದಿನತ್‌ಲ್
ಅೈಯ್ಯಣ್ಣ ಬಯಿಂಬನ
ಮಣ್ಣರುವ ಬಾಲನ್
ಕೈಪುಡಿಚಿ ಕೊಂಡಿತ್
ಕನ್ನಿ ಮೂಲೆ ಕೋಂಬರೆ
ಅಲ್ಲಿ ಪೋಯಿ ನಿಂದಿತ್
ಪೊಂಬೊಳಕ್ ಬೆಚ್ಚಾಂಗ್
ಸಣ್ಣಕ್ಕಿ ಕನಿಚಿತ್

ಕೈ ಮಲಂಗಿ ತೊತ್ತಿತ್
ಅಲ್ಲಿಂಜಿ ಪೊರಟಿತ್
ಕನ್ನಿ ಮೂಲೆ ಕಂಬ್‌ಕ್
ಸಣ್ಣಕ್ಕಿ ಕನಿಚಿತ್
ಕಾತೊಟ್ಟ್ ತಲೆ ಬೆಚ್ಚಿ
ಅಲ್ಲಿಂಜಿ ಪೊರಟಿತ್
ನೆಲ್ಲಕ್ಕಿ ನಡು ಬಾಡೆ
ಅಲ್ಲಿ ಬಂದ್ ನಿಂದಿತ್
ಕಾರಣೋರ ತೊತ್ತಿತ್
ಪೊಂಬೊಳಕ್ ನಲ್ಲಾಂಗ್

*** ಈ ಹಾಡನ್ನು ಹುಡುಗನ ಮುಹೂರ್ತಕ್ಕೆ ಹಾಡುವರು. ಇದನ್ನೇ ಅವಶ್ಯವಿರುವಲ್ಲಿ ಮಾರ್ಪಡಿಸಿ ಹುಡುಗಿಯ ಮುಹೂರ್ತಕ್ಕೆ ಹಾಡುವರು.**

*** ಚೂರಿಯಕತ್ತಿ = ಒಡಿಕತ್ತಿ. ಚಳಕತ್ತಿ = ಪೀಚೆ ಕತ್ತಿ**

ಸಣ್ಣಕ್ಕಿ ಕನಿಚಿತ್
ತನ್ನ ಪೆತ್ತ ಅವ್ವಂಡ
ಕಾತೊಟ್ಪ್ ತಲೆ ಬೆಚ್ಚಿ
ಅಲ್ಲಿಂಜಿ ಪೊರಟಿತ್
ಕೊಂಬಂಜೌರ ಮಾಡ್‌ನ.
ಅಕ್ಕಣೆಕ್ ಸಂಜಾದಿ
ಮಣ್ಣರುವ ಪೊಂಗಳೊ
ಕೆತ್ತ್ ಕಲ್ಲ್ ಗುಡ್ಡತ್
ಕುಟ್ಟುವತ್ ನೀಕಾಚಿ
ಪಾತ್‌ರ ತಳುವಾಯಿ
ಅಚ್ಚು ತಾಳಿ ನಲ್ಲಾನ
ಎಲ್ಲಾ ಜೋಡು ಕೂಟಿಂಜ.
ಅಕ್ಕಣೆಕ್ ಅೈಯ್ಯಣ್ಣ
ಅೈಯ್ಯಣ್ಣಂಡ ಸಂಜಾದಿ
ಅಲ್ಲಿ ಬಂದಿತೆತ್ತ್‌ನ.
ಈನಂಗುಂಡ್ ಪೋರಾಂದ್
ಮೂವರುಳ್ಳ ಪೊಂಗಳೊ
ಅೈಯ್ಯಣ್ಣ ಬಯಿಂಬನ
ಪೊಂಗುಳಿ ಕುಳಿಪಿಚಿ
ಮಾಜುತ್ತಿ ಮಡಿ ಪಾಂದ.
ಈನಂಗುಂಡ್ ಪೋರಾಂದ್
ಬೋಜಕಾರ ಬಾಲನೊ
ಅೈಯ್ಯಣ್ಣ ಬಯಿಂಬಂಗ್
ನೇರಪೋಲೆ ಕುಪ್ಪಾಯ
ನೆತ್ತ ಪೋಲೆ ತೊಪ್ಪಾಯ
ಪಾನಿ ಮಂಡೆ ಕೆಟ್ಪಾಯಿ
ಬಳ್ಳಿಯ ನಡುವುಕ್
ಕನ್ನಡಿ ತೊಡಂಗ್‌ನ
ಪಾಂಗೋಡೆ ಕೊಳತಿತ್
ಚೂರಿಯ ಚಳ ಕತ್ತಿ *
ಶೀಲರಿಂಜಿ ಕೆಟ್ಟಿತ್
ಕಟ್ಟಿ ಬಳೆ ನಲ್ಲಾನ
ಪಾಂಗರಿಂಜಿತ್‌ಟ್ಟಿತ್
ಕೋಯ ಬೆರೆ ನಲ್ಲಾಂಗ್
ವಜ್ಜ್‌ರ ತ್‌ಡಿ ಬೆಚ್ಚ
ಪೊಮ್ಮೋದಿರಲ್‌ಟ್ಟಿತ್

ಕೋಳಿ ಕೊರ ನಲ್ಲಾಂಗ್
ಏಳ್ ತೊರೆ ಪೊಮ್ಮಾಲೆ
ಬೋಜತ್ತೋಡೆ ಚೂಡಿತ್
ಬೋಜಂಗೊಂಡಣಿಂಜಿತ್
ಗೆಜ್ಜೆ ತಂಡ್ ಕೈಲಾಯಿ
ಮಿಞ್ಞಬಯ್ಯ ಆಳಾಯಿ
ಸಿದ್ಧಿರಾಮ ಕೊಟ್ಪಾಯಿ
ರಾಮದೇವ ಪಾಟಾಯಿ
ನಾಗಸರ ಕೊಂಬಾಯಿ
ಕೊಂಬಾಯಿ ಕೊಳಲಾಯಿ
ಮಂಗ್‌ಲಾಡಿ ಪೋಯಿತ್
ಕಾರಣೋರ ತೊತ್ತಿತ್
ತನ್ನ ಪೆತ್ತ ಅವ್ವಂಡ
ಕಾತೊಟ್ಪ್ ತಲೆ ಬೆಚ್ಚ.
ಅಕ್ಕಣೆಕ್ ಸಂಜಾದಿ
ಮೂರ್‌ತ ಸ್ಥಳವ್‌ಲ್
ಕಿನ್ನೋಲೆ ಪಲಂಬ್‌ಟ್ಟ್
ಅದ್‌ಗೊಂದ್ ಮೀದಲ್
ಕೆಂಬಟ್ಪ್ ಬಿರಿಚತ್.
ಅಕ್ಕಣೆಕ್ ಅೈಯ್ಯಣ್ಣ
ದೇವರ ನೆನತಿತ್
ಮುಕ್ಕಾಲಿಕ್ ಅಕ್ಕಿಟ್ಪ್
ಮೂರ್‌ತಕೆಳತತ್.
ಒಪ್ಪಾರತೆಳಕಣೆ
ಭೂಮಿದೇವಿ ನಂಜಪ್ಪ
ಸುಬ್ಬರಾಯ ದೇವಂಡ
ಪೀಲಿಯಂಡ ಮೈಲ್ ಪೋಲೆ
ಆಡಿಲಾಡಿ ಬಂದಿತ್
ಕುಞ್ಞಿ ಮಿಞ್ಞ ನಿಂದಿತ್
ದೇವರ ನೆನತಿತ್
"ಮಮ್ಮರಿಂಜ ಕಾರೋಣ
ಕಾರೋಣಂಡ ಸೇಸೆಲ್
ಪೊಮ್ಮುತ್ ಸರಪೋಲೆ
ಆಣ್ ಪೊಣ್ಣೆಡೆಮೇಂಗ
ಪತ್ತ್ ಮಕ್ಕಳಾಯಿತ್
ಪನ್ನಂದಾನ ಚಾಕಿತ್

ದೇವನು ದೇವಿಯಾಯಿ
ತಣ್ಣನೆ ಪೊಲಂದಂಡ್
ನೂರ್ ಕಾಲ ಬಾಳಂಡು"
ಎಂದಣ್ಣಿ ನೆನತಿತ್
ಮಂಡೆಕಕ್ಕಿ ತಾತಿತ್
ಕ್ಂಡಿ ಪಾ ಕೊಡ್‌ತಿತ್
ಪೊಂಬಣ ಮಡ್‌ಕ್‌ಟ್ಟ್
ಅಕ್ಕಣೆಕ್ ಸಂಜಾದಿ
ಬುದ್ಧಿ ನಲ್ಲ ಅೈಯ್ಯಣ್ಣ
ತನ್ನ ಪೆತ್ತ ಅವ್ವಂಡ
ಕಾತೊಟ್ಪ್ ತಲೆ ಬೆಚ್ಚ್.
ಈನಂಗುಂಡ್ ಪೋರಾಂದ್

ಮಿಞ್ಞ ಬಯ್ಯಡಾಯಿತ್
ಕೂಡ್‌ನ ಜನವೆಲ್ಲ
ಅೈಯ್ಯಣ್ಣ ಬಯಿಂಬಂಡ
ಮಂಡೆಕಕ್ಕಿ ತಾತಿತ್
ಕ್ಂಡಿ ಪಾ ಕೊಡ್‌ತಿತ್
ಓರಂಧೀರಂಡೆಣ್ಣಣೆ
ಮೂರ್‌ತ ಕಯಿಂಜತ್
ಎಂದೆಣ್ಣಿತ್ ಪಾಡುವ;
ಈ ಪಾಡುವ ಬೆಕ್ಕನ.
ಬೆಪ್ಪಕೊಮ್ಮೆಡ್‌ಪಕ್ಕ.
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ!

ಮುಹೂರ್ತಕ್ಕೆ ಕೂತಲ್ಲಿಂದ ಬೋಜಕಾರನು ಹುಡುಗನನ್ನು ಕೈಕೊಟ್ಟು ಎಬ್ಬಿಸಬೇಕು.

ಹುಡುಗಿಯನ್ನು ಏಳುವುದಕ್ಕೆ ಸಂಜ್ಞೆ ಮಾಡುವೋಪಾದಿಯಲ್ಲಿ ಅವಳ ಹಿಂದುಗಡೆಯಿಂದ ಬೋಜಕರತಿಯು ಅವಳನ್ನು ಮುಟ್ಟಲು ಅವಳು ಏಳಬೇಕು.

ಮುಹೂರ್ತಕ್ಕೆ ಕೂತಲ್ಲಿಂದ ಎದ್ದ ಮೇಲೆ ಹುಡುಗನನ್ನು ಅಥವಾ ಹುಡುಗಿಯನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಕೂರಿಸಬೇಕು. ಕೋಣೆಯಲ್ಲಿ ಮುಕ್ಕಾಲಿ ಮಣೆಯ ಮೇಲೆ ಒಂದು ತಳಿಯಕ್ಕಿ ಬೊಳಿಚ ಒಂದು ಗಿಂಡಿ ಹಾಲು ಸಹ ಇಟ್ಟಿರಬೇಕು.

ತಡವಾಗಿ ಬಂದ ನೆಂಟರು ಮುಹೂರ್ತದಲ್ಲಿ ಕೊಡುವಂತೆಯೇ ಹಣ ಕೋಣೆಯಲ್ಲಿ ಕೊಡಬೇಕು. ಆದರೆ ತೆಗೆದುಕೊಳ್ಳುವಾಗ ಎದ್ದುನಿಂತು ತೆಗೆದುಕೊಳ್ಳಬೇಕು.

ಪೂಜಾರಿಗಳಾದ ಬ್ರಾಹ್ಮಣರು ತೀರ್ಥಪ್ರಸಾದವನ್ನು ತಂದರೆ ಮುಹೂರ್ತ ಕಳೆದ ಮೇಲೆ ಅದನ್ನು ಕೊಡಬೇಕು. ಪ್ರಸಾದವನ್ನು ತೆಗೆದುಕೊಂಡು ದಕ್ಷಿಣೆ ಕೊಟ್ಟು ಸತ್ಕರಿಸಿ ಕಳುಹಿಸುವರು.

ಕೂರ್‌ಂಗೋದಿ ಮುರಿಪ : ಹುಡುಗಿಯ ಮುಹೂರ್ತವಾದ ಒಡನೆ ಅವಳ ಅಣ್ಣನ ಅಥವಾ ತಮ್ಮನ ಹೆಂಡತಿ ಬಂದು, ಹುಡುಗಿಯ ತಲೆಯಿಂದ ಒಂದೆರಡು ಕೂದಲನ್ನು ತೆಗೆದು ಕೈಕಾಲುಗಳ ಒಂದೆರಡು ಉಗುರು ತೆಗೆದು ಸ್ವಲ್ಪ ಹಾಲು ಹುಯಿದಿರುವ ಗಂಗಳಕ್ಕೆ ಹಾಕಿಕೊಂಡು ಅವುಗಳನ್ನು ತೆಗೆದುಕೊಂಡು ಹೋಗಿ ಒಂದು ಹಾಲು ಬರುವ ಮರದ ಕೆಳಗೆ ಹಾಕುವುದುಂಟು.

ಈ ಪದ್ಧತಿಯು ಕೆಲವು ಕಡೆಯಲ್ಲಿ ಮಾತ್ರವಿದೆ.

ಊಟ ಉಪಚಾರ : ಮುಹೂರ್ತ ಕಳೆದ ಒಡನೆ ನೆಂಟರು ಮತ್ತು ಪರ ಊರವರು ಊಟ ಮಾಬೇಕು. ಮನೆಯ ಯಜಮಾನರು ಅಥವಾ ಅವನ ಪ್ರತಿನಿಧಿ ಆ ಸಭೆಯಲ್ಲಿ ಕೂರಬೇಕು. ಊರವರೂ ಆ ಮನೆತನದ ಮಿಕ್ಕವರೂ ಆ ಸಭೆಯವರನ್ನು ಉಪಚರಿಸಿ ಅವರು ಎದ್ದ ಮೇಲೆ ಊಟ ಮಾಡಬೇಕು.

*** ಊರವರು ನೆಂಟರ ಸಭೆಯಲ್ಲಿ ಊಟ ಮಾಡದಿರುವ ಪದ್ಧತಿಯು ಅನೇಕ ಕಡೆಗಳಲ್ಲಿ ಈಗ ನಿಂತುಹೋಗಿದೆ. ಅಂಥ ಪದ್ಧತಿ ಇರುವಲ್ಲಿ ಮನೆಯವರು ಮತ್ತು ಊರವರು ರುಮಾಲು ಧರಿಸುವುದಿಲ್ಲ. ಪೀಚೆಕತ್ತಿ ಧರಿಸುವುದಿಲ್ಲ.**

ಊಟಕ್ಕೆ ಕೂತಲ್ಲಿ ಎಲ್ಲವೂ ಬಡಿಸಿ ಆದ ಮೇಲೆ 'ಉಂಗನ?' ಎಂದು ಕೇಳಿ ಎಲ್ಲರೂ ಒಪ್ಪಿದರೇನೇ ಊಟಕ್ಕೆ ಶುರುಮಾಡಬೇಕು. ಅಲ್ಲದೆ ಊಟ ತೀರಿದ ಮೇಲೆ "ಕೈ ಬಾಯಿ ಒತ್ತತ? ಏವನ?" ಎಂದು ಕೇಳಿ ಎಲ್ಲರೂ ಸಮ್ಮತಿಸಿದರೆ ಏಳಬೇಕು.

ಇದೇ ಮೇರೆ ಎಲ್ಲಾ ಸಭೆಗಳಲ್ಲಿಯೂ ಕೇಳಬೇಕು.*

ಮದುವಣಿಗನ ಮದುಮಗಳ ಊಟ : ಮದುಮಗನು ಅಥವಾ ಮದುಮಗಳು ಅವರನ್ನು ಕುಳ್ಳಿರಿಸಿದ ಕೋಣೆಯಲ್ಲೇ ಅವರವರ ಮನೆಯಲ್ಲಿ ಜೊತೆಯಲ್ಲಿ ಇನ್ನು ಇಬ್ಬರು ಅಥವಾ ನಾಲ್ವರು ಒಟ್ಟಿಗೆ ಕೂತುಕೊಂಡು ಒಂದೇ ಬಟ್ಟಲಿಂದ ಊಟ ಮಾಡಬೇಕು.

ನೆಂಟರನ್ನು ಬಿಡುವುದು : ತಕ್ಕಂಥ ನೆಂಟರು ಹಿಂತಿರುಗಿ ಮದುವೆ ಮನೆಯಿಂದ ಹೋಗುವಾಗ ಪುನಹ ದುಡಿಕೊಂಬುಕೊಟ್ಟು ವಾದ್ಯದೊಡನೆ ಬಾಳೆ ಬಿರುದುವರೆಗೆ ಬಿಟ್ಟು ಬರಬೇಕು. ಆಗ ನೆಂಟರು, ಕೊಂಬಿನವರಿಗೆ ಒಂದು ಹಣ, ಓಲಗದವರಿಗೆ ಒಂದು ಹಣ ಮತ್ತು ಮೇದನಿಗೆ ಒಂದು ಹಣ ಸಹ ಕೊಡಬೇಕು. ನೆಂಟರಿಗೆ ವೀಳ್ಯವನ್ನು (ಸಾಧಾರಣ ಒಂದು ಕೌಳಿಯಷ್ಟು ವೀಳ್ಯದೆಲೆ ಅದಕ್ಕೆ ತಕ್ಕಷ್ಟು ಅಡಿಕೆ) ಕೊಟ್ಟು ಕಳುಹಿಸಬೇಕು. ಹತ್ತಿರದ ನೆಂಟರಿಗೆ ಮಾಂಸವನ್ನೂ ಕೊಡುವುದುಂಟು.

ಪೋಳಿಯ : ಊಟ ಉಪಚಾರವಾದ ಮೇಲೆ ಪೋಳಿಯವನ್ನು ಅರುವನ ಮನೆಯ ಹೆಣ್ಣು ತುಂಬಿಸಬೇಕು. ಅದರಲ್ಲಿ ಮೂರು ಅಥವಾ ಐದು ಸೇರು ಅಕ್ಕಿ, ಸೇರಿಗೊಂದು ತೆಂಗಿನಕಾಯಿ, ಒಂದೊಂದು ಅಚ್ಚು ಬೆಲ್ಲ, ಒಂದೊಂದು ಕವುಳಿ ವೀಳ್ಯದೆಲೆ ಒಂದೊಂದು ಮಾನ ಹುಡಿ ಮಾಡದ ಅಡಿಕೆ, ಒಂದು ಗಿಂಡಿ ಹಾಲು ಸಹ ಇರಬೇಕು.

ಮದುವೆಯು ಹೊರಡುವಾಗ ಪೋಳಿಯವನ್ನು ಅರುವನ ಮನೆ ಹೆಣ್ಣು ಹೊರುವ ಹೆಂಗಸಿಗೆ ಎತ್ತಿಕೊಡಬೇಕು.

ಪೋಳಿಯದಲ್ಲಿರುವ ಎಲೆ ಅಡಿಕೆಯಲ್ಲದೆ ದಾರಿ ಕರ್ಚಿಗೆ 'ಉರುಪೆ'ಯಲ್ಲಿ ಸ್ವಲ್ಪ ಎಲೆ ಅಡಿಕೆ ತೆಗೆದುಕೊಳ್ಳಬೇಕು.

ಮದುವೆಯು ಹೊರಡುವುದು : ಗಂಡಿನ ಮುಹೂರ್ತವು ಗಂಡಿನ ಮನೆ ಯಲ್ಲಿಯೂ ಹೆಣ್ಣಿನ ಮುಹೂರ್ತವು ಹೆಣ್ಣಿನ ಮನೆಯಲ್ಲಿಯೂ ಆಗುವುದ ರಿಂದ ಮದುವೆ ಮೆರವಣಿಗೆಯು ಮಧ್ಯಾಹ್ನ ಊಟ ಮುಗಿದ ಮೇಲೆ ಗಂಡಿನ ಮನೆಯಿಂದ ಹೆಣ್ಣಿನ ಮನೆಗೆ ಹೊರಡುವುದು.* ಮದುವೆಯು ಹೊರಡುವಾಗ ಊರಿನ ಪ್ರತಿ ಕುಳದಿಂದಲೂ ಒಬ್ಬ ಗಂಡಸು ಒಬ್ಬ ಹೆಂಗಸು ಮೆರವಣಿಗೆಯ ಜೊತೆಯಲ್ಲಿ ಹೊರಡಬೇಕು. ಹೆಣ್ಣಿನ ಮನೆಯಿಂದ ಹೆಣ್ಣಿಗೆ ಕೊಡುವಂಥ ಸಾಮಾನುಗಳನ್ನು ಹೊತ್ತುಕೊಂಡು ಬರಲಿಕ್ಕೆ ಗಂಡಿನ ಮನೆಯಿಂದ ಆಳುಗಳನ್ನು ಕರೆದುಕೊಂಡು ಹೋಗಬೇಕು. ಮೆರವಣಿಗೆ ಜೊತೆಯಲ್ಲಿ ಮದುವಣಿಗನಿಗೆ ಕೂತುಕೊಳ್ಳುವುದಕ್ಕೆ ಒಂದು ಚಾಪೆ ಅಥವಾ ಕುರ್ಚಿ ತೆಗೆದುಕೊಳ್ಳಬೇಕು.

ಮದುವೆಗೆ ಹೊರಡುವವರ ಮದುವಣಿಗನ ಸಮೇತ ಪುನಹ ಊಟ ಮಾಡಬೇಕು. ಆಮೇಲೆ ಮದುವಣಿಗನು ಬಂದು ನೆಲ್ಲಕ್ಕಿಯಲ್ಲಿ ನಿಂತು, ಅಲ್ಲಿನ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ, ಅಲ್ಲಿ

*** ಇತ್ತೀಚೆಗೆ ದಂಪತಿ ಮುಹೂರ್ತವು ರೂಢಿಗೆ ಬಂದಿದೆ. ಇದರಲ್ಲಿ ಗಂಡಿನ ಮತ್ತು ಹೆಣ್ಣಿನ ಮುಹೂರ್ತಗಳನ್ನು ಅವರವರ ಮನೆಯಲ್ಲಿ ಪ್ರತ್ಯೇಕವಾಗಿ ಮಾಡದೆ ಎರಡೂ ಕಡೆಯವರ ಅನುಕೂಲ ಪ್ರಕಾರ ನಿಶ್ಚಯಿಸಲ್ಪಟ್ಟ ಒಂದೆಡೆಯಲ್ಲೆ ಮಾಡಿ ಊಟವಾದ ನಂತರ ಮದುಮಗನು ಮದುಮಗಳನ್ನು ಕರೆದುಕೊಂಡು ತನ್ನ ಮನೆಗೆ ಮದುವೆ ಮೆರವಣಿಗೆ ಹೊರಡುವುದು.**

ಸೇರಿರುವ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ವಾದ್ಯ ದುಡಿ ತಾಳ ಸಮೇತ ಹೊರಟು ಕೈಮಡಕ್ಕೆ ಹೋಗಿ ಅಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಬಾಳೆ ಬಿರುದಿನ ಹತ್ತಿರ ಹೋಗಿ ಕೂತುಕೊಳ್ಳಬೇಕು.

ಬಾಳೆ ಬಿರುದಿನ ಹತ್ತಿರ ಮನೆಯ ಯಜಮಾನನೂ ಇತರ ನೆಂಟರಿಷ್ಟರೂ ಒಂದು ಮೆರವಣಿಗೆ ಜೊತೆಯಲ್ಲಿ ಹೋಗುಬ ಯಜಮಾನನ ಪ್ರತಿನಿಧಿಗೂ ಮದುವಣಿಗನಿಗೂ ಬುದ್ಧಿ ಮಾತುಗಳನ್ನು ಹೇಳಿ ಆಶೀರ್ವದಿಸಿ ಕಳುಹಿಸುವರು.

ದಾರಿ ಉದ್ದಕ್ಕೂ ವಾದ್ಯ ಮಾಡುತ್ತಾ ದುಡಿ ತಾಳ ಸಹ ಹೊಡೆದುಕೊಂಡು ಹಾಡುತ್ತಾ ಹೋಗಬೇಕು.

ಮೆರವಣಿಗೆಯು ಹೋಗುವಾಗ ಊರು ಮತ್ತು ನಾಡು 'ಮುಂದಲೆ'ಗಳಲ್ಲಿ ಆಯಾಯ ಊರವರು ಬಾಳೆ ಬಿರುದುಗಳನ್ನು ಮಡಗಿರುವರು. ಈ ಬಾಳೆ ಬಿರುದುಗಳನ್ನು ಮಡಗಿದವರು ಕುಪ್ಪಸ ಧರಿಸಿರಬೇಕು. ಒಂದು ಚೆಂಬು ನೀರು, ಒಂದು ಚಾಪೆ, ಎಲೆ ಅಡಿಕೆ ಸಹ ಇಟ್ಟುಕೊಂಡಿರಬೇಕು. ರಾತ್ರಿ ಬಾಳೆ ಬಿರುದು ಮಡಗಿದರೆ ಮೆರವಣಿಗೆ ಹೋಗುವವರಿಗೆ ಒಂದು ಹೊಂತೆ ಕೊಡಬೇಕು. ಇಲ್ಲವಾದರೆ ಆ ಬಾಳೆ ಬಿರುದನ್ನು ನಿರಾಕರಿಸಬಹುದು.

ಬಾಳೆಯನ್ನು ಕಡಿದರೆ ಬಾಳೆ ಬಿರುದು ಮಡಗಿದವರಿಗೆ ಎರಡು ಹಣ ಕೊಡಬೇಕು. ಈ ಹಣದಲ್ಲಿಯೂ ಸಹ ಒಂದು ಹಣವನ್ನು ಅವನು ತೆಗೆದುಕೊಂಡು ಇನ್ನೊಂದು ಹಣವನ್ನು ಆ ಊರಿನ ದೇವರ ಭಂಡಾರಕ್ಕೆ ಹಾಕಬೇಕು.

ದಾರಿಯಲ್ಲಿ ಬ್ರಾಹ್ಮಣರು ತೀರ್ಥಪ್ರಸಾದವನ್ನು ಕೊಟ್ಟರೆ ಪ್ರಸಾದವನ್ನು ತೆಗೆದುಕೊಂಡು ಒಂದು ಹಣವನ್ನು ಕೊಟ್ಟು ಮುಂದುವರಿಸಬೇಕು. ಇಬ್ಬರು ಬ್ರಾಹ್ಮಣರು ಇದ್ದರೂ ಒಬ್ಬನೇ ಪ್ರಸಾದ ಕೊಡಬೇಕು. ಬ್ರಾಹ್ಮಣರು ಒಂಟಿಯಾಗಿದ್ದರೆ ಅಥವಾ ಜೊತೆಗೆ ಹೆಂಗಸರನ್ನಾಗಲೀ ಮುಂಜಿಯಾಗದ ಮಕ್ಕಳನ್ನಾಗಲೀ ಕೂಡಿಸಿಕೊಂಡಿದ್ದರೆ ಮದುವಣಿಗನನ್ನು ಅಥವಾ ಮದುಮಗನ್ನು ಕಾಣಿಸಿಕೊಳ್ಳದಂತೆ ದೂರ ಹೋಗುವಂತೆ ಹೇಳುವರು.

ಇತರ ಜಾತಿಗಳು ಹುಡುಗನಿಗೆ ಅಥವಾ ಹುಡುಗಿಗೆ ಕುಡಿಯುವುದಕ್ಕೆ ಹಾಲು ಕೊಡುವುದುಂಟು. ಹಾಗೆ ಹಾಲು ಕೊಟ್ಟರೆ ಹಾಲು ಕೊಟ್ಟ ಗಿಂಡಿಗೆ ಒಂದು ಹಣಹಾಕಬೇಕು. ಹಾಲಲ್ಲದೆ, ಕಾಫಿ, ಟೀ, ಮಡಿಗೆ ಕೊಟ್ಟರೆ ಅಂಥ ಗಿಂಡಿಗೆ ಹಣ ಹಾಕಬಾರದು.

ಗಿಂಡಿಗೆ ಹಾಕಿದ ಹಣವನ್ನು ಅವರು ಹಿಂತಿರುಗಿ ಮದುವಣಿಗನಿಗೆ ಕೊಡುವುದುಂಟು. ಅದನ್ನು ಅಂಗೀಕರಿಸಿಕೊಳ್ಳಬೇಕು.

ಮದುವೆ ಮೆರವಣಿಗೆಯು ಹೋಗುವಾಗ ಎದುರಿನಿಂದ ಬೇರೆಯೊಂದು ಮದುವೆ ಮೆರವಣಿಗೆ ಬಂದರೆ ಒಬ್ಬರನ್ನೊಬ್ಬರು ಕಾಣದಂತೆ ಎರಡೂ ಕಡೆಯವರು ಕಾಡಿನೊಳಗೆ ನುಗ್ಗಿಯಾದರೂ ಹೋಗಬೇಕು. ಹುಡುಗನಾಗಲೀ ಹುಡುಗಿಯಾಗಲೀ ಇನ್ನೊಂದು ಮದುವೆಯ ಹುಡುಗನನ್ನಾಗಲೀ ಹುಡುಗಿಯನ್ನಾಗಲೀ ನೋಡಬಾರದು.

*** ಕೆಲವು ಕಡೆಗಳಲ್ಲಿ ಈ ಬಾಳೆ ಬಿರುದನ್ನು ಈಗ ಕೊಡದೆ ಹುಡುಗನು ಮದುಮಗಳು ಸಮೇತ ಮುಹೂರ್ತ ಕಳೆದು ಈ ಸ್ಥಳಕ್ಕೆ ಬಂದ ಮೇಲೆ ಕೊಡುವರು. ಈ ಪದ್ಧತಿಯು ಏನೋ ಒಂದು ತಪ್ಪು ಕಾರಣದಿಂದ ಬಂದಂತೆ ತೋರುತ್ತೆ. ಹುಡುಗನು ಹುಡುಗಿ ಸಮೇತ ಹುಡುಗಿಯ ಮನೆಯಿಂದ ಇಳಿದ ಮೇಲೆ ದಾರಿಯಲ್ಲಿ ಮಡಗಿರುವ ಬಾಳೆ ಬಿರುದುಗಳನ್ನೆಲ್ಲಾ ಹುಡುಗಿಯ ಕಡೆಯವರೇ ಸ್ವೀಕರಿಸಬೇಕಲ್ಲದೆ ಅದಕ್ಕೆ ಕೊಡತಕ್ಕ ಹಣವನ್ನು ಸಹ ಅವರೇ ಕೊಡಬೇಕು.**

ಗಂಡಿನ ಮದುವೆ ಮೆರವಣಿಗೆಯು ಬಂದು ಹೆಣ್ಣಿನ ಮನೆಯ ಬಾಳೆ ಬಿರುದು ಮಡಗಿದಲ್ಲಿ ನಿಲ್ಲಬೇಕು. ಹೆಣ್ಣಿನ ಮನೆಗೆ ಬರುವ ದಾರಿಯು ಒಂದಕ್ಕಿಂತ ಹೆಚ್ಚಿದ್ದರೆ ಬಾಳೆಬಿರುದು ಮಡಗಿರುವ ಸ್ಥಳವನ್ನು ಮೊದಲೇ ತಿಳಿಸಿರಬೇಕು.

ಪೆಟ್ಟಿಗೆ ತುಂಬಿಸುವುದು : ಮದುವೆಯು ಬಾಳೆ ಬಿರುದಿನ ಹತ್ತಿರ ಬಂತೆಂದು ತಿಳಿದ ಒಡನೆ ಹುಡುಗಿಯ ಮನೆಯವರು ಹುಡುಗಿಗೆ ಕೊಡತಕ್ಕ ಎಲ್ಲಾ ಸಾಮಾನುಗಳನ್ನು ಜಡ್ತಿ ನೋಡಿ ತುಂಬಿಸಿಡಬೇಕು. ಈ ಕೆಲಸವನ್ನು ಆದಷ್ಟು ಜನರ ಮುಂದೆ ಮಾಡಬೇಕು.

ಕೊಡಿಯಾಳ್ –ಕೊರು ಅರಪುವವು : ಬಾಳೆಯ ಬಿರುದಿನ ಹತ್ತಿರದಿಂದ ಮೂರು ಜನರು ಕೊಡಿಯಾಳಾಗಿ ಹೆಣ್ಣಿನ ಮನೆಗೆ ಹೋಗಿ ಮದುವೆ ಮೆರವಣಿಗೆಯು ಬಂದುದನ್ನು ತಿಳಿಸಬೇಕು.

ಕೊಡಿಯಾಳು ಬಂದವರಿಗೆ ಸತ್ಕಾರವಾದ ಮೇಲೆ ಹೆಣ್ಣಿನ ಮನೆಯವರು, ಊರವರು, ನೆಂಟರಿಷ್ಟರು ಕೊಡಿಯಾಳು ಸಮೇತ ದುಡಿ ತಾಳ ಕೊಂಬುಕಟ್ಟು ವಾದ್ಯದೊಡನೆ ಬಾಳೆ ಬಿರುದಿನ ಹತ್ತಿರ ನಿಂತಿರುವ ಮದುವೆ ಮೆರವಣಿಗೆಯನ್ನು ಎದುರುಗೊಳ್ಳುವುದಕ್ಕೆ ಹೋಗಬೇಕು. ಅಲ್ಲಿ ಹೆಣ್ಣಿನ ಮನೆಯ ಯಜಮಾನನು ಮದುವಣಿಗನ ಹತ್ತಿರ ಮೊದಲು ಹೋಗಿ ಅವನನ್ನು ಮಾತಾಡಿಸಬೇಕು. ಕಿರಿಯವನು ಹಿರಿಯವನ ಕಾಲುಮುಟ್ಟಿ ನಮಸ್ಕರಿಸಬೇಕು. ಬೇಕಾದವರೆಲ್ಲರೂ ಇದೇ ರೀತಿ ಹುಡುಗನನ್ನು ಕಂಡು ಮಾತನಾಡಿಸುವರು. ಆ ಸಮಯದಲ್ಲಿ ಮದುವಣಿಗನ ಜೊತೆಯಲ್ಲಿ ಬಂದಿರುವ ಹೆಂಗಸರನ್ನು ಹೆಣ್ಣಿನ ಮನೆಯ ಹೆಂಗಸರು ಮಾತಾಡಿಸಬೇಕು.

* **ಬಾಳೆ ಬಿರುದು :** ಹುಡುಗನ ಕಡೆಯವರಿಗೆ ಆರು ಬಾಳೆಗಳನ್ನು ಕೊಡಬೇಕು. ಆರು ಬಾಳೆಗಳಿಗೆ ನಾಲ್ಕು ಹಣವನ್ನು ಕೊಡಬೇಕು. ಬಾಕಿ ಪದ್ಧತಿಗಳೆಲ್ಲ ನೆಂಟರಿಷ್ಟರಿಗೆ ಬಾಳೆ ಕೊಡುವಂತೆಯೆ ಆಗಿರುತ್ತದೆ.

ಹಟ್ಟಿಯಲ್ಲಿ ಹುಡುಗನ ಮತ್ತು ಬೋಜಕಾರನ ಕಾಲುಗಳನ್ನು ಸಹ ತೊಳಿಯಬೇಕು.

ಮದುವಣಿಗನು ಮನೆಯ ಮೆಟ್ಟಲುಗಳನ್ನು ಹತ್ತುವಾಗ ಹೆಣ್ಣಿನ ಮನೆಯವರು ಕೈಗಳಲ್ಲಿ ಅಕ್ಕಿ ಹಿಡಿದುಕೊಂಡಿದ್ದು ಮದುವಣಿಗನ ತಲೆಗೆ ಬಿಸಾಡಬೇಕು.

ಮದುವಣಿಗನು ನೆಟ್ಟಗೆ ಹೋಗಿ ನೆಲ್ಲಕ್ಕಿ ನಡುಬಾಡೆಯಲ್ಲಿರುವ ಐಮರದಲ್ಲಿ ಕೂರಬೇಕು. ಮಿಕ್ಕವರೆಲ್ಲರೂ ಅವರವರಿಗೆ ಏರ್ಪಡಿಸಿದ ಸ್ಥಳಗಳಲ್ಲಿ ಕೂರುವರು.

ಪೋಳಿಯವನ್ನು ಹೆಣ್ಣಿನ ಮನೆಯ ಅರುವನ ಹೆಣ್ಣು, ಹೊತ್ತುಕೊಂಡಿರುವ ಹೆಂಗಸಿನ ತಲೆಯಿಂದ ಇಳಿಸಬೇಕು.

ಆಮೇಲೆ ಮದುವಣಿಗನ ಮತ್ತು ಅವನ ಕಡೆ ಯಜಮಾನನ ಸಹ ಕಾಲುಗಳನ್ನು ಹುಡುಗಿಯ ಕಡೆಯ ಒಬ್ಬ ಕನ್ಯೆಯು ಅಥವಾ ಮುತ್ತೈದೆಯು ತೊಳೆದು ಕಾಲುಗಳನ್ನು ಬಟ್ಟೆಯಿಂದ ಒರೆಸಿ ಮುಖ ತೊಳೆಯುವುದಕ್ಕೆ ನೀರುಕೊಟ್ಟು ಮುಖ ಒರೆಸಲು ಬೇರೆ ಬಟ್ಟೆಯನ್ನು ಕೊಟ್ಟು ವಿಭೂತಿಯನ್ನು ಕೊಡಬೇಕು. ಇಬ್ಬರೂ ವಿಭೂತಿಯನ್ನು ಧರಿಸಬೇಕು.

ಕಾಲು ತೊಳಿಯುವುದಕ್ಕಾಗಲೀ ತಳಿಯತಕ್ಕಿ ಬೊಳಕ್ ಹಿಡಿಯುವುದಕ್ಕಾಗಲೀ, ಪೋಳಿಯ ಹೊರುವುದಕ್ಕಾಗಲೀ ಶೂದ್ರರೇ ಮೊದಲಾದ ಇತರ ಜಾತಿಯವರನ್ನು ಏರ್ಪಡಿಸಿಕೊಂಡರೆ, ಆಕ್ಷೇಪಣೆ ಗುರಿಯಾಗುವರಲ್ಲದೆ ಪೊಳೆಯಾಡು ತೆರಲು ಸಹ ಬದ್ಧರಾಗುವರು.

ಆಮೇಲೆ ಹೊಸ ಕುಕ್ಕೆಯಲ್ಲಿ ಬೇಕಾದಷ್ಟು ಹುರುಕಲನ್ನು ಹಾಕಿ ಅದರ ಮೇಲೆ ಒಂದು ಗೊನೆ ಹಣ್ಣು ಬಾಳೆಯನ್ನಿಟ್ಟು ಕುಕ್ಕೆಯೊಳಗೆ ಒಡೆಯದ ಒಂದು ತೆಂಗಿನಕಾಯಿಯ ಸಮೇತ

ಮದುವಣಿಗನ ಮುಂದೆ ಮಡಗಬೇಕು. ಹುರುಕುಲಿಗೆ ಅರಳು ಮಿಶ್ರ ಮಾಡಬಾರದು. ತೆಂಗಿನಕಾಯಿಯನ್ನು ಹುಡುಗನ ಕಡೆಯವರು ತಮ್ಮ ಪೀಚೆ ಕತ್ತಿಯಿಂದಲೇ ಒಡೆದು ಅಥವ ಒಡೆಸಿ ಚೂರು ಚೂರು ಮಾಡಿ ಹಾಕಿಕೊಳ್ಳಬೇಕು. ಈ ಕುಕ್ಕೆಯಿಂದ ಬೇರೆ ತಟ್ಟೆಗಳಿಗೆ ಹುರುಕಲು, ಬಾಳೆ, ತೆಂಗಿನ ಕಾಯಿ ಸಹ ಹಾಕಿ ಮಡಗಬಹುದು. ಇದನ್ನು ಗಂಡಿನ ಕಡೆಯವರು ಫಲಹಾರ ಮಾಡಿ ಕಾಫಿ ಕುಡಿಯುವರು.

ಊಟ ಉಪಚಾರ : ಅನಂತರ ಅಲ್ಲಿಂದ ಮದುವಣಿಗನನ್ನು ಎಬ್ಬಿಸಿ ಅವನ ಬೋಜಕಾರನನ್ನು ಇನ್ನೊಬ್ಬನನ್ನು ಸಹ ಊಟಕ್ಕೆ ಕೂರಿಸಬೇಕು. ಮದುವಣಿಗನಿಗೆ ಅತ್ತೆಯಾಗಬೇಕಾದವಳು ಮೊದಲು ಹಾಲು ಅನ್ನ ಉಣ್ಣಿಸಬೇಕು. ಗಂಡಿನ ಮನೆಯ ಯಜಮಾನನು ಮತ್ತು ಬಾಕಿಯವರು ಏರ್ಪಡಿಸಿದ ಸ್ಥಳದಲ್ಲಿ ಊಟಮಾಡಬೇಕು.

ಮುಹೂರ್ತ : ಊಟ ತೀರಿದ ಮೇಲೆ ಮುಹೂರ್ತವಾಗುವುದು. ಕೆಲವು ಕಡೆಗಳಲ್ಲಿ ಹುಡುಗನ ಮುಹೂರ್ತವನ್ನು ಐಮರದ ಮೇಲೂ ಹುಡುಗಿಯನ್ನು ಅಡಿಗೆ ಮನೆಯಲ್ಲಿಯೂ ಮಾಡುವರು. ಇಬ್ಬರದೂ ಬಾಡೆಯಲ್ಲಿಯೇ ಆಗುವುದಾದರೆ, ಹುಡುಗನು ಬಲದ ಕಡೆಯಲ್ಲಿಯೂ ಹುಡುಗಿಯು ಎಡದ ಕಡೆಯಲ್ಲಿಯೂ ಕೂರಬೇಕು. ಹುಡುಗನು ಕೂತ ಮೇಲೆ ಹುಡುಗಿಯು ಕೂರಬೇಕು.

ಹುಡುಗನಿಗೂ ಹುಡುಗಿಗೂ ಮೊದಲಿನ ಮುಹೂರ್ತದಲ್ಲಿ ಸಿಕ್ಕಿದ ಮರ್ಯಾದೆಗಳೆಲ್ಲವೂ ಈಗಲೂ ಸಿಕ್ಕುವುವು.

ಪೋಳಿಯದಲ್ಲಿ ತಂದ ಹಾಲನ್ನೇ ಈಗಿನ ಮುಹೂರ್ತದಲ್ಲಿ ಹುಡುಗಿಗೆ ಕೊಡಬೇಕು. ಪೋಳಿಯದಲ್ಲಿದ್ದ ಅಕ್ಕಿ, ಬೆಲ್ಲ, ತೆಂಗಿನಕಾಯಿಯಿಂದ ಪರಮಾನ್ನ ಮಾಡಿ ಹುಡುಗಿಗೆ ಕೊಡಬೇಕು. ಈ ಪದ್ಧತಿಯನ್ನು ಈಗ ಆಚರಿಸುವುದಿಲ್ಲ.

ಪಲಯ ಪಣ : ಎಲ್ಲರೂ ಹಣ ಕೊಟ್ಟಾದ ನಂತರ ಹುಡುಗನ ಮನೆಯ ಯಜಮಾನನು ಹಣವನ್ನು ಕೊಟ್ಟು ಸ್ವಲ್ಪ ಅಕ್ಕಿಯನ್ನು ತೆಗೆದು "ಇದರಿ ಪಲಯ ಪಣ" ಎಂದು ಹೇಳಿ ಐದು ಹಣವನ್ನು ತಳಿಯಕ್ಕಿ ಬೊಳಕಿಗೆ ಹಾಕಬೇಕು.

ಹಣ ಕೊಟ್ಟು ಮುಗಿದ ಮೇಲೆ, ಹುಡುಗನನ್ನು ಬೋಜಕಾರನು ಕೈಹಿಡಿದು ಎಬ್ಬಿಸಬೇಕು. ಆಮೇಲೆ, ಹುಡುಗನು ಬಂದು ಹುಡುಗಿಗೆ ಅಕ್ಕಿ ಹಾಕಿ, ಹಾಲು ಕೊಟ್ಟು ಚೀಲ ಪಣವನ್ನು ಕೊಡಬೇಕು. ಹುಡುಗಿಯು ಹಣವನ್ನು ಎರಡು ಕೈಗಳಿಂದಲೂ ಹೊಂದಿಕೊಂಡು ಎಡದ ಕೈಗೆ ಹಣವನ್ನು ಹಾಕಿ ತನ್ನ ಬಲದ ಕೈಯನ್ನು ಹುಡುಗನು ಚಾಚಿರುವ ಕೈಗೆ ಕೊಡಬೇಕು. ಕೂಡಲೆ ಹುಡುಗಿಯನ್ನು ಹುಡುಗನು ಎಬ್ಬಿಸಬೇಕು.*

ಮುಹೂರ್ತವಾಗುತ್ತಿರುವಾಗ ವಾದ್ಯವಾಗುತ್ತಿರಬೇಕು. ಹಾಡುವವರು ಹಾಡುತ್ತಿರಬೇಕು. ಮದುವೆ ಹಾಡನ್ನು ಸುರುವಿನಿಂದಲೇ ಹಾಡಿ ಈ ಕೆಳಗಿನ ರೀತಿ ಮುಂದುವರಿಸಬೇಕು.

ಬಾಳೊ ಕೇಳಿ ಬೆಂದುವೆ
ಬೊಳ್ಳಿಕೊಡೆ ನಡಿಕೇರಿಯ
ಆ ಒಕ್ಕ ಮನೆಯಿಲ್
ಕೈಯ್ಯಣ್ಣ ಬಯಿಂಬಂಡ

ಮೂರ್‍ತ ಕಯಿಂಜಿತ್
ಉಂಡಿತು ಕುಡಿಚಿತು
ಕೈಯ್ಯಣ್ಣ ಬಯಿಂಬನು
ತಾನೂ ತನ್ನಡೂರೋನೂ

---

* **ಹುಡುಗಿಯು ಚೀಲ ಪಣ ಸಿಕ್ಕಿದ ಒಡನೆ ಕಾಲು ಮುಟ್ಟಿ ನಮಸ್ಕರಿಸುವುದುಂಟು. ಇದು ಪದ್ಧತಿಯಲ್ಲ. ಆದರೆ ಅಂಗೀಕರಿಸಲ್ಪಟ್ಟಿದೆ.**

ಇಲ್ಲವನೂ ಬೆಂದುವೂ
ಕೊಂಬ್ ಕೊಟ್ಟ್ ಪಾಟಾಯಿ
ಪೊಟ್ಟಿಕುಳ್ಳ ಆಳಾಯಿ
ಚಾಚಿ ಮೆಲ್ಲೆ ಬಂದಿತ್
ಪಟ್ಟಿಮಾಡ ಒಕ್ಕಡ
ಚೋಮ ನಿಪ್ಪ ಓಡೆಲ್
ಚಿಂಗ ಬಾಳೆ ಮಿಞ್ಞಲ್
ಅಲ್ಲಿ ಬಂದಿತೆತ್ತಿತ್
ಒಪ್ಪಾರತೆಳತತ್.
    ಈನಂಗುಂಡ್ ಪೋರಾಂದ್
ಮೂವೆರುಳ್ಳ ಬಾಲರ
ಈ ಒಕ್ಕ ಮನೆಯಿಕ್
ಕೊಡಿಯಾಳಯಚತ್.
ಅಕ್ಕಣೆಕ್ ಸಂಜಾದಿ
ಮಾಚಮ್ಮಂಡ ಅಪ್ಪಯ್ಯ
ಕೆಂಗುದ್ರೆ ಪೊನ್ನಪ್ಪ
ತಾನೆನ್ನ ಪಣಿಕೆಜ್ಜ
ಇಲ್ಲವನೊ ಬೆಂದುನೊ
ಅಂಗನೊ ಅರುವನೊ
ಎಲ್ಲ ಜೋಡು ಕೂಟಿತ್
ಕೊಂಬ್ ಕೊಟ್ಟ್ ಪಾಟಾಯಿ
ತಂಗೊಯ್ಯನೆ ಬಂದಿತ್
ಅೈಯ್ಯಣ್ಣ ಬಯಿಂಬನ
ಕಣ್ಣೊಡನೆ ಕಂಡಿತ್
ತಕ್ಕಾರ ಪೆರ್‌ಜಾಯಿ
ನಾಟಾಚಾರ ಚೆಮ್ಮಾಯಿ
ದಂಡ್ ಕಡೆ ನಾಡೋನ್
ಸಾಲ್ ಕೆಟ್ಟಿ ನಿಂದಿತ್
ಚಿಂಗ ಬಾಳೆ ಬೇಂಗಿತ್
ದಂಡ್ ಕಡೆ ನಾಡೋನೂ
ಆಡಿ ಪಾಡಿ ಪೋಯಿತ್
ಪುಟ್ಟಿಮಾಡ ಒಕ್ಕಡ
ಮಚ್ಚಿಮನೆ ನಲ್ಲಾಂಗ್
ಮಂಗ್‌ಲ ಮರಿಂಜಿತ್
ನೆಲ್ಲಕ್ಕಿ ನಡುಬಾಡೆ
ಅಲ್ಲಿ ಬಂದೆಳತತ್.
    ಓರಂದೀರಂಡೆಣ್ಣಣೆ
ಉಂಡತ್ ಕುಡಿಚತ್.
ಈನಂಗುಂಡ್ ಪೋರಾಂದ್
ನೆಲ್ಲಕ್ಕಿ ನಡುಬಾಡೆ
ಪೊಯಿ ಬಾಡೆ ನಡುಪುಲ್
ಅೈಯ್ಯಣ್ಣ ಬಯಿಂಬನೂ
ಮಾಚಮ್ಮ ಕುಮಾರಿಯೂ
ಮೂರ್‌ತಿಕಳಕತ್.
ಮೂರ್‌ತಕೆಳಕಣೆ
ಮಾಚಮ್ಮಂಡ ಪೆತ್ತವ್ವ
ಭೂಮಿ ದೇವಿ ಉಮ್ಮವ್ವ
ಆಡಿಲಾಡಿ ಬಂದಿತ್
ಅೈಯ್ಯಣ್ಣ ಬಯಿಂಬಂಡ
ಮಂಡೆಕಕ್ಕಿಲ್‌ಟ್ಟಿತ್
ಕ್‌ಂಡಿ ಪಾಲ್ ಕೊಡ್‌ತಿತ್
ಪೊಂಬಣ ಕೈಕ್‌ಟ್ಟಿ;
ಅಕ್ಕಣೆಕ್ ಅೈಯ್ಯಣ್ಣ
ತನ್ನಡೋರ್ ಮಾವಿರ
ಕಾತೊಟ್ಟ್ ತಲೆ ಬೆಚ್ಚ.
ನೀಲಕೊಡಿ ಉಮ್ಮವ್ವ
ಅಲ್ಲಿಂಜಿ ಪೊರಟಿತ್
ಮಾಚಮ್ಮ ಕುಮಾರಿಕೂ
ಪೊಂಬಣ ಕೈಕ್‌ಟ್ಟಿ.
ಈನಂಗುಂಡ್ ಪೋರಾಂದ್
ಅೈಯ್ಯಣ್ಣ ಬಯಿಂಬಂಗೂ
ಮಾಚಮ್ಮ ಕುಮಾರಿಕೂ
ಕೂಡ್‌ನ ಜನವೆಲ್ಲ
ಅಕ್ಕಿ ಪಣ ಇಟ್ಟತ್.
ಅಕ್ಕಣೆಕ್ ಸಂಜಾದಿ
ಅೈಯ್ಯಣ್ಣ ಬಯಿಂಬಂಡ
ಬೋಜಕಾರ ಬಾಲನ್
ಅೈಯ್ಯಣ್ಣ ಬಯಿಂಬನ
ಕೈಪುಡಿಚಿತೆಪ್ಪಿಚಿ;
ಅಲ್ಲಿಂಜೆದ್ದ ಅೈಯ್ಯಣ್ಣ
ಪಾಕಂಡ ಮೊಳಿ ಪೊಞೆ
ಒತ್ತಿಡೊತ್ತಿ ಪೋನೋಲೆ
ಒತ್ತಿಡೊತ್ತಿ ಪೋಯಿತ್
ಪೊಂಗ ಮಿಞ್ಞ ನಿಂದಿತ್

ಮಂಡೆಕಕ್ಕಿ ತಾತಿತ್
ಕ್ಂಡಿ ಪಾಲ್ ಕೊಡ್ತಿತ್
ಚೀಲ ಪಣ ಕೈಕ್ಟ್ಟ್
ಮಾಚಮ್ಮ ಕುಮಾರಿನ
ಕೈಪುಡಿಚಿತೆಪ್ಪ್‌ನ.
ಈನಂಗುಂಡ್ ಪೋರಾಂದ್
ಕಟ್ಪೊಳೆ ಕಡ್ತಿತ್
ಸಮ್ಮಂಧ ಕೊಡ್ತತ್.
ಕೇಳೊ ಕೇಳೊ ಸಂಜಾದಿ
ಅೈಯ್ಯಣ್ಣ ಬಯಿಂಬನೂ
ಮಾಚಮ್ಮ ಕುಮಾರಿಯೂ
ದಂಡ್ ಕಡೆ ನಾಡೋನೂ
ಚಂದೋಳ ಪೆರ್‌ಜಾಯಿ
ಕೊಂಬ್ ಕೊಟ್ಟ್ ಪಾಟಾಯಿ
ಇಲ್ಲಿಂಜಿ ಪೊರಟತ್.
ಎಂದೆಣ್ಣಿತ್ ಪಾಡುವ;
ಈ ಪಾಡುವ ಬೆಕ್ಕನ.
ಬೆಪ್ಪಕೊಮ್ಮೆಡ್‌ಪಕ್ಕ.
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ!

ಹುಡುಗಿಯನ್ನು ಹುಡುಗನು ಎಬ್ಬಿಸಿದ ಒಡನೆ ಹುಡುಗನು ಕೊಟ್ಟ ಚೀಲ ಪಣವನ್ನು ಕೇಳಿಕೊಂಡು ಬೋಜಕರತಿಯು ಹುಡುಗಿಯ 'ಮೊಲೆಕಟ್ಟ್'ನಲ್ಲಿ ಕಟ್ಟಬೇಕು. ಆಗ ಹುಡುಗಿಯ ಮೊಲೆ ಕಟ್ಟನಲ್ಲಿ ತಾಯಿಯು ಕೊಟ್ಟ ಚೀಲ ಪಣವನ್ನು ಕಟ್ಟಿದ್ದರೆ ಅದನ್ನು ಅವಳ ಬೋಜಕರತಿಯು ತೆಗೆದುಬಿಡಬೇಕು.

ಅನಂತರ ಹುಡುಗಿಯನ್ನು ಮಾತ್ರ ಅಡಿಗೆ ಮನೆಗೆ ಕರೆದುಕೊಂಡು ಹೋಗಿ ಕಟ್ಟಳೆ ಆಚೆ ಹುಡುಗಿಯೂ ಈಚೆ ಹುಡಗನೂ ಆಗಿ ಹುಡುಗಿಯ ಕೈಯನ್ನು ಪುನಹ ಹಿಡಿದು ಕಟ್ಟಳೆ ದಾಟಿಸಿ ಬಾಡೆಯಲ್ಲಿ ನಿಂತು ಸಮ್ಮಂಧ ಕೊಡುವರು. ಕೆಲವು ಕಡೆಗಳಲ್ಲಿ ಕೈ ಹಿಡಿದು ಎಬ್ಬಿಸಿದ ಒಡನೆ ಸಮ್ಮಂಧ ಕೊಟ್ಟು ಮುಂದಿನ ಕಟ್ಟಳೆಯನ್ನು ಕೈ ಹಿಡಿದು ದಾಟಿಸುವರು.

ಹುಡುಗನ ಮುಹೂರ್ತವು ಬಾಡೆಯ ಐಮರದ ಮೇಲೂ, ಹುಡುಗಿಯ ಮುಹೂರ್ತವು ಅಡಿಗೆ ಮನೆಯಲ್ಲೂ ಆಗಿದ್ದರೆ, ಹುಡುಗನು ಹುಡುಗಿಯನ್ನು ಅಡಿಗೆ ಮನೆಯಿಂದ ಕೈ ಹಿಡಿದು ಎಬ್ಬಿಸಿ ಹಿಡಿದ ಕೈಯನ್ನು ಬಿಡದೆ ಅಡಿಗೆ ಮನೆಯ ಕಟ್ಟಳೆಯನ್ನು ದಾಟಿಸಿ 'ಸಮ್ಮಂಧ ಪರಚೆ' ಕೊಟ್ಟು ಕೈ ಬಿಡಬೇಕಿತ್ತು.

ಸಮ್ಮಂಧ ಪರಚೆ

ಸಮ್ಮಂಧ ಪರಚೆಯನ್ನು ಈ ಕೆಳಗಿನ ರೀತಿ ಹೇಳಬೇಕು.

ಹೆಣ್ಣಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ ಅರುವನೂ ಸಾಲ್ ಕೆಟ್ಟಿ ನಿಂದಿರಾ ?

ಗಂಡಿನ ಅರುವ : ನಿಂದಿತ್.

ಹೆಣ್ಣಿನ ಅರುವ : ಆನಕಿಕ್ಕ ಪಟ್ಟಮಾಡ ಒಕ್ಕಡ ಮಾಚಮ್ಮಂದೆಣ್ಣುವ ಕುಞ್ಞಿನ ನಡಿಕೇರಿಯಂಡ ಒಕ್ಕಡ ಅೈಯ್ಯಣ್ಣಂದೆಣ್ಣುವ ಬಯಿಂಬಂಗ್ ಸಾಲ್‌ಬಾಕೆ ಕೊಡ್‌ಪಲ್ಲಿ, ಮಾಚಮ್ಮಂದೆಣ್ಣುವ ಕುಞ್ಞಿಕ್ ನಡಿಕೇರಿಯಂಡ ಒಕ್ಕಡ ಆಯಿರ ಬಟ್ಟಿ ಭೂಮಿ, ಪತ್ತ್ ಕಂಡ ಬಾಣೆ, ಅಂಜಿ ಕಂಡ ಓಡೆ, ಮನೆ, ಮನೆ ಬಳಪ್ ತೋಟ, ಪತ್ತ್ ಕುಡಿ ಆಳ್, ಪತ್ತ್ ಕೂಟಕ್ ಎತ್ತ್, ಪತ್ತ್ ಕರಪಕ್, ಪಾಕರಪ ಕುತ್ತಿ, ಚೋಮ ಕೂಡುವ ಕೊಟ್ಟ್, ಆಕ, ಆಕಡೇರಿ, ಕುಂಡಿತೆರೆ, ಒಕ್ಕಿ ಪೋನ ಮಣ್ಣ್, ಕೂಡಿ ಪೋನ ಯಾಕ, ಓಡಿ ಪೋನ ಆಳ್,

ಮದ್‌ಚಿ ಪೋನ ಚೋಮ, ತಾತಿ ಕೆತ್ತುವ ಕತ್ತಿ, ನೇತಿ ಕೆತ್ತುವ ಮತ್ತ್, ಪತ್ತಾಯತ್ ನೆಲ್ಲ್, ನೆಲ್ಲಳಪ ಪಾನಿ, ಅಕ್ಕಿ ಅಳಪ ಸೇರ್, ತಾಕ್‌ನ ತಳಿಯ, ತೂಕ್‌ನ ಬೊಳ್‌ಚ, ಪೊಟ್ಟಿಲ್ ಉಪ್ಪ್, ಒಲೆಕಟ್ಟ್, ಪೂತ್ ಬೆಚ್ಚ ಚೆಪ್ಪ್, ನೂಲ್, ನೂಕರೆ ಕಂಡ, ಚೂದ್‌ಕ್ ಇರ್‌ಂಬ್, ಚುಂಡೆಕ್ ಮೊದಲ್, ಒಂದ್ ತೊಟ್ಟ್ ನೂರೋಳ ಸಮ್ಮಂಧ ಕೊಡ್‌ತಿರಾ?

ಗಂಡಿನ ಅರುವ : ಕೊಡ್‌ತತ್.

ಹೆಣ್ಣಿನ ಅರುವ : ಎಂಗಡ ತಂಗೆ ಮಕ್ಕ ನಡಿಕೇರಿಯಂಡ ಒಕ್ಕಡ ಮನೆಕ್ ಸಮ್ಮಂದಾಯಿತ್ ಬಾಳ್ ಬಾಕೆ ಬಪ್ಪಕ, ಅಙ್ಙೂರ್ ಬಿರಾನ್‌ರ ಪೊಟ್ಟಿಲ್ ಆಯಿರ ಬಿರಾನ್‌ರ ಮಾಲ್‌ನ ಸಾಲಡಂಗ ಬಾಲಡಂಗ ತೆರಕಿಯಂಡ್ ಬಪ್ಪ; ಇದ್ ಪೋಚೆಂಗಿ ದಾರ್ ಜವಾಬ್ದಾರ ಗೂವ?

ಗಂಡಿನ ಅರುವ : ನಾನ್.

ಹೆಣ್ಣಿನ ಅರುವ : ನಿಂಗ ದಾಡ?

ಗಂಡಿನ ಅರುವ : ಎಂಗ ಐತಿಚಂಡ ಒಕ್ಕಡ; ನಡಿಕೇರಿಯಂಡ ಒಕ್ಕಡ ಅರುವ.

ಹೆಣ್ಣಿನ ಅರುವ : ಮಣ್ಣರುವನ ? ಪೊನ್ನರುವನ ?

ಗಂಡಿನ ಅರುವ : ಮಣ್ಣರುವ (ಪೊನ್ನರುವ)

ಹೆಣ್ಣಿನ ಅರುವ : ಇದರಿ ಪನ್ನೆರಂಡಚ್ಚಿರ ಪೊನ್ನ್ (ಎಂದು ಹೇಳಿ ಹನ್ನೆರಡು ಕಲ್ಲು ಹರಳುಗಳನ್ನು ಕೊಡಬೇಕು)

ಗಂಡಿನ ಅರುವ : ಬಾತ್ ಪನ್ನಂದಚ್ಚಿರ ಪೊನ್ನ್ ; ಆನಕ, ನಿಂಗಡ ತಂಗೆ ಮಕ್ಕ, ಎಂಗಡ ಪೊಮ್ಮಕ್ಕ ಮಕ್ಕ, ಕೂಳ್ ಕುಯಿಚತ್‌ಂದೂ, ಕರಿ ಕಯಿಚತ್‌ಂದೂ, ಮಾವಂಡ ಬಾಯಿಗುಣ ಇಲ್ಲೆಂದೂ, ಮಾವಿರ ಕೈ ಗುಣ ಇಲ್ಲೆಂದೂ, ಪೋರಾಂದೂ ತಾಮನೆಲ್ ಬಂದಿತ್ ಅಳ್‌ತಕ್ಕ, ತ್‌ರಾಂದೂ ಒಡೆಯಂಡ ಮೈಗುಣ ಇಲ್ಲೆಂದೂ, ನ್ಯಾಯ ಪರಂದಿತ್ ತ್‌ಕಣೆಕ್, ಎಂಗಕ್ ಕೂಟ್‌ಕ್ ಆಳೂ ಬಟ್ಟೆಕ್ ತೂಡೂ ತಂದಿತ್ ತಿದ್ದಿ ನೀಕಿ ತಪ್ಪವನಾರ್ ಗೂವ?

ಹೆಣ್ಣಿನ ಅರುವ : ನಾನ್.

ಗಂಡಿನ ಅರುವ : ನಿಂಗ ದಾಡ?

ಹೆಣ್ಣಿನ ಅರುವ : ಎಂಗ ಕಲ್ಮಾಡಂಡ ಒಕ್ಕಡ ; ಪಟ್ಟಮಾಡ ಒಕ್ಕಡ ಅರುವ.

ಗಂಡಿನ ಅರುವ : ಮಣ್ಣರುವನ ? ಪೊನ್ನರುವನ ?

ಹೆಣ್ಣಿನ ಅರುವ : ಮಣ್ಣರುವ (ಪೊನ್ನರುವ)

ಗಂಡಿನ ಅರುವ : ಇದರಿ ಸಾಕ್ಷಿ ಪಣ (ಎಂದು ಹೇಳಿ ಒಂದ ಹಣ ಕೊಡಬೇಕು).

ಹೆಣ್ಣಿನ ಅರುವ : ಆನಕ ಎಂಗಡ ತಂಗೆ ಮಕ್ಕಕ್ ಚೆಕ್ಕ್ ಚೇಲ ಬಂದಕ ಕೂಟ್‌ಕ್ ಆಳೂ ಬಟ್ಟೆಕ್ ತೂಡೂ ಕೊಡ್‌ತಿತ್ ತಿದ್ದಿನೀಕಿ ಅಯಚಿ ತಪ್ಪ ಅರುವನಾರ್ ಗೂವ?

ಗಂಡಿನ ಅರುವ : ನಾನನ್ನೆ

ಹೆಣ್ಣಿನ ಅರುವ : ಇದರಿ ಸಾಕ್ಷಿ ಪಣ (ಎಂದು ಹೇಳಿ ಒಂದು ಹಣ ಕೊಡಬೇಕು).

ಅರುವನು ಕೊಡುವ ಹಣವನ್ನು ಆಯಾಯ ಪಂಗಡದ ಯಜಮಾನನು ಕೊಡಬೇಕು. ಅರುವನಿಗೆ ಸಿಕ್ಕಿದ ಹಣವು ಅರುವನಿಗೆ ಹಕ್ಕು.

ಗಂಡಿನ ಅರುವನು ತೆಗೆದುಕೊಂಡ ಹನ್ನೊಂದು ಅಚ್ಚಿ ಚಿನ್ನವನ್ನು (ಕಲ್ಲು ಹರಳುಗಳು)

ಹೆಣ್ಣಿನ ಮೊಲೆ ಕಟ್ಟಿಗೆ ಕಟ್ಟಬೇಕು. ಆಗ ಮದುವಣಿಗನು ಕೊಟ್ಟಿದ್ದ ಚೀಲ ಪಣ ಕಟ್ಟಿದ್ದದ್ದನ್ನು ತೆಗೆದು ಬಿಡಬೇಕು. ಅಷ್ಟರಲ್ಲಿ ಹೆಣ್ಣಿನ ತಾಯಿಯು ಬಾಡೆಗೆ ಬಂದು ಗಂಡಿನ ಮುಸುಕನ್ನು ತೆಗೆದು ಅವನ ಎಡದ ಭುಜದ ಮೇಲೆ ಹಾಕಬೇಕು.

ಆಮೇಲೆ ಹುಡುಗಿಗೆ ಕೊಡುವ ಪೆಟ್ಟಿಗೆ, ಕಂಚು ಮುಟ್ಟು ಮುಮತಾದವುಗಳನ್ನು ಹೆಣ್ಣಿನ ಕಡೆಯವರು ನೆಲ್ಲಕ್ಕಿ ನಡು ಬಾಡೆಯಲ್ಲಿ ತಂದಿಡಬೇಕು. ಅಲ್ಲಿಂದ ಅವುಗಳನ್ನು ಗಂಡಿನ ಕಡೆಯವರು ತೆಗೆದು ಜೊತೆಯಲ್ಲಿ ಕರತಂದಿರುವ ಆಳುಗಳಿಗೆ ಹೊರಿಸಬೇಕು.

ಗಂಡಿನ ಮನೆಯಿಂದ ತಂದ ಪೋಳಿಯವನ್ನು ಹೆಣ್ಣಿನ ಮನೆಯಲ್ಲಿ ಬಿಟ್ಟು ಹೋಗಬೇಕು.

ದಾರಿ ತಡಿಯುವುದು : ಮನೆಯಿಂದ ಹೊರಡಲು ಬಾಡೆಯಿಂದ ಕೈಯ್ಯಾಲೆಗೆ ದಾಟುವ ಕಟ್ಟಳೆಯಲ್ಲಿ ಹುಡುಗಿಯ ಸೋದರಮಾವನ ಅಥವಾ ಸೋದರತ್ತೆಯ ಮಗನು ದಾರಿ ತಡೆದರೆ "ನನ್ನ ಸೋದರತ್ತೆಯ (ಅಥವಾ ಸೋದರಮಾವನ) ಮಗಳನ್ನು ಮದುವೆಯಾಗುತ್ತೀಯಲ್ಲಾ? ಚೆನ್ನಾಗಿ ನೋಡದಿದ್ದರೆ ಏನು ಗತಿ?" ಎಂದು ಕೇಳಿ ದಾರಿ ತಡೆಯುವಾಗ "ಚೆನ್ನಾಗಿ ನೋಡುತ್ತೇನೆ"ಂದು ಮದುವಣಿಗನು ಅವನಿಗೆ ಒಂದು ಚಿನ್ನದ ನಾಣ್ಯವನ್ನು ಸಾಕ್ಷಿ ಹಣವನ್ನಾಗಿ ಕೊಡಬೇಕು. ದಾರಿ ತಡೆದವನು ಆ ನಾಣ್ಯದ ಜೊತೆಗೆ ಪುನಹ ಒಂದು ನಾಣ್ಯವನ್ನು ಸೇರಿಸಿ ಹುಡುಗಿಯ ಸೆರಗಿಗೆ ಕಟ್ಟಬೇಕು.

ಹಟ್ಟಿಯನ್ನು ದಾಟುವ ಮೊದಲು ಹೊಲೆಯನೊಬ್ಬನು ಕೈಯ್ಯಲ್ಲಿ ಒಂದು ಹೊಂತೆ ಹಿಡಿದು ಮದುವಣಿಗನ ಮುಂದೆ ವಸ್ತ್ರ ಹಾಸಿ ತಡೆದರೆ ಅವನಿಗೆ ಒಂದು ಹಣ ಕೊಡಬೇಕು.

ಅಲ್ಲಿಂದ ಮದುವೆ ಮೆರವಣಿಗೆಯು ಹೊರಟು ಕೈಕಡದಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಬಳೆ ಬಿರುದಿನ ಹತ್ತಿರ ಬಂದು ನಿಲ್ಲಬೇಕು. ಇಲ್ಲಿವರೆಗೆ ಎರಡು ಕಡೆಯವರ ವಾದ್ಯ ದುಡಿ ತಾಳ ಸಮೇತ ಇರಬೇಕು. ಆಮೇಲೆ ಹೆಣ್ಣಿನ ಸೆರಗಿನಲ್ಲಿರುವ ಕಲ್ಲು ಹರಳುಗಳನ್ನು ಮತ್ತು ದಾರಿ ತಡೆದ ಬಾವ ಮೈದುನ ಕಟ್ಟಿದಂಥ ನಾಣ್ಯಗಳನ್ನೂ ತೆಗೆದುಬಿಟ್ಟು ಪೆಟ್ಟಿಗೆಯೊಳಗೆ ಹಾಕಿಕೊಳ್ಳಬೇಕು.

ಹೆಣ್ಣಿನ ಊರವರು ಕುಳಕ್ಕೆ ಒಬ್ಬ ಹೆಂಗಸೂ ಮದುವೆ ಮೆರವಣಿಗೆಯ ಜೊತೆಯಲ್ಲಿ ಹೋಗಬೇಕು.

ಆಮೇಲೆ ಹೆಣ್ಣಿನ ಮನೆಯ ಯಜಮಾನನು ಹುಡುಗನಿಗೂ ಹುಡುಗಿಗೂ ಆಶೀರ್ವದಿಸಿ ತಮ್ಮ ವಾದ್ಯ ತಾಳ ಸಮೇತ ಹಿಂತಿರುಗುವರು.

ಮೆರವಣಿಗೆಯು ಹೋಗುವಾಗ ಹೆಣ್ಣು ಬಿಳೀ ಮುಸುಕು ಹಾಕಿಕೊಳ್ಳಬಹುದು; ಆದರೆ ಗಂಡಿನ ಮನೆಯ ಹತ್ತಿರ ಬಾಳೆ ಬಿರುದು ಮಡಗಿದ್ದಲ್ಲಿಗೆ ತಲಪಿದ ಒಡನೆ ಕೆಂಪು ಮುಸುಕನ್ನು ಹಾಕಿಕೊಳ್ಳಬಹುದು.

ದಾರಿಯಲ್ಲಿ ಮೆರವಣಿಗೆಯು ಹೋಗುವಾಗ ಗಂಡೂ ಹೆಣ್ಣೂ ಒಬ್ಬರಿಗೊಬ್ಬರು ಕಾಣದಷ್ಟು ದೂರದಲ್ಲಿರಬಾರದು. ಹೊಳೆ ತೋಡುಗಳನ್ನು ಹುಡುಗನಾಗಲಿ ಹುಡುಗಿಯಾಗಲೀ ಇಳಿದು ದಾಟಬಾರದು; ಎತ್ತಿ ದಾಟಿಸಬೇಕು.

ಮೆರವಣಿಗೆಯು ಹೋಗುವಾಗ ಊರು ನಾಡು ಮುಂದಲೆಗಳಲ್ಲಿ ಬಾಳೆ ಬಿರುದು ಮಡಗಿದ್ದರೆ ಹೆಣ್ಣಿನ ಕಡೆಯವರು ಸ್ವೀಕರಿಸಿ ಅದಕ್ಕೆ ಕೊಡತಕ್ಕ ಹಣವನ್ನು ಕೊಡಬೇಕು.

ಮದುವೆ ಮೆರವಣಿಗೆಯು ಗಂಡಿನ ಮನೆಯ ಹತ್ತಿರ ಬಾಳೆ ಬಿರುದು ಮಡಗಿದ್ದಲ್ಲಿ ಬಂದು ನಿಲ್ಲಬೇಕು.

ಬಾಳೆ ಬಿರುದು ಕೊಡುವುದು : ಹೆಣ್ಣಿನ ಕಡೆಯವರು ಆರು ಬಾಳೆಗಳನ್ನು ಕಡಿದು ಮೇಲೆ ಹೇಳಿದಂತೆ ಮರ್ಯಾದೆಯೊಡನೆ ಮನೆ ಸೇರಬೇಕು.

ಬಾಳೆ ಕಡಿದದ್ದಕ್ಕೆ, ಕಾಲು ತೊಳೆದದ್ದಕ್ಕೆ, ದೀಪ ಹಿಡಿದದ್ದಕ್ಕೆ ಮತ್ತು ಅಗಸನು ಬಟ್ಟೆ ಹಾಸಿದ್ದಕ್ಕೆ ಸಹ ಹೆಣ್ಣಿನ ಕಡೆಯವರು ಹಣ ಕೊಡಬೇಕು.

ಹುಡುಗನೂ ಹುಡುಗಿಯೂ ಮೆಟ್ಟಿಲು ಹತ್ತುವಾಗ ಅವರ ತಲೆಗಳಿಗೆ ಅಕ್ಕಿ ಬಿಸಾಡಬೇಕು.

ಮನೆಗೆ ಸೇರಿದ ಮೇಲೆ ಹುಡುಗನು ಕನ್ನಿ ಕೋಣೆಯಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ, ಕನ್ನಿ ಕಂಬಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಅಲ್ಲಿಂದ ನೆಲ್ಲಕ್ಕಿ ನಡುಬಾಡೆಯಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಬೇಕು.

ಅನಂತರ ಹುಡುಗಿಯನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ನಿಲ್ಲಿಸಿ ಇಷ್ಟವಿರುವವರೆಲ್ಲರೂ ಹಣವನ್ನು ಕೊಡುವರು.

ಅಲ್ಲಿಂದ ಹುಡುಗಿಯನ್ನು ಅವಳ ಕೋಣೆಗೆ ಕರೆದುಕೊಂಡು ಹೋಗಿ ಕೂರಿಸಬೇಕು. ಅಲ್ಲಿ ಅವಳಿಗೆ ಹಾಲನ್ನ ಕೊಡಬೇಕು.

ಮದುವೆ ಮೆರವಣಿಗೆ ಜೊತೆಯಲ್ಲಿ ಹೆಣ್ಣಿನ ಮನೆಯಿಂದ ಬಂದ ನೆಂಟರಿಗೆ ಹೆಣ್ಣಿನ ಮನೆಯಲ್ಲಿ ಗಂಡಿನ ಕಡೆಯವರಿಗೆ ಕೊಟ್ಟಂತೆ ಫಲಾಹಾರಗಳನ್ನು ಕೊಡಬೇಕು.

ನೀರು ತರುವುದು * : ಎಲ್ಲರಿಗೂ ಉಪಚಾರವಾದ ಮೇಲೆ ಹುಡುಗಿಯು ತಲೆಯನ್ನು ಬಾಚಿ ತಲೆಗೆ ವಸ್ತ್ರ ಕಟ್ಟಿ, ಅವಳ ಕಾಲಿಗೆ ಹಾಕಿರುವ ಪಾಡಗ, ಪಿಲ್ಲಿ, ಕಾಲುಸರ, ಗಗ್ಗರಗಳನ್ನೆಲ್ಲಾ ಬಿಟ್ಟಿ ಕಾಲುಂಗುರವನ್ನು ಹಾಕಿಕೊಳ್ಳಬಹುದು. ನೆಲ್ಲಕ್ಕಿಗೆ ಬಂದು ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ, ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಅಲ್ಲಿಂದ ವಾದ್ಯ ದುಡಿ ತಾಳ ಸಮೇತ ದನದ ಕೊಟ್ಟಿಗೆಗೆ ಹೋಗಿ ಅಲ್ಲಿ ಸಗಣಿ ತುಂಬಿಸಿ ಸರಿಪಡಿಸಿರುವ ಸಣ್ಣದೊಂದು ಕುಕ್ಕೆಯನ್ನು ಸಿಂಬಿಯಿಟ್ಟು ಹುಡುಗಿಗೆ ಹೊರಿಸಬೇಕು. ಅವಳ ಜೊತೆಯಲ್ಲಿ ಇನ್ನಿಬ್ಬರು ಕನ್ಯೆಯರು ಅಥವಾ ಮುತ್ತೈದೆಯರು ಒಂದೊಂದು ಕುಕ್ಕೆಯಲ್ಲಿ ಸಗಣಿಯನ್ನು ಹೊತ್ತುಕೊಳ್ಳಬೇಕು. ಸಗಣಿಯನ್ನು ಆ ಕುಟುಂಬದ ಭೂಮಿಯ ಹತ್ತಿರದ ಗದ್ದೆಗೆ ಹಾಕಿಸುವರು. ಸಗಣಿ ಹಾಕಿದ ಕುಕ್ಕೆಗಳನ್ನು ಅಲಲಿಯೇ ಬಿಟ್ಟುಬಿಡಬೇಕು. ಆ ಕುಕ್ಕೆಗಳನ್ನು ಆಳುಗಳು ಹೊತ್ತುಕೊಂಡು ಹೋಗುವರು.

ಗಂಗೆ ಪೂಜೆ : ಅಲ್ಲಿಂದ ಹೆಣ್ಣನ್ನು ಬಾವಿಯ ಹತ್ತಿರ ಕರೆದುಕೊಂಡು ಹೋಗಬೇಕು. ಅಲ್ಲಿ ಒಂದು ತೆಂಗಿನಕಾಯಿ, ಅರ್ಧಪಾವಿನಷ್ಟು ಅಕ್ಕಿ, ವಿಭೂತಿ, ವೀಳ್ಯದೆಲೆ, ಅಡಿಕೆ, ಸುಣ್ಣ, ಪೀಚೆ ಕತ್ತಿ, ಒಂದು ಚಿಪ್ಪು ಬಾಳೆ ಹಣ್ಣು, ಮುಖ ವರಸುವ ಒಂದು ಬಟ್ಟೆಯನ್ನು ಸಹ ಒಂದು ತಟ್ಟೆಯಲ್ಲಿಟ್ಟಿರಬೇಕು. ಹುಡುಗಿಯು ಕೈ ಕಾಲು ಮುಖ ಸಹ ತೊಳೆದು ಒರಸಿ ವಿಭೂತಿ ಧರಿಸಿದ ಮೇಲೆ ಅವಳ ಕೈಗೆ ಸ್ವಲ್ಪ ಅಕ್ಕಿಯನ್ನು ಕೊಡಬೇಕು. ಅವಳು ಅದನ್ನು ಮೂರು ಪಾಲು ಮಾಡಿ ನೀರಿಗೆ ಹಾಕಿ ನಮಸ್ಕರಿಸಬೇಕು. ಕೂಡಲೆ ಅವಳ ಕೈಗೆ ಮೂರು ವೀಳ್ಯದೆಲೆಯನ್ನು ಮತ್ತು ಮೂರು ಅಡಿಕೆಯನ್ನು ಕೊಡಬೇಕು. ಅವಳು ಮೂರು ಅಡಿಕೆಯನ್ನು ಮೂರು ಎಲೆಗಳ ಮೇಲೆ ಒಂದಾಗಿಟ್ಟು ಎಲೆಗಳು ಮಗುಚಿ ಬೀಳದಂತೆ ಎಚ್ಚರಿಕೆಯಿಂದ ಗಂಗೆಗೆ ಬಿಡಬೇಕು. ಆ ಮೇಲೆ ಬಾಳೆ ಹಣ್ಣಿನ ಚಿಪ್ಪನ್ನು ಅವಳ ಕೈಗೆ ಕೊಡಬೇಕು. ಅವಳು ಅವುಗಳನ್ನೆಲ್ಲ ಸ್ವಲ್ಪ ಸ್ವಲ್ಪ

*** ಸಗಣಿ ತೆಗೆದುಕೊಂಡು ಹೋಗುವಾಗಲೂ ನೀರು ತೆಗೆದುಕೊಂಡು ಬರುವಾಗಲೂ ಮುಂದುಗಡೆ ಜನರು ಕುಣಿದುಕೊಂಡು ಹೋಗುವುದು ಪದ್ಧತಿಯಲ್ಲ. ಆದರೆ "ಮಂಗಲತ್ ಮೊಟ್ಟ್" ಮೆಲ್ಲಗೆ ಇರುವುದರಿಂದ ಹುಡುಗಿಯು ತೆಗೆಯುವ ಹೆಜ್ಜೆಗೆ ಸರಿಯಾಗಿ ಕುಣಿಯುತ್ತಾ ಹೋಗುವುದು ಸಮ್ಮತವಾಗಲ್ಪಟ್ಟಿದೆ.**

ಸುಲಿದು ಬಾವಿಯ ದಡದಲ್ಲಿಡಬೇಕು. ಆಮೇಲೆ ಅವಳ ಕೈಗೆ ತೆಂಗಿನಕಾಯಿಯನ್ನೂ ಪೀಚೆ ಕತ್ತಿಯನ್ನೂ ಕೊಡಬೇಕು. ಅವಳು ತೆಂಗಿನಕಾಯಿಯನ್ನೂ ಪೀಚೆ ಕತ್ತಿಯಿಂದ ಒಡೆದು ನೀರನ್ನು ಗಂಗೆಗೆ ಚೆಲ್ಲಿ ತೆಂಗಿನಕಾಯಿಯ ಒಡೆಗಳನ್ನು ಮಗುಚಿ ಬೀಳದಂತೆ ಬಾವಿಗೆ ಹಾಕಬೇಕು. ಅವಳು ಎಲೆ ಅಡಿಕೆ ತಿಂದು ನೀರನ್ನು ತುಂಬಿಸಿ ಇಟ್ಟಿರುವ ಎರಡು ಸಣ್ಣ ಪಾತ್ರೆಗಳನ್ನು ಒಂದರ ಮೇಲೆ ಒಂದಾಗಿ ತಲೆಯಲ್ಲಿ ಹೊತ್ತುಕೊಂಡು ಹೋಗಬೇಕು. ಇನ್ನಿಬ್ಬರೂ ಇವಳ ಜೊತೆಯಲ್ಲಿ ನೀರು ಹೊತ್ತುಕೊಳ್ಳಬೇಕು.

ಕೀಳು ಜಾತಿ ಹೆಂಗಸರನ್ನು ಮದುಮಗಳ ಜೊತೆಯಲ್ಲಿ ಸಗಣಿ ಹೊರುವುದಕ್ಕಾಗಲೀ ನೀರು ತರುವುದಕ್ಕಾಗಲೀ ಬಿಟ್ಟರೆ ಹೆಣ್ಣಿನ ಕಡೆಯವರು ಆಕ್ಷೇಪಿಸಬಹುದು.

ದುಡಿ ತಾಳ ವಾದ್ಯ ಸಮೇತ ನೀರು ತೆಗೆದುಕೊಂಡು ಹೋಗಿ ಮನೆಗೆ ತಲುಪಿ ಅಡುಗೆ ಮನೆಗೆ ಹೋಗಬೇಕು. ಅಲ್ಲಿ ಒಬ್ಬ ಮುತ್ತೈದೆಯು ಆ ನೀರನ್ನು ಇಳಿಸಬೇಕು. ಇಲ್ಲಿಂದ ಅವಳು ನೆಲ್ಲಕ್ಕಿ ನಡುಬಾಡೆಗೆ ಹೋಗಿ ಅಲ್ಲಿ ಸೇರಿರುವ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಬೇಕು. ಅಲ್ಲಿಂದ ಅವಳನ್ನು ಅವಳ ಕೋಣೆಗೆ ಕರೆದುಕೊಂಡು ಹೋಗಿ ಬಿಡುವರು.

ಈ ದಿವಸವೇ (ಬೈಮಂಗ್‌ಲ ದಿವಸ) ನೀರು ತರಿಸಬೇಕು. ಈ ದಿವಸ ಹೊತ್ತು ಮೀರಿತೆಂದು ಮಾರಣೆ ದಿವಸ ನೀರು ತರಿಸುವುದು ವಿರೋಧವಾದ ಪದ್ಧತಿ.

ಪೆಟ್ಟಿಗೆ ತೋರಿಸುವುದು : ಆ ಮೇಲೆ ಹುಡುಗಿಯು ತಂದ ಪೆಟ್ಟಿಗೆ ಬಟ್ಟೆ ಬರೆ ಮತ್ತು ಹಣ ಸಹ ತೋರಿಸಬೇಕು. ಇವುಗಳನ್ನು ನೋಡಿದವರಿಗೆ ಐದು ಹಣ ಕೊಡಬೇಕು.

ಪೆಟ್ಟಿಗೆಯನ್ನು ಬೈಮಂಗ್‌ಲ ದಿವಸ ನೋಡಲು ಅನುಕೂಲವಿಲ್ಲದಿದ್ದರೆ ಮಾರಣೆ ದಿವಸ ನೋಡಬಹುದು.

ಊಟ ಉಪಚಾರ : ಆಮೇಲೆ ಮದುವಣಿಗನ ಸಮೇತ ಎಲ್ಲರೂ ಒಂದು ಸಭೆಯಲ್ಲಿ ಊಟಮಾಡಬೇಕು.

ನೆಂಟರನ್ನು ಬಿಡುವುದು : ಆಮೇಲೆ ಹುಡುಗಿಯ ಜೊತೆಯಲ್ಲಿ ಬಂದವರನ್ನು ವಾದ್ಯ ದುಡಿ ತಾಳ ಸಮೇತ ಬಾಳೆ ಬಿರುದು ಮಡಗಿದ್ದ ಸ್ಥಳದವರೆಗೂ ಬಿಡಬೇಕು.*

ಹೆಸರು ಹಾಕುವುದು : ಆಮೇಲೆ ಮದುವೆ ಹಾಡನ್ನು ಸುರುವಿನಿಂದಲೇ ಹಾಡಿ ಈ ಕೆಳಗಿನ ರೀತಿ ಮುಂದುವರಿಸಬೇಕು. ಆಗ ಹಾಡುವವರು ಹುಡುಗಿಯ ತವರು ಮನೆಯ ಹೆಸರನ್ನು ಬದಲಾಯಿಸಿ ಬೇರೆ ಹೆಸರನ್ನು ಹಾಕಬೇಕು. ಹೆಸರು ಬದಲು ಮಾಡದಿದ್ದರೂ ಈ ಹಾಡನ್ನು ಹಾಡಲೇಬೇಕು.

ಕೇಳೊ ಕೇಳೊ ಸಂಜಾದಿ	ಈ ಒಕ್ಕಡ ಓಣಿಲ್
ಅೈಯ್ಯಣ್ಣ ಬಯಿಂಬನು	ಮಂಗ್‌ಲ ಮರಿಯಣೆ
ಮಾಚಮ್ಮ ಕುಮಾರಿಯು	ಚೆಂಗ ಬಾಳೆ ಮಟ್ಟತ್
ಪಟ್ಟ್ ಪೋಲೆ ಪಟ್ಟಮ	ಜೋಡೆರಂಡ್ ಚೆಂಬ್‌ಕ
ಆ ಒಕ್ಕ ಮನೆಯಿಂಜಿ	"ಉಕ್ಕ್" "ಉಕ್ಕ್"ಂದೆಣ್ಣ್‌ನ.
ಮಂಗ್‌ಲಾಡಿ ಬಂದಿತ್	ಅಕ್ಕಣಕ್ ಸಂಜಾದಿ

*** ನೆಂಟರು ಈ ದಿವಸ ಹೋಗುವುದಿಲ್ಲವಾದರೂ ನೆಂಟರನ್ನು ಬಿಡುವ ಪದ್ಧತಿಯನ್ನು ನಡೆಸಿಯೇ ತೀರಬೇಕು. ಅವರು ಹೋಗುವುದಿಲ್ಲವಾದರೆ ಬಾಳೆ ಬಿರುದಿನಿಂದ ಹಿಂದಕ್ಕೆ ಬರುವರು.**

ಉಂಬಳ ಮನೆಯಿಲ್
ಮಾರೊಲೆಲ್ ತಿತ್ತಾಯಿ
ಪಾ ಕುಡಿಕೆ ಪಾಲೆಲ್ಲ
ಪಾಲುಕ್ಕಿ ಮರಿಂಜತ್.
ಓರಂದೀರಂಡೆಣ್ಣಣೆ
ಮಂಗ್‌ಲ ಮರಿಂಜತ್.
ಜೋಡೆರಂಡ್ ಚೆಂಬ್‌ಲ್
ಕೋತಿಂಗುಂಡ್ ಬಂದಿತ್
ಉಂಬಳ ಮನೆಯಿಲ್
ಅಲ್ಲಿ ಕೋಂದ್ ಬೆಚ್ಚತ್.
ಓರಂದೀರಂಡೆಣ್ಣಣೆ
ಇಲ್ಲವನೂ ಬೆಂದುವೂ
ಈನಂಗುಂಡ್ ಪೋರಾಂದ್
ಪಂಡಿಯ ನಡಪೋಲೆ
ನೀಲ ಕೊಡಿ ಮಾಚಮ್ಮ
ಪಾಲ್ ಕೂಳ್ ಉಂಡಿತ್,
ಆನೆ ಕೊಂಬ್ ಚೀಪಾಯಿ
ಜೋಗ ತಲೆ ಚೀಪಿತ್,
ಕೊಂಬ್ ಕೊಟ್ಟ್ ಪಾಟಾಯಿ
ಚೋಮ ನಿಪ್ಪ ಕೊಟ್ಟ್‌ಕ್
ಚಾಚಿ ಮೆಲ್ಲೆ ಪೋಯಿತ್
ಬೊಳ್ಳೋಟೆರ ಕೂಟೆಲ್
ಚೋಮ ಚಾಣ ಕೊಂಡಿತ್
ಆಯಿರಂಡ ಜಬ್ಬೂಮಿ
ಈ ಭೂಮಿರ ಮೀದಲ್
ನಡಿಕೇರಿಯಂಡ ಒಕ್ಕಡ
ಏಳ್ ಮೂಲೆ ಆಕತ್
ಚೋಮ ಚಾಣ ಇಟ್ಟತ್
ನೀಲಕೊಡಿ ನೀರ್‌ಲ್
ಕಾಲೂ ಮುಃಗೂ ಕತ್ತಿತ್
ಗಂಗೆ ಪೂಜೆ ಮಾಡಿತ್
ನೀಲಕೊಡಿ ನೀರ್‌ನ
ಅಂಗನೂ ಅರುವನೂ
ತನ್ನಡೋರ್ ಊರೋನೂ
ಮಾಚಮ್ಮ ಕುಮಾರಿಕ್
ಪೊನ್ನವ್ವ ಪೆದಲ್‌ಟ್ಟ.
ಈನಂಗುಂಡ್ ಪೋರಾಂದ್
ಊರ್‌ಕಾರ ಬಾಲರೊ
ಅತ್ತಿ ಪತ್ತಿ ಕೊಂಡಿತ್
ವೈಯ್ಯನೆ ಪಿರಿಂಜತ್.
ಒಂದ್ ಕೇಳ್ ಸಂಜಾದಿ
ಐಯ್ಯಣ್ಣ ಬಯಿಂಬಃನ
ಮಣ್ಣರುವ ಬಾಲನ್
ಕನ್ನಿ ಮೂಲೆ ಕೋಂಬರೆ
ನೀಲಕೊಡಿ ಪೊನ್ನವ್ವ
ಬಂದಿತಿಂದ್ ಕೂಡ್‌ನ
ಏಳರೆರ ಒಳ್‌ಕ್
ಕೂಟಿತೆ ಪೊರಟತ್.
ಐಯ್ಯಣ್ಣ ಬಯಿಂಬಃಗೂ
ಪೊನ್ನವ್ವಂಗ್ ದೇವಿಕೂ
ಪೊಮ್ಮುತ್ತ್‌ಸರ ಪೋಲೆ
ಆಣ್ ಪೊಣ್ಣೆಡೆ
ಮೇಂಗಿಪತ್ತ್ ಮಕ್ಕಳಾಯಿತ್
ಪೊನ್ನವ್ವನ್ ದೇವಿಯೊ
ಪೈತಾಂಡೆಕೆಳತಿತ್
ಪನ್ನಂದಾನ ಚಾಕಿತ್
ತಾಂದೇವನೂ ದೇವಿಯೂ
ಈ ಭೂಮಿರ ಮೀದಲ್
ನೂರ್ ಕಾಲ ಬಾವಃ್
ಎಂದೆಣ್ಣಿತ್ ಪಾಡುವ;
ಈ ಪಾಡುವ ಬೆಕ್ಕನ
ಬೆಪ್ಪ ಕೊಮ್ಮೆಡ್‌ಪಕ್ಕ
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ !

ಊರುಪತ್ತಿ : ಊರವರು ಹೋಗುವಾಗ ಊರುಪತ್ತಿ ತೆಗೆದುಕೊಂಡು ಹೋಗಬೇಕು.

ಕೋಣೆಗೆ ಕೂಡಿಸುವುದು : ಆನಂತರ ಹುಡುಗನನ್ನು ಅರುವನು ಅಥವಾ ಬೋಜಕಾರನು ಕೈ ಹಿಡಿದುಕೊಂಡು ಬಂದು ನೆಲ್ಲಕ್ಕಿಯಲ್ಲಿ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ನಾಲ್ಕು ಶುಭಮಾತುಗಳನ್ನು ಹೇಳಿ ಕೋಣೆಗೆ ಕರೆದುಕೊಂಡು ಹೋಗಿ ಬಿಡಬೇಕು.

ಅರುವನಾಗಲೀ ಇತರರಾಗಲೀ ಹುಡುಗನ ಜೊತೆಯಲ್ಲಿ ಕಟ್ಟಳೆ ದಾಟಬಾರದು. ಬಾಗಿಲು ಎಳೆದುಕೊಂಡು ಹಿಂತಿರುಗಬೇಕು.

ಕೋಣೆಯಲ್ಲಿ ಹುಡುಗಿಯು ಮುಸುಕುಹಾಕಿಕೊಂಡು ಇದ್ದಿರಬೇಕು. ಕೋಣೆಗೆ ಸೇರಿದ ಒಡನೆ ಹುಡುಗನು ಹುಡುಗಿಯ ಮುಸುಕನ್ನು ತೆಗೆಯಬೇಕು. ಆಗ ಹುಡುಗಿಯು ಹುಡುಗನ ಕಾಲನ್ನು ಮುಟ್ಟಿ ನಮಸ್ಕರಿಸಬೇಕು. ಆಗ ಹುಡುಗನು ಹುಡುಗಿಗೆ ಏನಾದರೂ ಆಭರಣವನ್ನು ಕೊಡಬೇಕು.

ಕನ್ಯೆಯರು ಮತ್ತು ಮುತ್ತೈದೆಯರು ಮಾಡಬೇಕೆಂದು ಹೇಳುವ ಕೆಲಸವನ್ನು ಹೆತ್ತತಾಯಿ ಯಲ್ಲದೆ ಇತರ ವಿಧವೆಯರು ಮಾಡಕೂಡದು.

"ಉಪಾಧ್ಯಾಯಾನ್ದಶಾಚಾರ್ಯ, ಆಚಾರ್ಯಾಣಾಂ ಶತಂ ಪಿತಾ, ಸಹಸ್ರನ್ನುಪಿತ್ರಾನ್ಮಾತ ಗೌರವೇಣೂತಿರಿಚ್ಯತೇ" ಹತ್ತು ಉಪಾಧ್ಯಾಯರಿಗೆ ಸಮ ಒಬ್ಬ ಆಚಾರ್ಯ, ನೂರು ಆಚಾರ್ಯರಿಗೆ ಸಮ ಒಬ್ಬ ತಂದೆ, ಸಾವಿರ ತಂದೆಗಳಿಗೆ ಸಮವಾದ ಗೌರವಕ್ಕೆ ತಾಯಿಯು ಅರ್ಹಳು.

ಮಕ್ಕಳ ಕೈಗೆ ಹಣ ಕೊಡುವುದು : ಮಾರಣೆ ದಿವಸ ಹುಡುಗಿಯು ಹುಡುಗನ ಮನೆಯಲ್ಲಿ ತೊಟ್ಟಿಲಿನಲ್ಲಿರುವ ಮಕ್ಕಳಿಗೆಲ್ಲ ಹಣ ಕೊಡುವುದುಂಟು.

ಮನೆ ಮೆಟ್ಟುವುದು : ಮದುವೆ ತೀರಿ ಎರಡು ಮೂರು ದಿವದೊಳಗೆ ಹುಡುಗಿಯು ತನ್ನ ತವರು ಮನೆಗೆ ಹೋಗಬೇಕು.

ಹುಡುಗಿಯನ್ನು ಹುಡುಗನ ಮನೆ ಹೆಂಗಸರು ಹೋಗಿ ಅಲ್ಲಿಂದ ಹಿಂದಕ್ಕೆ ಕರೆದುಕೊಂಡು ಬರಬೇಕು.

ಆರು ತಿಂಗಳೊಳಗೆ ಸಮಯವರಿತು ಹುಡುಗನೂ ತನ್ನ ಹೆಂಡತಿಯ ತವರು ಮನೆಗೆ ಹೋಗಬೇಕು. ಹೋಗುವಾಗ ತನ್ನ ಜೊತೆಗೆ ಅರುವನನ್ನೂ ಇನ್ನೊಬ್ಬನನ್ನೂ ಕರೆದುಕೊಂಡು ಹೋಗುವನು. ಹುಡುಗನು ತನ್ನ ಹೆಂಡತಿಯ ತವರು ಮನೆಯಲ್ಲಿ ತೊಟ್ಟಿಲಿನಲ್ಲಿರುವ ಮಕ್ಕಳಿಗೆಲ್ಲ ಹಣ ಕೊಡುವನು.

ಈಗ ಹುಡುಗನು ಹುಡುಗಿಯ ಜೊತೆಯಲ್ಲಿಯೇ ಅವಳ ಮನೆಗೆ ಹೋಗುವುದು ರೂಢಿಯಾಗಿದೆ.

ಪೋಳಿಯ : ಹುಡುಗಿಯು ತವರು ಮನೆಗೆ ಪುನಹ ಹೋಗಿ ಹಿಂತಿರುಗುವಾಗ ಗಂಡಿನ ಮನೆಯವರು ಬಿಟ್ಟು ಹೋಗಿದ್ದ ಪೋಳಿಯವನ್ನು ಹಿಟ್ಟು ತುಂಬಿಸಿ ಗಂಡಿನ ಮನೆಗೆ ಕಳುಹಿಸಬೇಕು.

ಬೆಂದು ಅರಿವ : ಮದುವೆಯಾಗಿ ಸುಮಾರು ಒಂದು ವರುಷದೊಳಗೆ, ಹೆಣ್ಣಿನ ಕಡೆಯವರು ಗಂಡಿನ ಕಡೆಯ ಯಜಮಾನನನ್ನೂ, ಗಂಡಿನ ಕಡೆಯವರು ಹೆಣ್ಣಿನ ಕಡೆಯ ಯಜಮಾನ ನನ್ನೂ ಕರೆಸಬೇಕು.

ಕೂಳ್ ಬೆಪ್ಪ : ಹುಡುಗಿಯು ಗರ್ಭಿಣಿಯಾದ ಮೇಲೆ ಹೆರುವುದಕ್ಕೆ ತವರು ಮನೆಗೆ ಕರೆದುಕೊಂಡು ಬರುವ ಸಮಯದಲ್ಲಿ, ಹೆಣ್ಣಿನ ಮನೆಯವರು ಉಪ್ಪು, ಸಾಸುವೆ, ಎರಡು ಹೊರತು ಮಿಕ್ಕ ಎಲ್ಲಾ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಗಂಡಿನ ಮನೆಯಲ್ಲಿ ಗಂಡಿನ ಮನೆಯವರಿಗೆ ಊಟವನ್ನು ಕೊಟ್ಟು ಮಾರಣೆ ದಿವಸ ಹುಡುಗಿಯನ್ನು ಹೆರುವುದಕ್ಕೆ ಕರೆದುಕೊಂಡು ಹೋಗುವರು.

ಇದು "ತವ್ವಡೆ" ಮೊದಲನೇ ಗರ್ಭದಲ್ಲಿ ಮಾತ್ರ ಮಾಡುವುದು.

ಕೆಲವು ಹತ್ತಿರದ ನೆಂಟರು ಒಳ್ಳೆ ಪದಾರ್ಥಗಳಿಂದ ಕೂಡಿದ ಅನ್ನ ಬುತ್ತಿಯನ್ನು ಕಳುಹಿಸುವುದೂ "ಪೊಟ್ಪೊರೆ"ಯಾಗಿ ಹೋಗುವುದೂ ಉಂಟು.

ಈತ್ ಕರ್ಚಿ : ಹೆಣ್ಣು ಹೆತ್ತರೆ ಆರೈಕೆಗೆ ಬೇಕಾಗುವ ಖರ್ಚನ್ನು ಗಂಡಿನ ಮನೆಯಿಂದ ಕೊಡಬೇಕು.

ಕೂಡಾವಳಿ ಮದುವೆ

ಕೂಡಾವಳಿ ಮದುವೆಯು ಮೂರು ವಿಧವಾಗಿರುತ್ತದೆ.

1. ಸತ್ತು ಹೋದ ಗಂಡನ ಮನೆಯಲ್ಲೆ, ಸತ್ತವನ ಅಣ್ಣ, ತಮ್ಮ ಅಥವಾ ದಾಯಾದಿಯರು ಅವನ ವಿಧವೆಯನ್ನು ಮದುವೆ ಮಾಡಿಕೊಳ್ಳುವುದು.
2. ವಿಧವೆಯನ್ನು ಇತರ ಮನೆಯವರು ಮದುವೆ ಮಾಡಿಕೊಳ್ಳುವುದು.
3. ಗಂಡನು ಬಿಟ್ಟ ಹೆಣ್ಣನ್ನು ಇನ್ನೊಬ್ಬನು ಮದುವೆ ಮಾಡಿಕೊಳ್ಳುವುದು.

ಲಿಂಗಾಯಿತ ರಾಜರ ಕಾಲದಲ್ಲಿ ಕೂಡಾವಳಿ ಮದುವೆ ಕೊಡಗರ ಮದುವೆಯಂತೆ ಮಾಡಕೂಡದೆಂತಲೂ ಶೂದ್ರರ ಮದುವೆಯಂತೆ ಮಾಡ ಬೇಕೆಂತಲೂ ಅಪ್ಪಣೆ ಇತ್ತು. ಆದುದರಿಂದ ಕೂಡಾವಳಿ ಮದುವೆಯು ಪ್ರೋತ್ಸಾಹ ಗೊಳ್ಳದೆಯೂ ಮುಖ್ಯವಾಗಿ ಹೆಂಡತಿ ಸತ್ತವರೂ, ವಯಸ್ಸು ಆದವರೂ ಈ ತರದ ಮದುವೆ ಮಾಡುವದರಿಂದಲೂ ಕೂಡಾವಳಿ ಮದುವೆಯನ್ನು ಆಡಂಭರ ವಿಲ್ಲದೆ ಮಾಡುತ್ತಾ ಈ ಕೆಳಗಿನ ಪದ್ಧತಿಯನ್ನು ಮಾತ್ರ ಇಟ್ಟುಕೊಂಡಿದ್ದಾರೆ.

ಒಂದನೇ ತರದ ಕೂಡಾವಳಿ

ಈ ತರದ ಕೂಡಾವಳಿಯಲ್ಲಿ ಹುಡುಗನ ಮನೆಯಲ್ಲಿ, ಕನ್ನಿ ಮಂಗ್‌ಲದಲ್ಲಿ ಆಗ ಬೇಕಾದಂತೆ ಕರಿಕ್ ಮುರಿಪ ಅಥವಾ ಪಂದ ಪಣಿ ಮತ್ತು ಮಾರಣೆ ದಿವಸ ಹುಡುಗನಿಗೆ ಮುಹೂರ್ತವೂ ಮಾಡಬಹುದು. ಆದರೆ ಹೆಣ್ಣಿಗೆ ಮುಹೂರ್ತವಿಲ್ಲ.

ಹೆಣ್ಣು ಆ ದಿವಸ ಮದುವೆ ಹುಡುಗಿಯಂತೆ ಬಳೆ ಹಾಕಿ ಸ್ನಾನ ಮಾಡಿ ಬಟ್ಟೆ ಬರೆಗಳನ್ನು ಹಾಕಿ ತಳಿಯಕ್ಕಿ ಬೊಳಕ್ ದುಡಿ ತಾಳ ಇಲ್ಲದೆ ಬಂದು ಕನ್ನಿ ಕೋಂಬರೆ ಕನ್ನಿ ಕಂಬ ಮತ್ತು ನೆಲ್ಲಕ್ಕಿ ದೀಪಕ್ಕೆ ಅಕ್ಕಿ ಹಾಕಿ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಒಂದು ಕೋಣೆಯಲ್ಲಿ ಕೂತುಕೊಳ್ಳಬೇಕು. ಅಲ್ಲಿ ತಳಿಯಕ್ಕಿ ಬೊಳಕ್ ಇರಬೇಕು. ವಾದ್ಯವಿರಬಹುದು. ಇವಳು ಮುಸುಕು ಹಾಕಬೇಕಿಲ್ಲ. ಹುಡುಗನ ಮುಹೂರ್ತವಾದ ನಂತರ ಹೆಣ್ಣು ಕುಳಿತಿರುವ ಕೋಣೆಯಲ್ಲಿ ಒಬ್ಬ ಮುತ್ತೈದೆಯು ಅವಳ ತಲೆಗೆ ಅಕ್ಕಿ ಹಾಕಿ ಹಾಲು ಕುಡಿಸಿ ಹಣವನ್ನು ಕೊಡಬೇಕು. ಇತರರೂ, ಹಣ ಕೊಡಬಹುದು. ಇವಳು ಆ ಹಣವನ್ನು ನಿಂತು ತೆಗೆದುಕೊಳ್ಳಬೇಕು.

ಹುಡುಗನ ಮುಹೂರ್ತ ಕಳೆದು ಊಟ ತೀರಿದ ಮೇಲೆ ಹುಡುಗನ ಮದುವೆಯು ಹೊರಡುವಂತೆ ಮೆರವಣಿಗೆ ಹೊರಟು ಬಾಳೆ ಬಿರುದಿನ ಹತ್ತಿರ ಹೋಗಿ ಬಾಳೆಗಳನ್ನು ಕಡಿದು ದುಡಿತಾಳ ವಾದ್ಯ ಸಮೇತ ಹಿಂತಿರುಗಿ ಮನೆಗೆ ಬರುವರು. ಮದುವೆ ಹೆಣ್ಣು ಜೊತೆಯಲ್ಲಿ ಹೋಗಕೂಡದು. ಈ ದಿವಸವೇ ಇವನನ್ನು ಕೋಣೆಗೆ ಕೂಡಿಸುವರು.

ಮುಹೂರ್ತ ಸಮಯದಲ್ಲಿ ಮದುವೆ ಹಾಡನ್ನು ಸ್ವಲ್ಪ ವ್ಯತ್ಯಾಸವಾಗಿ ಹಾಡಬೇಕು. ಸುರುವಿನಿಂದಲೇ ಹಾಡುತ್ತಾ ಬಂದು 66ನೇ ಪುಟದಲ್ಲಿ "ಚೋತ್ ಚೋತ್ ಚುಣ್ಣಾಯಿ" ಎಂಬಲ್ಲಿಂದ ಈ ಕೆಳಗಿನ ರೀತಿ ಮುಂದುವರಿಸಬೇಕು.

ಚೋತ್ ಚೋತ್ ಚುಣ್ಣಾಯಿ
ತೇಡಿಂಗೊಂಡ್ ಪೋಕಣೆ
ತೇಡಿ ಪೋನ ಪಾಬಳ್ಳಿ
ಕಾಲ್‌ಕೆ ತೊರೆ ಬುದ್ದ
ಎನ್ನನೆಂದರಿವಿರ?
ತನ್ನಡಣ್ಣ ದೇವೈಯ್ಯ
ಕಾಲ ಕಂಡ್ ಪೋನಲ್ಲಿ
ಅಣ್ಣ ಬೆಚ್ಚ ಅತ್ತಿಗೆ
ಪಂಡಿಯ ನಡಪೋಲೆ
ಪೊಣ್ಣಾಯಿ ನಡಕಲು
ಎಂದೆಣ್ಣಿ ನೆನತಿತ್
ಚೀಲ ನಲ್ಲ ಬಾಲನ್
ಬೈ ಪಿರಿಂಜಿ ಬಂದಿತ್
ಮಚ್ಚಿ ಮನೆಕೇರಿತ್
ತನ್ನ ಪೆತ್ತ ಅವ್ವಂಗ್
ಈ ಸುದ್ದಿನರ್‌ಪ್‌ಚಿ.

ಈ ಹೆಣ್ಣಿಗೆ ಈ ಮನೆತನದಲ್ಲಿ ಸಮ್ಮಂಧವು ಮೊದಲೇ ಕೊಟ್ಟಿರುವುದರಿಂದ ಪುನಹ ಸಮ್ಮಂಧ ಕೊಡತಕ್ಕ ಅವಶ್ಯವಿಲ್ಲ.

ಕರಿಕ್ ಮುರಿಪದಾಗಲೀ, ಪಂದ ಪಣಿಯಾಗಲೀ, ಮುಹೂರ್ತವಾಗಲೀ ನಡೆಸದೆ ಮದುವೆ ದಿವಸ ಸಾಯಂಕಾಲವಾಗುವಾಗ ದುಡಿ ತಾಳ ವಾದ್ಯವೇನೂ ಇಲ್ಲದೆ ಸ್ನಾನ ಮಾಡಿಕೊಂಡು ಬಂದು ಕನ್ನಿ ಕೋಣೆಗೂ, ಕನ್ನಿ ಕಂಬಕ್ಕೂ ಅಕ್ಕಿ ಹಾಕಿ ನೆಲ್ಲಕ್ಕಿ ನಡುಬಾಡೆಯಲ್ಲಿ ನಿಂತು ನಾಲ್ಕು ಜನರು ಗಂಡಿಗೆ ಮಾತ್ರ ಅಕ್ಕಿ ಹಾಕಿ ಹಣ ಕೊಟ್ಟು ಊಟ ತೀರಿಸಿ ಕೋಣೆಗೆ ಕೂಡಿಸು ವುದೂ ಉಂಟು. ಹಾಗೂ ನಾಲ್ಕು ಜನ ಊರವರೂ ಅರುವನೂ ಸಹ ಇರಬೇಕು.

ಎರಡನೇ ತರದ ಕೂಡಾವಳಿ

ಈ ತರದ ಕೂಡಾವಳಿ ಮದುವೆ ಮಾಡುವ ಮೊದಲು ಸತ್ತು ಹೋದ ಗಂಡನ ಮನೆಯ ಸಮ್ಮಂಧವನ್ನು ಹೆಣ್ಣಿಗೆ ತಪ್ಪಿಸಬೇಕು ಮತ್ತು ಹೆಣ್ಣನ್ನು ಅವಳ ತವರು ಮನೆಯಿಂದಲೇ ಮದುವೆ ಮಾಡಬೇಕು.

* "<u>ಕಲ್ಲ್ ಮರ ಕೈಪ</u>" – "<u>ಸಮ್ಮಂಧ ಅಡಕುವ</u>" – ಹೆಣ್ಣಿಗೆ ಗಂಡನ ಮನೆಯಿಂದ ಸಂಬಂಧ ತಪ್ಪಿಸುವುದಕ್ಕೆ ಹೆಣ್ಣಿನ ಮನೆಯ ಒಬ್ಬನು, ಅರುವನು, ಮತ್ತೊಬ್ಬನು ಅಂತು ಮೂರು ಜನರು ಹೋಗಬೇಕು. ಅಲ್ಲಿಂದ ಸಂಬಂಧ ತಪ್ಪಿಸಿ ಹೆಣ್ಣಿನ ಪೆಟ್ಟಿಗೆ ಮುಂತಾದವುಗಳನ್ನು ತೆಗೆದುಕೊಂಡು ಹೋಗಬೇಕು.

"ಕಲ್ಲ್ ಮರ ಕೈಪ" ಈ ರೀತಿಯಾಗಿರುತ್ತದೆ.

ಹೆಣ್ಣಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ
ಅರುವನೂ, ಸಾಲ್ ಕೆಟ್ಟಿ ನಿಂದಿರಾ?

*** "ಕಲ್ಲ್ ಮರ ಕೈಪ" ಎಂಬುದನ್ನು ಕೆಲವರು "ಕಲ್ಲ್‌ಪರ ಕೈಪ"ಯೆಂತಲೂ ಕೆಲವರು "ಕಲ್ಲುಂಬುಳಿ ಕೈಪ" ಯೆಂತಲೂ ತಪ್ಪರ್ಥದಿಂದ ಹೇಳುವರು. ಕನ್ನಿ ಮದುವೆಯಲ್ಲಿಯೂ ಸಹ ಹುಡುಗಿಯರು ತವರು ಮನೆಯಲ್ಲಿನ ಹಕ್ಕನ್ನು ತಪ್ಪಿಸಿ ಅದರ ಬದಲಿಗೆ ಹನ್ನೆರಡು ಅಚ್ಚಿ ಚಿನ್ನವನ್ನು ಕೊಡುವುದಕ್ಕೆ "ಕಲ್ಲ್ ಮರ ಕೈಪ"ಯೆಂದೇ ಹೆಸರು. ಆಗ ಸಮ್ಮಂಧ ಕೊಡುವ ಅಂಶವೇ ಮುಖ್ಯವಾದುದರಿಂದ "ಕಲ್ಲ್ ಮರ ಕೈಪ" ಎಂಬುದನ್ನು ವಾಡಿಕೆಯಾಗಿ ಉಪಯೋಗಿಸುವುದಿಲ್ಲ. "ಕಲ್ಲ್ ಮರಕೈಪ" ಅಂದರೆ "ಕಲ್ಲ್ ಮರ ಸಮೇತ ಸಂಬಂಧ ಅಡಕುವ" ಎಂದರ್ಥ. ಈ ಕಾರಣದಿಂದಲೇ ತವರು ಮನೆಯ ಅಥವಾ ಬಾಳಿಕೆ ಮನೆಯ ಹಕ್ಕನ್ನು ತಪ್ಪಿಸುವುದಕ್ಕೆ ಕಡೇ ಆಸ್ತಿಗಳಾದ "ಕಲ್ಲುಮರ" ಮಾತ್ರ ಎತ್ತಿಕೊಂಡು "ಕಲ್ಲ್ ಮರಕೈಪ" ಎಂದು ಹೇಳುವರು.**

ಗಂಡಿನ ಅರುವ : ನಿಂದತ್.

ಹೆಣ್ಣಿನ ಅರುವ : ಆನಕ್ಕಿಕ ಪಟ್ಟಮಾಡ ಸೋಮವ್ವಂದೆಣ್ಣುವ ಕುಞ್ಞಿನ ನಡಿಕೇರಿಯಂಡ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಬಾಳ್ ಬಾಕೆ ಬಂದಲ್ಲಿ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಆಯುಷ್ಯ ಕೊರುವಾಯಿತೂ, ಸೋಮವ್ವಂದೆಣ್ಣುವ ಕುಞ್ಞಿರ ಅದೃಷ್ಟ ಕೆಟ್ಟದಾಯಿತೂ ಒಡೆಯನೂ ಪೊಣ್ಣಾಯಿತ್ ಪತ್ತ್ ಕಾಲ ಬದ್ದ್ ಬಾವಕ್ ರುಣ ಇಲ್ಲತಾನಗುಂಡ್, ಇಂದಾಕಣೆ ನಿಂಗಡ ಪೊಮ್ಮಕ್ಕ ಮಕ್ಕಂದೆಣ್ಣಿತಿಂಜ ಸೋಮವ್ವಂದೆಣ್ಣುವ ಕುಞ್ಞಿನ, ಪೊಣ್ಣ್ ಕೆಟ್ಟತೇಂಗಿ ತಾಮನೆಂದ್, ಬಯ್ಯಕ್ ಕಾಕಿಯಂಡ್ ಪೋಲುವ?

ಗಂಡಿನ ಅರುವ : ಕ್ೇನಾಳ್ ಮರಿಯಾದಿ ಪ್ರಕಾರ.

ಹೆಣ್ಣಿನ ಅರುವ : ಅನಕ ಸೋಮವ್ವಂದೆಣ್ಣುವ ಕುಞ್ಞಿ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಬಾಳ್ ಬಾಕೆ ಬಪ್ಪಕ, ಅಞ್ಞೂರ್ ಬಿರಾನ್‌ರ ಪೊಟ್ಟಿಲ್ ಆಯಿರ ಬಿರಾನ್‌ರ ಮಾಲ್‌ನ ಸಾಲಗಂಡ ಬಾಲಡಂಗ ತೆರಕಿಯಂಡ್ ಬಂದಾಂಡ, ಉಂಡಿತ್ ಉಡ್‌ತಿತ್ ಮಿಕ್ಕ್‌ನಾನ ಬಯ್ಯಕ್ ಎಡ್‌ತಂಡ್ ಪೋಲುವ?

ಗಂಡಿನ ಅರುವ : ಕ್ೇ ಮರಿಯಾದಿ ಪ್ರಕಾರ.

ಹೆಣ್ಣಿನ ಅರುವ : ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್, ಆನಕ ಸೋಮವ್ವಂದೆಣ್ಣುವ ಕುಞ್ಞಿ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಸಾಲ್ ಬಾಕೆ ಬಂದಲ್ಲಿ, ಸೋಮವ್ವಂಗ್ ಚೂದ್‌ಕ್ ಇರ್‌ಂಬ್ ಚೂಡೆಂಕ್ ಮೊದಲ್ ಒಂದ್ ತೊಟ್ಟ್ ನೂರೋಳ ನಡಿಕೇರಿಯಂಡ ಒಕ್ಕಡ ಮನೆಲ್ ಸಮ್ಮಂಧ ಕೊಡ್‌ಪಕ ಪಟ್ಟಮಾಡ ಒಕ್ಕಡ ಮನೆಲ್ ಸೋಮವ್ವಂಗಿಂಜ ಸಮ್ಮಂಧತ್‌ನ ಕೊವ್ವಂಜಿ ನಿಂಗ ತಂದ ಪ್ಪನಂದಚ್ಚಿ ಪೊನ್ನ್ ಇದರಿ, ಬೆಚ್ಚಿತಪ್ಪ, (ಹನ್ನೊಂದು ಕಲ್ಲು ಹರಳುಗಳನ್ನು ಕೊಡಬೇಕು.)

ಹೆಣ್ಣಿನ ಅರುವ : ಬಾತ್. ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್.

ಅಷ್ಟರಲ್ಲಿ ನೆಲ್ಲಕ್ಕಿ ನಡು ಬಾಡೆಯಲ್ಲಿ ಹೆಣ್ಣಿನ ತವರು ಮನೆಯಿಂದ ತಂದಿದ್ದ ಎಲ್ಲಾ ಸಾಮಾನುಗಳನ್ನು ಮಡಗಿರಬೇಕು. ಹೆಣ್ಣಿನ ಕಡೆಯವರು ಈ ಸಾಮಾನುಗಳನ್ನು ಅಲ್ಲಿಂದ ಸಾಗಿಸಿಕೊಂಡು ಹೋಗಬೇಕು.

ಕಲ್ಲ್‌ಮರ ಕೈಪ ಸಮಯದಲ್ಲಿ ಹೆಣ್ಣು ಅಲ್ಲಿ ಇರಬೇಕಿಲ್ಲ.

ಆಮೇಲೆ ಇವಳು ಕೂಡಾವಳಿ ಮಾಡಿಕೊಳ್ಳಬಹುದು. ಆದರೆ ಗಂಡನು ಸತ್ತು ಒಂದು ವರುಷವಾದರೂ ಆಗಬೇಕು.

ಈ ಕೂಡಾವಳಿಯಲ್ಲಿ ಕನ್ನಿ ಮದುವೆಯಂತೆಯೇ ಮದುವೆ ಕುರಿ ಮಾಡಬೇಕು ಮತ್ತು "ಕರಿಕ್ ಮುರಿಪ" ಮತ್ತು "ಪಂದ ಪಣಿ" ಹೆಣ್ಣಿನ ಮನೆಯಲ್ಲಿ ಮಾಡಿ ಮಾರಣೆ ದಿವಸ ಊರನ್ನು ಸೇರಿಸಿ ಕನ್ನಿ ಮದುವೆಯಲ್ಲಿ ಹುಡುಗಿಯು ಬಳೆ ತೊಟ್ಟು ಸ್ನಾನ ಮಾಡಿ ಮದುವೆ ಉಡುಪು ಹಾಕಿ ಬರುವಂತೆ ಬರುವಳು. ಸ್ನಾನ ಮಾಡಿ ಬರುವಾಗ ವಾದ್ಯವಿರಬಹುದು. ದುಡಿ ತಾಳ ತಳಿಯಕ್ಕಿ ಬೊಳಕ್ ಇರಕೂಡದು. ಹೆಣ್ಣು ಕನ್ನಿ ಕೋಂಬರೆ, ಕನ್ನಿ ಕಂಭ ಮತ್ತು ನೆಲ್ಲಕ್ಕಿಗೆ ಅಕ್ಕಿ ಹಾಕಿ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಒಂದು ಕೋಣೆಯಲ್ಲಿ ಹೋಗಿ ಕುಳಿತುಕೊಳ್ಳಬೇಕು. ಕೋಣೆಯಲ್ಲಿ ತಳಿಯಕ್ಕಿ ಬೊಳಕ್ ಮಡಗಬೇಕು. ಅಲ್ಲಿ ಇಷ್ಟವಿರುವವರು ಹೆಣ್ಣಿಗೆ ಹಣ

ಕೊಡಬಹುದು. ಊರವರು ದುಡಿ ತಾಳ ಸಮೇತ ಹಾಡಬಹುದು.

ಕರಿಕ್ ಮುರಿಪದಾಗಲೀ ಪಂದ ಪಣಿಯಾಗಲೀ ಮಾಡದೆ ಸಾಯಂಕಾಲ ವಾಗುವಾಗ ಬಳೆ ತೊಟ್ಟು ಸ್ನಾನ ಮಾಡಿ ಉಡುಪು ಹಾಕಿ ದುಡಿ ತಾಳವಾದ್ಯವೇನೂ ಇಲ್ಲದೆ ಸಾಯಂಕಾಲ ಮಾತ್ರ ನಾಲ್ಕು ಜನ ಊರವರನ್ನೂ ಅರುವನನ್ನೂ ಸಹ ಸೇರಿಸಿ ಅನ್ನ ಕೊಟ್ಟು ಗಂಡು ಬರುವ ಹೊತ್ತಿಗೆ ಸರಿಯಾಗಿ ಮಿಕ್ಕ ಆಚಾರಗಳನ್ನು ನಡಿಸುವುದೂ ಉಂಟು. ಹೇಗೂ ಊರವರಿಗೆ ಊರು ಪತ್ತಿ ಕೊಡಬೇಕು.

ಗಂಡು ಮನೆಯ ಒಳಗಿನ ಐಮರದಲ್ಲಿ ಅಥವಾ ಕುರ್ಚಿಯಲ್ಲಿ ಕೂತು ಅಲ್ಲಿಂದಲೇ ಮುಹೂರ್ತ ನಡಿಸಿಕೊಳ್ಳಬೇಕು. ಜನರು ಅಕ್ಕಿ ಹಾಕಿ ಹಣ ಕೊಡುವಾಗ ಗಂಡು ಎದ್ದು ನಿಂತುಕೊಳ್ಳಬೇಕು.

ಮದುವೆ ಮೆರವಣಿಗೆಯು ಗಂಡಿನ ಮನೆಗೆ ತಲುಪಿದ ಮೇಲೆ ಸಗಣಿ ಹಾಕುವದಾಗಲಿ ನೀರು ತರುವದಾಗಲೀ ಇಲ್ಲ. ಮೆರವಣಿಗೆಯಲ್ಲಿ ಹೆಣ್ಣು ಮುಸುಕು ಹಾಕಬೇಕು.

ಗಂಡಿನ ಮದುವೆಯು ಹೆಣ್ಣಿನ ಮನೆಗೆ ತಲುಪುವಾಗ ಹೆಣ್ಣಿನ ಮನೆಯಲ್ಲಿ ಬಾಳೆ ಬಿರುದು ಮಡಗಿದ್ದರೆ, ಹೆಣ್ಣಿನ ಕಡೆಯವರಿಗೂ ಗಂಡಿನ ಕಡೆಯವರಿಗೂ ಗಂಡಿನ ಮನೆಯಲ್ಲಿ ಬಾಳೆ ಬಿರುದು ಮಡಗಬೇಕು.

ವಿಧವೆಗೆ ಪುನರ್ವಿವಾಹವು ಆದ ಮೇಲೆ ಮುತ್ತೈದೆಯಂತೆ ಎಲ್ಲಾ ಮರ್ಯಾದೆಗಳಿಗೂ ಹಕ್ಕಿರುವುದು. ಮುತ್ತೈದೆಯು ನಡಿಸಬಹುದಾದ ಎಲ್ಲಾ ಆಚಾರಗಳನ್ನು ಇವಳು ನಡಿಸಬಹುದು.

ಮೂರನೇ ತರದ ಕೂಡಾವಳಿ

ಈ ತರದ ಕೂಡಾವಳಿ ಆಗುವ ಮೊದಲು ಮೊದಲನೆ ಮದುವೆಯು ರದ್ದು ಆಗಲೇಬೇಕು. ಉಭಯ ಕಡೆಯವರು ಒಪ್ಪಿದ ಹೊರತು ಮದುವೆಯನ್ನು ರದ್ದು ಮಾಡುವುದಕ್ಕೆ ಆಗುವುದಿಲ್ಲ. ಒಂದು ಕಡೆಯು ಬಿಡಬೇಕೆಂದೂ ಇನ್ನೊಂದು ಕಡೆಯು ಕೂಡದೆಂದೂ ಆಗಿ ಹೋದರೆ ಕಚೇರಿಯಲ್ಲಿ ಅಥವಾ ನಾಡು ಪಂಚಾಯಿತಿಗೆಯಲ್ಲಿ ರದ್ದು ಮಾಡುವುದಕ್ಕೆ ತಕ್ಕ ರುಜುವಾತು ಕೊಟ್ಟು ರದ್ದು ಮಾಡಬಹುದು.

ಈ ತರದ ಕೂಡಾವಳಿಗೂ ಎರಡನೇ ತರದ ಕೂಡಾವಳಿಗೂ ಮದುವೆಯ ಆಚಾರದಲ್ಲಿ ಏನೊಂದೂ ವ್ಯತ್ಯಾಸವಿಲ್ಲ. ಆದರೆ "ಕಲ್ಲ್ ಮರಕೈಪ"ದರಲ್ಲಿ ವ್ಯತ್ಯಾಸವನ್ನು ಈ ಕೆಳಗಿನ ರೀತಿ ಹೇಳಬೇಕು.

ಹೆಣ್ಣಿನ ಅರುವ : ಸೋಮವ್ವಂದೆಣ್ಣುವ ಕುಞ್ಞಿ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಬಾಳ್ ಬಾಕೆ ಬಂದಲ್ಲಿ ಅಪ್ಪೈಯ್ಯಂದೆಣ್ಣುವ ಕುಞ್ಞಿಕೂ ಸೋಮವ್ವಂದೆಣ್ಣುವ ಕುಞ್ಞಿಕೂ ಒತ್ತ್ ಬಾರತಾನಂಗುಂಡ್ ಇಂದಾಕಣೆ ನಿಂಗಡ ಪೊಮ್ಮಕ್ಕ ಮಕ್ಕ.... .... ಎಂದು ಮುಂದುವರಿಸಬೇಕು.

ಇವಳು ಆರು ತಿಂಗಳವರೆಗೆ ಮದುವೆ ಮಾಡಕೂಡದು.

ಕುತ್ತಿಕ್ ನಿಪ್ಪದ್ – ಒಕ್ಕ ಪರಜೆ.

"ಒಕ್ಕ ಮುಡಿಯುವ ಕಾಲಕ್ ಪೊಣ್ಣ್‌ನ ಪೆತ್ತ್" ಎಂಬ ಗಾದೆಗೆ ಅನುಸಾರವಾಗಿ ಒಂದು ಮನೆತನವು ನಷ್ಟವಾಗಿ ಒಂದು ಹೆಣ್ಣು ಮಾತ್ರ ಇದ್ದರೆ, ಆ ಹೆಣ್ಣನ್ನು ಬೇರೆ ಮನೆತನಕ್ಕೆ ಮದುವೆಯಾದರೆ ಹೆಣ್ಣಿನ ಮನೆತನದ ಹೆಸರು ಉಳಿಯುವುದಿಲ್ಲವೆಂದು, ಆ ಹೆಣ್ಣನ್ನು

ಅದೇ ಮನೆಯಲ್ಲಿ ಮದುವೆ ಮಾಡಿ ಗಂಡನ್ನು ಆ ಕುತ್ತಿಗೆ ನಿಲ್ಲಿಸುವರು. ಇದಕ್ಕೆ "ಒಕ್ಕ ಪರಜೆ"ಯೆಂದೂ "ಕುತ್ತಿಕ್ ನಿಪ್ಪದ್"ಯೆಂದೂ ಹೆಸರು.

ಈ ಮದುವೆಯಲ್ಲಿ ಗಂಡಿಗೂ ಹೆಣ್ಣಿಗೂ ಹೆಣ್ಣಿನ ಮನೆಯಲ್ಲಿ ಒಟ್ಟಿಗೆ ಒಂದೇ ಮುಹೂರ್ತವಿರುವುದು. ಮುಹೂರ್ತ ತೀರಿ ಗಂಡು ಹೆಣ್ಣಿನ ಕೈ ಹಿಡಿದು ಎಬ್ಬಿಸಿದ ಒಡನೆ ಈ ರೀತಿ ಸಂಬಂಧ ಪರಜೆಯನ್ನು ಹೇಳಬೇಕು. ಗಂಡಿನ ಮನೆಯವರೂ, ನೆಂಟರಿಷ್ಟರೂ, ಗಂಡಿನ ಮನೆತನದ ಅರುವನೂ ತಪ್ಪದೆ ಇರಬೇಕು.

ಹೆಣ್ಣಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ ಅರುವನೂ ಸಾಲ್ ಕೆಟ್ಟಿ ನಿಂದಿರಾ?

ಗಂಡಿನ ಅರುವ : ನಿಂದತ್.

ಹೆಣ್ಣಿನ ಅರುವ : ಪಟ್ಟಮಾಡ ಒಕ್ಕಡ ಸೋಮಕ್ಕಂದೆಣ್ಣುವ ಕುಞ್ಞಿನ ನಡಿಕೇರಿಯಂಡ ಒಕ್ಕಡ ಅಪ್ಪೈಯ್ಯಂದೆಣ್ಣುವ ಕುಞ್ಞಿರ ಬಾಳ್ ಬಾಕೆ ಕೂಡುವಲ್ಲಿ ಈ ಒಕ್ಕಡ ಮನಸ್ಥಾನತ್ ಆಣಾಯಿತ್ ಪರಂದದ್ ಇಂದ್ ಇಲ್ಲಂತಾನಂಗುಂಡ್, ಅಪ್ಪೈಯ್ಯಂದೆಣ್ಣುವ ಕುಞ್ಞಿನ ಈ ಒಕ್ಕಕ್ ಮೊರಡಾಯಿತ್ ನಿಪ್ಪಿಚಿಟ್ಟವಲುವ?

ಗಂಡಿನ ಅರುವ : ಕ್‌ನಾಳ್ ಮರಿಯಾದಿ ಪ್ರಕಾರ. ಆನಕ ನಡಿಕೇರಿಯಂಡ ಒಕ್ಕಡ ಅಪ್ಪೈಯ್ಯಂದೆಣ್ಣುವ ಕುಞ್ಞಿ ಈ ಪಟ್ಟಮಾಡ ಒಕ್ಕಡ ಮೊರಡಾಯಿತ್ ನಿಪ್ಪಾನಂಗುಂಡ್ ಈ ಒಕ್ಕಡ ಆಯಿರ ಬಟ್ಟಿ ಭೂಮಿ, * ಒಂದ್ ತೊಟ್ಟ್ ನೂರೋಳ ಸಮ್ಮಂಧ ಕೊಡ್‌ತಿರಾ?

ಹೆಣ್ಣಿನ ಅರುವ : ಕೊಡ್‌ತತ್.

ಗಂಡಿನ ಅರುವ : ಆನಕ ಇಂದಾಕಣೆ ನಡಿಕೇರಿಯಂಡ ಒಕ್ಕಡ ಅಪ್ಪೈಯ್ಯಂದೆಣ್ಣಿತಿಂಜ ಕುಞ್ಞಿ ಇಂದ್ ತೊಟ್ಟ್ ಮಿಞ್ಞಕ್ ಈ ಪಟ್ಟಮಾಡ ಒಕ್ಕಡ ಅಪ್ಪೈಯ್ಯಂದೆಣ್ಣಿತ್ ಪೆದಕೊಂಡ್ ನಡಕಲುವಾ?

ಹೆಣ್ಣಿನ ಅರುವ : ಕ್‌ನಾಳ್ ಮರಿಯಾದಿ ಪ್ರಕಾರ.

ಗಂಡಿನ ಅರುವ : ಇದರಿ ಪನ್ನೆರಂಡ್ ಅಚ್ಚಿರ ಪೊನ್ನ್. (ಹನ್ನೆರಡು ಕಲ್ಲು ಹರಳುಗಳನ್ನು ಕೊಡಬೇಕು.)

ಹೆಣ್ಣಿನ ಅರುವ : ಬಾತ್ – ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್.

ಇನ್ನು ಅಪ್ಪೈಯ್ಯನಿಗೆ ತಂದೆ ಮನೆಯ ಹಕ್ಕು ತಪ್ಪಿತು.

ಅಂಥ ಹೆಣ್ಣು ಇಲ್ಲದೆ ತಂದೆ ತಾಯಿ ಮಾತ್ರ ಇದ್ದು ಮಕ್ಕಳಾಗುವ ಸಂಭವ ಇಲ್ಲದಿದ್ದರೂ ಕುತ್ತಿಕ್ ನಿಲ್ಲಿಸಬಹುದು. ಇದಕ್ಕೆ ಕನ್ನಡದಲ್ಲಿ ದತ್ತು ಸ್ವೀಕಾರವೆನ್ನುವರು.

---

* **"ಆಯಿರ ಬಟ್ಟಿ ಭೂಮಿ" ಎಂದು ಹೇಳಿದ ಮೇಲೆ ಹೆಣ್ಣಿಗೆ ಕನ್ನಿ ಮದುವೆಯಲ್ಲಿ ಸಮ್ಮಂಧ ಕೊಡುವಾಗ ಹೇಳುವ ಹಾಗೆ ಮಿಕ್ಕವುಗಳೆಲ್ಲವನ್ನು ಹೇಳುವುದು.**

ಪಚ್ಚಡಕ್ ನಡಪದ್ – ಮಕ್ಕ ಪರಜೆ

ಒಂದು ಮನೆತನದಲ್ಲಿ ಒಂದು ಹೆಣ್ಣು ಮಾತ್ರ ಇದ್ದು ಆ ಹೆಣ್ಣಿನ ಮನೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸ್ವಜಾತಿಯಾದ ಹುಡುಗನನ್ನು ಆ ಕುಟುಂಬದಲ್ಲಿ ಕುತ್ತಿಗೆ ನಿಲ್ಲಲು ಕೇಳಿದರೆ, ಆ ಗಂಡಿಗೆ ಅನುಕೂಲವಿಲ್ಲದ ಸಂದರ್ಭದಲ್ಲಿ ಕುತ್ತಿಗೆ ನಿಲ್ಲದೆ ಪಚ್ಚಡಕ್ಕೆ ನಡಿಯುವನು.

ಪಚ್ಚಡಕ್ ನಡಿಯುವುದೆಂದರೆ ಹೆಣ್ಣಿಗೋಸ್ಕರ ನಡಿಯುವುದೆಂಬ ಉಪಲಕ್ಷಣದ ಮಾತು. ಇದರಲ್ಲಿ ಹೆಣ್ಣಿಗೆ ಗಂಡು ಬಟ್ಟೆ ಬರಿ ಕೊಡಬೇಕೆಂಬುದು ಕೊಡಗರ ಪದ್ಧತಿಯಲ್ಲ. ಅದಕ್ಕೆ ವಿರೋಧವಾಗಿ ಗಂಡಿಗೆ ಹೆಣ್ಣಿನ ಆಸ್ತಿಗೆ ಏನೊಂದೂ ಹಕ್ಕಿಲ್ಲವಾದರೂ ಅವನಿಗೆ ಒಬ್ಬಂಗಾಲವಿದೆ.

ಒಬ್ಬಂಗಾಲ : ಗಂಡು ಹೆಣ್ಣಿನ ಮನೆಯಲ್ಲಿ ಇರುವಷ್ಟು ದಿವಸ ಇವನಿಗೆ ಉಣ್ಣಲೂ ಉಡಲೂ ಕೊಡಬೇಕು. ಅದಕ್ಕೆ ಒಬ್ಬಂಗಾಲವೆಂದು ಹೆಸರು.

ಈ ಪದ್ಧತಿಯಲ್ಲಿಯೂ ಗಂಡಿಗೂ ಹೆಣ್ಣಿಗೂ ಹೆಣ್ಣಿನ ಮನೆಯಲ್ಲಿ ಮಾತ್ರ ಮುಹೂರ್ತವಿರುತ್ತದೆ. ಮುಹೂರ್ತವಾಗಿ ಗಂಡು ಹೆಣ್ಣಿನ ಕೈ ಹಿಡಿದು ಎಬ್ಬಿಸಿದ ಒಡನೆ ಮಕ್ಕ ಪರಜೆಯನ್ನು ಈ ರೀತಿ ಹೇಳಬೇಕು.

ಹೆಣ್ಣಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ ಅರುವನೂ ಸಾಲ್ ಕೆಟ್ಟಿ ನಿಂದಿರಾ?

ಗಂಡಿನ ಅರುವ : ನಿಂದತ್.

ಹೆಣ್ಣಿನ ಅರುವ : ಈ ಪಟ್ಟವಾಡ ಒಕ್ಕಕ್ ಆಣಾಯಿತ್ ಪರಂದಟ್ ಇಂದ್ ಇಲ್ಲತಾ ನಂಗುಂಡ್, ಈ ಒಕ್ಕಕ್ ಮೊರಡಾಪನ್ನಕೆ ಪಂಡಿಯ ಪಳೆಯ ಬೆಂದು ನಡಿಕೇರಿಯಂಡ ಒಕ್ಕಡ ಅಪ್ಪೈಯ್ಯಂದೆಣ್ಣುವ ಬೈಂಬ ಈ ಒಕ್ಕಡ ಸೋಮಕ್ಕಂದೆಣ್ಣುವ ಕುಞ್ಞಿಕ್ ಪಚ್ಚಡಕ್ ನಡಪಾಂಗೊಕ್ಕನೆ ಈ ಒಕ್ಕಡ ಮನಸ್ಥಾನತ್ ಆಣ್ ಪೆರ್‌ತಿತ್ ಕ್‌ಣ್ಣಂಗೂ ಮೂಡಿಕೂ ತಣ್‌ಪೂ ಕುಳುಪೂ ಕೊಡ್‌ತಿತ್ ಪೊಲತುವ ಭಾರ ಕಾವೇರ್ಯಮ್ಮೆಕೂ ಈ ಒಕ್ಕಡ ಗುರುಕಾರಣ ವಂಗಕೂ ಕೂಡಿತುಂಡ್. ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್, ಇದರಿ ಸಾಕ್ಷಿ ಪಣ.

ಹೆಣ್ಣಿನ ಅರುವ : ಬಾತ್.

ಬಾಕಿ ಪದ್ಧತಿಯೆಲ್ಲ ಹೆಚ್ಚು ಕಡಿಮೆ ಒಂದನೇ ತರದ ಕೂಡಾವಳಿಯಂತೆ ಇರುತ್ತದೆ. ಆದರೆ ಕುತ್ತಿಕ್ ನಿಪ್ಪದರಲ್ಲಿಯೂ ಪಚ್ಚಡಕ್ ನಡಪದರಲ್ಲಿಯೂ ಹೆಣ್ಣು ಗಂಡಿನ ಜೊತೆಯಲ್ಲಿ ಮೆರವಣಿಗೆ ಹೋಗುವಾಗ ಬಾಳೆ ಬಿರುದುವರೆಗೆ ಹೋಗಬೇಕು.

ಈ ಮದುವೆಯಲ್ಲಿ ಹುಟ್ಟಿದ ಮಕ್ಕಳಿಗೆ ಹೆಣ್ಣಿನ ಮನೆಯಲ್ಲಿ ಮಾತ್ರ ಹಕ್ಕು ಇರುತ್ತದೆ.

ಗಂಡು ತನ್ನ ಮನೆಯಲ್ಲಿ ಇನ್ನೊಂದು ಮದುವೆ ಮಾಡಿಕೊಳ್ಳಬಹುದು.

ಒಕ್ಕ ಪರಜೆಯಲ್ಲಿಯೂ ಮಕ್ಕ ಪರಜೆಯಲ್ಲಿಯೂ ಹೆಣ್ಣಿನ ಮನೆತನದ ಯಾವ ಭಾಗ ದಲ್ಲಿಯೂ ಗಂಡು ಮಕ್ಕಳಿರಕೂಡದು. ಬೇರೆ ಭಾಗದಲ್ಲಿ ಗಂಡು ಮಕ್ಕಳಿದ್ದರೆ ಈ ತರದ ಮದುವೆಗಳನ್ನು ಊರವರು ಮತ್ತು ನಾಡವರು ಅಡ್ಡಿ ಮಾಡುವರು. ಏಕೆಂದರೆ ಮತ್ತೊಂದು ಭಾಗದಲ್ಲಿ ಗಂಡು ಸಂತಾನವಿದ್ದರೆ ಕುಟುಂಬವು ಒಡೆಯುವುದಲ್ಲದೆ, ಕುಟುಂಬದೊಳಗೆ

ಪಾಪವೆಯು ತಪ್ಪಿ ನೀತಿಭ್ರಷ್ಟರಾಗಲೂ ಕುಟುಂಬವು ಕ್ಷೀಣವಾಗಲೂ ಕಾರಣವು ಲಭಿಸುವುದು. ನ್ಯಾಯವಾದ ಕಾರಣಗಳಿಲ್ಲದಿದ್ದರೆ ಇಂಥ ಮದುವೆಗಳನ್ನು ಲಿಂಗಾಯತ ರಾಜರು ಅಂಗೀಕರಿಸುತ್ತಿರಲಿಲ್ಲ. (ಹುಕುಂ ನಾಮೆ 23 ನೋಡಿ.)

ಬೆಂದು ಪರಜೆ

ಒಬ್ಬ ಮನುಷ್ಯನು ಮದುವೆಯಾಗದೆ ಇರುವ ಸ್ವಜಾತಿ ಹುಡುಗಿಯೊಡನೆ ಕೂಡ್ಯಾಡಿ ನಡೆದು, ಅವಳು ಗರ್ಭಿಣಿಯಾದರೆ ಅಥವಾ ಅವಳು ಹೆತ್ತರೆ ಹುಡುಗಿಯ ತವರು ಮನೆಯವರು ಬಂದು ತಮ್ಮ ಹುಡುಗಿಯನ್ನು ಹೆಣ್ಣಾಗಿ ವರಿಸಿಕೊಳ್ಳಬೇಕಾಗಿ ಕೇಳಿದಲ್ಲಿ ಕೂಡ್ಯಾಡಿ ನಡೆದವನು ಒಪ್ಪಿಕೊಂಡರೆ, ಹೆಣ್ಣಿನ ಮನೆಯವರು ಗಂಡಿನ ಮನೆಯವರಿಗೂ ಊರವರಿಗೂ ಗಂಡಿನ ಮನೆಯಲ್ಲಿ ಒಂದು ಊಟ ಕೊಡಬೇಕು. ಈ ಊಟಕ್ಕೆ ಉಪ್ಪು ಸಾಸುವೆ ತೆಗೆದುಕೊಂಡು ಹೋಗಬಾರದು.

ಆ ದಿವಸ ಊಟ ಉಪಚಾರವೆಲ್ಲ ತೀರಿದ ಮೇಲೆ ಅಲ್ಲಿ ಸೇರಿದವರ ಮುಂದೆ ಹೆಣ್ಣಿಗೆ ಮತ್ತು ಅವಳಿಗೆ ಹುಟ್ಟಿದ ಮಗುವಿಗೆ ಸಮ್ಮಂಧ ಕೊಡಬೇಕು. ಈ ಸಮ್ಮಂಧ ಪರಜೆಯು ಹೆಚ್ಚು ಕಡಿಮೆ ಕನ್ನಿ ಮಂಗ್‌ಲದ ಸಮ್ಮಂಧ ಪರಜೆಯಂತೆ ಇರುವುದು.

ಕಳ್ಳ ಬಸುರಿಯಾಗಿ ಹೆತ್ತ ಮೇಲೆ ಮದುವೆಯಾಗುವುದು

ಮದುವೆಯಾಗದ ಹುಡುಗಿಯರು ಕಳ್ಳ ಬಸುರಾಗಿ ಸ್ವಜಾತಿಯವನಿಂದ ಗರ್ಭವಾದುದ್ದಾಗಿ ರುಜುವಾತಾದರೂ ಸಹ ಇನ್ನೊಬ್ಬ ಕೊಡವನನ್ನು ಮದುವೆಯಾದರೆ ವಿಧವೆಯರಿಗೆ ಪುನರ್ವಿವಾಹ ಮಾಡುವಂತೆ ಮಾಡಬೇಕು.

ಕುಟ್ಟಿ ಪರಜೆ

ಮೇಲೆ ಹೇಳಿದಂತೆ ತಮ್ಮ ಸಮ್ಮಂಧವನ್ನು ತೆಗೆದುಕೊಳ್ಳಲೂ ಕೊಡಲೂ ತಪ್ಪಿ ಆ ಹೆಂಗಸು ಸತ್ತು ಹೋದರೆ ಹೆಣ್ಣಿನ ಮನೆಯವರು, ಆ ಗಂಡಸು, ಅವಳ ಮಕ್ಕಳಿಗೆ ಸಮ್ಮಂಧ ಕೊಡಲು ಒಪ್ಪಿದರೆ, ಸತ್ತ ದಿವಸವೇ ಅಲ್ಲಿ ಸೇರಿರುವ ಊರವರ ಮತ್ತು ನೆಂಟರಿಷ್ಟರ ಮುಂದೆ ಸಮ್ಮಂಧ ಕೊಡಬೇಕು. ಆ ಗಂಡಸು ಸತ್ತು ಹೋದರೆ ಗಂಡಿನ ಮನೆಯ ಯಜಮಾನನು ಅಂಥ ಹೆಂಗಸಿಗೂ ಅವಳ ಮಕ್ಕಳಿಗೂ ಅವನು ಸತ್ತಂದು ಈ ರೀತಿಯಲ್ಲೇ ಸಮ್ಮಂಧ ಕೊಡಬೇಕು. ಹಾಗೆ ಸಮ್ಮಂಧ ಕೊಟ್ಟರೆ ಆ ಬಗ್ಗೆ ಅರುವನಿಗೆ ಸಾಕ್ಷಿ ಪಣ ಕೊಡಬೇಕಲ್ಲದೆ ಆ ಊರವರಿಗೆ ಹೆಣ್ಣಿನ ಕಡೆಯವರು ಐದು ಹಣ ಕೊಡಬೇಕು.

ಹೆಣ್ಣನ್ನು ಕುಟುಂಬದ ಸ್ಮಶಾನದಲ್ಲಿ ಹೂಣಬೇಕು. ಗಂಡನು ಹೆಂಡತಿಗೆ ಮಾಡಬೇಕಾದ ಕರ್ಮಾಂತರಗಳನ್ನು ಮಾಡಬೇಕು. ಅದೇ ರೀತಿ ಗಂಡನು ಸತ್ತರೆ ಹೆಂಡತಿಯು ಮಾಡಬೇಕಾದ ಕರ್ಮಗಳನ್ನು ಅವಳೂ ಮಾಡಬೇಕು.

ಈ ಎರಡು ಪದ್ಧತಿಗಳೂ ಗಂಡ ಸತ್ತ ವಿಧವೆಯನ್ನು ಕೂಡ್ಯಾಡಿ ನಡೆದದ್ದಕ್ಕೂ ವ್ಯಾಪಿಸುತ್ತದೆ.

ಮೈಕಣ

ಜಾತಿ ಪದ್ಧತಿ ಮೇಲೆ ಮದುವೆಯಾಗದೆ ಹುಟ್ಟಿದ ಮಕ್ಕಳಿಗೆ, ಬೆಂದು ಪರಜೆಯ

ಅಥವಾ ಕುಟ್ಟ ಪರಜೆಯ ಮೇರೆ ಸಮ್ಮಂಧ ಸಿಕ್ಕದಿದ್ದರೆ ಅಂಥ ಮಕ್ಕಳಿಗೆ "ಮೈ ಕಣತ್ ಮಕ್ಕಳು" ಎಂದು ಹೇಳುವರು.

ಕೊಲೆ ಅಡಂಗ ಸಮ್ಮಂಧ

ಗಂಡ ಸತ್ತ ಅಥವಾ ಗಂಡನಿಗೂ ಹೆಂಡತಿಯೂ ಸರಿ ಬೀಳದೆ ಹೆಂಡತಿಯು ಬಾಳಿಕೆ ಬಿಟ್ಟರೆ ಅವಳಿಗೆ ಹುಟ್ಟಿದ ಮಕ್ಕಳು ಗಂಡನಿಗಲ್ಲದೆ ಹೆಂಡತಿಗಲ್ಲ. ಯಾವುದೊಂದು ಮಗುವಾದರೂ ಮೂರು ವಯಸ್ಸಿನವರೆಗೆ ಹೆಂಡತಿಯೊಡನೆ ಇರಬಹುದು.

ಒಂದು ವೇಳೆ ಹೆಣ್ಣಿನ ತವರು ಮನೆಯವರ ಅನುಮತಿ ಮೇರೆ ಹೆಂಡತಿಯು ಮಕ್ಕಳನ್ನು ತನಗೇ ಕೊಡಬೇಕಾಗಿ ಕೇಳಿದಕ್ಕೆ ಗಂಡನು ಅಥವಾ ಅವನು ಪೌತಿಯಾಗಿದ್ದು ಆ ಮನೆತನದ ಯಜಮಾನನು ಸಮ್ಮತಿಸಿದರೆ ಆ ಮಕ್ಕಳ ಸಮ್ಮಂಧವನ್ನು ತಂದೆ ಮನೆಯಿಂದ ತಪ್ಪಿಸಬೇಕು.

ಅದಕ್ಕೆ "ಕೊಲೆ ಅಡಂಗ ಸಮ್ಮಂಧ ಮುರಿಪ" ಅನ್ನುವರು.

ಮೊದಲು ಹೆಣ್ಣಿನ "ಕಲ್ಲ್ ಮರ ಕೈಪದ್" ತೀರಿಸಬೇಕು.

ಕೊಲೆ ಅಡಂಗ ಸಮ್ಮಂಧ ಮುರಿಪ

ಹೆಣ್ಣಿನ ಅರುವ : ದಂಡ್ ಕಡೆ ನಾಡೊನೂ, ಇಲ್ಲವನೂ ಬೆಂದೂ, ಊಂಗನೂ ಅರುವನೂ ಸಾಲ್ ಕೆಟ್ಟಿ ನಿಂದಿರಾ?

ಗಂಡಿನ ಅರುವ : ನಿಂದತ್.

ಹೆಣ್ಣಿನ ಅರುವ : ಆನಕ ಇಕ್ಕ ಪಟ್ಟವಾಡ ಒಕ್ಕಡ ಸೋಮಕ್ಕಂಗ್ ನಡಿಕೇರಿಯಂಡ ಅಪ್ಪೈಯ್ಯನಂಗುಂಡ್ ಆನ ಮಕ್ಕಳ, ಸೋಮಕ್ಕನೂ ಸೋಮಕ್ಕಂಡ ತಾಮನೆಕಾರರೂ ಬೋಂಡೂಂದ್ ಕೇಪಾನಂಗುಂಡ್ ಬುಟ್ಟಿ ತರಂಡೂಂದ್ ಕೇಟವ.

ಗಂಡಿನ ಅರುವ : ಆನಕ ಈ ಮಕ್ಕಕ್ ಇಲ್ಲಿಂಜಿ ಕೊಲೆ ಅಡಂಗ ಸಮ್ಮಂಧ ಮುರಿಚಿತ್ ಇಞ್ಞಿ ಎಲ್ಲಿಯೂ ಸಮ್ಮಂಧ ಕ್ಟ್ಟತೆ ಪೋಚೆಂಗಿ ಬಾರ್ ಜವಾಬ್‌ದಾರನ್ ಗೂವ?

ಹೆಣ್ಣಿನ ಅರುವ : ನಾನ್.

ಗಂಡಿನ ಅರುವ : ನಿಂಗ ದಾಡ?

ಹೆಣ್ಣಿನ ಅರುವ : ಎಂಗ... ಒಕ್ಕಡ... ಒಕ್ಕಡ ಅರುವ

ಗಂಡಿನ ಅರುವ : ಆನಕ... ಒಕ್ಕಡ ಅಪ್ಪೈಯ್ಯನಂಗುಂಡ್ ಸೋಮಕ್ಕಂಗ್ ಪುಟ್ಟ್‌ನ ಮಕ್ಕಕ್ ಈ ಮಣ್ಣ್‌ಮನಸ್ಥಾನತ್ ಆಯಿರ ಬಟ್ಟಿ ಭೂಮಿ, ಪತ್ತ್ ಕಂಡ ಬಾಣೆ, ಅಂಜಿ ಕಂಡ ಓಡೆ, *ಚೂದ್‌ಕ್ ಇರ್‌ಂಜ್, ಚುಂಡೆಕ್ ಮೊದಲ್ ಒಂದ್ ತೊಟ್ಟ್ ನೂರೋಳ ಇಂದಾಕಣೆ ಸಮ್ಮಂಧ ಇಂಜದ್, ಇಂದ್ ತೊಟ್ಟ್ ಮಿಞ್ಞಕ್, ಈ ಮಣ್ಣ್ ಮನಸ್ಥಾನತ್ ಏಬೋರ್ ಸಮ್ಮಂಧ ಇಲ್ಲೆ. ಅಲ್ಲತೆ ಈ ಮಣ್ಣ್ ಮನಸ್ಥಾನತ್‌ರ ಪೆದಕೊಂಡಿತ್ ನಡ್‌ಪಕಯ್ಯ. ಇದ್‌ಲೆನ್ನೆಂಗಿ ಞಾಯ ಬುದ್ದತೇಂಗಿ ದಾರ್ ಜವಾಬ್ದಾರ್ ಗೂವ?

ಹೆಣ್ಣಿನ ಅರುವ : ನಾನ್.

ಗಂಡಿನ ಅರುವ : ಇದರಿ ಪನ್ನೆರಂಡಚ್ಚಿರ ಪೊನ್ನ್. (12 ಕಲ್ಲು ಹರಳುಗಳನ್ನು ಕೊಡುವನು.)

ಹೆಣ್ಣಿನ ಅರುವ : ಬಾತ್. ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್.

ಆಮೇಲೆ ಹೆಂಗಸನ್ನೂ ಅವಳ ಮಕ್ಕಳನ್ನೂ ತವರು ಮನೆಯಲ್ಲಿ ಹಕ್ಕು ಕೊಟ್ಟು ಕುಟುಂಬದ ಒಂದು ಆಸ್ತಿಯಲ್ಲಿ ಬೇರೆ ಇಡಬೇಕು.

ಈ ಹೆಂಗಸು ಪುನಹ ಬಾಳಿಕೆ ಹೋಗುವುದಾದರೆ, ಇವಳ ಮಕ್ಕಳಿಗೆ ಸಮ್ಮಂಧ ಕೊಟ್ಟು ಹೆಂಗಸನ್ನು ಮದುವೆ ಮಾಡಿಕೊಳ್ಳಬೇಕೆಂಬ ಶರತಿಗೆ ಗಂಡಿನ ಮನೆಯ ಯಜಮಾನನು ಒಪ್ಪಿದರೆ, ಆ ಮನೆಯಲ್ಲಿ ಹೆಣ್ಣಿಗೆ ಸಮ್ಮಂಧ ಕೊಟ್ಟ ಮೇಲೆ ಮಕ್ಕಳಿಗೆ ಈ ಕೆಳಗಿನ ರೀತಿ ಸಮ್ಮಂಧ ಕೊಡಬೇಕು. ಅದಕ್ಕೆ "ಕೊಲೆ ಅಡಂಗ ಸಮ್ಮಂಧ ಕೊಡ್‌ಪ" ಎಂದು ಅನ್ನುವರು.

ಕೊಲೆ ಅಡಂಗ ಸಮ್ಮಂಧ ಕೊಡ್‌ಪ

ಹೆಣ್ಣಿನ ಅರುವ : ಆನಕ ಇಕ್ಕ...ಒಕ್ಕಡ ಸೋಮಕ್ಕಂದೆಣ್ಣುವ ಕುಞ್ಞಿನ................ ಒಕ್ಕಡ ಮೇದಯ್ಯಂದೆಣ್ಣುವ ಕುಞ್ಞಕ್ ಬಾಳ್ ಬಾಕೆ ಕೊಡ್‌ಪಲ್ಲಿ ಸೋಮಕ್ಕಂಡ ಕುಞ್ಞಿಯಕ್ ಪಂಡಿಯ ನಡಪೋಲೆ... ಒಕ್ಕ ಮನಸ್ಥಾನತ್‌ರ ಪೆದಕೊಂಡ್ ನಡಪಕೂ... ಒಕ್ಕಡ ಆಯಿರ ಬಟ್ಟಿ ಭೂಮಿ * ಓಂದ್ ತೋಟ್ಟ್ ನೂರೋಳ ಸಮ್ಮಂಧ ಕೊಡ್‌ತಿರಾ?

ಗಂಡಿನ ಅರುವ : ಕೊಡ್‌ತತ್.

ಹೆಣ್ಣಿನ ಅರುವ : ಇದರಿ ಪನ್ನೆರಂಡಚ್ಚಿರ ಪೊನ್ನ್.

ಗಂಡಿನ ಅರುವ : ಬಾತ್. ಇದರಿ ಸಾಕ್ಷಿ ಪಣ.

ಹೆಣ್ಣಿನ ಅರುವ : ಬಾತ್.

ಕೊಲೆ ಅಡಂಗ ಸಮ್ಮಂಧ ಮುರಿಪಕಾಗಲೀ ಕೊಡ್‌ಪಕಾಗಲೀ, ಯಜಮಾನನ ಅನುಮತಿಯೇ ಮುಖ್ಯವಾದರೂ ಮುರಿಪ ಅಥವಾ ಕೊಡ್‌ಪ ಮನೆತನದ ಪ್ರಾಯ ಪ್ರಬುದ್ಧನಾದ ಯಾವನೊಬ್ಬ ಗಂಡಸಾಗಲೀ ಹೆಂಗಸಾಗಲೀ ಅಡ್ಡಿ ಮಾಡಿಬಿಟ್ಟರೆ ಮುರಿಪಕಾಗಲೀ ಕೊಡ್‌ಪಕಾಗಲೀ ಕೂಡದು.

ಕಲ್ಲ್‌ಮರ ಕೈಚ ಪೊಣ್ಣ್‌ರ ಹಕ್ಕ್

ಗಂಡನು ಸತ್ತ ಹೆಂಡತಿಯು ತನ್ನ ಗಂಡನ ಮನೆಯಿಂದ ಸಮ್ಮಂಧ ತಪ್ಪಿಸಿ ತವರು ಮನೆಗೆ ಹೋದರೂ ಅವಳು ಪುನಹ ಗಂಡನ ಮನೆಗೆ ನೆಂಟರಾಗಿ ಬರಬಹುದು. ಅಲ್ಲದೆ ಅವಳನ್ನು

* ಕನ್ನಿ ಮಂಗ್‌ಲದಲ್ಲಿ ಹೇಳುವಂತೆ ಹೇಳಬೇಕು.

* ಕನ್ನಿ ಮಂಗ್‌ಲದಲ್ಲಿ ಹೇಳುವಂತೆ ತಪಶೀಲು ಹೇಳಬೇಕು. ಸಾಕ್ಷಿ ಪಣ ಕೊಡಬೇಕು.

ಗಂಡನ ಮನೆತನದವರು ಪುನಹ ಮದುವೆ ಮಾಡಿಕೊಳ್ಳಬಹುದು. ಆದರೆ ಗಂಡನು ಇದ್ದು ಗಂಡನಿಗೂ ಹೆಂಡತಿಗೂ ಸರಿಬೀಳದೆ ಬಿಟ್ಟ ಹೆಂಗಸನ್ನು ಪುನಹ ಆ ಮನೆತನದ ಯಾವನೊಬ್ಬನೂ ಮದುವೆ ಮಾಡಿಕೊಳ್ಳಕೂಡದು. ಅಲ್ಲದೆ ಆ ಮನೆಗೆ ಅವಳು ಅವಳ ಮಕ್ಕಳಿದ್ದರೂ ಸಹ ಹೋಗಕೂಡದು.

ಮದುವೆ ಸಮ್ಮಂಧ ಇತರ ಪದ್ಧತಿಗಳು

ಒಂದು ಹೆಣ್ಣಿಗೆ ಮದುವೆಯ ಮುಹೂರ್ತದಲ್ಲಿ ಸಿಕ್ಕಿದಾಗಲೀ, ಪೆಟ್ಟಿಗೆ, ಕಂಚು ಮುಟ್ಟು ಮುಂತಾದದು ಕೊಟ್ಟದ್ದಾಗಲೀ ಅವಳನ್ನು ಮದುವೆ ಮಾಡಿ ಕೊಟ್ಟ ತಂದೆ ತಾಯಿಗಳು ಅಥವಾ ಇತರ ಸಮ್ಮಂಧಿಕರು ಹಿಂದಕ್ಕೆ ತೆಗೆದುಕೊಳ್ಳಬಹುದು.

ಹೆಣ್ಣಿನ ಮನೆಯವರು ಹೆಣ್ಣಿನ ಸಮ್ಮಂಧವನ್ನು ಕ್ರಯಕ್ಕೆ ತೆಗೆದುಕೊಂಡು ಅದರ ಕ್ರಯ ಹನ್ನೆರಡು ಅಚ್ಚಿ ಚಿನ್ನವನ್ನು, ಹೆಣ್ಣಿಗೆ ಗಂಡಿನ ಮನೆಯಲ್ಲಿ ಸಮ್ಮಂಧ ಸಿಕ್ಕಿದ ಒಡನೆ, ಕೊಟ್ಟು ಬಿಡುತ್ತಾರೆ. ಆದರೆ ಕೊಟ್ಟ ಹನ್ನೆರಡಚ್ಚಿ ಚಿನ್ನವನ್ನು ತೆಗೆದುಕೊಳ್ಳದೆ ಹನ್ನೊಂದಚ್ಚಿ ಚಿನ್ನವನ್ನು ಮಾತ್ರ ಅವಳು – ಅವಳಿಗಾಗಿ ಗಂಡನ ಅರುವನು ತೆಗೆದುಕೊಂಡನು. ಆದುದರಿಂದ ಅವಳು ಒಂದು ಅಚ್ಚಿ ಚಿನ್ನದಷ್ಟು ಮಾತ್ರ ತನ್ನ ತವರುಮನೆಯ ಹಕ್ಕನ್ನು ಉಳಿಸಿಕೊಂಡಳು. ಈ ಕಾರಣದಿಂದ ಅವಳು ತನ್ನ ತವರು ಮನೆಯಲ್ಲಿ ಎಷ್ಟು ದಿವಸ ಬೇಕಾದರೂ ಇರಬಹುದು. ಅವಳನ್ನು ಅಡ್ಡಿ ಮಾಡಕೂಡದು. ಆದರೆ ಅವಳ ಜೀವನದ ಕರ್ಚಿಗೆ ತವರು ಮನೆಯವರು ಕೊಡಬೇಕೆಂದಿಲ್ಲ.

ಹೆಣ್ಣಿಗೆ ಮುಹೂರ್ತದಲ್ಲಿ ಕೈಗೆ ಸಿಕ್ಕಿದ್ದಾಗಲೀ ಇವಳ ಪೆಟ್ಟಿಗೆಗೆ ಹಾಕಿದ್ದಕ್ಕಾಗಲೀ ತನ್ನದು ಎಂದು ಹೇಳುವುದಕ್ಕೆ ಗಂಡನಿಗೆ ಹಕ್ಕಿಲ್ಲ. ಇವುಗಳಲ್ಲದೆ ತವರು ಮನೆಯಿಂದ ಇನ್ನೇನಾದರೂ ಕೊಟ್ಟರೂ ಅವಳು ಇರುವಷ್ಟು ದಿವಸ ಅವಳ ಉಪಯೋಗಕ್ಕೆಂದೂ ಅವಳು ಸತ್ತು ಹೋದರೆ ಅವಳ ಮಕ್ಕಳ ಉಪಯೋಗಕ್ಕೆಂದೂ ತಿಳಿದುಕೊಳ್ಳಬೇಕು.

ಹೆಣ್ಣು ಸತ್ತು ಅವಳಿಗೆ ಮಕ್ಕಳಿಲ್ಲದಿದ್ದರೆ ಹೆಣ್ಣಿಗೆ ಕೊಟ್ಟಿರುವ ಸಕಲ ಚರ ಸ್ಥಿರ ಆಸ್ತಿಗಳನ್ನು ತವರು ಮನೆಯವರು ಹಿಂದಕ್ಕೆ ತೆಗೆದುಕೊಂಡು ಹೋಗಬಹುದು. ಆದರೆ ಅಂಥ ಹೆಣ್ಣಿಗೆ ಮಕ್ಕಳು ಆಗಿ ಆ ಮಕ್ಕಳಲ್ಲಿ ಯಾರಿಗಾದರೂ ಮದುವೆಯಾದ ಮೇಲೆ ಹೆಣ್ಣು ಮತ್ತು ಮ್ಕಕಳೂ ಸತ್ತರೂ ಅಹ ಅಂಥ ಹಕ್ಕು ತಪ್ಪಿಹೋಯಿತು.

ಚರಸ್ಥಿರ ಆಸ್ತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು

ಹೆಣ್ಣಿನ ಮನೆತನದವನೊಬ್ಬನು, ಅವನ ಅರುವನು ಮತ್ತೊಬ್ಬನು ಅಂತು ಮೂವರು ಗಂಡಿನ ಮನೆಗೆ ಹೋಗಬೇಕು. ಅಲ್ಲಿ ಈ ರೀತಿ ಹೇಳಬೇಕು.

ಹೆಣ್ಣಿನ ಅರುವ : ದಂಡ್ ಕಡೆ ನಾಡೋನೂ, ಇಲ್ಲವನೂ ಬೆಂದೂ, ಅಂಗನೂ ಅರುವನೂ, ಸಾಲ್ ಕೆಟ್ಟಿ ನಿಂದಿರಾ?

ಗಂಡಿನ ಅರುವ : ನಿಂದತ್.

ಹೆಣ್ಣಿನ ಅರುವ : ಆನಕ ಇಕ್ಕ... ಒಕ್ಕಡ ಪೊನ್ನಮ್ಮಂದೆಣ್ಣುವ ಕುಞ್ಞಿ... ಒಕ್ಕಡ ಬೊಳ್ಯಪ್ಪಂದೆಣ್ಣುವ ಕುಞ್ಞಿರ ಸಾಲ್ ಬಾಕೆ ಬಂದಲ್ಲಿ ಪೊನ್ನಮಂದೆಣ್ಣುವ ಕುಞ್ಞಿರ ಆಯುಷ್ಯ ಕೊರುವಾಯಿತ್, ಬೊಳ್ಯಪ್ಪಂದೆಣ್ಣುವ ಕುಞ್ಞಿನ ಕೂಡಿತ್ ಪತ್ತ್ ಕಾಲ

ಬದ್ದ್ ಬಾವಕ್ ರುಣ ಇಲ್ಲತಾನಂಗುಂಡ್, ಈ ಒಕ್ಕಡ ಮನೆಕ್ ಅಞ್ಞೂರ್ ಬಿರಾನ್‌ರ ಪೊಟ್ಟಿಲ್ ಆಯಿರ ಬಿರಾನ್‌ರ ಮಾಲ್‌ನ ಸಾಲಡಂಗ ಬಾಲಡಂಗ ತೆರಕಿಯಂಡ್ ಬಂದಾಂಡ ಉಂಡಿತ್ ಉಡ್‌ತಿತ್ ಮಿಕ್ಕ್‌ನಾನ ಬಯ್ಯಕ್ ಎಡ್‌ತಂಡ್ ಪೋಲುವಾ?

ಗಂಡಿನ ಅರುವ : ಕ್‌ೕಮರಿಯಾದಿ ಪ್ರಕಾರ.

ಹೆಣ್ಣಿನ ಅರುವ : ಇದರಿ ಸಾಕ್ಷಿ ಪಣ.

ಗಂಡಿನ ಅರುವ : ಬಾತ್–ಇದರಿ ಸಾಕ್ಷಿ ಪಣ.

ಹೆಣ್ಣಿನ ಅರುವ : ಬಾತ್

ಅಷ್ಟರಲ್ಲಿ ಹೆಣ್ಣಿನ ಸಾಮಾನುಗಳನ್ನೆಲ್ಲವನ್ನು ನೆಲ್ಲಕ್ಕಿ ನಡು ಬಾಡೆಯಲ್ಲಿಡಬೇಕು. ಅವುಗಳನ್ನು ಕೈಯ್ಯಾಲೆಗೆ ಹೆಣ್ಣಿನ ಕಡೆಯವರು ತೆಗೆದುಕೊಂಡು ಹೋಗಿ ಅಲ್ಲಿ ಒಂದು ಪೆಟ್ಟಿಗೆಗೆ ಒಂದೆರಡು ಬಟ್ಟೆಗಳನ್ನು ಹಾಕಿ ಹಿಂತಿರುಗಿ ಬಾಡೆಗೆ ತಂದು,

ಹೆಣ್ಣಿನ ಅರುವ : ಎಂಗಡ ಕುಞ್ಞಿ ಈ ಮನೆಲೇ ಉಂಡ್‌ಂದರಿಂಜಂಡ್ ಈ ಪೊಟ್ಟಿನ ಇಲ್ಲಿ ಬೆಚ್ಚವಂಡು.

ಎಂದು ಹೇಳಿ ಬಾಕಿ ಇರುವವುಗಳನ್ನು ತೆಗೆದುಕೊಂಡು ಹೋಗುವರು. ಅನೇಕರು ಹಾಗೆ ಮಡಗುವ ಪೆಟ್ಟಿಗೆಯನ್ನು ಇಟ್ಟುಕೊಳ್ಳುವುದಿಲ್ಲ. ಆದರೆ ಇಟ್ಟುಕೊಳ್ಳುವುದರಲ್ಲಿ ಆಕ್ಷೇಪಣೆ ಇಲ್ಲ. ಇಟ್ಟುಕೊಂಡರೆ ಅವುಗಳನ್ನು ಗಂಡಿನ ಮನೆಯವರು ಉಪಯೋಗಿಸಿಕೊಳ್ಳಬಹುದು.

ಆದುದರಿಂದಲೇ ಹೆಣ್ಣಿಗೆ ಕೊಡುವ ಸಾಮನುಗಳ ವಿಷಯವಾಗಿ ಮಾತು ಬಾರದಂತೆ ಅವುಗಳನ್ನು ಮೂರು ದಪ ನೋಡುವರು.

ನರಿಮಂಗ್‌ಲ (ಹುಲಿ ಮದುವೆ)

ಹುಲಿಯನ್ನು ಯಾವ ವಿಧದಲ್ಲಿ ಕೊಂದರೂ ಕೊಡಗನು ಅಥವಾ ಕೊಡಗತಿಯು ನರಿಮಂಗ್‌ಲಕ್ಕೆ ಅರ್ಹರಾಗುವರು. ನರಿಮಂಗ್‌ಲದಲ್ಲಿ ಮುಹೂರ್ತ ಸ್ಥಳದಲ್ಲಿ ಹುಲಿಯಾಗಲೀ, ಅದರ ಚರ್ಮವಾಗಲೀ, ಅದರ ಬಾಲವಾಗಲೀ ಇರಲೇಬೇಕು.

ದೊಡ್ಡ ಹುಲಿಗಳನ್ನು ಕೊಂದರೆ ನಾಡು ಮಂದಿನಲ್ಲಿಯೂ, ಕಿರಬ ಚಿರತೆಗಳನ್ನು ಕೊಂದರೆ ಊರು ಮಂದಿನಲ್ಲಿಯೂ ಹುಲಿ ಮದುವೆಯನ್ನು ಮಾಡಬೇಕು.

ಹುಲಿಯನ್ನು ಕೊಂದವರಿಗೆ ಕನ್ನಿ ಮಂಗ್‌ಲದಲ್ಲಿ ಮಾಡುವಂತೆ (ಗಂಡಾದರೆ ಗಲ್ಲಮೀಶೆ ಇಟ್ಟು ಕ್ಷೌರ ಮಾಡಿಸಿ) ಸ್ನಾನ ಮಾಡಿ ಬಟ್ಟೆ ಬರೆಗಳನ್ನು ಹಾಕಿ, ಕೊಂಬುವಾದ್ಯ ದುಡಿ ತಾಳ ಸಮೇತ ಮುಹೂರ್ತ ಮಾಡುವ ಮಂದಿಗೆ ಹೋಗಬೇಕು. ಕೋವಿಯಿಂದ ಹುಲಿಯನ್ನು ಗುಂಡು ಹೊಡೆದು ಕೊಂದಿದ್ದರೆ ಮದುವಣಿಗನು ಕೋವಿಯ "ಮೋಬಾಯಿ" ಮುಂದಕ್ಕಾಗಿ ಹಿಡಿದುಕೊಂಡು ಹೋಗಬೇಕು. ಆ ಕೋವಿಗೆ ಒಂದು ಕೆಂಪು ರೇಷ್ಮೆ ವಸ್ತ್ರವನ್ನು ಎರಡು ತುದಿಗಳಿಂದ ಕಟ್ಟಿರಬೇಕು. ಅದಕ್ಕೆ "ಓಜ" ಕಟ್ಟುವುದೆಂದು ಹೇಳುವರು.

ಗಂಡಸರು ಹುಲಿಯನ್ನು ಕೊಂದರೆ ಕೋವಿಗೆ ಓಜ ಕಟ್ಟಬೇಕೆಂತಲೂ, ಹೆಂಗಸರು ಹುಲಿಯನ್ನು ಕೊಂದರೆ ತಲೆಯ ಕೂದಲಿನ ಚೆಂಡಿಗೆ ಓಜ ಕಟ್ಟಬೇಕೆಂತಲೂ ಪಳಮೆ ಇದೆ. ಕೋವಿಯಲ್ಲಿ ಹುಲಿಯನ್ನು ಕೊಲ್ಲದಿದ್ದರೆ ಬರೀ ಮುಸುಕನ್ನು ತಲೆಯ ಮೇಲೆ ಇಟ್ಟು ಹಾಕಿಕೊಳ್ಳಬೇಕು.

ಕೋವಿಯಲ್ಲಿ ಕೊಂದರೆ ಮುಸುಕು ಬೇಕಿಲ್ಲ.

ಮುಹೂರ್ತವಾಗುವ ಸ್ಥಳವು ಕುಣಿಯುವ ಚಕ್ರದ ಹೊರಗೆ ಇರಬೇಕು. ಮತ್ತು ಚಪ್ಪರ ಹಾಕಿರಬೇಕು.

ಮುಹೂರ್ತವಾಗುತ್ತಿರುವಾಗ ಈ ಕೆಳಗಿನ ರೀತಿ ಹಾಡುತ್ತಿರಬೇಕು

ನರಿ ಮಂಗ್‌ಲ ಪಾಟ್

ಬಾಳೊ ಕೇಳೊ ಸಂಜಾದಿ
ಪಾಡುವ ಕವಿ ಕೇಳ್
ಈ ನಾಡ್ ನಡುವುಲ್
ಬಾಂಗಾಡ್ ಬನತ್‌ಲ್
ಬಾಯಲಂದ ಪೆಬ್ಬುಲಿ
ಪೈಪ್‌ಗೊಂಡಡಂಗಿಂಜ.
ಆ ಸುದ್ದಿನ ಕೇಟಿತ್
ನಾಡಡಂಗ ಬಾಲರೊ
ಒತ್ತೂರ್‌ಮೆ ಕೊಂಡಿತ್
ಕಾಡ್ ಬೋಟೆ ಕೂಡ್‌ಚಿ.
ಚೇಲ ನಲ್ಲ ಬಾಲಂಗ
ನಾಯಾಟಕ್ ಪೋಕಣೆ
ಬಿಲ್ಲ್‌ಕಾರ ಬಾಲಂಗ
ಬಾಂಗಾಡ್ ಬನತ್‌ಲ್
ಮುಂಗಡುಲ್ ನಿಂದತ್;
ಓರಂದೀರಂಡೆಣ್ಣಣೆ
ನಾಯಿಕಾರ ಬಾಲಂಗ
ಬೈಕಡುಲ್ ನಿಂದಿತ್
ನಾಯಿನ್‌ಡಿ ಕೂಟಣೆ
ಚೇಲನಲ್ಲ ನಾಯಿಯ
ನನ್ನ ಬಯ್ಯ ಪೋಚಿಲ;
ಅಕ್ಕಣೆಕ್ ಸಂಜಾದಿ
ಇದೋರ್ ಕದೆ ಕೇಳಿ,

ಬಾಯಲಂದ ಪೆನ್ನರಿ
ಬಾಂಗಾಡ್ ನಡುವುಲ್
ಬಾಂಗ್‌ನ ಮರತಡಿ
ತೂಂಗ್‌ನ ನೆಡಿಯಿಲ್
ಬುದ್ದ ಮರ ಕುಂಬಡಿ
ಪೈಪ್ ಕೊಂಡಡಂಗಿತ್
ಮಕ್ಕಿ ಬುದ್ದೋರವಕ
ನೆಕ್ಕನಚಿ ಕಂಡತ್.
ಎನ್ನೆಣ್ಣಿತರಿವಿರ?
ಅಲ್ಲತೊಂದೂ ಅಲ್ಲಲ
"ಈ ಚೆರ್ ಮನ್‌ಸಂಗ
ನೆಯಿ ತೋಕ್ ಕೈಲಾಯಿ
ಕಾಡ್ ಬೋಟೆ ಕೂಡಿತ್
ಸುತ್ತ್ ಬಿಲ್ಲ್ ಕೆಟ್ಟಿತ್
ನಾಯಿನ್‌ಡಿ ಕೂಟುವ"
ಎಂದೆಣ್ಣಿ ಕೆನಬಾಯಿ
ಮೈ ನೆಟ್ಟಿತೂರಕೆದ್ದ;
ಮೈ ನಟ್ಟಿತೂರಕೆದ್ದ್;
ನಾಲ್ ದಿಕ್ಕೂ ನೋಟಿತ್
ಗೇನಿಚೆಂಡೆಳತತ್.
ಅಕ್ಕಣೆಕ್ ಬೆಂದುವೆ
ನಾಯಿನ್‌ಡಿ ಕೂಟುವ
ಸದ್ದ್ ಕೇಟ ಪೆನ್ನರಿ

---

* ರಿಕ್ತರು ಬರದ ಹಾಗೆ ಸತ್ತ ಹುಲಿಗೆ ಹುಲಿಯನ್ನು ಕೊಂದವನನ್ನು ಮದುವೆ ಮಾಡುವುದಲ್ಲ. ಮದುವೆಯಾದವನಿಗೆ ಕೊಡಗರ ಸಭೆಯಲ್ಲಿ ಸಿಕ್ಕುವ ಮರ್ಯಾದೆಗಳು ಮದುವೆಯಾಗದವನಿಗೆ ಸಿಕ್ಕುವುದಿಲ್ಲ. ನರಿಮಂಗಲ ಆದರೆ ಅವನಿಗೆ ಆ ಮರ್ಯಾದೆಗಳು ಸಿಕ್ಕುವವು. (ಕೈಯ್ಯಂಡಿರ ಅಪ್ಪಯ್ಯನು ಕುಲ್ಲಚ್ಚ ಚೊಂದುವಿನೊಡನೆ ಯುದ್ಧಕ್ಕೆ ನಿಲ್ಲಲು ಸಮ್ಮತಿಸಿ ತನ್ನನ್ನು ಹುಡುಗನೆಂದು ನಿರಾಕರಿಸಿಯಾನೆಂದು ಕಿವಿ ಚುಚ್ಚಿ ಮದುವೆ ಮಾಡಿಕೊಂಡದ್ದನ್ನು ಮುಂದಕ್ಕೆ ನೋಡಿ)

ಜೋಡೆರಂಡ್ ಕಣ್ಣ್‌ಲ್
ತಿತ್ತ್ ಚೆಡಿ ಪಾರಿತ್
ಕಾಳೆ ತೆಡ್ ಪೊಜ್ಜೋಲೆ
ಕೋರೆನ ಕಡಿಚಿತ್
ತಾನೆನ್ನ ನೆನತತ್
“ಇಂದಿಯ ದಿನತ್‌ಲ್
ನಲ್ಲದೊಂದೂ ಕಾಂಬ್‌ಲೆ–
ಒಂದಿಕಿನೊ ಬಾಲಂಡ
ತೋಕ್‌ಕೋಜ ಕೆಟ್ಟಂಡು
ಅಲ್ಲೇಂಗಿನೊ ಬಾಲಂಡ
ಪೊಂಗ ಪುಯ್ಯ ಕೇಕಂಡು!
ನಾಕೆದ್‌ರ್ ಬಂದವನ
ಖಂಡ ತುಂಡ್ ಮಾಡಿತ್
ಜಬ್ಬೂಮಿಕ್ ಚಾಡುವಿ”
ಎಂದೆಣ್ಣಿ ನೆನತಿತ್
ಬಾಯಲಂದ ಪೆಬ್ಬುಲಿ
ಬಾಯಿ ಬುಟ್ಟರಂದತ್.
ಬಾಯಿ ಬುಟ್ಟರಂದಿತ್
ಪಾರಿಂಗುಂಡ್ ಬಪ್ಪಕ
ಚೀಲನಲ್ಲ ಐಯ್ಯಣ್ಣ
ಬೈಕಡುಂಜಿ ಓಡಿತ್
ಮುಂಗಡುಲ್ ನಿಕ್ಕಣೆ,
ಪಟ್ಟೆ ಬಲ್ಯ ಪೆಬ್ಬುಲಿ
ಪಾರಿಂಗುಂಡ್ ಬಂದದ್
ಕಣ್ಣೊಡನೆ ಕಂಡಿತ್
ಐಯ್ಯಣ್ಣ ಬಯಿಂಬನ್
ನೆಯಿ ತೋಕ್ ಕೈಲಾಯಿ
ಕೈ ನಡತಿಕೊಂಡಿತ್
ಕನ್ನಡಿ ಕಪುಕ್‌ಕ್
ತಿತ್ತ್ ಬೊಡಿ ಬೆಚ್ಚತ್.
ಬೊಡಿ ಪಟ್ಟ ಪೆಬ್ಬುಲಿ
ಬಾಯಿ ಬುಟ್ಟರಂದಿತ್
ಬಾನ ಮುಟ್ಟ ಪಾರ್‌ಚಿ.
ಬಾನ ಮುಟ್ಟ ಪಾರಿತ್
ಕ್‌ಬ್ಬೂಮಿಕ್ ಬುದ್ದಿತ್
ತಾಳ ಕಣ್ಣ್ ಚೆಮ್ಮಿತ್
ಬೀರ ಜೋಗ ಬುಟ್ಟತ್.

ಅಕ್ಕಣೆಕ್ ಸಂಜಾದಿ
ಬೋಟೆಕಾರ ಬಾಲಂಗ
ನಾ ಮಿಞ್ಞ ತಾಮಿಞ್ಞ
ಎಂದೆಣ್ಣಿತ್ ಓಡಿತ್
ಬುದ್ದ ನರಿ ತೊಟ್ಟಿತ್
ಬಾಬಟ್ಟ್ ಕೊರತ್‌ಚಿ.
ಈನಂಗುಂಡ್ ಪೋಗಾಂದ್
ನಾಡಡಂಗ ಬಾಲರೊ
ಪೆಬ್ಬುಲಿರ ಕುಞ್ಞಿನ
ನಾಡ್‌ಡ ನಡುವುಲ್
ಪೂವೆಲಂಗುವ ಮಂದ್‌ಲ್
ಅಲ್ಲಿ ಕೋಂದ್ ಬೆಚ್ಚತ್.
ಅಕ್ಕಣೆಕ್ ಬೆಂದುವೆ
ಪಟ್ಟತಾನೆ ಐಯ್ಯಣ್ಣ
ಕಾಳೆ ಪಂದಿ ಕೆತ್ತಿತ್
ದೂರತುಳ್ಳ ಬೆಂದುಕ್
ಓಲೆ ಆಳಯಚಿತ್
ಪಕ್ಕಲುಳ್ಳ ಬೆಂದುಕ್
ತಾನೇ ಪೋಯಿತೆಣ್ಣಿತ್
ಅಂದಲ್ಲ ಪಿನಿಯಾಂಬ್
ಊರೂ ನಾಡೂ ಬೆಂದುವೂ
ಎಲ್ಲಾ ಬಂದ್ ಸೇರ್‌ಚಿ.
ಅಕ್ಕಣೆಕ್ ಸಂಜಾದಿ
ಚೀಲನಲ್ಲ ಐಯ್ಯಣ್ಣ
ಕೆತ್ತ್‌ಕಲ್ಲ್ ಗುಡ್ಡತ್
ಪೊಂಗುಳಿ ಕುಳಿಚಿತ್
ಮಾಜುತ್ತಿ ಮಡಿ ಪಾಂದ್
ನೇರಪೋಲೆ ಕುಪ್ಪಾಯ
ನೆತ್ತ ಪೋಲೆ ತೊಪ್ಪಾಯ
ಆರಚ್ಚಿರ ಪಟ್ಟೊಳಿ
ಪಾಂಗರ್‌ಂಜಿ ಕೆಟ್ಟಿತ್
ಚಾಯೋಡೆ ಪೊರಟಿತ್
ಗೆಜ್ಜೆ ತಂಡ್ ಕೈಲಾಯಿ
ಮಿಞ್ಞ ಬಯ್ಯ ಆಳಾಯಿ
ಕೊಂಬಾಯಿ ಕೊಳಲಾಯಿ
ಕೊಟ್ಟ್ ಪಾಟ್ ತಾನಾಯಿ
ತಾನೂ ತನ್ನಡೂರೋನೂ

ಇಲ್ಲವನೂ ಬೆಂದುವೂ
ಆಡಿ ಪಾಡಿ ಪೋಯಿತ್
ನಾಡ್‌ಡ ನಡುವುಲ್
ಪೂವೆಲಂಗುವ ಮಂದ್‌ಲ್
ಪೆಬ್ಬುಲಿರ ಮಿಞ್ಞಲ್
ಕೇಕ್‌ಕ್ ಮೊಗವಾಯಿ
ಮೂರ್‌ತಕೆಳತತ್.
ಅಕ್ಕಣೆಕ್ ಸಂಜಾದಿ
ಐಯ್ಯಣ್ಣಂಡ ಪೆತ್ತವ್ವ
ನೀಲಕೊಡಿ ನಂಜವ್ವ
ಚಂದೋಳತ್ ಚಾಯೋಡೆ
ಆಡಿಲಾಡಿ ಬಂದಿತ್
ಕುಞ್ಞಿ ಮಿಞ್ಞ ನಿಂದಿತ್
ಮಂಡೆಕಕ್ಕಿ ತಾತಿತ್
ಕ್‌ಂಡಿಪಾಲ್ ಕೊಡ್‌ತಿತ್
ಪೊಂಬಣ ಮಡ್‌ಕ್‌ಟ್ಟ್;
ಅಕ್ಕಣೆಕ್ ಅಯ್ಯಣ್ಣ
ತನ್ನ ಪೆತ್ತ ಅವ್ವಂಡ
ಕಾತೊಟ್ಟ್ ತಲೆ ಬೆಚ್ಚ.
ಓರಂದೀರಂಡೆಣ್ಣಣೆ
ಕೂಡ್‌ನ ಜನವೆಲ್ಲಾ

ಐಯ್ಯಣ್ಣ ಬಯಿಂಬಂಡ
ಮಂಡೆಕಕ್ಕಿ ಇಟ್ಟಿತ್
ಬೊಳ್ಳಿ ಪಣ ಕೈಕ್‌ಟ್ಟ್.
ಕೂಡ್‌ನ ಜನವೆಲ್ಲಾ
"ಐಯ್ಯಣ್ಣ ಬಯಿಂಬನ್
ಇಂದ್ ಕೇಳಿ ಕೇಕಡ್"
ಎಂದೂ ಕೇಳಿ ಕೇಟೋಲ್
ಎಂದೆಣ್ಣಿ ಪರಂದತ್.
ಓರಂದೀರಂಡೆಣ್ಣಣೆ
ಮೂರ್‌ತ ಕಯಿಂಜತ್.
ಈನಂಗುಂಡ್ ಪೋರಾಂಟ್
ಕೂಡ್‌ನ ಜನವೆಲ್ಲಾ
................................ಒಕ್ಕಡ
ಮಚ್ಚಿ ಮನೆಕೇರಿತ್
ಉಂಡಿತೂ ಕುಡಿಚಿತೂ
ವೈಯ್ಯನೆ ಪೊರಟತ್ ಎಂದೆಣ್ಣಿತ್ ಪಾಡುವ;
ಈ ಪಾಡುವ ಬೆಕ್ಕನ.
ಬೆಪ್ಪಕ್ಕೊಮ್ಮೆಡ್‌ಪಕ್ಕ
ಪಾಡುವ ಮೊರಡಾಪ
ಆದಿ ಮೂಲ ಲೆಲ್ಲೇಲೊ...!

ಮೇಲೆ ಬರೆದಿರುವ ಹಾಡಿನ ಕಡೇ ಪ್ರಕರಣವನ್ನು ಮುಹೂರ್ತದಲ್ಲಿ ಹಾಡುವುದಿಲ್ಲ. ಆದರೆ ಮನೆಗೆ ಬಂದು ಊಟ ಉಪಚಾರ ತೀರಿದ ಮೇಲೆ ಸುರುವಿನಿಂದಲೆ ಹಾಡಿ ಹೀಗೆ ಮುಗಿಸುವರು. ಆಮೇಲೆ ಊರವರಿಗೆ ಊರುಪತ್ತಿ ಕೊಡಬೇಕು.

ಕೆಮಿಕುತ್ತಿ ಮಂಗ್‌ಲ

ಕೊಡಗನು ಕಿವಿಗಳನ್ನು ಚುಚ್ಚಿ "ಪತ್ತೊಂಟಿ" "ಕಡಕು" ಮುಂತಾದವುಗಳನ್ನು ಹಾಕಿಕೊಳ್ಳಬೇಕು. ಕಿವಿಗಳನ್ನು ಚಿಕ್ಕಂದಿನಲ್ಲಿಯೇ ಚುಚ್ಚುವರು. ಆದರೆ ಕೆಲವರು ಮಕ್ಕಳ ಕಿವಿಗಳನ್ನು ಚಿಕ್ಕಂದಿನಲ್ಲಿ ಚುಚ್ಚದೆ ಪ್ರೀತಿಗಾಗಿ ಕೆಮಿಕುತ್ತಿ ಮಂಗ್‌ಲವೇ ಮಾಡುವುದುಂಟು.

ಈ ಮದುವೆಯು ಕನ್ನಿ ಮಂಗ್‌ಲದಂತೆಯೇ ಇರುವುದು. ಇದರ ಹಾಡು ಸಹ ಅದರಲ್ಲಿ ಹಾಡುವಂತೆಯೇ ಇರತಕ್ಕದ್ದು. ಹೆಣ್ಣಿನ ಸಮಾಚಾರ ಈ ಮದುವೆಯಲ್ಲಿ ಬರುವುದಿಲ್ಲ.

ಈ ಮದುವೆಯನ್ನು ಸರ್ವಸಾಧಾರಣವಾಗಿ ಬೇರೆಯೊಂದು ಮದುವೆಯ ಜೊತೆಯಲ್ಲಿಯೇ ಮಾಡುವರು.

ಮುಹೂರ್ತಕ್ಕೆ ಕೂತಲ್ಲಿ ಹುಡುಗನ ಎರಡು ಹೆಗಲುಗಳ ಮೇಲೆ ಎರಡು ಕೆಂಪು ವಸ್ತ್ರಗಳನ್ನು

ಹಾಕಿ ಅಕ್ಸಾಲೆಯು ಬಂದು ಎರಡು ಕಿವಿಗಳನ್ನು ಚುಚ್ಚಿ ಕೂಡಲೆ ಚಿನ್ನದ ಪತ್ತೊಂಟಿ ಅಥವಾ ಕಡಕು ಹಾಕಬೇಕು.

ಅಕ್ಸಾಲಿಗೆ ಈ ಎರಡು ಕೆಂಪು ವಸ್ತ್ರಗಳನ್ನು ಕೊಟ್ಟು ಹಜಾಮನಿಗೆ ಮತ್ತು ಬಳೆಗಾರನಿಗೆ ಕೊಡುವಂತೆ ಇತರ ಮರ್ಯಾದೆಗಳನ್ನು ಕೊಟ್ಟು ಎರಡು ಹಣ ಕೊಡಬೇಕು.

ಒಂದು ವೇಳೆ ಕಿವಿಗಳನ್ನು ಚುಚ್ಚದೆ ಸತ್ತುಹೋದರೆ ಗುಂಡಿಗೆ ಹಾಕುವ ಅಥವಾ ಸುಡುವ ಮೊದಲು ಕೊಡಗರೇ ಮುಳ್ಳಿನಿಂದ ಕಿವಿಗಳನ್ನು ಚುಚ್ಚಬೇಕು.

ಬಾಳೆಕ್ ಮಂಗ್‍ಲ

"ಬಾಳೆಕ್ ಮಂಗ್‍ಲ" ಅಂದರೆ "ಬಾಳೆಕೆತ್ತಣೆಕ್ ಮಂಗ್‍ಲ" "ಬಾಳೆವರೆಗೆ ಮದುವೆ" ಎಂದರ್ಥ.

ಒಂದೆರಡು ಮದುವೆ ಮಾಡಿ ಹೆಣ್ಣು ಸತ್ತು ಹೋಗಿದ್ದರೆ ಪುನಃ ಮದುವೆ ಮಾಡುವುದಕ್ಕೆ ಮುಂದಾಗಿ ಬಾಳೆಗೆ ಮದುವೆ ಮಾಡುವುದುಂಟು. ಈ ಮದುವೆಯನ್ನು ತನ್ನ ನ್ಯಾಯವಾದ ಮದುವೆಯ ದಿವಸ ಮದುವೆ ಹೊರಡುವ ಮೊದಲು ಮಾಡುವುದೇ ಸರ್ವ ಸಾಧಾರಣವಾದ ಪದ್ಧತಿಯಾಗಿದೆ. ಇದು ಸಾಧಾರಣವಾಗಿ ಒಂದನೇ ತರದ ಕೂಡಾವಳಿಯಂತೆ ಇರುತ್ತದೆ.

ಪೈತಾಂಡೆಕೆಳಪ ಅಥವಾ ಪೈತಡೆಕೆಳಪ

ಒಬ್ಬ ಹೆಂಗಸು ಹತ್ತು ಮಕ್ಕಳನ್ನು ಹೆತ್ತು ಆ ಹತ್ತು ಮಕ್ಕಳೂ ತನ್ನ ಗಂಡನೂ ಸಹ ಇದ್ದರೆ ಹತ್ತನೇ ಮಗುವು ಹೆತ್ತು ಅರುವತ್ತೊಂದನೇ ದಿವಸದಲ್ಲಿ ಕನ್ನಿ ಮಂಗಲದಲ್ಲಿ ಹುಡುಗಿಯು ಸ್ನಾನ ಮಾಡಿ ಬರುವಂತೆ ಬಂದು ಮುಹೂರ್ತ ಮಾಡುವುದುಂಟು.

ಸಾವು ಪದ್ಧತಿ

ಹರಕೆ : ಕಾಯಿಲಸ್ಥನಿಗೆ ಔಷಧಿ ಮಾಡಿಸಿದರೂ ಕಾಯಿಲೆಯು ವಾಸಿಯಾಗುವು ದಿಲ್ಲವಾದರೆ ತನ್ನ ಇಷ್ಟ ದೇವತೆಗೆ ಹರಕೆ ಮಾಡುವುದು ಸರ್ವ ಸಾಧಾರಣವಾಗಿದೆ. ಹರಕೆಯನ್ನು ಮಾಡಿದರೆ ಗುರುತಿಗಾಗಿ ಆಭರಣವನ್ನಾಗಲೀ ಹಣವನ್ನಾಗಲೀ ಕಾಣುವ ಹಾಗೆ ಕಟ್ಟಿ ತೂಗು ಹಾಕುವರು. ಕಾಯಿಲಸ್ಥನು ಸತ್ತು ಹೋದರೆ ಅಥವಾ ಪ್ರಾಣ ಬಿಡುವುದಕ್ಕೆ ಬಹಳ ಕಷ್ಟ ಪಡುವಂತೆ ಕಂಡುಬಂದರೆ ಹರಕೆಯನ್ನು ಬಿಚ್ಚಿ ಕೈಯಲ್ಲಿ ಹಿಡಿದು, ಅದರ ಕೆಳಗೆ ಉರಿಯುವ ಬೆಂಕಿಕೊಳ್ಳಿಯನ್ನು ಹಿಡಿದು ಹರಕೆಯ ಮೇಲೆ ನೀರು ಹುಯಿದು ಬೆಂಕಿಯನ್ನು ಕೆಡಿಸುವರು. ಆ ಮೇಲೆ ಆ ವಸ್ತುವನ್ನು ಉಪಯೋಗಿಸುವರು. ಕಾಯಿಲೆಯು ವಾಸಿಯಾದರೆ ಹರಕೆಯನ್ನು ಒಪ್ಪಿಸದ ಹೊರತು ಆಭರಣವನ್ನು ಉಪಯೋಗಿಸುವುದಿಲ್ಲ.

ಬಾಡೆಕ್ ಎಡ್‍ಪ : ಪ್ರಾಣವನ್ನು ಕೋಣೆಯಲ್ಲಾಗಲೀ ಮಂಚದ ಮೇಲಾಗಲಿ ಬಿಡಬಾರದೆನ್ನುವರು. ಆದುದರಿಂದ ಪ್ರಾಣ ಹೋಗುತ್ತದೆಂದು ತಿಳಿದ ಒಡನೆ ಕೋಣೆಯಿಂದ ಬಾಡೆಗೆ ಸಾಗಿಸಿ ಬಾಡೆಯಲ್ಲಿ ನೆಲದ ಮೇಲೆ ಒಂಟಿ ಚಾಪೆಯನ್ನು ಉತ್ತರದಿಂದ ದಕ್ಷಿಣಕ್ಕೆ ಹಾಕಿ ಅದರ ಮೇಲೆ ಹಾಸಿಗೆ ಹಾಕಿ ದಕ್ಷಿಣಕ್ಕೆ ತಲೆಯಾಗಿ ಮಲಗಿಸಿ, ಒಂದು ತೆಂಗಿನಕಾಯಿಯನ್ನೂ ಒಂದು ಕತ್ತಿಯನ್ನೂ ಹತ್ತಿರ ಇಟ್ಟು ಕೊಂಡು ಒಂದು ಚಿನ್ನದ ನಾಣ್ಯವನ್ನು ಒದಗಿಸಿಕೊಂಡು ಕಾದುಕೊಂಡಿರುವರು.

ಬಾಯಿಕ್ ನೀರ್ ಕೊಡ್‌ಪ : ಪ್ರಾಣ ಹೋದ ಒಡನೆ ತೆಂಗಿನಕಾಯಿಯನ್ನು ಒಡೆದು, ಅದರ ನೀರನ್ನು ಒಂದು ಕಂಚಿನ ಗಂಗಳಕ್ಕೆ ಹುಯಿದು, ತುಳಸಿ ಮತ್ತು ಗರಿಕೆ ಹುಲ್ಲುಗಳಿಂದ ಆ ನೀರನ್ನು ಕೊಡಬೇಕು. ಹತ್ತಿರದ ಸಮ್ಮಂಧಿಕರು ಚಿನ್ನದ ನಾಣ್ಯವನ್ನು ಬಾಯಿಗೆ ಹಾಕಿ ನೀರು ಕೊಡುವರು. ಆಮೇಲೆ ಬಾಡೆಯಲ್ಲಿ ದೀಪ ಹೊತ್ತಿಸಿಡಬೇಕು.

ಗುಂಡು ಹೊಡೆಯುವುದು : ಸತ್ತವನು ಅಥವಾ ಸತ್ತವಳು ಮದುವೆಯಾಗಿದ್ದರೆ ಅಥವಾ ಮದುವೆಯಾಗಲು ಇಷ್ಟವಿಲ್ಲದೆ ವಯಸ್ಸು ಪಟ್ಟಿದ್ದರೆ ಜೋಡುಗುಂಡು ಹೊಡೆಯಬೇಕು. ಮದುವೆಯಾಗಲು ವಯಸ್ಸಾಗಿದ್ದು ಮದುವೆಯಾಗದೆ ಹೋಗಿದ್ದರೆ ಒಂಟಿ ಗುಂಡು ಹೊಡೆಯಬೇಕು. ಗುಂಡು ಪದೇ ಪದೇ ಹೊಡೆಯುತ್ತಿರಬೇಕು.

ಇದೇ ಊರವರಿಗೆ ವರ್ತಮಾವೆಂದು ತಿಳಿದುಕೊಳ್ಳಬೇಕು. "ಪೊಟ್ಟ್‌ನ ಬೊಡಿಕೂ ಕೊಟ್ಟ್‌ನ ಪರೆಕೂ ಚಾವುಕ್ ಪೋಂಡು." ಈ ವರ್ತಮಾನ ತಿಳಿದ ಮೇಲೆ ಈ ದಿವಸ ಊರಲ್ಲಿ ಉಳುವ ಸಮಯವಾದರೆ ಉಳಕೂಡದು.

ಮನಿಯ : ಊರವರಿಗೆ ಗುಂಡು ಹೊಡೆದೇ ವರ್ತಮಾನ ಕೊಟ್ಟರೂ ಮಿಕ್ಕವರಿಗೆ ಮನಿಯ ಹೇಳಬೇಕು. ಮನಿಯ ಹೇಳಿಯೇ ಸಾವಿಗೆ ಹೋಗಬೇಕೆಂದಿಲ್ಲ. ಕೇಳಿದ ಸುದ್ದಿಗೆ ಹೋಗಬೇಕು. ಊರಿನಲ್ಲಿರುವ ಯಾವ ಕುಳದ ಹೊಲೆಯನಾದರೂ ಮನಿಯವನ್ನು ಹೇಳಬೇಕು. ತನ್ನ ಆಳೆಂದು ಅಡ್ಡಿ ಮಾಡಕೂಡದು, ಹೊಲೆಯರಿಲ್ಲದಿದ್ದರೆ ಇತರ ಜನರಿಂದ ಮನಿಯ ಹೇಳಿಸಬಹುದು.

ಮನಿಯ ಹೇಳ ಬಂದ ಹೊಲೆಯರಿಗೆ ಆಯಾಯ ಮನೆಯವರು ಕೊಚ್ಚಿ ಕೊಡಬೇಕು. ಮನಿಯ ಕೊಚ್ಚಿಯನ್ನು ಗೋಚಿ ಕೊಡಬೇಕು. ಅಳತೆ ಮಾಡಬಾರದು. ಸಾಧಾರಣ ಒಂದು ಸೇರಿನಷ್ಟು ಇರಬೇಕು. ಅನ್ನ ಕೊಟ್ಟರೆ ಕೊಚ್ಚಿ ಕೊಡಬೇಕಿಲ್ಲ.

ಆಯಿರ ತಿರಿ : ಕೆಲವು ಕಡೆಗಳಲ್ಲಿ ಕೋತಿರಿ ಮಾಡಿ ಉರಿಸಿ ಸತ್ತವನ ಮುಖದ ಮುಂದೆ "ಆಯಿರ ತಿರಿ ಕಂಡಿರಾ?" ಎಂದು ಸುತ್ತು ಸುತ್ತು ತಿರುಗಿಸುತ್ತಾ ಮೂರು ದಪ ಹೇಳುವರು.

ಚಾವು ಪರ : ಸತ್ತ ಒಡನೆ ಹತ್ತಿರ ಇರುವ ಮೇದರನ್ನು ಮತ್ತು ಹೊಲೆಯರನ್ನು ಕೊಂಬು ಕೊಟ್ಟು ವಾದ್ಯ ಸಹ ಮಾಡುವಂತೆ ಏರ್ಪಡಿಸಿಕೊಳ್ಳಬೇಕು. ಇವರು ಚಾವು ಪರೆ ಹೊಡೆಯುತ್ತಿರಬೇಕು.

ನೀರ್‌ಕ್ ಇಳಿಯುವ : ಸತ್ತು ಕೆಲವು ಹೊತ್ತಿನ ಮೇಲೆ ಸತ್ತವನ ಹತ್ತಿರದ ಸಮ್ಮಂಧಿಕರಲ್ಲಿ ಕಿರಿಯವರು ತಮ್ಮ ಮೈಗಳಲ್ಲಿರುವ ಬಟ್ಟೆ ಸಮೇತ ನೀರಲ್ಲಿ ಮುಳುಗಬೇಕು. ಗಂಡಸರು ಬಿಳೀ "ಒಚ್ಚೊಡಿ" ಕುಪ್ಪಸ ಕರೀ ದಟ್ಟಿಯಾಗಲೀ ಅಥವಾ ಸೊಂಟಕ್ಕೆ ಒಂದು ಮುಂಡು ಮತ್ತು ಮೈಗೆ ಒಂದು ಮುಂಡಾಗಲೀ ಧರಿಸಿಕೊಂಡು ಹೆಂಗಸರು ಬಿಳಿ ಸೀರೆಯನ್ನು ತೊಟ್ಟುಕೊಂಡು ರವಕೆಯನ್ನು ತೊಡದೆ "ನಿಪ್ಪ್‌ಕ್ ತುಣಿ" ಕಟ್ಟಿಕೊಂಡು ತಲೆಯ ಕೂದಲನ್ನು ಬಿಚ್ಚಿಕೊಂಡು ಬರಬೇಕು. ನೀರಲ್ಲಿ ಮುಳುಗದಿದ್ದರೂ ಕೈಕಾಲು ಮುಖವನ್ನು ತೊಳೆದುಕೊಂಡು ತಾವು ಧರಿಸಿರುವ ಬಟ್ಟೆಯನ್ನು ಸ್ವಲ್ಪವಾದರೂ ಒದ್ದೆ ಮಾಡಿಕೊಳ್ಳಬೇಕು. ತಮ್ಮ ಹೆಚ್ಚಿನ ಆಭರಣಗಳನ್ನು ತೆಗೆದು ಬಿಡಬೇಕು. ಹೆಂಡತಿ ತಲೋಲೆ ಹಾಕಿಕೊಳ್ಳಬೇಕು.

ಓಣಿಕ್ ಕೂಳ್‌ಬೆಪ್ಪ : ನೀರಿಗೆ ಇಳಿದವರು ಓಣಿಯ ತಲೆಗೆ ಬಂದು ತಲಪುವಷ್ಟರಲ್ಲಿ ಒಂದು ಅಗ್ರದೆಲೆಯಲ್ಲಿ ಸ್ವಲ್ಪ ಅನ್ನ ಹಾಕಿ ಒಂದು ತೆಂಗಿನಕಾಯಿಯ ಚೂರನ್ನು ಹಾಕಿ ಅದರ ತುದಿಯಲ್ಲಿ ಒಂದು ಬತ್ತಿ ಮಾಡಿ ಉರಿಸಿ ಇಡಬೇಕು. ಇವರು ಒಬ್ಬೊಬ್ಬರಾಗಿ ಸಾವಿಗೆ ಕೈ ಕೊಡುವ ರೀತಿ

ಮೊಣಕಾಲೂರಿ ಅಗ್ರದೆಲೆಗೆ ಕೈ ಕೊಟ್ಟು "ಕೆಟ್ಟಿರೊ ಅಜ್ಜಯ್ಯ" *ಎಂದು ಮೂರು ದಪ ಹೇಳಿ ಜೋಡು ಗುಂಡು ಹೊಡೆದು ಹಿಂದಕ್ಕೆ ಮನೆಗೆ ಹೋಗಬೇಕು.

ಚಾವುಕ್ ಕೈ ಕೊಡ್‌ಪ : ಆಮೇಲೆ ನೀರಿಗಿಳಿದವರ ಪೈಕಿ ಹೆಂಗಸರು ಮಾಲೆಪೊಯಿತ್ ಆಮೇಲೆ ನೀರಿಗಿಳಿದವರ ಪೈಕಿ ಹೆಂಗಸರು ಮಾಲೆಪೊಯಿತ್ ಹೊಡೆಯುತ್ತಾ ಬಂದು ಹಾಗೆಯೇ ಮತ್ತು ಇತರರೂ ಬಂದು ಸಾವಿಗೆ ಕೈ ಕೊಡಬೇಕು. ಸಾವಿಗೆ ಕೈ ಕೊಡುವಾಗ ಎಲ್ಲರೂ ತಲೆಯಲ್ಲಿದುವ ವಸ್ತುವನ್ನು ತೆಗೆದು, ತನ್ನ ಬಲ ಮುಂಗೈಯನ್ನು ಶವದ ಎದೆಯ ಹತ್ತಿರ ಮುಟ್ಟಿಸಿ ಸಂಗೈಯಿಂದ ತನ್ನ ಎದೆಯನ್ನು ಹೊಡೆಯುವಂತೆ ಮಡಗಬೇಕು. ಕೈ ಕೊಡುವವನಗ ಸತ್ತವನನ್ನು ಅಥವಾ ಸತ್ತವಳನ್ನು ತನಗಿಂತ ಕಿರಿದಾದರೆ ಹೆಸರಿಡಿದು "ಕೆಟ್ಟಿರೋ ಐಯ್ಯಣ್ಣಿ" ಎಂಬಂತೆ ಮೂರು ದಪ ಹೇಳಬೇಕು.

ತೇಕತ್ ಕೂಟುವ : ಸತ್ತ ದಿವಸ ಸತ್ತವನ ಹತ್ತಿರದ ನೆಂಟರು ಬರಲು ಆಗುವುದಿಲ್ಲವೆಂದಾಗಲೀ ಅಥವಾ ಹೊತ್ತು ಮೀರಿತೆಂದಾಗಲೀ ಶವವನ್ನು ಸುಡುವುದಾಗಲೀ ಗುಂಡಿಗೆ ಹಾಕುವುದಾಗಲೀ ಇಲ್ಲವಾದರೆ ಶವವನ್ನು ಆ ದಿವಸ ಮೀಯಿಸಬಾರದು. ರಾತ್ರಿ ಶವವನ್ನು ಮಗುಚಿ ಹಾಕಿದ ಒಂದೇ ಚಾಪೆಯ ಮೇಲೆ ದಕ್ಷಿಣಕ್ಕೆ ತಲೆಯಾಗಿ ಮಲಗಿಸಿ ಅದರ ಮುಖದ ಮೇಲೆ ಒಂದು ಂಚಿನ ಗಂಗಳವನ್ನು ಮುಚ್ಚಬೇಕು. ಕಂಚಿನ ಗಂಗಳವು ಮೂಗಿಗೆ ತಗಲದಂತೆ ಒಂದು ಬಟ್ಟೆಯ ಸಿಂಬಿಯನ್ನು ಮಾಡಿ ಮುಖದ ಮೇಲೆ ಮಡಗಿ ಅದರ ಮೇಲೆ ಗಂಗಳವನ್ನು ಮಡಗಬೇಕಗ. ಮತ್ತು ಶವವನ್ನು ಕಾಣದಂತೆ ಅದರ ಮೇಲೆ ಒಂದು ಹಚ್ಚಡವನ್ನು ಹಾಸಬೇಕು. ಇದಕ್ಕೆ "ಮೂಡ್‌ಲಿಡುವ' ಎಂದು ಹೆಸರು. ಹಚ್ಚಡವನ್ನೂ ಗಂಗಳವನ್ನೂ ಮಾರಣೆ ದಿವಸ ತೆಗೆದುಬಿಡಬೇಕು.

ಕಾಕಿ ಮೊರಡುವ : ಓಣಿಕೂಳ್ ಮಡಗಿ ಬಂದ ಮೇಲೆ ನಾಲ್ಕು ಗಂಡಸರೂ ಅವರು ನಿಂತ ಮೇಲೆ ನಾಲ್ಕು ಹೆಂಗಸರೂ ಸಾವು ಪದವನ್ನು ಈ ರೀತಿ ಅವಶ್ಯವಿದ್ದಷ್ಟು ಇಡೀ ರಾತ್ರಿ ಹಾಡುತ್ತಿರಬೇಕು. ಸತ್ತವನು ಅಥವಾ ಸತ್ತವಳು ಹಾಡುವವನಿಗೆ ಯಾವ ರೀತಿ ನೆಂಟನೋ ಆ ರೀತಿ ಕರೆದು ಹಾಡಬೇಕು. ಕಿರಿಯರಾದರೆ ಹೆಸರು ಹೇಳಿ ಕರೆಯಬೇಕು. ನೆಂಟನಲ್ಲದೆ ಹಿರಿಯರಾದರೆ ವಯಸ್ಸು ಅನುಸರಿಸಿ ಅಜ್ಜಯ್ಯ ಅಥವಾ ತಾಯವ್ವ, ಅಣ್ಣಯ್ಯ ಅಥವಾ ಅಕ್ಕಯ್ಯ ಎಂದು ಹೇಳಬೇಕು.

ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ;
ಕೆಟ್ಟ್‌ಪೋನ ಕೇಡೇ ಅಜ್ಜಯ್ಯ
ನಿಂಗ ಕೆಟ್ಟ ಕೇಡೇ ಅಜ್ಜಯ್ಯ;
ಚೋತಿರೋ ಅಜ್ಜಯ್ಯ ನಿಂಗ
ಚೋತನ್ನಕೆ ಚೋತ್‌ಲೇ ಅಜ್ಜಯ್ಯ;
ಬದ್ದಿರೋ ಅಜ್ಜಯ್ಯ ನಿಂಗ
ಬಾಪ ಕಾಲ ಬದ್ದಿರೋ ಅಜ್ಜಯ್ಯ;
ಬಾವಕ್ ಕೊದಿಚಿರೋ ಅಜ್ಜಯ್ಯ
ಚಾವಕ್ ಮಡಿಚಿರೋ ಅಜ್ಜಯ್ಯ

---

* **ವಾವೆಯಲ್ಲಿ ಅಜ್ಜಯ್ಯನಿಲ್ಲದಿದ್ದರೆ ವಾವೆ ಪ್ರಕಾರ ಹೇಳುತ್ತಾ ಕೈ ಕೊಡಬೇಕು.**

ಬಾವ ಕೊದಿ ಎತ್ತ್‌ಲೇ ಅಜ್ಜಯ್ಯ
ಚಾವ ಕೇಡ್ ಎತ್ತ್‌ಚೋ ಅಜ್ಜಯ್ಯ;
ಕಾಲ ಪೋಯಿ ಬಪ್ಪದೋ ಅಜ್ಜಯ್ಯ
ಕಾಲತೋಡೆ ಬಾತ್‌ಲಾ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ಇಟ್ಟ ಪಡಿ ತೇಂಗಿಚೋ ಅಜ್ಜಯ್ಯ
ಮೇಲೆ ಪಡಿ ಇಟ್ಟ್‌ಲೇ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ಏಳ್ ತೊರೆ ಪೊಮ್ಮಾಲೇ ಅಜ್ಜಯ್ಯ
ಮಾಲೆ ಚೂರೆ ಬುದ್ದೋಲೇ ಅಜ್ಜಯ್ಯ
ನಿಂಗ ಚೂರೆ ಬುದ್ದಿರೋ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ನೋಟುವಳ ಕನ್ನಡಿ ಅಜ್ಜಯ್ಯ
ಕೈ ತಪ್ಪಿ ನೆಲ ತಾಂದ್ ಅಜ್ಜಯ್ಯ
ಬುದ್ದೊಡಂದ್ ಪೋನೋಲೇ ಅಜ್ಜಯ್ಯ
ನಿಂಗೊಡಂದ್ ಪೋಯಿರೋ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ಪೊಲ್ಲುವಳ ಪೊಂಜೂದ್ ಅಜ್ಜಯ್ಯ
ಪಾದ ತುಂಡಿ ಪೋನೋಲೇ ಅಜ್ಜಯ್ಯ
ನಿಂಗ ತುಂಡಿ ಪೋಯಿರೋ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ತಿತ್ತ್ ಮಳೆ ಪೊಜ್ಜದೋ ಅಜ್ಜಯ್ಯ
ನಾನರಿಂಜಿ ಕೊಂಡ್‌ಲೇ ಅಜ್ಜಯ್ಯ
ನಾನರಿಂಜಿ ಕೊಂಡಿನೋ ಅಜ್ಜಯ್ಯ
ನೀ ಬೂಕಿ ಕೆಡ್‌ತಿಪ್ಪೋ ಅಜ್ಜಯ್ಯ;
ನಾರಾಯಣ ದೇವಂಡೋ ಅಜ್ಜಯ್ಯ
ಕಳ್ಳಪಡೆ ಬಂದದೋ ಅಜ್ಜಯ್ಯ
ನಾನರಿಂಜಿ ಕೊಂಡ್‌ಲೇ ಅಜ್ಜಯ್ಯ
ನಾನರಿಂಜಿ ಕೊಂಡಿನೋ ಅಜ್ಜಯ್ಯ
ಕೆತ್ತಿ ಚೂರೆ ಇಟ್ಟಿಪ್ಪೋ ಅಜ್ಜಯ್ಯ;
    ಕೆಟ್ಟಿರೋ ಅಜ್ಜಯ್ಯ ನಿಂಗ
ನಿಂಗ ಕೆಟ್ಟ ಕೇಡೇ ಅಜ್ಜಯ್ಯ.
ಕಾಲಲ್ಲತ ಕಾಲತ್ತೋ ಅಜ್ಜಯ್ಯ
ತಿಂಗಲ್ಲತ ತಿಂಗತ್ತೋ ಅಜ್ಜಯ್ಯ
ಕುಂಬಿಯಾರ್ ತಿಂಗತ್ತೋ ಅಜ್ಜಯ್ಯ
ತುಂಬೆ ಮಲೆ ಮೋಳ್‌ಲ್ ಅಜ್ಜಯ್ಯ
ತಿತ್ತ್ ಬೊದ್ ಕಾಂಜಿತ್ ಅಜ್ಜಯ್ಯ

ನೆಲ್ಲಿಕೆ ಚೆಡಿಂಜಿತ್ ಅಜ್ಜಯ್ಯ
ನೆಯಿ ಪಿಲ್ಲ್‌ಕ್ ತಿತ್ತಾಯಿ ಅಜ್ಜಯ್ಯ
ಪಿಲ್ಲ್ ಚೂರೆ ಬುದ್ದೋಲೇ ಅಜ್ಜಯ್ಯ
ಈ ಒಕ್ಕಡ ಕುಂದ್‌ಲ್ ಅಜ್ಜಯ್ಯ
ನಿಂಗ ಚೂರೆ ಬುದ್ದಿರೋ ಅಜ್ಜಯ್ಯ;
ಕಾಲಲ್ಲತ ಕಾಲತ್ ಅಜ್ಜಯ್ಯ
ತಿಂಗಲ್ಲತ ತಿಂಗತ್ ಅಜ್ಜಯ್ಯ
ಪೊನ್ನಾದರೆ ತಿಂಗತ್ ಅಜ್ಜಯ್ಯ
ಕಾಳಿಕಮ್ಮೆ ದೇಪಿರೋ ಅಜ್ಜಯ್ಯ
ಕಾಳಿಕ ಮಲೆಯಿಂಜಿ ಅಜ್ಜಯ್ಯ
ವಾಯು ಕಾತಡಿಚಿತ್ ಅಜ್ಜಯ್ಯ
ಮೇಕಿಯ ತೊಡಿಯತ್ ಅಜ್ಜಯ್ಯ
ಬಾಳೆ ಚೂರೆ ಬುದ್ದೋಲೇ ಅಜ್ಜಯ್ಯ
ನಿಂಗ ಚೂರೆ ಬುದ್ದಿರೋ ಅಜ್ಜಯ್ಯ;
ಕೆಟ್ಟಿರೋ ಅಜ್ಜಯ್ಯ ನಿಂಗ
ನಿಂಗ ಕೆಟ್ಟ ಕೇಡೇ ಅಜ್ಜಯ್ಯ.
ಬಾಂಗಾಡ್ ಬನತ್‌ಲ್ ಅಜ್ಜಯ್ಯ
ಪಂಗೊಳಿ ಪಳುಮರೋ ಅಜ್ಜಯ್ಯ
ಕತ್ತಿ ಮತ್ತ್ ಕೂಡತೇ ಅಜ್ಜಯ್ಯ
ಬೇರೋಡೆ ಪೊರಿಂಜತೋ ಅಜ್ಜಯ್ಯ
ಅದ್ ಪೋಲೆ ನಿಂಗಳೋ ಅಜ್ಜಯ್ಯ
ಕಾಲಳಿತ್ ಪೋಯಿರೋ ಅಜ್ಜಯ್ಯ;
ಊಕಾಡ್‌ಕೊಯಂದದೋ ಅಜ್ಜಯ್ಯ
ಮಾಂಜಪ್ಪಯ್ಯ ಪೂಮರೋ ಅಜ್ಜಯ್ಯ
ಪೂಮರತ್ ಕೊಂಬ್‌ಲ್ ಅಜ್ಜಯ್ಯ
ಪತ್ತೆಲೆಕ್ ಕಣ್ಣೆಲೇ ಅಜ್ಜಯ್ಯ
ಕೊತ್ತ್ ತುಂಡಿ ಪೋನೋಲೇ ಅಜ್ಜಯ್ಯ
ನಿಂಗ ತುಂಡಿ ಪೋಯಿರೋ ಅಜ್ಜಯ್ಯ;
ಜಾತಿನಲ್ಲ ಜೋತಿನೊ ಅಜ್ಜಯ್ಯ
ಕೈ ಬೀಜಿ ಕೆಡ್‌ತ್‌ಚಿ ಅಜ್ಜಯ್ಯ
ಅದ್ ಪೋಲೆ ನಿಂಗಳ ಅಜ್ಜಯ್ಯ
ನಾರಾಯಣ ದೇವನೋ ಅಜ್ಜಯ್ಯ
ಕೈ ಬೀಜಿ ಕೆಡ್‌ತ್‌ಚೋ ಅಜ್ಜಯ್ಯ;
ಅಂಬ್‌ಲ ತರಿಂಜಕೋ ಅಜ್ಜಯ್ಯ
ಊರ್‌ಡ ಶನಿ ಪೊಲೇ ಅಜ್ಜಯ್ಯ
ಪುಳ್ಳಿ ಕೊಟ್ಟ್‌ಡಿಂಜಕೋ ಅಜ್ಜಯ್ಯ
ಒಕ್ಕಡ ಶನಿ ಪೊಲೇ ಅಜ್ಜಯ್ಯ

ನಿಂಗ ಬುದ್ದ್‌ಕೊವ್ವಣೆ ಅಜ್ಜಯ್ಯ
ಆಳಣ್ಣ ಶನಿ ಬಾತೋ ಅಜ್ಜಯ್ಯ;
        ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಜಬ್ಬೂಮಿರ ಮೀದಲ್ ಅಜ್ಜಯ್ಯ
ನಿಂಗ ಪುಟ್ಟಿತಾಕಣೇ ಅಜ್ಜಯ್ಯ
ಭಾಗಿಯ ಪರಂದತ್ ಅಜ್ಜಯ್ಯ
ಕಾಡ್‌ಲಿಂಜ ಪಟ್ಟತಿ ಅಜ್ಜಯ್ಯ
ಪಟ್ಟಿಕೋಡಿ ಬಂದಿತ್ ಅಜ್ಜಯ್ಯ
ಮಂಡುಕನ ಪೆತ್ತತ್ ಅಜ್ಜಯ್ಯ
ಕುಞ್ಞಿಕುಳ್ಳ ಪಾಲಾಚಿ ಅಜ್ಜಯ್ಯ;
ಓಡೆಲಿಂಜ ಕೇಚಮ್ಮೇ ಅಜ್ಜಯ್ಯ
ಕೊಟ್ಟ್‌ಕೋಡಿ ಬಂದಿತ್ ಅಜ್ಜಯ್ಯ
ಕೋಞಣನ ಪೆತ್ತತ್ ಅಜ್ಜಯ್ಯ
ಕುಞ್ಞಿಕ್ ಪೆರೆಯಾಚಿ ಅಜ್ಜಯ್ಯ
ಅಪ್ಪಂಗುಳ್ಳ ನೈಯ್ಯಾಚಿ ಅಜ್ಜಯ್ಯ;
ನಿಂಗ ಪುಟ್ಟಿತಾಕಣೆ ಅಜ್ಜಯ್ಯ
ಕೋಳಿ ಪಂದಿ ಪೆರ್ತತ್ ಅಜ್ಜಯ್ಯ
ಅತ್ತ ಕಡಚಿ ಪೆರ್ತತ್ ಅಜ್ಜಯ್ಯ
ಶತ್ತ್‌ರು ಕೊರಂದತೋ ಅಜ್ಜಯ್ಯ
ಮಿತ್ತ್‌ರು ಪೆರ್‌ತತೋ ಅಜ್ಜಯ್ಯ;
ಓಡಿ ಪೋನ ಚಾಂಡಾಳ ಅಜ್ಜಯ್ಯ
ತಾನೆ ಬಂದ್ ಸೇರ್‌ಚಿ ಅಜ್ಜಯ್ಯ;
ಕಾಲನ್ನನೆ ಪೋಪಕೋ ಅಜ್ಜಯ್ಯ*
ಆಳ್ ಕಾಳೆ ತೇಂದಿರೋ ಅಜ್ಜಯ್ಯ;
ಆಳ್ ಕಾಳೆ ತೇಂದಿತೋ ಅಜ್ಜಯ್ಯ
ಪಟ್ಟ್ ಪೋನ ಜಬ್ಬೂಮಿ ಅಜ್ಜಯ್ಯ
ಕೆಜ್ಜಿ ಸಾಗ್ ಮಾಡಿರೋ ಅಜ್ಜಯ್ಯ
ಕೆತ್ತಿತೂ ಕಳತಿತೂ ಅಜ್ಜಯ್ಯ
ಆಕಡೇರಿ ತಿದ್ದಿರೋ ಅಜ್ಜಯ್ಯ
ಯಾಕಡೇರಿ ಚಾಚಿರೋ ಅಜ್ಜಯ್ಯ
ಆಯಿರಾಂಡ ಜಬ್ಬೂಮಿ ಅಜ್ಜಯ್ಯ
ಊನತ್‌ೀತ್ ಬೆಚ್ಚಿರೋ ಅಜ್ಜಯ್ಯ
ಆಳುದ್ದ ಬೋಳೆಯಾಚಿ ಅಜ್ಜಯ್ಯ
ಕೈಯುದ್ದ ಕದ್‌ರಾಚಿ ಅಜ್ಜಯ್ಯ

---

* **ಹೆಂಗಸರು ಸತ್ತರೆ ವಾವೆಯನ್ನೂ ಹಾಡನ್ನೂ ಬದಲಿಸುವ ರೀತಿ 130ನೇ ಪೇಜು ನೋಡಿ**

ಪೊಂಬೊಳೆನ ನೀಕಿತ್ ಅಜ್ಜಯ್ಯ
ಚಿತ್ತಾರಿಲ್ ದುಂಬಿತೋ ಅಜ್ಜಯ್ಯ
ಮಂಬತ್ತಾಯತ್ಟ್ಟಿರೋ ಅಜ್ಜಯ್ಯ;
ಮಾಣಿಕ ಮಲೆನಾಡ್ ಅಜ್ಜಯ್ಯ
ಮೂಮ ಚೋಮ ಪೋರಿತೋ ಅಜ್ಜಯ್ಯ
ಮಾರಿ ಪಣ ಮಾಡಿರೋ ಅಜ್ಜಯ್ಯ
ಉಪ್ಪೂ ಮೀನೂ ಕೊಂಡಿರೋ ಅಜ್ಜಯ್ಯ
ತೆಂಗೆ ಬೆಲ್ಲ ಕೊಂಡಿರೋ ಅಜ್ಜಯ್ಯ
ಮಂಡೆಕೆಣ್ಣೆ ಕೋಂದಿರೋ ಅಜ್ಜಯ್ಯ
ಮೇಲ್ಕ್ ಮುರಿಯಾಚಿ ಅಜ್ಜಯ್ಯ
ಬಾಕಿನ ಕರದಿರೋ ಅಜ್ಜಯ್ಯ;
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಇಂಜಿ ಮಂಜ ನಟ್ಟಿತೋ ಅಜ್ಜಯ್ಯ
ಮಾರಿ ಪಣ ಮಾಡಿರೋ ಅಜ್ಜಯ್ಯ
ಯಾಲ ಕಾಪಿ ಮಾಡಿತೋ ಅಜ್ಜಯ್ಯ
ಮೂಪಾನಿ ಪೊನ್ನೆಲ್ಲ ಅಜ್ಜಯ್ಯ
ಚೆಪ್ಪ್‌ಕ್ಟ್ಟಿ ಬೆಚ್ಚಿರೋ ಅಜ್ಜಯ್ಯ;
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಮುಂಡೆ ಕಾಡ್ ಕೆತ್ತಿತ್ ಅಜ್ಜಯ್ಯ
ಚೀಂಗೆ ಕಾಡ್ ನೀಕಿತ್ ಅಜ್ಜಯ್ಯ
ತೋಡ್ ತೊರ ತಿದ್ದಿತ್ ಅಜ್ಜಯ್ಯ
ಬುಟ್ಟ್ ಪೋನ ಭೂಮಿನ ಅಜ್ಜಯ್ಯ
ಕೂಟ್ಕ್ ಪಡದಿರೋ ಅಜ್ಜಯ್ಯ
ತಪ್ಪಿಪೋನ ತಕ್ಕಾಮೆ ಅಜ್ಜಯ್ಯ
ತಪ್ಪತೆ ಪಡದಿರೋ ಅಜ್ಜಯ್ಯ
ತಾಂಗೆದ್‌ರ್ ಬಂದವನ ಅಜ್ಜಯ್ಯ
ಕೈಲಡಕಿಕೊಂಡಿರೋ ಅಜ್ಜಯ್ಯ
ಬೆನ್ನ್ ಮರೆ ಬುದ್ದವನ ಅಜ್ಜಯ್ಯ
ಚಾಕಿತ್ ಪೊಲತಿರೋ ಅಜ್ಜಯ್ಯ
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಕನ್ನಿ ಮಂಗಲಾಯಿರೋ ಅಜ್ಜಯ್ಯ
ತಾಂದೇವನೂ ದೇವಿಯೂ ಅಜ್ಜಯ್ಯ
ಪೂಪೋಲೇ ಪೊಲಂದಿರೋ ಅಜ್ಜಯ್ಯ
ತಣ್ಣನೆ ಪೊಲವಕೋ ಅಜ್ಜಯ್ಯ
ಶಂಭುರೀಶ ಮೆಚ್ಚಿತ್ ಅಜ್ಜಯ್ಯ

ಮೆಚ್ಚಿತ್ ಫಲ ತಂದ ಅಜ್ಜಯ್ಯ
ಒಜ್ಜ್‌ರ ಕ್‌ಡಿ ಪೋಲೆ ಅಜ್ಜಯ್ಯ
ಮುತ್ತ್‌ರ ನುರಿ ಪೋಲೆ ಅಜ್ಜಯ್ಯ
ಮಾಣಿಕ ಪರ ಪೋಲೆ ಅಜ್ಜಯ್ಯ
ಆಮಕ್ಕ ಪರಂದತೊ ಅಜ್ಜಯ್ಯ
ಮಾಂಜಪ್ಪಯ್ಯ ಪೂಪೋಲೆ ಅಜ್ಜಯ್ಯ
ಮುಲ್ಲೆ ಪೂವ್ ತಾಂಬೋಲೆ ಅಜ್ಜಯ್ಯ
ಮೂಡಿ ಮಕ್ಕಳಾಚಿಲೋ ಅಜ್ಜಯ್ಯ.
ಇನ್ನನೆ ಪೊಲವಕೊ ಅಜ್ಜಯ್ಯ
ಉಯಿ! ನಿಂಗಡ ಮಕ್ಕಕೊ ಅಜ್ಜಯ್ಯ
ನಲ್ಲದಾಂಡುಂದೆಣ್ಣಿತ್ ಅಜ್ಜಯ್ಯ
ಬಟ್ಟೆ ತಲೆ ಅಂಬ್‌ಲ ಅಜ್ಜಯ್ಯ
ಕೆಟ್ಟಿ ನೇತಿಕೊಂಡಿರೋ ಅಜ್ಜಯ್ಯ;
ಉಯಿ! ನಿಂಗಡ ಕುಞ್ಯಳ ಅಜ್ಜಯ್ಯ
ಓದುವಕ್ ಕೂಟಿತ್ ಅಜ್ಜಯ್ಯ
ಕೈನ್‌ಟಿ ಪಣಲ್‌ಟ್ಟ್ ಅಜ್ಜಯ್ಯ
ಎಳ್ತ್‌ಶಾಸ್ತ್ರ ಪಡಿಚತ್ ಅಜ್ಜಯ್ಯ;
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಉಯಿ! ನಿಂಗಡ ಕುಞ್ಯಕ್ ಅಜ್ಜಯ್ಯ
ನಲ್ಲದಾಂಡುಂದೆಣ್ಣಿತ್ ಅಜ್ಜಯ್ಯ
ದೇವ ಪೂಜೆ ಕೆಜ್ಜಿರೋ ಅಜ್ಜಯ್ಯ
ಆ ದೇವ ದಯತ್‌ಲ್ ಅಜ್ಜಯ್ಯ
ನಿಂಗಡ ಸಂಸಾರೆಲ್ಲಾ ಅಜ್ಜಯ್ಯ
ಪೂಂದೇನ್ ಕುಡಿ ಪೋಲೆ ಅಜ್ಜಯ್ಯ
ಬೊಗ್ಗನೆ ಪೊಲಿವಲ ಅಜ್ಜಯ್ಯ
ನಿಂಗಡ ಸಂಸಾರೆಲ್ಲಾ ಅಜ್ಜಯ್ಯ
ಬುದ್ದಲ್ಲಿ ಮೊಳೆತಿತ್ ಅಜ್ಜಯ್ಯ
ಸೀಮೆ ತ್‌ರ ಪಬ್ಬುವ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಗಂಗ ತುಂಗ ಕಾವೇರಿ ಅಜ್ಜಯ್ಯ
ಯಮುನೆಯು ಸರಸ್ವತಿ ಅಜ್ಜಯ್ಯ
ಕಾಂಚಿಲ್ ಕುಳಿಚಿತ್ ಅಜ್ಜಯ್ಯ
ರಾಮೇಶ್ವರಕೆತ್ತಿತ್ ಅಜ್ಜಯ್ಯ
ಅಲ್ಲಿ ತೀರ್ಥ ಕುಳಿಚಿತ್ ಅಜ್ಜಯ್ಯ
ತಣ್ಣನೆ ಪೊಲವಕ ಅಜ್ಜಯ್ಯ
ನಾರಾಯಣ ದೇವಂಗೋ ಅಜ್ಜಯ್ಯ
ಕಂಡಿತ್ ಪೊರ್‌ಂದ್‌ಲೇ ಅಜ್ಜಯ್ಯ.

ಅನಂಗುಂಡ್ ದೇವಯ್ಯ ಅಜ್ಜಯ್ಯ
ಜಮ್ಮತ್ ಶನಿದೇವನಜ್ಜಯ್ಯ
ಕ್ಬ್ಭೂಮಿಕಯಚತೋ ಅಜ್ಜಯ್ಯ
ಅದ್ಂಡ ಮೊಳಿಂಗೊಂಡ್ ಅಜ್ಜಯ್ಯ
ಕಾಲಲ್ಲತ ಕಾಲತ್ ಅಜ್ಜಯ್ಯ
ತಿಂಗಲ್ಲತ ತಿಂಗತ್ ಅಜ್ಜಯ್ಯ
ಕಾಳೆ ತೆಡಡಿಚತೊ ಅಜ್ಜಯ್ಯ
ಆಲಿ ಮಳೆ ಪೊಜ್ಜತೊ ಅಜ್ಜಯ್ಯ
ಬೇಂಗತ ಮಳೆ ಪೊಜ್ಜ ಅಜ್ಜಯ್ಯ
ಕಾಯತ ಬೊದ್ ಕಾಂಜ ಅಜ್ಜಯ್ಯ.
ಅನ್ನನಿಪ್ಪ ಕಾಲತ್ ಅಜ್ಜಯ್ಯ
ನಾರಾಯಣ ದೇವಂಡ ಅಜ್ಜಯ್ಯ
ಜಮ್ಮತ್ ಶನಿ ದೇವ ಅಜ್ಜಯ್ಯ
ಅಪ್ಪಣೆ ಪರಕಾರ ಅಜ್ಜಯ್ಯ
ಕ್ಳ್ ಲೋಕ ದೇಶಕ್ ಅಜ್ಜಯ್ಯ
ಪೊಂದೊಟ್ಟ್ ಪೊಂಗೇರ್ಲ್ ಅಜ್ಜಯ್ಯ
ಪಾಕಡಕ್ಳಂಜತೊ ಅಜ್ಜಯ್ಯ.
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್ಲೇ ಅಜ್ಜಯ್ಯ.
ಪಾಕಡಕ್ಳಿಯಣೆ ಅಜ್ಜಯ್ಯ
ಪಾಕಡೆಲ್ಲ ಬತ್ತಿತ್ ಅಜ್ಜಯ್ಯ
ಬೊಮ್ಮಣೆಲ್ಲ ಕಂಡತ್ ಅಜ್ಜಯ್ಯ
ಜಮ್ಮತ್ ಶನಿ ದೇವ ಅಜ್ಜಯ್ಯ
ಅಲ್ಲಿಂಜಿ ಪೊರಟಿತೋ ಅಜ್ಜಯ್ಯ
ಸೀಮೆ ಸುತ್ತಿ ಬಂದಿತೋ ಅಜ್ಜಯ್ಯ
ಇಂದ್ ಬಾಪೊಡೆವೋಂಡ ಅಜ್ಜಯ್ಯ
ಕೊಟ್ಟ್‌ಕ್ ಶನಿ ಬಂದ ಅಜ್ಜಯ್ಯ
ಕೊಟ್ಟ್‌ಕ್ ಶನಿ ಬಂದ್ ಅಜ್ಜಯ್ಯ
ಆಯಿರಣ್ಣ ಪುಂಡತ್ತ ಅಜ್ಜಯ್ಯ
ಚತ್ತಡಿಂಜಿ ಪೋಚಿಲ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಬೊಳ್ಳಾನೆ ಅಡಿಂಜತ್ ಅಜ್ಜಯ್ಯ
ಕೆಂಗುದ್ರೆ ಚತ್ತತ್ ಅಜ್ಜಯ್ಯ
ಬತ್ತೇರಿ ಪೊಳಿಂಜತೋ ಅಜ್ಜಯ್ಯ
ಮುಂಡೇರಿ ಇಡಿಂಜತೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಇಂದ್ ಬಾಪೊಡೆವೋಂಡ ಅಜ್ಜಯ್ಯ

ಏಳ್‌ಮಾಡಿ ಮೇಮಾಡಿ ಅಜ್ಜಯ್ಯ
ಮೇಮಾಡಿ ಕೊಡಿ ಮೀದ ಅಜ್ಜಯ್ಯ
ಅಲ್ಲಿ ಪೋಯಿ ನಿಕ್ಕಣೆ ಅಜ್ಜಯ್ಯ
ಮೇಮಾಡಿ ತರಿಂಜತೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ನಾಡ್‌ಕ್ ಕಡಂದತೋ ಅಜ್ಜಯ್ಯ;
ನಾಡ್‌ಲ್ ಶನಿ ದೇವ ಅಜ್ಜಯ್ಯ
ನಾಡ್‌ಡ ನಡುವುಲ್ ಅಜ್ಜಯ್ಯ
ನಾಡ್ ಮಂದ್ ನಲ್ಲಾಲ್ ಅಜ್ಜಯ್ಯ
ಚಿತ್ತಾಲ್‌ಡ ಕೊಂಬ್‌ಲ್ ಅಜ್ಜಯ್ಯ
ಅಲ್ಲಿ ಪತ್ತಿಕೊಂಡತೋ ಅಜ್ಜಯ್ಯ
ಅಲ್ಲಿ ಪತ್ತಿಕೊವ್ವಣೇ ಅಜ್ಜಯ್ಯ
ಚಿತ್ತಾಲ್‌ಡ ಕುಞ್ಞೆಯೋ ಅಜ್ಜಯ್ಯ
ಬೇರೋಡೆ ಪೊರಿಂಜತೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಊರ್‌ಕ್ ಕಡಂದತ್ ಅಜ್ಜಯ್ಯ
ಊರ್‌ಕ್ ಕಡಂದಿತ್ ಅಜ್ಜಯ್ಯ
ಊರ್‌ಡ ನಡುವುಲ್ ಅಜ್ಜಯ್ಯ
ಅಂಬ್‌ಲತ್ ನಿಂದತ್ ಅಜ್ಜಯ್ಯ
ಅಂಬ್‌ಲತ್ ನಿಕ್ಕಣೇ ಅಜ್ಜಯ್ಯ
ಅಂಬ್‌ಲ ತರಿಂಜತೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಮುಕ್ಕೋಟ ಕಡಂದತೋ ಅಜ್ಜಯ್ಯ
ಮುಕ್ಕೋಟ ಕಡಕಣೆ ಅಜ್ಜಯ್ಯ
ಮುಕ್ಕೋಟ ಪೊರಿಂಜತೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಕೇರಿಕ್ ಕಡಂದತೋ ಅಜ್ಜಯ್ಯ
ಕೇರಿಲ್ ಶನಿದೇವ ಅಜ್ಜಯ್ಯ
ಕೇರಿ ಮಿಞ್ಞ ನೀಕೆರೆ ಅಜ್ಜಯ್ಯ
ಅಲ್ಲಿ ಬಂದ್ ನಿಕ್ಕಣೇ ಅಜ್ಜಯ್ಯ
ಏರಿ ತುಂಡಿ ಪೋಚಿಲೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಈ ಒಕ್ಕ ಕಡಂದತೋ ಅಜ್ಜಯ್ಯ
ಈ ಒಕ್ಕ ಕಡಂದಿತ್ ಅಜ್ಜಯ್ಯ
ಆಯಿರಾಂಡ ಭೂಮಿಲ್ ಅಜ್ಜಯ್ಯ
ಏಳ್ ಮೂಲೆ ಆಕಡ ಅಜ್ಜಯ್ಯ
ಮೆಪ್ಪುಣಿಕ್ ಪೋಯಿತ್ ಅಜ್ಜಯ್ಯ

ಕ್‌ಪ್ಪುಣಿ ನೋಟಣೇ ಅಜ್ಜಯ್ಯ
ಆಕಡೇರಿ ತುಂಡ್‌ಚೋ ಅಜ್ಜಯ್ಯ.
ಅಲ್ಲಿಂಜಿ ಶನಿ ದೇವ ಅಜ್ಜಯ್ಯ
ಮುಮ್ಮಡಕಂಡೋಣಿಲ್ ಅಜ್ಜಯ್ಯ
ಅಲ್ಲಿ ಪೋಯಿ ನಿಪ್ಪಂಜಿ ಅಜ್ಜಯ್ಯ
ಪನ್ನೆರಂಡ್ ಕಾಲೋಳ ಅಜ್ಜಯ್ಯ
ಚಪ್ಪೆಯ್ಯಂಡರೆ ಕಂಡಿ ಅಜ್ಜಯ್ಯ
ಕೆಂಬುತ್ತ್ ಮರೆಯಿಲ್ ಅಜ್ಜಯ್ಯ
ಒಡ್ಡೊಳಿ ಸಮಂದಿತ್ ಅಜ್ಜಯ್ಯ
ತೋಲೊಳಿಲೊಳಿಚತೊ ಅಜ್ಜಯ್ಯ;
ತೋಲೊಳಿಲೊಳಿಚದ್ ಅಜ್ಜಯ್ಯ
ನಿಂಗರಿಂಜಿ ಕೊಂಡ್‌ಲೇ ಅಜ್ಜಯ್ಯ.
ಇನ್ನನಿಪ್ಪ ಕಾಲತ್ ಅಜ್ಜಯ್ಯ *
ಅಂದಿಯ ದಿನತ್‌ಲ್ ಅಜ್ಜಯ್ಯ
ಪೊಂಬೋಲೆ ಪೊಲವಕ ಅಜ್ಜಯ್ಯ
ಮುಂದ್ ಕೂಟ ಪೋಯಿತೋ
ತನ್ನ ಪೋಲೆ ಬಾಲಡ ಅಜ್ಜಯ್ಯ
ಮೊಯ್ಯಡಕಿ ಕೊಂಡಿತೋ ಅಜ್ಜಯ್ಯ
ನಾಡ್ ಬಿದಿ ಕಂಡಿತೋ ಅಜ್ಜಯ್ಯ
ನೇರ ಮಜ್ಜಣಾಪಕೋ ಅಜ್ಜಯ್ಯ
ಆಂಗಿ ಜೂಂಗಿ ಬಪ್ಪಕೋ ಅಜ್ಜಯ್ಯ
ಎಡತೆ ಕಣ್ಣ್ ಪಾರ್‌ಚೋ ಅಜ್ಜಯ್ಯ
ನಾಲ್ ಮೊಟ್ಟ್ ಪೋಕಣೇ ಅಜ್ಜಯ್ಯ
ಪಾಪಿಕೆಟ್ಟ ಕಾಕೆಯೋ ಅಜ್ಜಯ್ಯ
'ಚಾವೋ' 'ಚಾವೋ'ಂದೆಣ್ಣಿಚೋ ಅಜ್ಜಯ್ಯ
ಸುತ್ತಿ ಸುತ್ತಿ ಪಾರ್‌ಚಿ ಅಜ್ಜಯ್ಯ
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಕುಟ್ಟುಮಂಡ ಕುಞ್ಞಿಯೋ ಅಜ್ಜಯ್ಯ
'ಕುತ್ತಿ ಚುಡ್'ಂದೆಣ್ಣ್‌ಚೋ ಅಜ್ಜಯ್ಯ
ನಲ್ಲದೊಂದೂ ಕಂಡ್‌ಲೇ ಅಜ್ಜಯ್ಯ
ಆಂಗಿ ಜೂಂಗಿ ಬಂದಿತ್ ಅಜ್ಜಯ್ಯ
ಮುಮ್ಮಡಕಂಡೋಣಿಲ್ ಅಜ್ಜಯ್ಯ
ಅಲ್ಲಿ ಬಂದಿತೆತ್ತಣೇ ಅಜ್ಜಯ್ಯ
ಓಣಿರ ಕರೆಯಿಲೋ ಅಜ್ಜಯ್ಯ
ಉಪ್ಪ್‌ಲಿರ ಕೊಕ್ಕಲೆ ಅಜ್ಜಯ್ಯ

---

* ಹೆಂಗಸರು ಸತ್ತರೆ ಮುಂದುವರಿಸುವ ರೀತಿ 130ನೇ ಪುಟ ನೋಡಿ.

ಸುಳಿ ಬುದ್ದ್ ಪಾರ್‌ಚೋ ಅಜ್ಜಯ್ಯ
ಸುಳಿ ಬುದ್ದ್ ಪಾರಿತ್ ಅಜ್ಜಯ್ಯ
ಜಿಗ್ಗಿ ಬೊಗ್ಗಿಂದೆಣ್ಣಣೇ ಅಜ್ಜಯ್ಯ
ಮೈ ನೆಟ್ಟಿ ಕಡಂದಿರೋ ಅಜ್ಜಯ್ಯ
ಅಂಗಾಲ್ ಶನಿ ಪೊಲೆ ಅಜ್ಜಯ್ಯ
ಮೇಂಗಾಲ್ ಮರಿಂಜತೋ ಅಜ್ಜಯ್ಯ;
ಅಕ್ಕಣೆಕ್ ನಿಂಗಳೋ ಅಜ್ಜಯ್ಯ
ಬೆಮ್ಮರಿಂಜಿ ನೋಟಿರೋ ಅಜ್ಜಯ್ಯ
ಬೆಮ್ಮರಿಂಜಿ ನೋಟಣೇ ಅಜ್ಜಯ್ಯ
ಕೆಂಬುತ್ತ ಮರೆಯಿಲ್ ಅಜ್ಜಯ್ಯ
ಅಞ್ಞೂರ್ ಕುಡಿ ಬೀರ ಅಜ್ಜಯ್ಯ
ಆಯಿರ ಪೊಲೆ ಕೂಳಿ ಅಜ್ಜಯ್ಯ
ಬೊಳ್ಳಿ ತಂಡ್ ಕಾಲನೂ ಅಜ್ಜಯ್ಯ
ಪೊಂದಂಡ್ ಕುಳಿಯನೂ ಅಜ್ಜಯ್ಯ
ನಿಂದ್ ಪಡೆ ಪೊಪ್ಪೋಲೆ ಅಜ್ಜಯ್ಯ
ಕಣ್ಣೊಡನೆ ಕಂಡಿರೋ ಅಜ್ಜಯ್ಯ
ಕಣ್ಣೊಡನೆ ಕಾಂಬದು ಅಜ್ಜಯ್ಯ
ಬೊತ್ತಿತ್ ಬೊರ್‌ಂಡಿರೋ ಅಜ್ಜಯ್ಯ
ನಾಲ್ ಮಾರ್ ಪೋಕಣೇ ಅಜ್ಜಯ್ಯ
ಕಾಲೂ ಮೇಲೂ ನೊಂದತೋ ಅಜ್ಜಯ್ಯ
ಮೈ ದುಂಬ ಪನಿ ಬಾತೋ ಅಜ್ಜಯ್ಯ
ಬೊಳ್ಳಿಮಾಡ ಪಟ್ಟಿಲ್ ಅಜ್ಜಯ್ಯ
ಅಲ್ಲಿ ಬಂದ್ ನಿಕ್ಕಣೇ ಅಜ್ಜಯ್ಯ
ಪೋಡೆ ಕೋಳಿ ಕೂಂದತೋ ಅಜ್ಜಯ್ಯ
ಮೇಂಗಾಲ್ ಶನಿ ಪೊಲೆ ಅಜ್ಜಯ್ಯ
ಮುಂಗಾಲ್ ಮರಿಂಜತೋ ಅಜ್ಜಯ್ಯ
ಮುಂಗಾಲ್ ಶನಿ ಪೊಲೆ ಅಜ್ಜಯ್ಯ
ಜೋಗ ತಲೆಕೆತ್ತ್‌ಚೋ ಅಜ್ಜಯ್ಯ
ನಿಪ್ಪಕ್ ಕಯಿಂಜಿಲೇ ಅಜ್ಜಯ್ಯ
ಬೂವ ಬೂವ ಪೋಪಕೋ ಅಜ್ಜಯ್ಯ
ಉಯಿ! ನಿಂಗಡ ದೇವಿಯೋ ಅಜ್ಜಯ್ಯ
ಓಡಿ ಪಾರಿ ಬಂದಿತೋ ಅಜ್ಜಯ್ಯ
ತಬ್ಬಿತ್ ಪುಡಿಚತೋ ಅಜ್ಜಯ್ಯ
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಉಯಿ! ನಿಂಗಡ ಕುಞ್ಯಳೊ ಅಜ್ಜಯ್ಯ
ಓಡಿ ಪಾರಿ ಬಂದಿತೋ ಅಜ್ಜಯ್ಯ
ತಬ್ಬಿತ್ ಪುಡಿಚತೋ ಅಜ್ಜಯ್ಯ;

ತಬ್ಬಿತ್ ಪುಡಿಚಿತೋ ಅಜ್ಜಯ್ಯ
ಈ ಬಾಕ್ ಪರಂದತೋ ಅಜ್ಜಯ್ಯ
"ಎನ್ನಾಂಡ ಮೊಳಿಗೊಂಡ್ ಅಪ್ಪಯ್ಯ
ನಾಗ ಮೊಗ ಬಾಡಿಯ ಅಪ್ಪಯ್ಯ"
ಎಂದಿಣ್ಣಿತ್ ಕೇಕಣೇ ಅಜ್ಜಯ್ಯ
ಆನ ಪೋನದೆಣ್ಣಿರೋ ಅಜ್ಜಯ್ಯ
ಆ ಬಾಕ್‌ನ ಕೇಪಕ್ಕೊ ಅಜ್ಜಯ್ಯ
ಉಯಿ! ನಿಂಗಡ ಕುಞ್ಞ್ಯಳೋ ಅಜ್ಜಯ್ಯ
ಬೊಳ್ಳಿಮಾಡ ಪಟ್ಟಿಂಜೋ ಅಜ್ಜಯ್ಯ
ಕೈ ಕೆಟ್ಟಿತೆಡಿತಿತೋ ಅಜ್ಜಯ್ಯ
ಮಚ್ಚಿ ಮನೆರೊಳ್‌ಲೋ ಅಜ್ಜಯ್ಯ
ಕನ್ನಿ ಮೂಲೆ ಕೋಂಬರೇ ಅಜ್ಜಯ್ಯ
ಚಿಪ್ಪಾರತ್ ಕಟ್ಟ್‌ಲೋ ಅಜ್ಜಯ್ಯ
ಪೂಪರತಿ ಮೆತ್ತೆಲೋ ಅಜ್ಜಯ್ಯ
ಬೀರಾಳಿ ಬಿರಿಚಿತೋ ಅಜ್ಜಯ್ಯ
ಪಟ್ಟೊಳಿ ಪೊದಪಾಯಿ ಅಜ್ಜಯ್ಯ
ಕಾಮೆತ್ತೆ ತಲೆ ಮೆತ್ತೆ ಅಜ್ಜಯ್ಯ
ಪಾಂಗರಿಂಜಿ ಬೆಚ್ಚಿತೋ ಅಜ್ಜಯ್ಯ
ಬುದ್ದವಕ್ ಆಕ್‌ಚೋ ಅಜ್ಜಯ್ಯ;
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಚೆನ್ನ ನೇರ ಪೋಕಣೇ ಅಜ್ಜಯ್ಯ
ತಿತ್ತ್ ಪನಿ ಬಂದದೋ ಅಜ್ಜಯ್ಯ
ಆವದಿಲ್ಲತಾಚಿಂದೋ ಅಜ್ಜಯ್ಯ
ನಿಂಗಡ ಕುಞ್ಞ್ಯಳೋ ಅಜ್ಜಯ್ಯ
ಓಣಿ ಬೀರ ಮನ್ನಂಗೋ ಅಜ್ಜಯ್ಯ
ಕೋಳಿನ ಅರತತೋ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ;
ಊರ್‌ಡ ನಡುವುಲೋ ಅಜ್ಜಯ್ಯ
ಮಿನ್ನಿ ಮಾಲೆ ದೇವಿಕೋ ಅಜ್ಜಯ್ಯ
ಒತ್ತೆ ಚೋಮ ಪೋರುವೀಂದಜ್ಜಯ್ಯ
ಎಂದೆಣ್ಣಿತ್ ಬೋಡ್‌ನ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ;
ನಾಡ್‌ಡ ನಡುವುಲ್ ಅಜ್ಜಯ್ಯ
ಮೇನಿ ನಲ್ಲ ದೇವಂಗೋ ಅಜ್ಜಯ್ಯ
ಜೋಡ್ ಚೋಮ ಪೋರುವೀಂದಜ್ಜಯ್ಯ
ಎಂದೆಣ್ಣಿತ್ ಬೋಡಿತ್ ಅಜ್ಜಯ್ಯ

ಪಟ್ಟೊ ಪರಕೆ ಮಾಡ್‌ಚಿ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ
ಪದ್ರಕಾಳಿ ಕೋಟತ್ ಅಜ್ಜಯ್ಯ
ಆಡರತ್ ನೀಕ್‌ಚಿ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ;
ನಾಡ್‌ಡ ಮುಂದಲೆಲ್ ಅಜ್ಜಯ್ಯ
ಅಗ್ಗಿ ಬಾಯಿ ಚೌಂಡಿಕ್ ಅಜ್ಜಯ್ಯ
ಪಂದಿ ಕೆತ್ತಿ ನೀಕ್‌ಚಿ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ;
ಸೀಮೆರ ಗಡಿಯಿಲ್ ಅಜ್ಜಯ್ಯ
ಪಟ್ಟಣತ್ ಮಾರಿಕ್ ಅಜ್ಜಯ್ಯ
ಪೋರಿ ಕೆತ್ತಿ ನೀಕ್‌ಚಿ ಅಜ್ಜಯ್ಯ
ಎಂದಿತೂ ಗುಣವಿಲ್ಲೇ ಅಜ್ಜಯ್ಯ;
ಈನಂಗುಂಡ್ ಪೋರಾಂದ್ ಅಜ್ಜಯ್ಯ
ತಲೆ ಬಲ್ಯ ದೇವಂಡೋ ಅಜ್ಜಯ್ಯ
ಓಮಾಲೆ ತಿರುವಾಳೋ ಅಜ್ಜಯ್ಯ
ಮುತ್ತಪ್ಪಣೆ ಕೇಕಂಡೂಂದಜ್ಜಯ್ಯ
ಉಯಿ! ನಿಂಗಡ ಊರ್‌ನ ಅಜ್ಜಯ್ಯ
ಆಳಯಿಚಿ ಕೂಟ್‌ಚೀ ಅಜ್ಜಯ್ಯ
ಊರಡಂಗ ಕೂಡಣೇ ಅಜ್ಜಯ್ಯ
ಕೋರಕಾರ ಬಾಲನೋ ಅಜ್ಜಯ್ಯ
ನೀಲಕೊಡಿ ನೀರ್‌ಲೋ ಅಜ್ಜಯ್ಯ
ಪೊಂಗುಳಿ ಕುಳಿಚಿತೊ ಅಜ್ಜಯ್ಯ
ಮಾಜುತ್ತಿ ಮಡಿಪಾಂದ್ ಅಜ್ಜಯ್ಯ
ಮಿನ್ನಿ ಮಾಲೆ ದೇವಿರೋ ಅಜ್ಜಯ್ಯ
ಮುತ್ತಿನ ತಿರಿಕೆಲೋ ಅಜ್ಜಯ್ಯ
ನಂದ ದೀಪ ಮಿಞ್ಞಲ್ ಅಜ್ಜಯ್ಯ
ಆಜಾರತ್ ನಿಕ್ಕಣೇ ಅಜ್ಜಯ್ಯ
ಮೈ ಪುಡಿಚಿ ಬಂದಿತೋ ಅಜ್ಜಯ್ಯ
ಈ ಬಾಕ್ ಪರಂದದೋ ಅಜ್ಜಯ್ಯ
"ಎನ್ನಾಂಡ ಮೊಳಿಗೊಂಡ್ ಊರೋನೆ
ಎನ್ನಡ ಬೊಳಿ ಕಂಡ ಊರೋನೆ?"
ಎಂದಪ್ಪಣೆ ಆಕಣೆ ಅಜ್ಜಯ್ಯ
ಉಯಿ! ನಿಂಗಡ ಕುಞ್ಞಲೋ ಅಜ್ಜಯ್ಯ
ಪೊನ್ನರಿಕೆ ಮಾಡಿಚೋ ಅಜ್ಜಯ್ಯ
"ಎಂಗಡೋರ್ ಅಪ್ಪನ್ ದೇವಯ್ಯ
ಬುದ್ದಲ್ಲಿಂಜಿ ಏವುಲೇ ದೇವಯ್ಯ

ನಾಮೊಟ್ಟ್ ನಡಪ್‌ಲೇ ದೇವಯ್ಯ
ಬಂದ ಪನಿ ಬುಡುಲೇ ದೇವಯ್ಯ
ಉಂಡ ಕೂಳ್ ದಕ್ಕುಲೇ ದೇವಯ್ಯ
ಚಿಮ್ಮ್‌ನ ತೊರಪ್‌ಲೇ ದೇವಯ್ಯ
ಪಚ್ಚೆ ಮದ್ದ್ ಕೆಂದುಲೇ ದೇವಯ್ಯ
ಬೇರ್ ಮದ್ದ್ ಪತ್ತುಲೇ ದೇವಯ್ಯ
ಎಲ್ಲಿಯೆಲ್ಲಿ ನೀಕಿನೋ ದೇವಯ್ಯ
ಏದೋರ್ ಗುಣವಿಲ್ಲೇ ದೇವಯ್ಯ
ನಲ್ಲೋರನು ತರಂಡೂ ದೇವಯ್ಯ"
ಎಂದರಿಕೆ ಮಾಡಣೇ ಅಜ್ಜಯ್ಯ
ಆಯಿರಾಂಗೋರಪ್ಪಣೆ ಅಜ್ಜಯ್ಯ
ಮೇನಿ ನಲ್ಲ ದೇವಯ್ಯ ಅಜ್ಜಯ್ಯ
ಅನುವಾದೊಂದ್ ತಂದದೋ ಅಜ್ಜಯ್ಯ
"ಆನೆ ಕೋಂದರತಕ್ಕೋ ಊರೋನೆ
ಆಳ್ ಕೋಂದ್ ಕೆತ್ತಿನೋ ಊರೋನೆ
ಈ ನೊಂಬಲ ತ್‌ೕವುಲೇ ಊರೋನೆ"
ಎಂದೆಣ್ಣಿತನುವಾಚಿ ಅಜ್ಜಯ್ಯ;
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಬುದ್ಧಿ ನಲ್ಲ ಕುಞ್ಯಳೋ ಅಜ್ಜಯ್ಯ
ಮಾಣಿಕ ಮಲೆನಾಡ್ ಅಜ್ಜಯ್ಯ
ಅಚ್ಚುತ ಕಣಿಯಂಗ್ ಅಜ್ಜಯ್ಯ
ಆಳಯಚಿ ಕೊಂಡಲ್ಲಿ ಅಜ್ಜಯ್ಯ
ಬಟ್ಟೆ ಪೋಪ ಆಳ್‌ಕ್ ಅಜ್ಜಯ್ಯ
ಪುಳ್ಳಿ ಕೆಟ್ಟ್ ತಾನಾಯಿ ಅಜ್ಜಯ್ಯ
ಚಾಂಡಾಳ ಪೊಲೆಪಜ್ಜ ಅಜ್ಜಯ್ಯ
ಬಟ್ಟೆಕಡ್ಡ ಬಂದದೊ ಅಜ್ಜಯ್ಯ.
ಅಚ್ಚುತ ಕಣಿಯಂಡ ಅಜ್ಜಯ್ಯ
ತಮ್ಮನೆಕ್ ಎತ್ವಕ್ಕ ಅಜ್ಜಯ್ಯ
ಅಚ್ಚುತ್ತಂಡ ಪೊಂಗಳೋ ಅಜ್ಜಯ್ಯ
ಎಚ್ಚೆ ಬಟ್ಟೊಲಪಿತ್ ಅಜ್ಜಯ್ಯ
ಮೂಡ್ ಮಿಞ್ಞ ಚೆಲ್ಲ್‌ಚೋ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಅಚ್ಚುತ ಕಣಿಯನೋ ಅಜ್ಜಯ್ಯ
ಮೇಲ್‌ಕಣ್ಣ್ ತೇಚಿತೋ ಅಜ್ಜಯ್ಯ
ಮಂಡೆ ಬುಟ್ಟೆಳತಿಂಜ ಅಜ್ಜಯ್ಯ;

ಆಳ್ ಪೋಯಿ ಮುಟ್ಟಿತ್ ಅಜ್ಜಯ್ಯ
ಈ ಸುದ್ದಿನ ಎಣ್ಣ್‌ಚಿ ಅಜ್ಜಯ್ಯ;
ಅದ್ ಕೇಟ ಅಚ್ಚುತ ಅಜ್ಜಯ್ಯ
ದೋಷ ಬಪ್ಪ ಕಾಲತ್ ಅಜ್ಜಯ್ಯ
ನಲ್ಲೊದೊಂದೂ ಕಾಂಬ್‌ಲೇ ಅಜ್ಜಯ್ಯ
ಎಂದೆಣ್ಣಿ ನೆನತಿತೋ ಅಜ್ಜಯ್ಯ
ಅಚ್ಚುತಾಳಿ ತೇಚಿತೋ ಅಜ್ಜಯ್ಯ
ಪಚ್ಚೆಲ್ ಕುಳಿಚಿತೋ ಅಜ್ಜಯ್ಯ
ಕವುಡಿ ಪಾಕ್ ಕೈಕೊಂಡ್ ಅಜ್ಜಯ್ಯ
ತಂಡ್ ಕೊಡೆ ಕೈಕೊಂಡ್ ಅಜ್ಜಯ್ಯ
ಓಡಿ ಪಾರಿ ಬಂದಿತ್ ಅಜ್ಜಯ್ಯ
ಈ ನಲ್ಲೋರ್ ಒಕ್ಕಡೋ ಅಜ್ಜಯ್ಯ
ಮಚ್ಚಿ ಮನೆಕೇರ್‌ಚೋ ಅಜ್ಜಯ್ಯ.
ಅದ್ ಕಂಡ ದೇವಿಯೋ ಅಜ್ಜಯ್ಯ
ಬೊಳ್ಳಿ ಕ್‌ಂಡಿ ನೀಬೆಚ್ಚಿ ಅಜ್ಜಯ್ಯ
ಕಿನ್ನೋಲೆ ಪಲಂಬ್‌ಟ್ಟ ಅಜ್ಜಯ್ಯ.
ಅದ್ ಕಂಡ ಅಚ್ಚುತ ಅಜ್ಜಯ್ಯ
ಕಾಲೂ ಮೂಡೂ ಕತ್ತಿತೋ ಅಜ್ಜಯ್ಯ
ಒಪ್ಪಾರತೆಳತತೋ ಅಜ್ಜಯ್ಯ;
ಒಪ್ಪಾರತೆಳತಿತ್ ಅಜ್ಜಯ್ಯ
ಮಂಡೊಳ ಬರಂದಿತ್ ಅಜ್ಜಯ್ಯ
ಅಕ್ಕಿ ಪೂವ್ ಮೇಕಿತ್ ಅಜ್ಜಯ್ಯ
ಪೊಂಬಣ ಬೆರಕಿತ್ ಅಜ್ಜಯ್ಯ
ಪೊನ್ನಲುವು ತೊರಿಂಜಿತೊ ಅಜ್ಜಯ್ಯ
ತಾಯಲವು ನೀಕಿತೋ ಅಜ್ಜಯ್ಯ
ಬಾಳೆಲೆ ಕೊಡಿಯಿಕೋ ಅಜ್ಜಯ್ಯ
ಅಕ್ಕಿ ಪಣ ಇಟ್ಟಿತೋ ಅಜ್ಜಯ್ಯ
ಬುದ್ದಿನಲ್ಲ ಕುಞ್ಞೆರೋ ಅಜ್ಜಯ್ಯ
ಅಂಗಯಿಕ್ ಇಟ್ಟಿತೋ ಅಜ್ಜಯ್ಯ.
ಮಂಡೊಳ ಬರಂದಾಂಗ್ ಅಜ್ಜಯ್ಯ
ಬುದ್ಧಿನಲ್ಲ ಕುಞ್ಞೆಯೋ ಅಜ್ಜಯ್ಯ
ಅಕ್ಕಿ ಪಣ ಇಟ್ಟಿತೋ ಅಜ್ಜಯ್ಯ
ತೆಕ್ಕ್‌ಂಜಿ ಬಡಕ್‌ಕೋ ಅಜ್ಜಯ್ಯ
ಮೂಡ್‌ಟ್ಟಿತೆಳತತೋ ಅಜ್ಜಯ್ಯ.
ಅದ್‌ಕಂಡ ಅಚ್ಚುತ ಅಜ್ಜಯ್ಯ
ಪೊನ್ನಲುವು ನೋಟಣೆ ಅಜ್ಜಯ್ಯ
ಚೇಅಲುವು ಪಾರಿತ್ ಅಜ್ಜಯ್ಯ

ನಲ್ಲದೊಂದೂ ಕಂಡ್‌ಲೇ ಅಜ್ಜಯ್ಯ.
ಅದ್ ಕಂಡ ಅಚ್ಚುತ ಅಜ್ಜಯ್ಯ
ಈ ಬಾಕ್ ಪರಂದತ್ ಅಜ್ಜಯ್ಯ
"ನಿಂದ ರಾಶಿ ನಂದಲ್ಲ ಮೋಲ್ಯರೇ
ಕಂಡ ರಾಶಿ ನಂದಲ್ಲ ಮೋಲ್ಯರೇ
ಅಷ್ಟಮ ಶನಿಯಾನ ಮೋಲ್ಯರೇ
ಏಳಾಲ್ ಕುಳಿಯನೋ ಮೋಲ್ಯರೆ
ಆರಾಲುಳ್ಳ ರಾವುವೋ ಮೋಲ್ಯರೇ"
ಎಂದೆಣ್ಣಿ ಪರೆಯಣೆ ಅಜ್ಜಯ್ಯ
ಕೂಟ್‌ಲ್ ಪೆರಿಯವಂಡ ಅಜ್ಜಯ್ಯ
ಜಾದ್‌ಗ ಕೊಡ್‌ತತ್ ಅಜ್ಜಯ್ಯ.
ಅದ್ ನೋಟಿ ಕೊವ್ವಣೇ ಅಜ್ಜಯ್ಯ
ಮುಟ್ಟ್ ಕುತ್ತಿ ಕರ್ಮಕ್ ಅಜ್ಜಯ್ಯ
ಜೋಗ ಬಂದಿತಿಂಜತ್ ಅಜ್ಜಯ್ಯ.
ಈನಂಗುಂಡ್ ಪೋರಾಂದ್ ಅಜ್ಜಯ್ಯ
ನೀಲಕೊಡಿ ದೇವಿರೋ ಅಜ್ಜಯ್ಯ
ಜಾದ್‌ಗ ಕೊಡ್‌ತತೋ ಅಜ್ಜಯ್ಯ.
ಅದ್ ನೋಟಿ ಕೊವ್ವಣೇ ಅಜ್ಜಯ್ಯ
ಮುಟ್ಟ್ ಕುತ್ತಿ ಕರ್ಮಕ್ ಅಜ್ಜಯ್ಯ
ಜೋಗ ಬಂದಡ್‌ತಿಂಜ ಅಜ್ಜಯ್ಯ;
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಅಚ್ಚುತ ಕಣಿಯನೋ ಅಜ್ಜಯ್ಯ
ರಾಶಿನ ಮಡಕಿತೋ ಅಜ್ಜಯ್ಯ
ಚೇಲಕ್‌ಟ್ಟ್ ಕೆಟ್ಟಿತೋ ಅಜ್ಜಯ್ಯ
ಅಕ್ಕಿ ಪಣ ಒಂದಾಯಿ ಅಜ್ಜಯ್ಯ
ತಾನೊಯ್ಯನೆ ಪೋಚಿಲ ಅಜ್ಜಯ್ಯ.
ಉಯಿ! ನಿಂಗಡ ಕುಞ್ಯಳೋ ಅಜ್ಜಯ್ಯ
ಪನ್ನಂದಾಳ್ ಜೋಯಳೋ ಅಜ್ಜಯ್ಯ
ಆಳಯಚಿ ಕಾಕಿತೋ ಅಜ್ಜಯ್ಯ
ಬಟ್ಟಿಕುಳ್ಳ ನಲ್ಲಾಂಗ್ ಅಜ್ಜಯ್ಯ
ಗೋವು ದಾನ ಒಬ್ಬಂಗ್ ಅಜ್ಜಯ್ಯ
ತಂಡ್ ಕೊಡೆ ಒಬ್ಬಂಗ್ ಅಜ್ಜಯ್ಯ
ಪಾಲ್ ಚೆಂಬ್ ಒಬ್ಬಂಗ್ ಅಜ್ಜಯ್ಯ
ಎಳ್ಳ್ ದಾನ ಒಬ್ಬಂಗ್ ಅಜ್ಜಯ್ಯ
ಮುರಿ ದಾನ ಒಬ್ಬಂಗ್ ಅಜ್ಜಯ್ಯ
ಗೋದಿದಾನ ಒಬ್ಬಂಗ್ ಅಜ್ಜಯ್ಯ

ಅಕ್ಕಿ ಕಲ ಒಬ್ಬಂಗ್ ಅಜ್ಜಯ್ಯ
ಫಲ ದಾನ ಒಬ್ಬಂಗ್ ಅಜ್ಜಯ್ಯ
ಎಣ್ಣೆ ದಾನ ಒಬ್ಬಂಗ್ ಅಜ್ಜಯ್ಯ
ಸ್ವರ್ಣ ದಾನ ಒಬ್ಬಂಗ್ ಅಜ್ಜಯ್ಯ
ತೆಂಗೆ ದಾನ ಒಬ್ಬಂಗ್ ಅಜ್ಜಯ್ಯ
ದಾನ ಕೋಂದ್ ಬೆಚ್ಚಿತ್ ಅಜ್ಜಯ್ಯ
ಕೈಯ್ಯಾರೆ ಕೊಡ್‌ಪ್‌ಚಿ ಅಜ್ಜಯ್ಯ
ಅಕ್ಕಣೆಕ್ ಜೋಯಳೊ ಅಜ್ಜಯ್ಯ;
ಪನ್ನಂದಾಳೊ ಒಂದಾಯಿ ಅಜ್ಜಯ್ಯ
"ಧರ್ಮರಾಯ ಮಾದೂರೇ ಅಯ್ಯಣ್ಣ,
ಕೈಲಾಸಕ್ ಪೋನೋಲೇ ಅಯ್ಯಣ್ಣ
ಕಾಯತೋಡೆ ಪೋಯೋಳೋ ಅಯ್ಯಣ್ಣ"
ಎಂದೆಣ್ಣಿ ಪರಂದಿತ್ ಅಜ್ಜಯ್ಯ
ದಾನ ಕೊಂಡ್ ಪೋಚಿಲ ಅಜ್ಜಯ್ಯ;
    ಕೆಟ್ಟಿರೋ ಅಜ್ಜಯ್ಯ ನಿಂಗ
ನಿಂಗ ಕೆಟ್ಟ ಕೇಡೇ ಅಜ್ಜಯ್ಯ.
ಅನ್ನನಿಪ್ಪ ನೇರತ್ ಅಜ್ಜಯ್ಯ
ಎಮ ಧರ್ಮರಾಯಂಡೋ ಅಜ್ಜಯ್ಯ
ಜೋಡೆರಂಡ್ ಮಂತ್ರಿಯ ಅಜ್ಜಯ್ಯ
ಚಿತ್ತಿರ ಕುಶಲರೋ ಅಜ್ಜಯ್ಯ
ಲೆಕ್ಕೆಡ್‌ತ್ ನೋಟಣೇ ಅಜ್ಜಯ್ಯ
ನಾರಾಯಣ ದೇವಯ್ಯ ಅಜ್ಜಯ್ಯ
ಇಟ್ಟ ಪಡಿ ತ್‌ಂದಿಂಜ ಅಜ್ಜಯ್ಯ
ತ್‌ಂದಿಂಜದ್ ಕಾಂಬಕ ಅಜ್ಜಯ್ಯ
ಎಮ ಧರ್ಮರಾಯನೋ ಅಜ್ಜಯ್ಯ
ನಿಂಗ ಮಾಡ್‌ನ ಧರ್ಮಕ್ ಅಜ್ಜಯ್ಯ
ಆಳಯಪ ಕಾರ್ಯಕ್ ಅಜ್ಜಯ್ಯ
ಮಂತ್ರಿಯಳಯಚತ್ ಅಜ್ಜಯ್ಯ;
    ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಚಿತ್ತಿರ ಕುಶಲರೋ ಅಜ್ಜಯ್ಯ
ಚಾಚಿ ಮೆಲ್ಲೆ ಬಂದಿತೋ ಅಜ್ಜಯ್ಯ
ಕಾಕೋರ ತಲೆಕ್‌ಲ್ ಅಜ್ಜಯ್ಯ
ನಿಂದಿತಿಂಜ ಕಂಡಿತೋ ಅಜ್ಜಯ್ಯ
ಉಯಿ! ನಿಂಗಡ ಕುಞ್ಯಳ ಅಜ್ಜಯ್ಯ
ಕಾಕಿ ಪಕ್ಕಲಾಕಿತ್ ಅಜ್ಜಯ್ಯ
ನಿಂಗೆನ್ನ ಪರಂದಿರ ಅಜ್ಜಯ್ಯ

"ಎಮು ಧರ್ಮ ರಾಯಂಡೋ ಕುಞ್ಯಳೆ
ಆಳ್ ನಾಕ್ ಬಂದಿತೋ ಕುಞ್ಯಳೆ
ಆಳ್ ಕೂಡ ಪೋಪಿನೋ ಕುಞ್ಯಳೆ"
ಎಂದೆಣ್ಣಿ ಪರೆಯಣೇ ಅಜ್ಜಯ್ಯ
ಉಯಿ! ನಿಂಗಡ ಸಂಸಾರ ಅಜ್ಜಯ್ಯ
ಮಂಡೆ ಮಂಡೆ ಪೊಜ್ಜತೋ ಅಜ್ಜಯ್ಯ.
ಅದ್ ಕಂಡ ನಿಂಗಳೋ ಅಜ್ಜಯ್ಯ
ಈ ಬಾಕ್ ಪರಂದಿರೋ ಅಜ್ಜಯ್ಯ
"ಕಣ್ಣ್ ನೀರ್ ಕಾಟತಿ ಕುಞ್ಯಳೆ
ನೂರ್ ಕಾಲ ಬದ್ದಿನೋ ಕುಞ್ಯಳೆ
ಚಾವದೊಂದು ತಪ್ಪುಲೇ ಕುಞ್ಯಳೆ
ನಾಕೊಬ್ಬಂಗದಿಯಲ್ಲ ಕುಞ್ಯಳೆ
ಸ್ವಾಮಿ ಪಾದ ಸೇರುವಿ ಕುಞ್ಯಳೆ.
ನಲ್ಲೋಣೆ ಬದ್‌ಕಿರೋ ಕುಞ್ಯಳೆ
ಅನ್ಯಾಯಕ್ ಪೋವತಿ ಕುಞ್ಯಳೆ
ಆಗತಾನ ಮಾಡತಿ ಕುಞ್ಯಳೆ
ಬೋಂಡತಾಂಗ್ ಸೇರತಿ ಕುಞ್ಯಳೆ
ಪಾಪಕ್ ಗುರಿಯಾತಿ ಕುಞ್ಯಳೆ
ಶತ್ತುರುನೇಣಂಗತಿ ಕುಞ್ಯಳೆ
ಮಿತ್ತುರುನ ದೂರತಿ ಕುಞ್ಯಳೆ
ಚಂಪಾದಿ ಚದಿಯತಿ ಕುಞ್ಯಳೆ
ಪೊಂಬಣ ಕೊದಿಚಿತ್ ಕುಞ್ಯಳೆ
ಒಬ್ಬರೊ ಕೆಡ್‌ತತಿ ಕುಞ್ಯಳೆ
ನಿಂಗಕೆದ್‌ರಾನವನ ಕುಞ್ಯಳೆ
ಕೇರಿಲ್ಲತೆ ಕೆಟ್ಟಿತ್ ಕುಞ್ಯಳೆ
ಕೋಲಿಲ್ಲತೆ ಪೊಜ್ಜಿತ್ ಕುಞ್ಯಳೆ
ನೂತನತಡಕಿರೋ ಕುಞ್ಯಳೆ.
ಆಯಂಗ್ ಮಿನಿಯತಿ ಕುಞ್ಯಳೆ
ದೇವರ ಮರೆಯತಿ ಕುಞ್ಯಳೆ
ಕೂಳಿನ ಕೊದಿಯತಿ ಕುಞ್ಯಳೆ
ಪೆತ್ತವ್ವನ ಬಯ್ಯತಿ ಕುಞ್ಯಳೆ
ಒಕ್ಕಳ ಕಳೆಯತಿ ಕುಞ್ಯಳೆ
ಊರ್‌ನ ಪಳಿಯತಿ ಕುಞ್ಯಳೆ.
ನಿಂಗವ್ವನೂ ಮಕ್ಕಳೂ ಕುಞ್ಯಳೆ
ಪೂಪೋಲೆ ಪೊಲಂದೊಳಿ ಕುಞ್ಯಳೆ"
ಎಂದೆಣ್ಣಿ ಪರಂದಿರೋ ಅಜ್ಜಯ್ಯ
ಆ ತಕ್ಕನ ಕೇಪಕ್ಕೋ ಅಜ್ಜಯ್ಯ

ರಾಮ ರಾಮಂದೆಣ್ಣಿಚೋ ಅಜ್ಜಯ್ಯ
ಈನಂಗುಂಡ್ ಪೋರಾಂದ್ ಅಜ್ಜಯ್ಯ
ಬೊಳ್ಳ ತೆಂಗೆ ನೀರಾಯಿ ಅಜ್ಜಯ್ಯ
ನೀತಳಕ್ ನೀತಾತ್ ಅಜ್ಜಯ್ಯ
ಮುತ್ತ್ ಪೊನ್ನ್ ಕೈಲಾಯಿ ಅಜ್ಜಯ್ಯ
ಬಟ್ಟೆಕ್ ಪಣ ತಾತ್ ಅಜ್ಜಯ್ಯ;
ರಾಮ ರಾಮಂದೆಣ್ಣಣೆ ಅಜ್ಜಯ್ಯ
ಕುಪ್ಪಿ ಬಾಯಿ ಬುಟ್ಟಿರೋ ಅಜ್ಜಯ್ಯ
ತಾಳ ಕಣ್ಣ್ ಚಿಮ್ಮಿರೋ ಅಜ್ಜಯ್ಯ
ಗೂಡ್ ಬುಟ್ಟ ಪಕ್ಕಿಯೋ ಅಜ್ಜಯ್ಯ
ಪಾರಿ ಪೋಯೆಳತೋಲೆ ಅಜ್ಜಯ್ಯ
ಬೀರ ಜೋಗ ಪಾರ್‌ಚೋ ಅಜ್ಜಯ್ಯ
ಪೂವ್ ಜೀವಡಂಗ್‌ಚೋ ಅಜ್ಜಯ್ಯ;
        ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.
ಚೋತಿರೋ ಅಜ್ಜಯ್ಯ ನಿಂಗ
ಚೋತನ್ನಕೆ ಚೋತ್‌ಲೇ ಅಜ್ಜಯ್ಯ.
ಚತ್ತಲ್ಲಿ ಪರಯತಿ ಅಜ್ಜಯ್ಯ
ಚತ್ತಲ್ಲಿ ಪರವೇಂಗಿ ಅಜ್ಜಯ್ಯ
ಮಣ್ಣಾಯಿ ಪರಯತಿ ಅಜ್ಜಯ್ಯ
ಮಣ್ಣಾಯಿ ಪರಂದಿನೋ ಅಜ್ಜಯ್ಯ
ಮಣ್ಣೊಡ್ಡಡ ಮಕ್ಕಳೋ ಅಜ್ಜಯ್ಯ
ಮಣ್ಣ್‌ನ ಕಳಕುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;
ಕಲ್ಲಾಯಿ ಪರಂದಿನೋ ಅಜ್ಜಯ್ಯ
ಕಲ್ಲೊಡ್ಡಡ ಮಕ್ಕಳೋ ಅಜ್ಜಯ್ಯ
ಕಲ್ಲ್ ಪಣಿ ಕೆಯ್ಯುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;
ಪಯ್ಯುವಾಯಿ ಪರಂದಿನೋ ಅಜ್ಜಯ್ಯ
ಪಾಪಿ ಕೆಟ್ಟ ಪೊಂಗಳೋ ಅಜ್ಜಯ್ಯ
ಪಾಲ್‌ಕಾಸೆ ಮಾಡಿತ್ ಅಜ್ಜಯ್ಯ
ಪಾಕರಂದ್ ಕೊವ್ವುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;
ಎತ್ತಾಯಿ ಪರಂದಿನೊ ಅಜ್ಜಯ್ಯ
ಚಾಂಡಾಳ ಪೊಲೆ ಮಕ್ಕ ಅಜ್ಜಯ್ಯ
ಉಕ್ಕುಲ ತಯಕುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;

ಆಡಾಯಿ ಪರಂದಿನೊ ಅಜ್ಜಯ್ಯ
ಪದ್ರಕಾಳಿ ದೇವಿಕ್ ಅಜ್ಜಯ್ಯ
ಆಡರತ್ ನೀಕುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;
ಕೋಳಿಯಾಯಿ ಪರಂದಿನೊ ಅಜ್ಜಯ್ಯ
ಓಣಿ ಬೀರ ಮನ್ನಂಗ್ ಅಜ್ಜಯ್ಯ
ಕೋಳಿ ಅರತ್ ನೀಕುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ;
ಪಂದಿಯಾಯಿ ಪರಂದಿನೋ ಅಜ್ಜಯ್ಯ
ಅಗ್ಗಿ ಬಾಯಿ ಚವುಂಡಿಕ್ ಅಜ್ಜಯ್ಯ
ಪಂದಿ ಕೆತ್ತಿ ನೀಕುಲ ಅಜ್ಜಯ್ಯ
ಬೋಜಿ ಮೇಲ್ ನೊವ್ವುಲ ಅಜ್ಜಯ್ಯ

* * *

ಚತ್ತಲ್ಲಿ ಪರಯತಿ ಅಜ್ಜಯ್ಯ
ಆನಂಗುಂಡ್ ನಿಂಗಳೋ ಅಜ್ಜಯ್ಯ
ನಾರಾಯಣ ದೇವಂಡೋ ಅಜ್ಜಯ್ಯ
ಮಂಡೆಕ್‌ಟ್ಟ ಪೂಪೋಲೇ ಅಜ್ಜಯ್ಯ
ಬಾಡತೆ ಒಣಂಗತೇ ಅಜ್ಜಯ್ಯ
ವೈಕುಂಠ ನಗರತ್ ಅಜ್ಜಯ್ಯ
ತಣ್ಣನೆ ಪೊಲರಿರೋ ಅಜ್ಜಯ್ಯ.
ಕೆಟ್ಟಿರೋ ಅಜ್ಜಯ್ಯ ನಿಂಗ
ಕೆಟ್ಟನ್ನಕೆ ಕೆಟ್ಟ್‌ಲೇ ಅಜ್ಜಯ್ಯ.

ಹೆಂಗಸರೇ ಸತ್ತರೂ ಸಹ ಇದೇ ರೀತಿ ಸ್ವಲ್ಪ ವ್ಯತ್ಯಾಸದಿಂದ ಹಾಡಬೇಕು. ಬಹಳ ವ್ಯತ್ಯಾಸ ಇರುವುದನ್ನು ಈ ಕೆಳಗೆ ಬರೆಯುತ್ತೇನೆ. 115ನೇ ಪುಟದಲ್ಲಿ "ಕಾಲನ್ನನೆ ಪೋಪಕೋ" ಎಂಬಲ್ಲಿಂದ ಈ ಕೆಳಗಿನ ರೀತಿ ಮುಂದುವರಿಸಬೇಕು.

ಅಯ್ಯಾಂಡೆಕರೆ ಪೊಂಗ ತಾಯವ್ವ
ಪೈತಾಂಡೆಕ್ ತೇ ಪೊಂಗ ತಾಯವ್ವ
ಕಾಲನ್ನನೆ ಪೋಪಕ ತಾಯವ್ವ
ಕನ್ನಿ ಪೊಲೆ ಕಂಡಿರೋ ತಾಯವ್ವ
ಈ ಸುದ್ದಿನ ಕೇಪಕ ತಾಯವ್ವ
ಗೆದ್ದೆ ಗೆದ್ದ ಬಾಲಂಗ ತಾಯವ್ವ
ತಂದೂ ಬೆಂದೂ ಬಂದದೋ ತಾಯವ್ವ
ದೇವಡ ದಯತ್‌ಲ್ ತಾಯವ್ವ
ಈ ಒಕ್ಕ ಮನೆಯಿಂಜಿ ತಾಯವ್ವ
ಕೆಂಗುದ್‌ರೆ ಅಯ್ಯಣ್ಣ ತಾಯವ್ವ
ತಂದಯಚಿಕೊಂಡದ್ ತಾಯವ್ವ
ನಿಂಗಕ್ ಕುಶಿಯಾನ ತಾಯವ್ವ

ಮಂಗ್‌ಲಾಯಿ ಕೊಂಡಿತ್ ತಾಯವ್ವ
ತಾಂದೇವನೂ ದೇವಿಯೂ ತಾಯವ್ವ

ಎಂದು ಹಾಡಿ 117ನೇ ಪುಟದಲ್ಲಿ "ಪೂಪೋಲೆ ಪೊಲಂದಿರೋ" ಎಂಬಲ್ಲಿಂದ ಮುಂದು ವರಿಸಿ 120ನೇ ಪುಟದಲ್ಲಿ "ಇನ್ನ ನಿಪ್ಪ ಕಾಲತ್" ಎಂಬಲ್ಲಿಂದ ಈ ಕೆಳಗಿನ ರೀತಿ ಮುಂದುವರಿಸಬೇಕು.

ನಲ್ಲೋರಾಚೆ ನಾಳಾಯಿ ತಾಯವ್ವ
ಅಂದಿ ಮುಂದಿ ನೇರತ್ ತಾಯವ್ವ
ಒಡ್‌ಕಿತೂ ತಳಿಚಿತೂ ತಾಯವ್ವ
ನಂದ ದೀಪ ಬೆಚ್ಚದೋ ತಾಯವ್ವ
ಜೋಡ್ ದೀಪ ಕಂಡಿರೋ ತಾಯವ್ವ!
ಅಂದಲ್ಲ ಪಿನಿಯಾಂದ್ ತಾಯವ್ವ
ಪೊಂಬೋಲೆ ಪೊಲವಕ ತಾಯವ್ವ
ಕೇಕಿಯ ನಡೆಯತ್ ತಾಯವ್ವ
ಬೊಳ್ಳಿ ಪಡಿ ನೀಕಿತ್ ತಾಯವ್ವ
ಸೂರಿಯನ ತೊತ್ತಿತ್ ತಾಯವ್ವ
ಕಾಲೂ ಮೂಡೂ ಕತ್ತಿತ್ ತಾಯವ್ವ
ಒಡ್‌ಕಿತೂ ತಳಿಚಿತೂ ತಾಯವ್ವ
ನಂದ ದೀಪ ಬೆಚ್ಚಿತ್ ತಾಯವ್ವ
ನಂದದೀಪ ನೋಟಣೆ ತಾಯವ್ವ
ಎದ್ದೆಲಂಗಿ ಕತ್ತ್‌ಲೇ ತಾಯವ್ವ;
ಚೆನ್ನ ನೇರ ಆಪದೂ ತಾಯವ್ವ
ಉಂಡಿತೂ ಕುಡಿಚಿತೂ ತಾಯವ್ವ
ಕೈ ಕತ್ತಿ ಕಯಿಲಾಯಿ ತಾಯವ್ವ
ಬೇಲ್ ನೋಟಿ ಪೋಯಿತ್ ತಾಯವ್ವ
ಕನ್ನಡಿಯ ನೇಕತ್ ತಾಯವ್ವ
ಮೂಂದ್ ಸುತ್ತ್ ಬಂದಿತೋ ತಾಯವ್ವ
ಕೈ ಮಲಂಗಿ ತೊತ್ತಿತ್ ತಾಯವ್ವ
ಬೆಮ್ಮರಿಂಜಿ ಬಕ್ಕಣೆ ತಾಯವ್ವ
ಬಲತ್ ಕಣ್ಣ್ ಪಾರ್‌ಚಿ ತಾಯವ್ವ

ಎಂದು ಹಾಡಿ 120ನೇ ಪುಟದಲ್ಲಿ "ನಾಲ್ ವೊಟ್ಟ್ ಪೋ:ಕಣೆ" ಎಂಬಲ್ಲಿಂದ ಮುಂದುವರಿಸಬೇಕು.

ಸಾವನ್ನು ಮೀಯಿಸಿವುದು : ಸಾವನ್ನು ಬಾಡೆಯಿಂದ ಕೈಕೈ ಕೂಡಿಸಿ ತೆಗೆದು ಹಟ್ಟಿಯಲ್ಲಿ ಮರೆಕಟ್ಟಿ ಮೀಯಿಸಬೇಕು. ಮದುವೆಯಾದ ಗಂಡಸಾದರೆ ಮೀಯಿಸುವ ಮೊದಲು ಕೊಡಗರೇ ಮುಖಕ್ಷೌರ ಮಾಡಬೇಕು.

ಮೊದಲು ಶವಕ್ಕೆ ಎಣ್ಣೆ ಮತ್ತು ಅರಶಿನ ಸವರಬೇಕು. ಹೆಂಡತಿ ಇದ್ದರೆ ಅವಳು ಮೂರು ಚೆಂಬು ನೀರಾದರೂ ಹುಯ್ಯಬೇಕು. ಮೀಯಿಸಿ ಆದನಂತರ ತತ್ಕಾಲಕ್ಕೆ ಪಾತ್ರವನ್ನು ಅಲ್ಲಿಯೇ

ಮಗುಚಿಟ್ಟು ಬಿಡಬೇಕು.

ಉಡುಪು : ಸ್ನಾನ ಮಾಡಿಸಿ ಆದ ಮೇಲೆ ಶವಕ್ಕೆ ಅಲಂಕಾರವಾಗಿ ಬಟ್ಟೆ ಬರೆಗಳನ್ನು ಹಾಕಬೇಕು. ಗಂಡಸಾದರೆ ಬೀಳೀ ಕುಪ್ಪಸವನ್ನು ಸುಡುವುದಾದರೆ ಮಗುಚಿ ಹಾಕಿ, ಗುಂಡಿಗೆ ಹಾಕುವುದಾದರೆ ಬಲಕ್ಕೆ ಕೊಡಿಸಿ ದಟ್ಟಿ ಕಟ್ಟಿದಂತೆ ಇಟ್ಟು, ರುಮಾಲನ್ನು ಮೊಣಕಾಲಿಗೆ ಸುತ್ತಿ ಕಟ್ಟಿ ಶವಕ್ಕೆ ಹಾಕಿ, ಹಣೆಗೆ ವಿಭೂತಿ ಧರಿಸಿ, ಒಂದು ಚಿನ್ನದ ನಾಣ್ಯವನ್ನು ಹತ್ತಿಸಬೇಕು. ನಾಣ್ಯವು ಬಿದ್ದು ಹೋಗದಂತೆ ಗೋಂದಿನಿಂದ ಹತ್ತಿಸಬೇಕು. ಕೈಗಳನ್ನು ಎದೆಯ ಮೇಲೆ ಇಟ್ಟು ಕನ್ನಡಿಯೊಂದನ್ನು ಕೈಯಲ್ಲಿ ಹಿಡಿಯುವಂತೆ ಮಡಗಬೇಕು. ಅದರ ಜೊತೆಯಲ್ಲಿ ಒಂದು ವಿಭೂತಿಯನ್ನು ಮಡಗಬೇಕು. ಕಣ್ಣು ಮುಚ್ಚಿಲ್ಲದಿದ್ದರೆ ಬಾಳೆಗಿಡದ ರಸದಿಂದ ಕಣ್ಣನ್ನು ಮುಚ್ಚಬೇಕು. ಬಾಯಿಗೆ ಸ್ವಲ್ಪ ಎಲೆ ಅಡಿಕೆಯನ್ನು ಹಾಕಿ ತುಟಿಯನ್ನು ರೇಷ್ಮೆ ಬಟ್ಟೆಯಿಂದ ಮುಚ್ಚಬೇಕು. ಪೀಚೆ ಕತ್ತಿ ಧರಿಸಬೇಕು. ಹೆಂಗಸಾದರೆ ಹೆಂಗಸರ ಉಡುಪನ್ನು ಧರಿಸಬೇಕು. ಸುಡುವುದಾದರೆ ರವಕೆಯನ್ನು ಕುಪ್ಪಸದಂತೆ ಮಗುಚಿ ಹಾಕಬೇಕು.

ಚಾವು ಕೂಟುವ : ಸ್ನಾನ ಮಾಡಿಸಿ ಉಡುಪು ಹಾಕಿದ ಮೇಲೆ ನೆಲ್ಲಕ್ಕಿ ನಡುಬಾಡೆಯಲ್ಲಿ ತೊಟ್ಟಿಮನೆಯಾದರೆ ಐಮರದ ಮೇಲೂ "ಒತ್ತೆ ಪೊರೆ"ಯಾದರೆ ಮಂಚದ ಮೇಲೂ ಒಂದು ಚಾಪೆಯನ್ನು ಪೂರ್ವದಿಂದ ಪಶ್ಚಿಮಕ್ಕೆ ಮಗುಚಿ ಹಾಕಿ ಅದರ ಮೇಲೆ ಹಾಸಿಗೆ ಹಾಕಿ ಸಾವನ್ನು ಮಲಗಿಸಬೇಕು. ಗಂಡಸಾದರೆ ಕಾಲುಗಳನ್ನು ಮಡಚಿ ಕೂತುಕೊಳ್ಳುವಂತೆಯೂ, ಹೆಂಗಸಾದರೆ ಉದ್ದವಾಗಿ ಮಲಗಿಸಿ ಶವದ ತಲೆಯೂ ಮತ್ತು ಲಾಲುಗಳೂ ಮುಚ್ಚುವಂತೆ ಕೆಳಗಡೆ ಸೈನು ಬಟ್ಟೆ ಹಾಕಿ ಮಲಗಿಸಬೇಕು. ಶವವು ಸ್ವಲ್ಪ ಕೂತ ಹಾಗೆ ತೋರುವಂತೆ ಬೆನ್ನಿಗೆ ಒಂದು ಬೆತ್ತದ ಪೆಟ್ಟಿಗೆಯನ್ನು ಅಥವಾ ಹಾಸಿಗೆಯನ್ನು ಮಡಗಬೇಕು. ಸಾವು ಕೂಡಿಸಿದ್ದಲ್ಲಿಗೆ ಮೇಲ್ಕಟ್ಟು ಕಟ್ಟಬೇಕು.

ಇತರ ಕಡೆಗಳಲ್ಲಿ ಸತ್ತು ಶವವನ್ನು ತನ್ನ ಮನೆಗೆ ತಂದರೆ ಸಾವನ್ನು ಮನೆಯ ಒಳಗೆ ಕೂಡಿಸಬಾರದು. ಆದರೆ ತನ್ನ ಸ್ವಜಾತಿಯವರು ಜೊತೆಯಲ್ಲಿದ್ದು ಅಂಟು ರೋಗವಲ್ಲದ ಕಾಯಿಲೆಯಲ್ಲಿ ಸತ್ತು ಹೋಗಿ ಇತರ ಜಾತಿಯವರು ಆ ಶವವನ್ನು ಮುಟ್ಟಿಲ್ಲವಾದರೆ ಸಾವನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ಕೂಡಿಸಬಹುದು. ಇತರ ಮನೆಗಳಲ್ಲಿ ಹೆಂಗಸು ಹೆತ್ತು ಸತ್ತಿದ್ದರೆ ಮಗುವು ಜೀವದಲ್ಲಿದ್ದರೆ ಯಾವ ಮನೆಯಲ್ಲಿ ಸಾವು ಕೂಡಿಸುವುದೋ ಆ ಮನೆಗೆ ಆ ಮಗುವನ್ನು ತೆಗೆದುಕೊಂಡು ಹೋಗಬೇಕು.

ಒಂದು ಮನೆಯಲ್ಲಿ ಸತ್ತು ಇನ್ನೊಂದು ಮನೆಯಲ್ಲಿ ಸಾವು ಕೂಡಿಸುವುದಾದರೆ ಸಾವನ್ನು ಸತ್ತ ಮನೆಯಲ್ಲಿ ಮೀಯಿಸಬಾರದು.

ಸಾವನ್ನು ಕೂಡಿಸಿದ ಸ್ಥಳದಲ್ಲಿ ಕರ್ಪೂರ ಸಾಂಬ್ರಾಣಿ ಊದುಬತ್ತಿ ಗಂಧದ ಹುಡಿ ಮುಂತಾದವುಗಳು ಉರಿಯುತ್ತಿರಬೇಕು. ಬಾಡೆಯಲ್ಲಿ ತಳಿಯಕ್ಕಿ ಮಡಗಿ ಅದರ ಮೇಲೆ ಚಿಪ್ಪಿನಲ್ಲಿ ಹಸುವಿನ ತುಪ್ಪ ಹಾಕಿ ಅದರಲ್ಲಿ ಬತ್ತಿ ಉರಿಸಬೇಕು. ಶವವನ್ನು ಸುಡುಗಾಡಿಗೆ ಅಥವಾ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಕ್ಕಿ ಚಿಪ್ಪು ಸಮೇತ ಗುಂಡಿಗೆ ಅಥವಾ ಬೆಂಕಿಗೆ ಹಾಕಿ ಗಂಗಳವನ್ನು ಮಾತ್ರ ಹಿಂದಕ್ಕೆ ತರಬೇಕು.

ಶವದ ಮೇಲೆ ನೊಣ ಕೂರದಂತೆ ಬೈನೆ ಮರದ ಸೊಪ್ಪಿನಿಂದ ಮಾಡಿದ ಬೀಸಣಿಗೆಯಲ್ಲಿ

*** ಸಾವು ಮನೆಗೆ ಬಂದವರನ್ನು "ಬಂದಿರಾ" ಎಂದು ಕೇಳುವುದಾಗಲೀ, ಕಾಲು ತೊಳೆಯುವುದಕ್ಕೆ ನೀರು ಕೊಡುವುದಾಗಲೀ, ಚಾಪೆ ಹಾಕಿ ಕೂರಿಸುವುದಾಗಲೀ ಕೂಡದು.**

ಬೀಸಿಕೊಂಡಿರಬೇಕು. ಸಾವಿನ ಹತ್ತಿರ ಹೆಂಗಸರು ಮಾತ್ರ ಕೂತುಕೊಂಡಿರಬೇಕು.

ನೀರಿಗೆ ಇಳಿಯುವುದು : ಸಾವನ್ನು ಕೂಡಿಸಿ ಆದ ಮೇಳೆ ಸತ್ತವನ ಹೆಂಡತಿ ಅಥವಾ ಗಂಡ ಮತ್ತು ಸಮ್ಮಂಧಿಕರದಲ್ಲಿ ಕಿರಿಯವರು ಪುನಃ ನೀರಿಗಿಳಿದು ಬರಬೇಕು.

ಕೆಲ್ಲಟಿ : ಸಾವಿಗೆ ಕೊಂಬು, ಕೊಟ್ಟು, ವಾದ್ಯ, ಕೋಪಿ, ಮುರಿ ಸಮೇತವಾಗಿ ಬರುವುದಕ್ಕೆ 'ಕೆಲ್ಲಟಿ' ಎಂದು ಹೆಸರು.

ಬಂದ ನೆಂಟರಲ್ಲಿ ಕಿರಿಯವರೆಲ್ಲರೂ ಓಣಿಗೆ ತಲುಪುವ ಮೊದಲು ಗಂಡಸರು ಸೊಂಟಕ್ಕೂ ಹೆಗಲಿಗೂ ಮುಂಡು ಸುತ್ತಿಯೂ ಹೆಂಗಸರು ರವಕೆಯನ್ನು ಬಿಚ್ಚಿ "ನಿಪ್ಪ್‌ಕ್ ತುಣಿ" ಕಟ್ಟಿಕೊಂಡೂ ಸಾವಿನ ಹತ್ತಿರ ಹೋಗಬೇಕು. ಕೆಲ್ಲಟಿ ತಂದವರು ಓಣಿಗೆ ತಲುಪಿದ ಒಡನೆ ಜೋಡು ಗುಂಡು ಹೊಡಿಯಬೇಕು. ಅವರು ತಂದ ವಾದ್ಯದವರು ವಾದ್ಯ ಮಾಡುತ್ತಿರಬೇಕು. ಅಲ್ಲಿಂದ ಹೆಂಗಸರು ಜಡೆಯನ್ನು ಅಥವಾ ತಲೆ ಕಟ್ಟನ್ನು ಬಿಚ್ಚಿ ಮುರಿಯನ್ನು ತಲೆಯಲ್ಲಿಟ್ಟು "ಮಾಲೆ ಪೊಯಿತ್" ಹೊಡೆದುಕೊಳ್ಳುತ್ತಾ ಹೋಗಿ ಸಾವಿಗೆ ಕೈ ಕೊಡಬೇಕು.

ಮುರಿ: ಹಚ್ಚಡದ ಅಥವಾ ಸೈನಿನ ಬಟ್ಟೆಯನ್ನು ಸಾವಿಗೆ ತರುವುದಕ್ಕೆ 'ಮುರಿ ಎಂದು ಎನ್ನುವರು. ಈ ಬಟ್ಟೆಯು ಸುಮಾರು 10 ಮೊಳ ಇರಬೇಕು. ಮುರಿಯನ್ನು ಹೆಂಗಸರು ಮಾತ್ರ ತರಬೇಕು. ಮುರಿ ಸಮೇತ ಸಾವಿನ ಹತ್ತಿರ ಬಂದ ಒಡನೆ ಅಲ್ಲಿರುವ ಒಬ್ಬ ಹೆಂಗಸು ಆ ಮುರಿಯನ್ನು ಕೇಳಿಕೊಂಡು ಶವದ ಬೆನ್ನಿನ ಕಡೆಗೆ ಇಡಬೇಕು.

ಎಡೆ ಕೆಲ್ಲಟಿ : ವಾದ್ಯದೊಡನೆ ಬಾರದೆ ಸಾವು ಮನೆಯ ಹತ್ತಿರ ಬಂದು ಅಲ್ಲಿಂದ ವಾದ್ಯವನ್ನು ತರಿಸಿಕೊಂಡು ಬಂದರೆ ಅದಕ್ಕೆ "ಎಡೆ ಕೆಲ್ಲಟಿ" ಅನ್ನುವರು. ಹಾಗೆ ವಾದ್ಯವನ್ನು ತರಿಸಿಕೊಂಡರೆ ಕೊಂಬಿನವರಿಗೆ ಒಂದು ಹಣ ಕೊಡಬೇಕು. ವಾದ್ಯದವರಿಗೆ ಒಂದು ಹಣ ಮತ್ತು ಮೇದನಿಗೆ ಒಂದು ಹಣ ಕೊಡಬೇಕು.

ಕೆಂದನೊಲ್ಲಿ ಕೆಲ್ಲಟಿ : ಕೆಂಪು ರೇಷ್ಮೆ ಒಲ್ಲಿಯನ್ನು ಕೆಲ್ಲಟಿಯ ಜೊತೆಯಲ್ಲಿ ತರುವುದಕ್ಕೆ "ಕೆಂದನೊಲ್ಲಿ ಕೆಲ್ಲಟಿ" ಎಂದು ಹೆಸರು. ಕೆಂದನೊಲ್ಲಿ ಕೆಲ್ಲಟಿಯನ್ನು ಸೋದರಳಿಯನು ಅಥವಾ ಸೋದರ ಸೊಸೆಯು ಮಾತ್ರ ತರಬಹುದು. ಅಳಿಯನಾದರೆ ಕೆಂದನೊಲ್ಲಿಯನ್ನು ಹೆಗಲಿನ ಮೇಲೂ, ಸೊಸೆಯಾದರೆ ತಲೆಯ ಮೇಲಿಟ್ಟ ಮುರಿಯ ಮೇಲೂ ಮಡಗಿಕೊಳ್ಳಬೇಕು.

ಈ ಕೆಂದನೊಲ್ಲಿಯನ್ನು ತಿಥಿ ತೀರಿದ ಮೇಲೆ ಮೂರು ಬೆಳ್ಳಿಯ ಹಣವನ್ನು ಕೊಟ್ಟು ಹಿಂದಕ್ಕೆ ತೆಗೆದುಕೊಳ್ಳಬಹುದು.

ಸಮೆಯ : ಒಂದು ತೆಂಗಿನಕಾಯಿ, ಸ್ವಲ್ಪ ತೆಂಗಿನೆಣ್ಣೆ, ಪೊರಿ, ಮಾಂಸ ಅಥವಾ ಕೋಳಿ ಮೊಟ್ಟೆಯನ್ನು ಪದಾರ್ಥ ಮಾಡಿ ಕಟ್ಟಿದ ಬುತ್ತಿ, ಕೈ ಎಣ್ಣೆಯಲ್ಲಿ ಮಾಡಿದ ಬುತ್ತಿ, ಕೈ ಎಣ್ಣೆಯಲ್ಲಿ ಮಾಡಿದ ಮೂರು ಕಜ್ಜಾಯ ಮತ್ತು ಮಂಜಲಕ್ಕಿಗೆ "ಸಮೆಯ"ವೆಂದು ಹೆಸರು. ಹೆಂಗಸಿಗೆ ತವರು ಮನೆಯಿಂದಲೂ ಗಂಡಸಿಗೆ ತಾಯಿಯ ತವರಿಂದಲೂ ಸಮೆಯವನ್ನು ತರಬೇಕು.

ಸಮೆಯವನ್ನು ಸಾವು ಮನೆಯಲ್ಲಿಯೂ ಮಾಡಬೇಕು. ಈ ದಿವಸ ಪೊರಿಯನ್ನು ಮನೆಯೊಳಗೆ ತಯಾರಿಸಬೇಕು. ಬೇರೆ ಸಮಯದಲ್ಲಿ ಪೊರಿಯನ್ನು ಮನೆಯೊಳಗೆ ತಯಾರಿಸಕೂಡದು.

ಸಮೆಯ ತರುವಾಗ ಕೆಲ್ಲಟಿ ತಪ್ಪದೆ ಇರಬೇಕು.

ಚಾವುಕ್ ಕೈಕೊಡ್‌ಪ : ಕೊಡಗರಲ್ಲಿ ಸಾವಿಗೆ ಬಂದ ಪ್ರತಿಯೊಬ್ಬನು ಸಾವಿಕೆ ಕೈ ಕೊಟ್ಟೇ

ತೀರಬೇಕು. ಕೈ ಕೊಡುವಾಗ ಕಾಲಿನಲ್ಲಿ ಪಾದರಕ್ಷೆಯಾಗಲೀ ತಲೆಯಲ್ಲಿ ವಸ್ತ್ರವಾಗಲೀ ಇರಕೂಡದು. ಸಾವಿಗೆ ರುಮಾಲು ಕಟ್ಟಿಕೊಂಡು ಹೋಗಕೂಡದು.
ಸಮ್ಮಂಧಿಕರಾದ ಕಿರಿಯ ಗಂಡಸರು ಬಟ್ಟೆಗಳನ್ನು ಬಿಚ್ಚಿ ಮುಂಡು ಸುತ್ತಿಕೊಳ್ಳಬೇಕು. ದೂರದ ನೆಂಟರು ಕೋಟುಗಳ ಕೈಗಳನ್ನು ಬಿಚ್ಚಿ ಬಿಡುವುದುಂಟು. ಸತ್ತವನಿಗೆ ಕಿರಿಯ ಹೆಂಗಸರು ನಿಪ್ಪ್‌ಕ್ ತುಣಿ ಕಟ್ಟಿಕೊಳ್ಳಬೇಕು.

ಸತ್ತವನಿಗಿಂತ ಹಿರಯ ಹೆಂಗಸರೂ ಸಮ್ಮಂಧಿವಿಲ್ಲದ ಕಿರಿಯ ಹೆಂಗಸರೂ ಜಡೆಯಾಗಲೀ ತಲೆಕಟ್ಟಾಗಲೀ ಬಿಚ್ಚಬೇಕಿಲ್ಲ. ಮಾಲೆ ಪೊಯಿತ್ ಸಹ ಹೊಡಿಯಬೇಕಿಲ್ಲ.

ಸಾವಿಗೆ ಹೋಗುವಾಗ ರಂಗು ಬಟ್ಟೆಗಳನ್ನು ಹಾಕಿಕೊಂಡು ಹೋಗಬಾರದು.

ಅಂಗ ಮುರಿಯುವುದು : ಸತ್ತವನು ಅಥವಾ ಸತ್ತವಳು ವಯಸ್ಸು ಪಟ್ಟಿದ್ದರೆ ಊರಿನಲ್ಲಿರುವ ಹೊಲೆಯರು ಹಟ್ಟಿಯಲ್ಲಿ ಅಂಗ ಮುರಿಯುವರು. ಇದು ಹೇಗೆಂದರೆ: ಮಣೆಯ ಮೇಲೆ ಕೈ ಎಣ್ಣೆ ದೀಪ ಇಟ್ಟು ಇದರ ಹತ್ತಿರ ಪುತ್ತರಿ ಪಚ್ಚೆಯದಲ್ಲಿ ತುಂಬ ಭತ್ತವನ್ನಿಟ್ಟು, ಅದರ ಮೇಲೆ ಸಣ್ಣದೊಂದು ಪಚ್ಚೆಯದಲ್ಲಿ ತುಂಬ ಅಕ್ಕಿ ಇಟ್ಟು, ಅದರ ಮೇಲೆ ತೆಂಗಿನಕಾಯಿ ಇಟ್ಟು, ಅಕ್ಕಿಯ ಮೇಲೆ ಒಂದು ಕಬ್ಬಿಣದ ಸಣ್ಣ ಅಂಬನ್ನು ಚುಚ್ಚಿರಬೇಕು. ಹೊಲೆಯರಲ್ಲಿ ಒಬ್ಬನಿಗೆ ಮನೆಯಿಂದ ಮುಂಡು ಕೊಡಬೇಕು. ಅವನು ತನ್ನ ಬೇರೆ ಬಟ್ಟೆಗಳನ್ನು ಬಿಚ್ಚಿ ಹಾಕಿ ಆ ಮುಂಡನ್ನು ಸುತ್ತಿಕೊಂಡು ಮನೆಯ ಮುಂದುಗಡೆ ಮೆಟ್ಲಿಗೆ ಸಾವಿಗೆ ಕೈ ಕೊಡುವಂತೆ "ಕೆಟ್ಟಿರೋ ಆದನೆ" ಅಥವಾ "ಕೆಟ್ಟಿರೋ ಅಬ್ಬೆಯೆ" ಎಂದು ಮೂರು ದಪ ಕೈ ಕೊಟ್ಟು ಬೇರೆ ಹೊಲೆಯರ ಸಮೇತ ಹೊಡಿಯುತ್ತಿರುವ ಡೋಲಿಗೆ ಸರಿಯಾಗಿ, ದೀಪದ ಸುತ್ತಲೂ ಮಾಲೆ ಪೊಯಿತ್ ಹೊಡಿಯುತ್ತಾ ಒಂದು ವಿಶೇಷದ ಕುಣಿತವನ್ನು ಕುಣಿಯುವರು.

ಹೊಲೆಯರಲ್ಲಿ ಮುಂಡು ತೆಗೆದುಕೊಂಡವನು ಸತ್ತವನಿಗಿಂತ ಕಿರಿಯವನಾಗಿರಬೇಕು. ಮತ್ತು ಅವನು ಕೊಡಗರಂತೆಯೇ ಮೇಂಗತೆ ಇರಬೇಕು. ಇವನು ಮೇಂಗುವ ದಿವಸ ಸ್ವಲ್ಪ ಅಕ್ಕಿ, ಹೆಸರು ಮತ್ತು ತರಕಾರಿ ತರಬೇಕು. ಮೇಂಗಿ ಹೋಗುವಾಗ ಅವನು ತಂದ ಕುಕ್ಕೆಗೆ ಅಕ್ಕಿ, ತೆಂಗಿನಕಾಯಿ, ಉಪ್ಪು, ಮಾಂಸ ಮತ್ತು ಎಣ್ಣೆ ಸಹ ಕೊಟ್ಟು ಅವನಿಗೆ ಒಂದು ಬಿಳಿ ಕುಪ್ಪಸಕ್ಕೆ ತಕ್ಕಷ್ಟು ಹಚ್ಚಡ ಕೊಡಬೇಕು.

ಹೊಲತಿಯರು ಮೇಂಗತೆ ಇರುವುದಾದರೆ ಸತ್ತ ದಿವಸ ನಿಪ್ಪ್‌ಕ್ ತುಣಿಗೆ ಹಚ್ಚಡ ಕೊಡಬೇಕು ಮತ್ತು ಮೇಂಗಿ ಹಿಂತಿರುಗಿ ಹೋಗುವಾಗ ಅವಳಿಗೆ ಒಂದು ಸೀರೆಗೆ ತಕ್ಕಷ್ಟು ಹಚ್ಚಡ ಕೊಡಬೇಕು.

ಒಬ್ಬ ಹೊಲೆಯ ಮತ್ತು ಒಬ್ಬ ಹೊಲತಿಗಿಂತ ಹೆಚ್ಚು ಜನರು ಮೇಂಗತೆ ಇರಬೇಕಿಲ್ಲ.

ಕೇಕಳ ಅಥವಾ ತೂಟ್ಂಗಳ ತೊರಪ : ಮದುವೆಯಾಗದಷ್ಟು ಸಣ್ಣವರನ್ನು ಮಾತ್ರ ಗುಂಡಿಗೆ ಹಾಕಬೇಕು. ಮಿಕ್ಕವರನ್ನೆಲ್ಲಾ ಸುಡಬೇಕು. ಕೇಕಳಕ್ಕೆ ಗುಂಡಿ ತೆಗೆಯುವುದಕ್ಕಾಗಲೀ ತೂಟ್ಂಗಳಕ್ಕೆ ಸೌದೆ ಕಡಿಯುವುದಕ್ಕಾಗಲೀ ಈ ಮಧ್ಯೆ ಊರವರನ್ನು ಕಳುಹಿಸುವರು. ಗುಂಡಿ ತೆಗೆಯುವುದಾಗಲೀ, ಸೌದೆ ಕಡಿಯುವುದಾಗಲೀ ಮೊದಲು ಅರುವನು ಮಾಡಬೇಕು. ಅದಕ್ಕೆ ಕೇಕಳ ಅಥವಾ ತೂಟ್ಂಗಳ ತೊರಪ ಅನ್ನುವರು. ಈ ದಿವಸ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲಿರುವ ಗುದ್ದಲಿ, ಕತ್ತಿ, ಮಚ್ಚುಗಳನ್ನು ಮೆಟ್ಟುಕಲ್ಲಿನ ಮೇಲೆ ಮಡಗಬೇಕು.

ಸೌದೆ ಕಡಿಯುವುದಕ್ಕಾಗಲೀ ಗುಂಡಿ ತೆಗೆಯುವುದಕ್ಕಾಗಲೀ ಚಾಂಡಾಳರನ್ನು ಸೇರಿಸಕೂಡದು. ಸೌದೆಗೆ ಹಸಿ ಮರವು ಒಂದಾದರೂ ಇರಬೇಕೆಂದು ಹೇಳುವರು.

ಒಂದು ಸ್ಥಳದಲ್ಲಿ ಗುಂಡಿ ತೆಗೆಯಲು ಸುರುಮಾಡಿ ಯಾವುದಾದರೂ ಒಂದು ಕಾರಣದಿಂದ ಆ ಸ್ಥಳವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಗುಂಡಿ ತೆಗೆದರೆ ಅಥವಾ ಶವವನ್ನು ಸುಟ್ಟು ಬಿಟ್ಟರೆ ಮೊದಲು ತೆಗೆದ ಗುಂಡಿಗೆ ತುಂಬಿಸುವುದಕ್ಕೆ ಆ ಮನೆತನದಲ್ಲಿ ಇನ್ನೊಂದು ಮೃತ್ಯುವು ಬೇಗನೆ ಇರುವುದೆಂದು ಹೇಳುವರು. ತಪ್ಪಿತದಿಂದ ಅಂಥ ಸಂಗತಿ ಆಗಿ ಹೋದರೆ ಒಂದು ಕೋಳಿ ಮರಿಯನ್ನಾಗಲಿ ಕೊಂದು ಆ ಗುಂಡಿಗೆ ಹಾಕುವರು. ಶವವನ್ನು ಸುಡುವುದಕ್ಕೆ ಕಡಿದ ಸೌದೆಯನ್ನು ಉಪಯೋಗಿಸದೆ ಹೋದರೆ ಅದರಿಂದ ಕೋಳಿಮರಿಯನ್ನಾದರೂ ಕೊಂದು ಸುಟ್ಟು ಹಾಕಬೇಕೆಂದು ಹೇಳುವರು.

ಕತ್ತ್ ಮೂಡೆ : ಶವವನ್ನು * ಸುಡುವುದಾದರೆ ಸಾವನ್ನು ತೆಗೆಯುವುದಕ್ಕಿಂತ ಮುಂಚೆ ಬಾಳೆಯ ಸರಿ ಸಂಖ್ಯೆಯ ತಟ್ಟೆಗಳನ್ನು ಹೆಣೆದು ಮನೆಯ ಮುಂದುಗಡೆ ಹಟ್ಟಿಯಲ್ಲಿಟ್ಟು ಅದರ ಮೇಲೆ ಉಮ್ಮಿಯನ್ನು ಹಾಕಿ ಅದರ ಮೇಲೆ ಬೆಂಕಿ ಕೆಂಡಗಳನ್ನು ಹಾಕಿ ಅದನ್ನು ಮೂಡೆ ಮಾಡುವುದಕ್ಕೆ "ಕತ್ತ್ ಮೂಡೆ" ಎಂದು ಹೆಸರು. ಇದನ್ನು ಅರವನು ಮತ್ತು ಇನ್ನೊಬ್ಬನು ತೂಟ್ಂಗಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಗೆ ಶವವನ್ನು ತೆಗೆದುಕೊಂಡು ಹೋಗುವವರೆಗೆ ಕಾದುಕೊಂಡಿರಬೇಕು.

ಸಾವು ತೆಗೆಯುವುದು : ಗುಂಡಿ ತೆಗೆಯುವುದಕ್ಕಾಗಲೀ, ಸೌದೆ ಕಡಿಯುವುದಕ್ಕಾಗಲೀ ಹೋದವರು ಹಿಂತಿರುಗಿ ಮನೆಗೆ ಬಂದ ಮೇಲೆ ಸಾವಿಗೆ ಕೈ ಕೊಡಬೇಕು. ಆ ಮೇಲೆ ಸಾವನ್ನು ತೆಗೆಯಬೇಕು. ಮೊದಲು ಸಾವು ಕೂಡಿಸಿದಲ್ಲಿದ್ದ ಮೇಲ್ಕಟ್ಟನ್ನು ಬಿಚ್ಚಿ ಸಾವನ್ನು ಕೂಡಿಸುವ ಕುರ್ಚಿಗಾಗಲೀ ಮಂಚಕ್ಕಾಗಲೀ ಚಪ್ಪರದಂತೆ ಕಟ್ಟಿ ಆ ಮೇಲ್ಕಟ್ಟಿನ ಬಟ್ಟೆಯನ್ನು ಅದಕ್ಕೆ ಮೇಲ್ಕಟ್ಟಿನಂತೆ ಕಟ್ಟಿ ಅದರ ಮೂಲೆಗಳಿಗೆ ಕಾಡು ಒಳ್ಳೆಮೆಣಸಿನ ಎಲೆಗಳನ್ನು ಕಟ್ಟಿ ಒಂದು ಮೂಲೆಗೆ ತೂತವಾಗಿ ಮಾಡಿರುವ ಒಂದು ಕಜ್ಜಾಯವನ್ನು ಕಟ್ಟಬೇಕು. ಮಂಚದಲ್ಲಿ ಸಾವು ಹೊತ್ತುಕೊಂಡು ಹೋಗುವುದಾದರೆ ಮಂಚವನ್ನು ಕೇಕ್ ಮರದಿಂದ ಮಾಡಬೇಕು. ಇದೇ ಪೂರ್ವದ ಪದ್ಧತಿ.

ಕೆಲವು ಕಡೆಗಳಲ್ಲಿ ಕುರ್ಚಿಯ ಅಥವಾ ಮಂಚದ ಮೇಲೆ ಸಾವಿಂದ ರಕ್ತ ಸೋರುವುದಾದರೆ ಕೂರುವಲ್ಲಿಗೆ ಬಾಳೆ ಎಲೆಯನ್ನು ಹಾಸುವುದುಂಟು.

ಆ ಮೇಲೆ ಬಾಡೆಯಿಂದ ಶವವನ್ನು ಕೈ ಕೈ ಕೂಡಿಸಿ ಹಾಸಿಗೆ ಸಮೇತ ತೆಗೆದು ಹಟ್ಟಿಗೆ ತಂದು ಕುರ್ಚಿಯಲ್ಲಾಗಲೀ ಮಂಚದಲ್ಲಾಗಲೀ ಸಾವನ್ನು ಕೂಡಿಸಬೇಕು. ಸಾವು ತೆಗೆಯುವವರ ತಲೆಯಲ್ಲಿ ವಸ್ತ್ರವಾಗಲೀ ಕಾಲುಗಳಲ್ಲಿ ಪಾದರಕ್ಷೆಯಾಗಲೀ ಇಟ್ಟುಕೊಳ್ಳಕೂಡದು.

ನೀರು ಕೊಡುವುದು : ಈ ಮಧ್ಯೆ ಒಂದು ಕಂಚಿನ ಗಂಗಳಕ್ಕೆ ಒಂದು ತೆಂಗಿನಕಾಯಿಯ ನೀರನ್ನು ಹುಯಿದು ಅದರಲ್ಲಿ ತುಳಸಿ ಮತ್ತು ಗರಿಕೆ ಹುಲ್ಲನ್ನು ಇಟ್ಟು, ಹಟ್ಟಿಯಲ್ಲಿ ಅರುವನು ಇಲ್ಲದೆ ಇದ್ದರೆ ಇತರ ನೆಂಟರು ಅದನ್ನು ಹಿಡಿದುಕೊಳ್ಳಬೇಕು. ಇಲ್ಲಿಂದ ಸಾವಿನ ಜೊತೆಯಲ್ಲಿ ಹೋಗದವರು ಸಾವಿಗೆ ನೀರು ಕೊಡಬೇಕು. ಸಮ್ಮಂಧಿಕರಾದ ನೆಂಟರು ಸಾವಿಗೆ ನೀರು ಕೊಟ್ಟು ಗಂಗಳಕ್ಕೆ ಹಣ ಹಾಕುವರು.

ಹಣ ಚೆಲ್ಲುವುದು: ಸತ್ತವನ ಹಕ್ಕುದಾರನು ಹಟ್ಟಿಯಲ್ಲಿ ಹಣ ಚೆಲ್ಲುವುದುಂಟು. ಅದನ್ನು

*** ಕೆಲವು ಕಡೆಗಳಲ್ಲಿ ಶವವನ್ನು ಗುಂಡಿಗೆ ಹಾಕುವುದಾದರೂ ಕತ್ತ್ ಮೂಡೆ ತೆಗೆದುಕೊಂಡು ಹೋಗುವುದುಂಟು. ಸುಡುವುದೇ ನ್ಯಾಯವಾದ ಪದ್ಧತಿಯಾದ್ದರಿಂದ ಕಾರಣಾಂತರರಿಂದ ಗುಂಡಿಗೆ ಹಾಕುವುದರಿಂದ ಕತ್ತ್ ಮೂಡೆಯ ಪದ್ಧತಿಯನ್ನು ಬಿಡಲೇ ಇಲ್ಲ.**

ಚಾಂಡಾಲರು ಮತ್ತು ಭಿಕ್ಷುಕರು ಹೆರಕಿಕೊಳ್ಳುವರು. ಇದರ ಬದಲಿಗೆ ಸ್ಮಶಾನದಲ್ಲಿ ಹೊಲೆಯರಿಗೆ ಮತ್ತು ಭಿಕ್ಷುಕರಿಗೆ ಮುರಿ ಕೊಡುವಾಗ ಮುರಿಯ ತುದಿಗೆ ಕಾಸು ಕಟ್ಟಿಕೊಡುವುದೂ ಉಂಟು.

ಕೊಡೆ : ಈ ಮಧ್ಯೆ ನಿಡುತಂಡಿನಿಂದ ಅಥವಾ ಓಟೆಯ ಕಡ್ಡಿಗಳಿಂದ ಕೊಡೆಯ ಕಡ್ಡಿಯಂತೆ ಮಾಡಿ ಅದರ ಮೇಲೆ ಬಿಳೀ ಬಟ್ಟೆಯನ್ನು ಹಾಕಿ ಕಟ್ಟಿ, ಕೊಡೆಯಂತೆ ಮಾಡಿಡಬೇಕು. ಗಂಡಸು ಸತ್ತಿದ್ದರೆ ಆ ಕೊಡೆಗೆ ನಿಡುತಂಡಿನ ಅಥವಾ ಓಟೆಯ ಕಾಲು ಮಾಡಿರಬೇಕು. ಕೊಡೆಗೆ ಕಾಡು ಒಳ್ಳೆಮೆಣಸಿನ ಸೊಪ್ಪನ್ನೂ ಒಂದು ಕಜ್ಜಾಯವನ್ನೂ ಕಟ್ಟಬೇಕು.

ತೆಂಗೆ ತಿರಿ : ಅಷ್ಟರಲ್ಲಿ ಒಂದು ನಿಡುತಂಡಿನ ಅಥವಾ ಓಟೆಯ ತುದಿಯನ್ನು ಮೂರಾಗಿ ಒಡೆದು ಅದರ ಮಧ್ಯೆ ಒಂದು ತೆಂಗಿನಕಾಯಿ ಒಡೆಯನ್ನು ಇಟ್ಟು ಅದರಲ್ಲಿ ತೆಂಗಿನೆಣ್ಣೆಯಲ್ಲಿ ಅದ್ದಿದ ಬತ್ತಿಯನ್ನು ಉರಿಸುತ್ತಿರಬೇಕು.

"ಸಮೆಯ"ದಲ್ಲಿ ಕೈ ಎಣ್ಣೆಯಲ್ಲಿ ಹುರಿದ ಮೂರು ಕಜ್ಜಾಯಗಳನ್ನು ಇಡಬೇಕು. ಇದನ್ನು ಅರುವನ ಮನೆ ಹೆಣ್ಣು ಹೊತ್ತುಕೊಳ್ಳಬೇಕು.

ಕೊಡೆಯನ್ನು ಮತ್ತು ತೆಂಗೆ ತಿರಿಯನ್ನು ಸಮ್ಮಂಧಿಕರಲ್ಲಿ ಯಾರಾದರೂ ಹೊತ್ತುಕೊಳ್ಳಬಹುದು.

ಸಾವು ತೆಗಿಯುವುದು : ಶವವನ್ನು ಕೊಡಗರೇ ತೆಗೆಯಬೇಕು. ಹಟ್ಟಿಯಿಂದ ಶವವನ್ನು ತೆಗೆದು 'ಕಾಕಿ ಮೊರಡುತ್ತಾ' ಸಾವನ್ನು ಕುರ್ಚಿ ಅಥವಾ ಮಂಚವನ್ನು ಆಡಿಸುತ್ತಾ ಅಲ್ಲಿಯೇ ಮೂರು ದಪ ಅಪ್ರದಕ್ಷಿಣೆ ಬರಬೇಕು. ಅಲ್ಲಿಂದ ಸ್ಮಶಾನದವರೆಗೂ "ಕಾಕಿ ಮೊರಡುತ್ತಾ" ದಾರಿಯ ಉದ್ದಕ್ಕೂ "ಸಮೆಯ" ಚೆಲ್ಲುತ್ತಾ ಸಮ್ಮಂಧಿಕರಾದ ಹೆಂಗಸರು "ಮಾಲೆ ಪೊಯಿತ್" ಹೊಡಿಯುತ್ತಾ ಹೋಗಬೇಕು.

"ಸಮೆಯ"ವನ್ನು ಕೈಯಲ್ಲಿ ಚೆಲ್ಲುವುದರ ಬದಲಿಗೆ ಎತ್ತಿನ ಬೆನ್ನಿನ ಮೇಲೆ ಒಂದು ಗೋಣಿಯಲ್ಲಿ ಹಾಕಿ, ಆ ಗೋಣಿಯ ಎರಡು ಕಡೆಗೂ ಸ್ವಲ್ಪ ರಂಧ್ರ ಮಾಡಿ ಎತ್ತನ್ನು ಮುಂದೆ ಮುಂದೆ ಹೊಡೆಯುತ್ತಾ ಹೋಗುವುದುಂಟು. ಈ ಗೋಣಿಯ ಕೆಳಗೆ ಕವಂದಿ ಹಾಕಕೂಡದು. "ಸಮೆಯ" ಹೇರಿದ ಎತ್ತನ್ನು ಆ ಮೇಲೆ ಎಂದಿಗೂ ಊಳಲೂ ಹೇರಲೂ ಉಪಯೋಗಿಸಕೂಡದು.

ಕಟ್ಟ್ ಮರಿಯುವ : ಶವವನ್ನು ಕೂಡಿಸಿದ ಮಂಚ ಕುರ್ಚಿಯನ್ನು ದಾರಿಯಲ್ಲಿ ಮೂರು ದಪ ಮಡುಗಬೇಕು. ಮಡಗಿದಲ್ಲಿ ಸತ್ತವಳ ಗಂಡನು ಅಥವಾ ಸತ್ತವನ ಹೆಂಡತಿ ಆ ಮಂಚಕ್ಕೆ ಮೊಣಕಾಲೂರಿ ಹತ್ತಿ ಸಾವಿಗೆ ಕೈ ಕೊಟ್ಟು ಇಳಿಯಬೇಕು. ಇದಕ್ಕೆ "ಕಟ್ಟ್ ಮರಿಯುವ" ಎಂದು ಹೇಳುವರು. ಇದು ಕೆಲವು ಕಡೆಗಳಲ್ಲಿ ಮಾತ್ರ ಇದೆ.

ಮಂಚ ಅಥವಾ ಕುರ್ಚಿ ಮಡುಗಿದ ಮೂರು ಸ್ಥಳಗಳಲ್ಲಿಯೂ ಕಾರಣವರಿಗೆ ಕೊಡುವ ದಿವಸ ಎಡೆ ಮಡಗಬೇಕು.

ಸಾವನ್ನು ಹಟ್ಟಿಯಿಂದ ತೆಗೆದುಕೊಂಡು ಹೋದ ಒಡನೆ ಮನೆಯನ್ನು ಗುಡಿಸಿ ಸಗಣಿ ನೀರು ಪ್ರೋಕ್ಷಿಸಬೇಕು.

ಸಾವು ಮಡಗುವುದು : ಸ್ಮಶಾನಕ್ಕೆ ಹೋಗಿ ಶವ ಸಮೇತ ಗುಂಡಿಗೆ ಅಥವಾ ಕಂಬೆಮುಳ್ಳಿಗೆ ಮೂರು ಅಪ್ರದಕ್ಷಿಣೆ ಬಂದು ಶವದ ತಲೆಯನ್ನು ಶುದ್ಧ ದಕ್ಷಿಣಕ್ಕೆ ಮಡಗಿ ಗುಂಡಿಯ ಅಥವಾ ಕಂಬೆಮುಳ್ಳಿಯ ಪಶ್ಚಿಮಕ್ಕೆ ಶವವನ್ನು ಮಡಗಬೇಕು.

ಗುಂಡಿ ತೆಗೆದದ್ದಾಗಲೀ ಕಂಬೆಮುಳ್ಳಿ ಒಟ್ಟಿದ್ದಾಗಲೀ ಉತ್ತರದಿಂದ ದಕ್ಷಿಣಕ್ಕೆ ಇರಬೇಕು.

ನೀರಿಗೆ ಇಳಿಯುವುದು: ಆ ಮೇಲೆ ಹೆಂಡತಿ (ಅಥವಾ ಗಂಡ) ಮಗ ಮತ್ತು ಇತರ ಸಮ್ಮಂಧಿಕರು ಪುನಹ ನೀರಿಗೆ ಇಳಿಯಬೇಕು.

ಕೊಡ: ನೀರಿಗೆ ಇಳಿದು ಆದ ಒಡನೆ ಅರುವನು ಹೆಂಡತಿಯ (ಅಥವಾ ಗಂಡನ) ತಲೆಯ ಮೇಲೆ ನೀರು ತುಂಬಿದ ಮಂಗೊಡವನ್ನೂ ಮಗನ ಅಥವಾ ಮಗಳ ತಲೆಯ ಮೇಲೆ ತೆಂಗೆ ಕೊಡವನ್ನೂ ಸೋದರಳಿಯನ ಅಥವಾ ಸೋದರ ಸೊಸೆಯ ತಲೆಯ ಮೇಲೆ ಕ್ಂಡಿ ಕೊಡವನ್ನೂ ಮಡಗಿ ಅವರ ಹಣೆಗೆ ಸ್ವಲ್ಪ ಮಂಜಲಕ್ಕಿಯನ್ನು ಹತ್ತಿಸಿ, ಅವರ ಕೈ ಬೆರಳುಗಳೊಂದಕ್ಕೆ ಗರಿಕೆ ಹುಲ್ಲಿನ ಉಂಗುರವನ್ನು ಮಾಡಿ ಹಾಕಬೇಕು.

ಮಂಗೊಡದ ಒಳಗೂ ಕ್ಂಡಿ ಕೊಡದ ಒಳಗೂ ಅರುವನು ಒಂದೊಂದು ಮಾವಿನ ಎಲೆಯನ್ನು ಹಾಕಬೇಕು ತೆಂಗೆ ಕೊಡವನ್ನು ಹಿಡಿದವನ ಕೈಗೆ ಒಂದು ಮಾವಿನ ಎಲೆಯನ್ನು ಕೊಡಬೇಕು. ಮಂಗೊಡಕ್ಕೂ ತೆಂಗಿನ ಕೊಡಕ್ಕೋ ರಂಧ್ರ ಮಾಡಬೇಕು.

ಗಂಡನಾಗಲೀ (ಅಥವಾ ಹೆಂಡತಿಯಾಗಲೀ) ಮಗನಾಗಲೀ, ಮಗಳಾಗಲೀ, ಅಳಿಯನಾಗಲೀ, ಸೊಸೆಯಾಗಲೀ ಇಲ್ಲದಿದ್ದರೆ ಇತರ ಹತ್ತಿರದ ನೆಂಟರು ಈ ಆಚಾರಗಳನ್ನು ನಡೆಸಬಹುದು.

ಮದುವೆಯಾಗಲು ವಯಸ್ಸಾಗಿದ್ದು ಮದುವೆಯಾಗದೆ ಇದ್ದರೆ ಮಂಗೊಡವೊಂದೇ ಸಾಕು.

ಮೇಮಾಡಿ : ಆನಂತರ ಮೂವರ ತಲೆಗಳ ಮೇಲೆ ಸುಮಾರು ಹತ್ತು ಮೊಳ ಉದ್ದವಿರುವ ಹಚ್ಚಡವನ್ನು ಹೆಂಡತಿಯ (ಅಥವಾ ಗಂಡನ) ಹಿಂದೆಯೂ ಅಳಿಯನ ಮುಂದೆಯೂ ಹಿಡಿದು ನಿಂತು ಹಿಡಿದುಕೊಳ್ಳಬೇಕು. ಇದಕ್ಕೆ ಮೇಮಾಡಿ ಎಂದು ಅನ್ನುವರು. ಈ ಮೇಮಾಡಿಯೂ ಕೊಡಗಳ ಮೇಲೆ ಬೀಳದಂತೆ ಅರುವನು ಕೋಲಿನಿಂದ ಮಧ್ಯದಲ್ಲಿ ಚುಚ್ಚಿ ಮೇಲಕ್ಕೆ ಹಿಡಿದುಕೊಳ್ಳುವನು.

ಕೊಡ ಹೊತ್ತವರು ಕೊಡದಲ್ಲಿರುವ ನೀರನ್ನು ಮಾವಿನ ಎಲೆಯಿಂದ ಚೆಲ್ಲುತ್ತಾ ಬರಬೇಕು. ಅರುವನ ಹೆಣ್ಣು ಸಮೆಯ ಚೆಲ್ಲುತ್ತಾ ಬರಬೇಕು. ಇತರರು ದಾರಿ ಉದ್ದಕ್ಕೂ ಕಾಕಿ ಮೊರಡುತ್ತಾ ಬರಬೇಕು.

ಸ್ಮಶಾನಕ್ಕೆ ತಲುಪಿದ ಮೇಲೆ ಕೊಡ ತೆಗೆದುಕೊಂಡವರು ಮೇಮಾಡಿ ಸಮೇತ ಶವಕ್ಕೆ ಮತ್ತು ಗುಂಡಿಗೆ ಅಥವಾ ಕಂಬೆ ಮುಳ್ಳಿಗೆ ಮೂರು ದಪ ಅಪ್ರದಕ್ಷಿಣೆ ಬಂದು ಹೆಂಡತಿ (ಅಥವಾ ಗಂಡ) ತಲೆಯ ಬಳಿ ಎಡಭಾಗದಲ್ಲಿ, ಮಗನು ಅಥವಾ ಮಗಳು ಶವದ ಕಾಲಿನ ಬಳಿಯಲ್ಲಿ, ಅಳಿಯನು ಅಥವಾ ಸೊಸೆಯು ಶವದ ಬಲಭಾಗದಲ್ಲಿ ನಿಲ್ಲಬೇಕು. ಎಲ್ಲರೂ ನಿಂತ ಒಡನೆ ಮೇಮಾಡಿಯನ್ನು ತೆಗೆದುಬಿಡಬೇಕು.

ಕೊಡಗಳಿಂದ ಸ್ವಲ್ಪ ಸ್ವಲ್ಪ ನೀರನ್ನು ಶವದ ಬಾಯಿಗೆ ನೀರು ಕೊಡುವ ಗಂಗಳಕ್ಕೆ ಹುಯ್ಯಬೇಕು.

ಕೊಡ ಕುಕ್ಕುವ : ಆಮೇಲೆ ಕೊಡ ತೆಗೆದಿದ್ದವರು ಸಾವಿಗೆ ಕೈಕೊಟ್ಟು ಮಂಜಲಕ್ಕಿ ಚೆಲ್ಲುತ್ತಾ ಶವಕ್ಕೆ ಮತ್ತು ಗಂಡಿಗೆ ಅಥವಾ ಕಂಬೆ ಮುಳ್ಳಿಗೆ ಮೂರು ದಪ ಅಪ್ರದಕ್ಷಿಣೆ ಬಂದು ಮೂರು ಕೊಡದವರೂ ತಮ್ಮ ತಮ್ಮ ಸ್ಥಳಗಳಿಗೆ ಒಂದೊಂದು ಮೊಣಕಾಲನ್ನೂರಿ ಹೆಂಡತಿ (ಅಥವಾ ಗಂಡನು) ತನ್ನ ಮಂಗೊಡವನ್ನು ಶವವನ್ನು ಕೂಡಿಸಿದ ಮಂಚಕ್ಕೆ ಅಥವಾ ಕುರ್ಚಿಗೆ ಎರಡು ದಪ ತೋರಿಸಿ ಮೂರನೇ ದಪಕ್ಕೆ ತಗಲಿಸಿ ಕೊಡವನ್ನು ಚೂರು ಚೂರು ಮಾಡಿ ಮಂಚದ ಅಥವಾ ಕುರ್ಚಿಯ ಕೆಳಗೆ ಹಾಕಬೇಕು. ಅದೇ ರೀತಿ ಮಗನು ಅಥವಾ ಮಗಳು ತೆಂಗಿನಕಾಯಿಯನ್ನು ಮೂರು ದಪ ತೋರಿಸಿ ಒಂದು ಕತ್ತಿಯಿಂದ ತೆಂಗಿನ ಕಾಯಿಯನ್ನು ಒಡೆದು ಮಂಚದ ಕೆಳಗೆ

ಹಾಕಬೇಕು. ಅಳಿಯನು ಅಥವಾ ಸೊಸೆಯು ಸಹ ಅದೇ ರೀತಿ ಮಾಡಿ ಗಿಂಡಿಯನ್ನು ಮಗುಚಿ ಮಂಚದ ಕೆಳಗೆ ಹಾಕಬೇಕು.

ಕೊಡಕುಕ್ಕುವಾಗ ಪ್ರತಿಯೊಬ್ಬರೂ "ಕೆಟ್ಟಿರೊ..." ಎಂದು ಮೂರು ಮೂರು ದಪ ಹೇಳಬೇಕು.

ನೀರು ಕೊಡುವುದು : ಆಮೇಲೆ ಎಲ್ಲರೂ ಸಾವಿಗೆ ನೀರು ಕೊಡಬೇಕು. ಇಲ್ಲಿಯೂ ನೆಂಟರಿಷ್ಟರು ಗಂಗಳಕ್ಕೆ ಹಣವನ್ನು ಹಾಕುವರು. ನೆಂಟರು ಹಣ ಹಾಕಬೇಕೆಂತಲೂ ಒಂದು ಕುಟುಂಬದಲ್ಲಿ ಒಬ್ಬನೇ ಹಣ ಹಾಕುವುದೆಂದು ಕೆಲವು ಜನರು ತಿಳಿದುಕೊಂಡಿದ್ದಾರೆ. ಅದು ತಪ್ಪು. ಬಾಯಿಗೆ ನೀರು ಕೊಡುವವರೆಲ್ಲರೂ ಹಣವನ್ನು ಹಾಕಬಹುದು.

ಬಳೆ ಒಡೆಯುವುದು : ಅನಂತರ ಅರುವನು ಹೆಂಡತಿ ಕೈಯ್ಯಲ್ಲಿರುವ ಕುಪ್ಪಿ ಬಳೆಗಳನ್ನು ಒಡೆದು ಕರಿಮಣಿ ಸಹ ಬಿಚ್ಚಿ ಒಂದು ಸಣ್ಣ ಚೀಲದಲ್ಲಿ ಹಾಕಿ ಗಂಡನ ಕುಪ್ಪಸದ ಮಡಲಲ್ಲಿ ಹಾಕಬೇಕು. ಕರಿಮಣಿಯ ಒಂದು ಸರ ಮಾತ್ರ ಹಾಕಿದರೆ ಸಾಕು. ಅಂದಿನಿಂದ ವಿಧವೆಯರು ಕುಪ್ಪಿ ಬಳೆಗಳನ್ನು ಧರಿಸಬಾರದು.

ಹೆಂಡತಿ ಸತ್ತರೆ ಗಂಡನು ಒಂದು ಚೀಲದಲ್ಲಿ ಒಂದು ಬೆಳ್ಳಿಯ ಹಣವನ್ನು ಹಾಕಿ ಹೆಂಡತಿಯ ಮೊಲೆಕಟ್ಟಿಗೆ ಕಟ್ಟಬೇಕು.

ಪದೀಚ ಕಡತುವ : ಆಮೇಲೆ ಸಾವಿಗೆ ಹಾಕಿದ್ದ ಅಲಂಕಾರಗಳನ್ನು ಬಿಚ್ಚಿ ಶವದ ಹಣೆಯಲ್ಲಿದ್ದ ಚಿನ್ನದ ನಾಣ್ಯದ ಬದಲಿಗೆ ಬೆಳ್ಳಿಯ ಪಾವಲಿಯನ್ನು ಹತ್ತಿಸಬೇಕು. ಆಭರಣಗಳೆಲ್ಲವನ್ನು ಒಂದು ಗಂಟು ಮಾಡಿ ಆ ಗಂಟನ್ನು ಮಂಚದ ಕೆಳಗೂ ಮೇಲಕ್ಕೂ ಮೂರು ಸುತ್ತು ಸುತ್ತಬೇಕು.

ಗುಂಡಿಗೆ ಹಾಕುವುದಾಗಲೀ ಸುಡುವುದಾಗಲೀ ಮಾಡುವಾಗ ಶವದ ಕಾಲನ್ನು ಶುದ್ಧ ಉತ್ತರಕ್ಕೂ ತಲೆಯನ್ನು ದಕ್ಷಿಣಕ್ಕೂ ಇಡಬೇಕು. ಅದಕ್ಕನುಸಾರವಾಗಿಯೇ ಗುಂಡಿ ತೆಗೆಯುವುದು ಅಥವಾ ಕಂಬೆಮುಳ್ಳಿ ಒಟ್ಟುವುದೂ ಮಾಡಬೇಕು.

ಶವವನ್ನು ಸುಡುವುದಾದರೆ ಬಟ್ಟೆಗಳನ್ನು ಬಿಚ್ಚಿ ಶವವನ್ನು ಕಾಣದಂತೆ ಒಂದು ಬಿಳಿ ಬಟ್ಟೆಯನ್ನು ತಲೆಯಿಂದ ಕಾಲಿನ ಉದ್ದಕ್ಕೂ ಹಾಕಿ "ಮೂಡ್‌ಲ್‌ಟ್ಟಿತ್" ಬಾಯಿಯ ಹತ್ತಿರ ಸ್ವಲ್ಪ ಹರಿದು ಹೆಂಡತಿ ಮತ್ತು ಇಬ್ಬರು ಹೆಂಗಸರು ಅಥವಾ ಇತರ ಯಾರಾದರೂ ಮೂರು ಹೆಂಗಸರು ಶವಕ್ಕೆ ಹೊದೆಸಿದ ಬಟ್ಟೆಯ ಮೇಲೆ ತೆರಂಗೈಗಳಿಂದ ಅರಶಿನ ಮಿಶ್ರ ಮಾಡಿದ ಎಣ್ಣೆಯನ್ನು ಸವರಬೇಕು. ಆಮೇಲೆ ಶವವನ್ನು ಕಂಬೆ ಮುಳ್ಳಿಯ ಮೇಲೆ ಮಡಗಬೇಕು. ಆ ಮೇಲೆ ಹೆಂಡತಿಯು (ಅಥವಾ ಗಂಡನು) ಅಥವಾ ಹತ್ತಿರದ ಸಮ್ಮಂಧಿಕರು ಒಂದು ಉರಿಯುವ ಸೌದೆ ಕೊಳ್ಳಿಯನ್ನು "ತೆರಂಗೊಳ್ಳಿ"ಯಾಗಿ ಕಂಬೆ ಮುಳ್ಳಿಯ ಕೆಳಗೆ ಇಡಬೇಕು.

ಗುಂಡಿಗೆ ಹಾಕುವುದಾದರೂ "ಮೂಡ್‌ಲ್‌ಟ್ಟಿತ್" ಬಾಯಿಯ ಹತ್ತಿರ ಸ್ವಲ್ಪ ಹರಿದು, ಹಾಕಿರುವ ಕುಪ್ಪಸದ ಮೇಲೆ ತೆರಂಗೈಯಿಂದ ಎಣ್ಣೆ ಅರಶಿನ ಸವರಬೇಕು. ತದನಂತರ ಗುಂಡಿಯೊಳಗೆ ಇಟ್ಟು ಹೊಟ್ಟೆಯ ಮೇಲೆ ಉಪ್ಪು ಮತ್ತು ಹುಡಿ ಮಾಡಿದ ವಿಭೂತಿಯನ್ನು ಹಾಕಬೇಕು. ಮೊದಲು ಹೆಂಡತಿ (ಅಥವ ಗಂಡನು) ತೆರಂಗೈಯಿಂದ ಮೂರು ಹಿಡಿ ಮಣ್ಣು ಹಾಕಬೇಕು.

ಆಮೇಲೆ ಸಮೀಪದ ಸಮ್ಮಂಧಿಕರು ಅಲ್ಲಿಂದ ಹೊರಟು ಹೋಗುವರು.

ಸತ್ತವನ ಹೆಂಡತಿ ಪೂರ್ಣ ಗರ್ಭಿಣಿ ಅಂದರೆ ಏಳು ತಿಂಗಳ ಮೇಲೆ ಗರ್ಭಿಣಿಯಾಗಿದ್ದರೆ, ಹೆತ್ತಿದ್ದರೆ ಅಥವಾ ಕಾಯಿಲಸ್ಥಳಾಗಿದ್ದರೆ ಸ್ಮಶಾನಕ್ಕೆ ಹೋಗಿ ಈ ಕ್ರಿಯೆಗಳನ್ನು ನಡೆಸಬೇಕಿಲ್ಲ.

ಆದರೆ ಸಾವು ಹೊರಗೆ ತಂದು ನೀರು ಕೊಡುವಾಗ ಅವಳಿಂದ ನೀರು ಕೊಡಿಸಿ ಅವಳ ಬಳೆಗಳನ್ನು ಅಲ್ಲಿಯೇ ಒಡೆದು, ಓಲೆ, ಕರಿಮಣಿಯನ್ನು ಸಹ ಬಿಚ್ಚಿ ಕುಪ್ಪಸದ ಮಡಲಲ್ಲಿ ಹಾಕಬೇಕು.

ಗಂಡನು ಕಾಯಿಲಸ್ಥನಾದರೆ ಅವನು ತನ್ನ ಸತ್ತ ಹೆಂಡತಿಗೆ ನೀರು ಕೊಟ್ಟು ಒಂದು ಬೆಳ್ಳಿಯ ಹಣವನ್ನು ಒಂದು ಚೀಲದಲ್ಲಿ ಹಾಕಿ ಮೊಲೆ ಕಟ್ಟಿಗೆ ಕಟ್ಟಿ ಮನೆಯಲ್ಲಿಯೇ ಇರಬಹುದು.

ಸತ್ತವಳು ಪೂರ್ಣ ಗರ್ಭಿಣಿ ಅಂದರೆ 7 ತಿಂಗಳ ಗರ್ಭಿಣಿಯಾಗಿದ್ದರೆ ಶವವನ್ನು ಗುಂಡಿಯೊಳಗೆ ಮಡಗಿದ ಮೇಲೆ ಅವಳ ಹೊಟ್ಟೆಯಲ್ಲಿರುವ ಮಗುವನ್ನು ತೆಗೆದು ಅವಳ ಬದಿಯಲ್ಲೇ ಮಡಗಿ ಹೂಣಬೇಕು.

ಸಾವಿಗೆ ತಂದಿದ್ದ ಮುರಿಯನ್ನೂ ಮತ್ತು ಮನೆಯಿಂದ ತಂದಿರುವ ಹಚ್ಚಡವನ್ನೂ ಅಳತೆ ಮಾಡದೆ ಸುಮಾರು 3 1/2 ಮೊಳದಷ್ಟು ಹರಿದು ಮೂಲೆಗೆ ಒಂದು ಗಂಟುಹಾಕಿ ಹೊಲೆಯರಿಗೆ, ಮೇದರಿಗೆ ಮತ್ತು ಭಿಕ್ಷುಕರಿಗೆ ಕೊಡಬೇಕು. ಹಟ್ಟಿಯಲ್ಲಿ ಹಣವನ್ನು ಚೆಲ್ಲದಿದ್ದರೆ ಬರಿ ಗಂಟಿನ ಬದಲಿಗೆ ದುಡ್ಡು ಕಟ್ಟಿ ಕೊಡುವರು.

ಶವವನ್ನು ಸುಡುವುದಾದರೆ ಅದಕ್ಕೆ ಧರಿಸಿದ್ದ ಕುಪ್ಪಸವನ್ನು ಅಥವಾ ಸೀರೆಯನ್ನು ಮೇದ ಮೇದಿಯರಿಗೆ ಕೊಡಬೇಕು. ಅವರಿಲ್ಲದ ಪಕ್ಷದಲ್ಲಿ ಹೊಲೆಯರಿಗೆ ಕೊಡಬೇಕು. ತೇಕ್ ಮರದಿಂದ ಮಂಚ ಮಾಡಿದ್ದರೆ ಆ ಮಂಚವನ್ನು ಸುಟ್ಟು ಬಿಡಬೇಕು.

ಸುಡುವುದಾದರೆ ಮನೆಯವರು ಒಬ್ಬಿಬ್ಬರು ಊರಿನ ಕುಳವಾರು ಒಬ್ಬನು ಅಲ್ಲಿಯೇ ಇದ್ದು ಶವವು ಬೆಂದ ಮೇಲೆ ಹೊರಡಬೇಕು.

ಗುಂಡಿಗೆ ಹಾಕುವುದಾದರೆ ಗುಂಡಿಯನ್ನು ಬಲವಾಗಿ ತುಂಬಿಸಿ ಗುಂಡಿಯ ಮೇಲೆ ಮುಳ್ಳು ಹೊಡಿಯಬೇಕು.

ಹೊರಡುವಾಗ ಸಮೆಯದ ಜೊತೆಯಲ್ಲಿ ತಂದಿದ್ದ ಬುತ್ತಿಯನ್ನು ಅರುವನು ಸಾವಿನ ತಲೆಯ ಕಡೆಗೆ ಇಟ್ಟು ಬಿಚ್ಚಿ ಒಂದು ಒಂಟಿ ಗುಂಡು ಹೊಡೆಯಬೇಕು ಮತ್ತು ದಾರಿ ಅಡ್ಡ ಲಾಗಿ ಒಂದು ಮುಳ್ಳು ಅಂಬು ಹಾಕಿ "ನೀನ್‌ಪೋಪ ಬಟ್ಟೆಲ್ ಇನ್ನನೆ ಕಲ್ಲುಮುಳ್ಳು ಇಟ್ಟಂಡ್ ಪೋವು" ಎಂದು ಹೇಳಿ ಹೊರಟು ಹೊಗಬೇಕು.

ಸ್ಮಶಾನಕ್ಕೆ ಹೋಗಿ ಹಿಂದಕ್ಕೆ ಬಂದವರಿಗೆಲ್ಲಾ "ತೆಳಿ ನೀರ್" ಪ್ರೋಕ್ಷಿಸಬೇಕು. ಇತರ ಮನೆಯವರು ಸಾವು ಮನೆಗೆ ಹೋಗಿದ್ದು ತಮ್ಮ ಮನೆಗೆ ಹಿಂತಿರುಗಿ ಹೋದರೆ ತಮ್ಮ ಮೈಮೇಲೆ ಇರುವ ಬಟ್ಟೆಗಳನ್ನು ಬಿಚ್ಚಿ ಮನೆಯ ಹೊರಗೆ ಹಾಕಿ ಸ್ನಾನವನ್ನು ಮಾಡಿ ತಮ್ಮ ಮನೆಯೊಳಗೆ ಸೇರಬೇಕು. ಸ್ನಾನ ಮಾಡಿ ಆಗುವವರೆಗೆ ಸಾವಿಗೆ ಹೋಗದವರನ್ನು ಮುಟ್ಟಕೂಡದು. ಅಪಾಯದಿಂದ ಮುಟ್ಟಿದರೆ ಅವರೂ ಸಹ ಮೀಯಬೇಕು. ಬಟ್ಟೆಗಳನ್ನು ಮಾರನೇ ದಿವಸ ಮುಟ್ಟಬಹುದು.

ಚಾತ ಪುಕ್ಕುವ : ಮನೆಗೆ ಬಂದ ಮೇಲೆ ಅರುವನು ಒಂದು ಬಾಳೆ ಗೊನೆಯನ್ನು ಕಡಿದುಕೊಂಡು ಬಂದು ಅದರ ಸಿಪ್ಪೆ ತೆಗೆದು ಉರುಟು ಉರುಟಾಗಿ ಕುಯಿದು ಅರುವನ ಹೆಣ್ಣಿಗೆ ಕೊಡುವನು. ಅವಳು ಅದನ್ನು ಬೇಯಿಸುವಳು (ಪುಕ್ಕುವ). ಇದಕ್ಕೆ "ಚಾತ ಪುಕ್ಕುವ" ಎಂದು ಹೆಸರು.

ಅದನ್ನು ಸತ್ತವನ ಹೆಂಡತಿಗೆ ಅಥವಾ ಸತ್ತವಳ ಗಂಡನಿಗೆ ತಿನ್ನುವುದಕ್ಕೆ ಕೊಡಬೇಕು. ಸತ್ತವನಿಗೆ ಹೆಂಡತಿಯಾಗಲೀ ಸತ್ತವಳಿಗೆ ಗಂಡನಾಗಲೀ ಇಲ್ಲದಿದ್ದರೆ ಇತರ ಸಮ್ಮಂಧಿಕರು ತಿನ್ನಬೇಕು.

ಈ ದಿವಸ ಬಾಳೆಗೊನೆಯನ್ನು ಮಧ್ಯಾಹ್ನದ ಮೇಲೆ ಕಡಿಯಬಹುದು.

ಸತ್ತ ಸಮಯದಿಂದ ಸಾವನ್ನು ಮನೆಯಿಂದ ತೆಗಿಯುವವರೆಗೂ ಸಾವು ಮನೆಯಲ್ಲಿ ಅಡುಗೆ ಮಾಡಕೂಡದಾದ್ದರಿಂದ ಬೇಕಾದ ಅನ್ನ ಮುಂತಾದನ್ನು ಊರವರು ಕಳುಹಿಸಬೇಕು.

ಕರಿ ಮಡಕುವ : ಸುಟ್ಟದ್ದಾದರೆ ಮಾರನೆ ದಿವಸ ಹೊತ್ತಾರೆ ಅರುವನು ಸಾವು ಮನೆಯವರು ಮತ್ತು ಸಮ್ಮಂಧಿಕರು ಸಹ ಸ್ಮಶಾನಕ್ಕೆ ಹೋಗಿ ಬೆಂಕಿಯನ್ನು ಆರಿಸಿ ಮಸಿಯನ್ನು ಮತ್ತು ಎಲುಬುಗಳನ್ನು ತೆಗೆದುಕೊಂಡು ಹೋಗಿ ಹೊಳೆಗೆ ಹಾಕಬೇಕು. ನಿರ್ವಾಹವಿಲ್ಲದ ಸಂಗತಿಗಳಲ್ಲಿ ಕೆಲವನ್ನಾದರೂ ಹೊಳೆಗೆ ಹಾಕಿ ಬಾಕಿ ಇರುವುದನ್ನು ಹತ್ತಿರ ಹಾಲು ಬರುವ ಒಂದು ಮರದ ಬುಡಕ್ಕೆ ಹಾಕಬೇಕು. ಹಾಗೂ ಸುಟ್ಟ ಸ್ಥಳದಲ್ಲಿ ಒಂದಿಷ್ಟೂ ಬಿಡಕೂಡದು. ಆ ಸ್ಥಳದಲ್ಲಿ ನೀರು ಹುಯಿದು ಭೂಮಿಯು ತ್ಯಾವ ಬರುವ ಹಾಗೆ ಮಾಡಬೇಕು. ಆ ಮೇಲೆ ಸ್ವಲ್ಪ ಹಾಲನ್ನು ಪ್ರೋಕ್ಷಿಸಿ ಅಲ್ಲಿ ಭತ್ತವನ್ನೂ ಸಾಸಿವೆಯನ್ನು ಬಿತ್ತಬೇಕು. ಅವುಗಳು ಹುಟ್ಟಿದರೆ ನೆಲವು ಶೀತಳವಾಯಿತೆಂದೂ ಸತ್ತವನ ಹೃದಯವು ತಂಪಾಯಿತೆಂದೂ ತಿಳಿದುಕೊಳ್ಳುವರು.

ಮಕ್ಕಳ ಚಾವು : ತಾಯಿಗೆ ಅರವತ್ತು ಆಗುವ ಮೊದಲು ಮಗುವು ಸತ್ತು ಹೋದರೆ ಒಡನೆ ಹೂಣಿ ಬಿಡಬೇಕು. ಹೇಳಬೇಕಿಲ್ಲ.

ಒಂದು ಚಿಪ್ಪಿನಲ್ಲಿ ತಾಯಿಯ ಮೊಲೆ ಹಾಲು ತೆಗೆದುಕೊಂಡು ಹೋಗಿ ಮಗುವನ್ನು ಹೂಣಿದ ಮೇಲೆ ಅದರ ತಲೆಯ ಕಡೆಗೆ ಮಡಗಬೇಕು.

ಮಗುವಿಗೆ ಅರವತ್ತು ದಿವಸವಾಗಿದ್ದರೆ ಅದನ್ನು ಮೀಯಿಸಿ ಅದರ ಹಣೆಗೆ ವಿಭೂತಿ ಹಾಕಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕು. ಹೋಗುವಾಗ ಹಾಲು ಅಥವಾ ಮಜ್ಜಿಗೆ ಹುಯಿದು ಬುತ್ತಿ ಕಟ್ಟಿ ತೆಗೆದುಕೊಂಡು ಹೋಗಬೇಕು. ತಾಯಿ ಇದ್ದರೆ ತಾಯಿಯ ಮೊಲೆ ಹಾಲನ್ನು ಕುಡಿಯುವಂತಹ ಮಗುವಾಗಿದ್ದರೆ ಮೊಲೆ ಹಾಲನ್ನು ಕರೆದುಕೊಂಡು ಹೋಗಿ ಗುಂಡಿಗೆ ಮಗುವನ್ನು ಹಾಕಿದ ಮೇಲೆ ಅದರ ತಲೆಯ ಕಡೆಯಲ್ಲಿ ಬುತ್ತಿಯನ್ನು ಬಿಚ್ಚಿ ಮಡಗಿ ಹಾಲನ್ನು ಒಂದು ಚಿಪ್ಪಿನಲ್ಲಿ ಹುಯಿದು ಇಟ್ಟು ಬರಬೇಕು.

ಮಗುವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದ ಒಡನೆ ತಾಯಿಯು ಸ್ನಾನ ಮಾಡಿ ತಾನಿಟ್ಟಿರುವ ಬಟ್ಟೆಗಳನ್ನು ಬಿಚ್ಚಿ ಮಡಿ ಬಟ್ಟೆಗಳನ್ನು ಧರಿಸಿಕೊಳ್ಳಬೇಕು.

ಮಗುವು ಪದಾರ್ಥ ತಿನ್ನುವಷ್ಟು ದೊಡ್ಡದಾಗಿದ್ದರೆ ದೊಡ್ಡವರು ಸತ್ತರೆ ತರುವಂಥ ಬುತ್ತಿಯನ್ನೇ ಸ್ಮಶಾನಕ್ಕೆ ತರಬೇಕು.

ಮಕ್ಕಳು ಸತ್ತರೆ ಮನಿಯ ಹೇಳುವುದಿಲ್ಲ. ಸುಡುವುದಿಲ್ಲ. ಏನೊಂದೂ ಆಡಂಬರವಿಲ್ಲದೆ ಹೂಣಬೇಕು. ಹೆಂಗಸರು ಮಕ್ಕಳ ಸಾವಿನ ಜೊತೆಯಲ್ಲಿ ಹೋಗಬಾರದು. ಮಕ್ಕಳಿಗೆ ಬೇರೆ ಸ್ಮಶಾನವಿರಬೇಕು.

ಸಾವು ಪೊಲೆ ತೆಗಿಯದಷ್ಟು ಸಣ್ಣ ಮಕ್ಕಳ ಸಾವಿಗೆ ಕೈ ಕೊಡಬಾರದು.

ಚಾವು ಪೊಲೆ : ತನ್ನ ಮನೆಯಲ್ಲಿ ಸಾಯದೆ ಕೊಪ್ಪ ಕೊಳಮಾಟುಗಳಲ್ಲಾಗಲೀ ಬೇರೆ ಮನೆಯಲ್ಲಾಗಲೀ ಸತ್ತರೆ ಶವವನ್ನು, ತಿಥಿಕರ್ಮಾಂತರಗಳನ್ನು ಮಾಡಬೇಕಾದ ಮನೆಗೆ ತರಲಿಕ್ಕೆ ಸಾಧ್ಯವಿಲ್ಲದೆ ಹೋದರೆ, ಸತ್ತ ಸ್ಥಳದಲ್ಲಿ ಶವವನ್ನು ಏನೊಂದೂ ಆಡಂಬರವಿಲ್ಲದೆ ಸುಡುವುದಾಗಲೀ ಗುಂಡಿಗೆ ಹಾಕುವುದಾಗಲೀ ಮಾಡಬೇಕು.

ಗುಂಡಿಗೆ ಹಾಕಿದರೆ ಕೈಕಾಲುಗಳ ಉಗುರುಗಳೂ ಸ್ವಲ್ಪ ಕೂದಲೂ ಮತ್ತು ಗುಂಡಿಯಿಂದ

ಸ್ವಲ್ಪ ಮಣ್ಣೂ, ಸುಟ್ಟರೆ ಸ್ವಲ್ಪ ಬೂದಿ, ಒಂದೆರಡು ಎಲುಬು ಚೂರುಗಳೂ ತಿಥಿಲರ್ಮಾಂತರಗಳನ್ನು ಮಾಡಬೇಕಾದಲ್ಲಿಗೆ ತೆಗೆದುಕೊಂಡು ಹೋಗಬೇಕು. ಇದಕ್ಕೆ "ಚಾವು ಪೊಲ್" ಎಂದು ಹೇಳುವರು.

ಚಾವು ಪೊಲೆಯನ್ನು ಮನೆಯ ಒಳಗೆ ಸೇರಿಸಕೂಡದು. ಒಂದೇ ದಿವಸದಲ್ಲಿ ಚಾವು ಪೊಲೆಯನ್ನು ತೆಗೆದುಕೊಂಡು ಹೋಗಲು ಕೂಡದಿದ್ದರೆ ಚಾವು ಪೊಲೆಯನ್ನು ತಾವು ಉಳಿದ ಮನೆಯ ಹತ್ತಿರ ತೂಗುಹಾಕಬೇಕು. ಚಾವು ಪೊಲೆಯನ್ನು ತೆಗೆದುಕೊಂಡು ಹೋಗುವವರು ಇತರ ಮನೆಗಳಲ್ಲಿ ಉಳಿದರೆ ತಾವು ಉಳಿದ ಮನೆಯ ಕಯ್ಯಾಲೆಯಲ್ಲಿ ಮಲಗಿಕೊಳ್ಳಬೇಕು. ಒಳಗೆ ಸೇರಕೂಡದು.

ಚಾವು ಪೊಲೆಯನ್ನು ನೆಟ್ಟಗೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕು. ಸ್ಮಶಾನಕ್ಕೆ ಸಾವು ಬಂದ ಮೇಲೆ ಮಾಡಬೇಕಾದ ಆಚಾರಗಳನ್ನು ಮಾಡುತ್ತಾ ಚಾವು ಪೊಲೆಯನ್ನು ಹೂಣಬೇಕು.

ತಿಥಿಕರ್ಮಾಂತರಗಳನ್ನು ಮಾಡುವ ಮನೆಯಲ್ಲಿಯೇ ಅಂಟುರೋಗದಲ್ಲಿ ಸತ್ತರೆ ಸತ್ತವನನ್ನು ಆಡಂಬರವಿಲ್ಲದೆ ಮಕ್ಕಳನ್ನು ಹೂಣುವ ರೀತಿಯಲ್ಲಿ ಹೂಣಬೇಕು. ಕುಟುಂಬದ ಸ್ಮಶಾನದಲ್ಲಿ ಹೂಣಕೂಡದು.

ಅಂಟುರೋಗದಿಂದ ಇತರ ಸ್ಥಳಗಳಲ್ಲಿ ಸತ್ತರೆ ತಿಥಿಕರ್ಮಾಂತರಗಳನ್ನು ಮಾಡುವಲ್ಲಿಗೆ ಚಾವುಪೊಲೆ ತೆಗೆದುಕೊಂಡು ಹೋಗಕೂಡದು. 48 ದಿನದಲ್ಲಿ ಸತ್ತಷ್ಟು ಜನರ ಹುಲ್ಲಿನ ರೂಪಗಳನ್ನು ಮಾಡಿ ಸ್ಮಶಾನಕ್ಕೆ ಸಾವು ತಂದ ಮೇಲೆ ಮಾಡಬೇಕಾದ ಆಚಾರಗಳೆಲ್ಲವನ್ನೂ ಸ್ಮಶಾನದಲ್ಲೆಯೇ ಮಾಡಿ ಹುಲ್ಲಿನ ರೂಪವನ್ನು ಅಥವಾ ರೂಪಗಳನ್ನು ಸುಟ್ಟು ಹಾಕಬೇಕು.

ಅಂಟುರೋಗದಲ್ಲಿ ಸತ್ತರೆ "ಮಾರಿನೀಕುವ"ದುಂಟು.

ಬೇರೆ ಸ್ಥಳಗಳಲ್ಲಿ ಸತ್ತು ಅವರ ಜಾಗದಲ್ಲಿಯೇ ಶವವನ್ನು ಗುಂಡಿಗೆ ಹಾಕಿದ್ದರೆ ಅಥವಾ ಸುಟ್ಟಿದ್ದರೆ, ಅಲ್ಲಿಂದ ಚಾವುಪೊಲೆ ತೆಗೆದುಕೊಂಡು ಹೋಗುವ ಮೊದಲು ಶವಕ್ಕೆ ಮಣ್ಣುಕೊಟ್ಟ ಮನೆಯವರಿಗೆ ಮೂರು ಹಣ ಕೊಡಬೇಕು. ಅಂಟುರೋಗದಿಂದ ಸತ್ತ ಕಾರಣ ಚಾವುಪೊಲೆ ತೆಗೆದುಕೊಂಡು ಹೋಗದಿದ್ದರೂ ಮೂರು ಹಣ ಕೊಟ್ಟೇ ತೀರಬೇಕು. ಸತ್ತವಳ ತವರು ಮನೆಯವಳಾದರೂ ಸಹ ಈ ಹಣ ಕೊಡಬೇಕು.

ತಿಥಿಕರ್ಮಾಂತರಗಳನ್ನು ಮಾಡುವಷ್ಟು ವಯಸ್ಸಾದವರು ಸತ್ತರೆ ಚಾವು ಪೊಲೆ ತೆಗೆಯಲೀ ತೆಗೆಯದೆ ಇರಲಿ ಸತ್ತ ಮನೆಯಲ್ಲಿ ಜೀವ ಹೋದ ಸ್ಥಳದಲ್ಲೆ ಮೂರು ದಿವಸ ಸಾಯಂಕಾಲ ಗುಡಿಸಿ, ಚಾಪೆ ಹಾಕಿ ಅದರ ಮೇಲೆ ಒಂದು ಮಣೆ ಮಡಗಿ, ದೀಪ ಮಡಗಿ ಹತ್ತಿರ ಒಂದು ಮಿಳ್ಳಿಯಲ್ಲಿ ನೀರು ಮಡಗಬೇಕು.

ಸೂತಕ: ಒಂದು ಮನೆಯವರನ್ನು, ತವರು ಮನೆಯವಳನ್ನು ಸಹ ಇನ್ನೊಂದು ಮನೆಯವರ ಸ್ಮಶಾನದಲ್ಲಿ ಹೂಣಕೂಡದು. ಹಾಗೆ ಹೂಣಬೇಕಾದರೆ ಅವಳನ್ನು ಬೇರೆ ಜಾಗದಲ್ಲಿ ಹೂಣಬೇಕು. ಚಾವುಪೊಲೆ ತೆಗೆದ ಮೇಲೆ ಆ ಕುಟುಂಬಕ್ಕೆ ಸೂತಕವಾಯಿತು. ಆ ಮೇಲೆ ಆ ಕುಟುಂಬದ "ಮಾದ" ಆಗುವವರೆಗೂ ಏನೊಂದೂ ಶುಭಕಾರ್ಯಗಳನ್ನು ಮಾಡಕೂಡದು.

ಚಾವು ಪೊಲೆ ತೆಗೆದಕೂಡಲೇ ಆ ಮನೆಯಲ್ಲಿ ಪುನಃ ಸತ್ತರೆ ಎರಡನೆ ಸಾವಿಗಿರುವ ಸೂತಕವು ಮತ್ತು ಉತ್ತರ ಕ್ರಿಯೆಗಳನ್ನು ಎಣಿಕೆ ಮಾಡಿ ನಡೆಸಬೇಕು.

ಮಕ್ಕಳು ಸತ್ತರೂ ದೊಡ್ಡವರು ಸತ್ತು ಯಾವ ಕಾರಣದಿಂದಲಾದರೂ ಚಾವು ಪೊಲೆ

ತೆಗೆಯದಿದ್ದರೂ ಮದುವೆ ಮುಂತಾದದ್ದು ಮಾಡಬಹುದಾದರೂ ಆ ಕುಟುಂಬದವರು ದೇವಸ್ಥಾನದ ಹಬ್ಬಿಗೆ ಹೋಗಕೂಡದು. ಹುತ್ತರಿ, ಕೈಲ್ ಪೊಳ್ದುಗಳಲ್ಲಿ ಮಂದಿಗೆ ಹೋಗಬಹುದು. ಆದರೆ ಕುಣಿಯಕೂಡದು. ಮಂದುಗಳಲ್ಲಿ ಗುಂಡು ಹೊಡೆಯಕೂಡದು.

ಇತರ ಕಡೆಯಲ್ಲಿ ಸತ್ತರೆ ಆ ಸ್ಥಳದಿಂದ ಚಾವುಪೊಲೆ ತೆಗೆದುಕೊಂಡು ಹೋಗುವವರೆಗೂ ಆ ಮನೆಗೆ ಸೂತಕವಿದೆ. ಅಂಟುರೋಗದಲ್ಲಿ ಸತ್ತು ಚಾವುಪೊಲೆ ತೆಗೆದುಕೊಂಡು ಹೋಗುವುದಿಲ್ಲವಾದರೂ ಸತ್ತ ಮನೆಯಲ್ಲಿ "ನೀಕ" ಮಾಡುವವರೆಗೆ ಸೂತಕವಿರುತ್ತದೆ. ಆದರೆ ಆ ಸೂತಕವು ಬೇರೆ ಮನೆಗಳಲ್ಲಿ ವಾಸಿಸುವ ಇವರ ಕುಟುಂಬಸ್ಥರಿಗೆ ವ್ಯಾಪಿಸುವುದಿಲ್ಲ.

ಸತ್ತ ಒಡನೆ ಮನೆಗೆ ಪೊಲೆ ಸುರುವಾಯಿತಾದರೂ, ಆಚಾರಗಳನ್ನು ನಡೆಸುವುದಕ್ಕೆ ಚಾವು ಪೊಲೆ ತೆಗೆದಂದಿನಿಂದಲೇ ಎಣಿಕೆ ಮಾಡಬೇಕು.

ಮೇಂಗತೆ: ಸತ್ತವರ ಕುಟುಂಬದಲ್ಲಿ ಸತ್ತವನಿಗಿಂತ ಅಥವಾ ಸತ್ತವಳಿಗಿಂತ ಕಿರಿಯವರೆಲ್ಲರೂ ಮತ್ತು ಸಮ್ಮಂಧಿಕರಾದ ನೆಂಟರೂ ಮೇಂಗತೆ ಇರಲೇಬೇಕು.

ಗಂಡಸರು ತಲೆ (ಜಿಟ್ಟು ಬಿಟ್ಟು) ಗಡ್ಡ, ಮೀಸೆಯೆಲ್ಲ ಬೋಳಿಸಿ ಆಭರಣಗಳನ್ನು ತೆಗೆದುಬಿಡಬೇಕು. ಅವರು ಮೇಂಗುವವರೆಗೂ ಆಭರಣ ಧರಿಸಕೂಡದು. ಕೆಂಪು ದಟ್ಟಿ ಮತ್ತು ಕೆಂಪು ವಸ್ತ್ರಗಳನ್ನು ಕಟ್ಟಿಕೊಳ್ಳಕೂಡದು. ಕ್ಷೌರ ಮಾಡಕೂಡದು. ಕರಿ ದಟ್ಟಿ ಕಟ್ಟಿದರೆ ಕಂಬಿ ಇರಕೂಡದು.

ಹೆಂಗಸರೂ ಆಭರಣಗಳೆಲ್ಲವನ್ನೂ ತೆಗೆದುಬಿಡಬೇಕು. ಬೆಳ್ಳಿಯ ಕಡಗ, ಕುಪ್ಪಿ ಬಳೆ, ಮೂಗುಬಟ್ಟು, ತಾಳೋಲೆ ಮತ್ತು ಕರಿಮಣಿಯನ್ನು ಮಾತ್ರ ಧರಿಸಿಕೊಳ್ಳಬಹುದು. ಸತ್ತವನ ಹೆಂಡತಿಯು ಇವುಗಳನ್ನು ಸಹ ಧರಿಸಿಕೊಳ್ಳಕೂಡದು.

ಅವಳು ಮತ್ತು ಸಮ್ಮಂಧಿಕರಾದ ಹೆಂಗಸರು "ನಿಪ್ಪ್‌ಕ್ ತುಣಿ" ಕಟ್ಟಿಕೊಳ್ಳಬೇಕು.

ಮೇಂಗತೆ ಇರುವವರು ಹಾಲು, ಜೇನು, ಮಧು, ಮಾಂಸ, ಮೀನು, ಅಣಬೆ, ಎಲೆ, ಅಡಿಕೆ ಸಹ ತಿನ್ನಕೂಡದು.

ಹೆತ್ತು ನೀರು ತೆಗೆಯದವರು, ಪೂರ್ಣ ಗರ್ಭಿಣಿಯರು (ಏಳು ತಿಂಗಳ ಮೇಲಿನ ಗರ್ಭಿಣಿಯರು), ಕಾಯಿಲಸ್ಥರು ಮೇಂಗತೆ ಇರಬಾರದು. ಆದರೆ ಆಭರಣಗಳನ್ನು ಬಿಚ್ಚಿಬಿಡಬೇಕು. ಮದುವೆ ಕುರಿಮಾಡಿದ ಮನೆಯಲ್ಲಿ ಮದುವೆ ಗಂಡು ಮತ್ತು ಹೆಣ್ಣು ಮೇಂಗತೆ ಇರಬಾರದು ಮತ್ತು ಆಭರಣಗಳನ್ನು ಬಿಚ್ಚಬಾರದು.

ಸತ್ತವನ ಕುಟುಂಬದಲ್ಲಿ ಪನ್ನಂದ್ ಆಗುವವರೆಗೂ ರೊಟ್ಟಿ ಸುಡಕೂಡದು, ಒಗ್ಗರಣೆ ಹಾಕುವುದಕ್ಕೆ ಸಾಸಿವೆ ಉಪಯೋಗಿಸಕೂಡದು.

ಮೇಂಗತೆ ಇರುವವರು ಮದುವೆಗೆ ಹೋಗಕೂಡದು. ಕುಟುಂಬಸ್ಥರಾದರೆ ಸತ್ತವನಿಗಿಂತ ಹಿರಿಯರಾಗಿ ಮೇಂಗತೆ ಇಲ್ಲದಿದ್ದರೂ ಪನ್ನಂದಾಗುವವರೆಗೂ ಇತರ ಮನೆಗಳಲ್ಲಿ ಮದುವೆಗಾಗಲೀ, ಏನೊಂದೂ ತಿಥಿಕರ್ಮಾಂತರಗಳಿಗಾಗಲೀ, ಶುಭ ಕಾರ್ಯಗಳಿಗಾಗಲೀ ಹೋಗಕೂಡದು.

ಕುಳಿಕ್ ನಿಪ್ಪದ್ : ಸತ್ತವನ ಹೆಂಡತಿ ಅಥವಾ ಸತ್ತವಳ ಗಂಡನು ಮೇಲೆ ಹೇಳಿದ ಮೇರೆ ಮೇಂಗತೆ ಇರಲು ಅಶಕ್ತರಾಗಿದ್ದ ಹೊರತು ತಪ್ಪದೆ ಕುಳಿಕ್ ನಿಲ್ಲಬೇಕು. ಇವರ ಜೊತೆಯಲ್ಲಿ ಸಮ್ಮಂದಿಕರು ಒಬ್ಬಿಬ್ಬರು ನಿಲ್ಲಬೇಕು. ಇವರು ಮೇಂಗತೆ ಇರಬೇಕಲ್ಲದೆ ತಿಥಿಯು (ಮಾದ) ಆಗುವವರೆಗೆ ಗಂಡಸರು ಬಿಳಿ ಒಚ್ಚೋಡಿ ಕುಪ್ಪಸ ಅಥವಾ ಒಂದು ಬಿಳಿ ಮುಂಡನ್ನು

ಸೊಂಟದಿಂದ ಕೆಳಕ್ಕೂ, ಇನ್ನೊಂದು ಬಿಳಿ ಮುಂಡನ್ನು ಸೊಂಟದಿಂದ ಮೇಲಕ್ಕೂ ಸುತ್ತಿಕೊಳ್ಳಬೇಕು. ಒಳಗೆ ಜಿಬ್ಬ ಮತ್ತು ಸುರಾಲು ಹಾಕಿಕೊಳ್ಳಬಹುದು. ಹೆಂಗಸರು ನಿಪ್ಪಕ್ ತುಣಿ ಕಟ್ಟಿರಲೇಬೇಕು. ಒಳಗೆ ಕೈಯಿಲ್ಲದ ಚೆಮ್ಮಿಸ್ ಹಾಕಿಕೊಳ್ಳಬಹುದು. ಕುಳಿಕ್ ನಿಲ್ಲುವ ಗಂಡಸರು ಜಿಟ್ಟು ಇಡದೆ ತಲೆ ಬೋಳಿಸುವರು.

ಕುಳಿಕ್ ನಿಂತವರು ಬೇರೆ ಅಡಿಗೆ ಮಾಡಿಕೊಳ್ಳಬೇಕು. ಇವರು ದಿನ ನಿತ್ಯ ಸ್ನಾನ ಮಾಡಿ ಒಂದೇ ಹೊತ್ತು ಊಟ ಮಾಡಬೇಕು.

ಸತ್ತವನ ಹೆಂಡತಿ ಅಥವಾ ಸತ್ತವನ ಗಂಡನು ಕೈಗೆ ಬೆಳ್ಳಿಯ ಸರಪಣಿಯನ್ನು ಸುತ್ತಿಕೊಂಡು ಹೊರಗೆ ಹೋಗುವಾಗ ಕೈಯಲ್ಲಿ ಒಂದು ಚಾಕಾಗಲೀ, ಕತ್ತಿಯಾಗಲೀ ಹಿಡಿದುಕೊಳ್ಳಬೇಕು. ಇವರು ಹೊಳೆಯನ್ನು ಇಳಿದು ದಾಟಬಾರದು; ಎಲೆಯಲ್ಲಿಯೇ ಊಟ ಮಾಡಬೇಕು; ಮಣೆಯಲ್ಲಿ, ಬೆಂಚಿಯಲ್ಲಿ, ಅಥವಾ ಕುರ್ಚಿಯಲ್ಲಿ ಕೂರಬಾರದು; ಮಂಚದಲ್ಲಿ ಮಲಗಬಾರದು; ನೆಲದಲ್ಲಿ ಚಾಪೆ ಹಾಸಿಕೊಂಡು ಕೂರಬೇಕು ಮತ್ತು ಮಲಗಬೇಕು; ಹಾಸಿಗೆ ಮುಂತಾದವುಗಳು ಇರಬಹುದು; ಸಾಯಂಕಾಲ ಫಲಹಾರ ಮಾಡಿಕೊಳ್ಳಬಹುದು. ಹೆಂಗಸರು ತಲೆಯನ್ನು ಕೊಂಬಿನ ಬಾಚಣಿಗೆಯಲ್ಲಿ ಬಾಚಬಾರದು. ಮರದ ಬಾಚಣಿಗೆಯಲ್ಲಿ ಬಾಚಬಹುದು.

"ಕುಳಿಕ್ ನಿಪ್ಪದ್" ಬಹಳ ಕಷ್ಟವಾದ ಆಚಾರವಾದುದರಿಂದ ಅನೇಕರು ಸಾಯುವ ಮೊದಲು ತಮಗೆ ಕುಳಿಕ್ ನಿಂತವರಿಗೆ ಇಂತಿಂಥ ಆಸ್ತಿಗಳನ್ನು ಕೊಡಬೇಕಾಗಿ ಹೇಳಿ ಸತ್ತಿರುವರು. ಕುಳಿಕ್ ನಿಂತವರಿಗೆ ಭೂಮಿಯನ್ನು ಕೊಟ್ಟದ್ದು ಸಹ ಇದೆ. ಇದು ಗಂಡ ಹೆಂಡತಿಯರಿಗೆ ವ್ಯಾಪಿಸುವುದಿಲ್ಲ.

ಚತ್ತನಾಳ್ ನೋಟುವ : ಸತ್ತ ಮಾರಣೆ ದಿನ ಅರುವನು ಕಣಿಯನ ಹತ್ತಿರ ಹೋಗಿ ಅಥವಾ ಕಣಿಯನನ್ನು ಕರಿಸಿ ಚತ್ತನಾಳ್ ನೋಡಿಸಬೇಕು. ಅವನು ಹೇಳಿದ ಮೇರೆ "ಕುಳಿಯ ನೀಕುವುದಲ್ಲದೆ" ಏನಾದರೂ ಪರಿಹಾರವನ್ನು ಮಾಡಿಸುವುದೂ ಉಂಟು.

ಕುಳಿಯ ನೀಕುವ : ಸತ್ತ ಮನೆಯಿಂದ ಸತ್ತವನ ಕುಳಿಯನನ್ನು ಹೊರಪಡಿಸುವುದು ಹೇಗೆಂದರೆ ಬಣ್ಣನು ಅಥವಾ ಮಲೆಯನು "ಮುಂದ್ರತಬಳ್ಳಿ"ಯ ಹಂಬನ್ನು ಮತ್ತು ಬಳೀ ನೂಲನ್ನು ಮನೆಯ ಸುತ್ತಲೂ ಕಟ್ಟಿ ಬಾಗಿಲ ಕಡೆ ಬಿಟ್ಟು "ನೀಕಿದ" ಒಡನೆ ಅದನ್ನು ಸಹ ಕಟ್ಟಿ ಮುಟ್ಟಿಸುವನು. ಇದು ತಿಥಿಕರ್ಮಾಂತರ ಮಾಡತಕ್ಕ ಮನೆಯಿಂದ ಮಾಡತಕ್ಕದ್ದು.

ನೀರ್ ಬೆಲಿ : ಮೇಂಗತೆ ನಿಂತ ಮಾರಣೆ ದಿವಸದಿಂದ ಕುಳಿಕ್ ನಿಂತವರು ಕೆರೆಗಾಗಲೀ ಬಾವಿಗಾಗಲೀ ಹೋಗಿ ಮೀನಿಗೆ ಅಕ್ಕಿ ಹಾಕಬೇಕು. ಇದಕ್ಕೆ "ನೀರ್ ಬೆಲಿ" ಎಂದು ಹೆಸರು. ಇದನ್ನು ಮೂರು ದಿವಸ ಮಾಡಬೇಕು.

ಕರೆ ಬೆಲಿ : ನಾಲ್ಕನೇ ದಿನದಿಂದ (ಕುಳಿಕ್ ನಿಂತವರು) ಏಳನೇ ದಿನದವರೆಗೆ ನೀರ್ ಬೆಲಿ ಮಾಡಿದ ಬಾವಿಯ ಅಥವಾ ಕೆರೆಯ ದಡದಲ್ಲಿ ಮೂರು ಸಣ್ಣ ಕಲ್ಲುಗಳನ್ನು ಒಲೆಯಾಗಿ ಮಡುಗಿ ಅದರ ಮೇಲೆ ಒಂದು ಒಡೆದ ಮಣ್ಣಿನ ಪಾತ್ರದ ಚೂರನ್ನು ಮಡಗಿ ಅದರಲ್ಲಿ ಸ್ವಲ್ಪ ಅಕ್ಕಿಯನ್ನು ಒದ್ದೆಮಾಡಿ ಇಟ್ಟು, ಅದರಡಿಯಲ್ಲಿ ಒಂದು ಬೆಂಕಿಕೊಳ್ಳಿಯನ್ನಿಟ್ಟು, ಸ್ವಲ್ಪ ನಿಂತು ಒಲೆಯ ಮೇಲಿಟ್ಟ ಅಕ್ಕಿಯನ್ನು ಒಂದು ಅಗ್ರದೆಲೆಯಲ್ಲಿಟ್ಟು ಬರಬೇಕು. ಇದಕ್ಕೆ "ಕರೆಬೆಲಿ" ಅನ್ನುವರು.

ನೀರ್‌ಬೆಲಿ ಮತ್ತು ಕರೆಬೆಲಿ ಸ್ನಾನ ಮಾಡಿ ಆದ ಮೇಲೆಯೇ ಮಾಡಬೇಕು.

ಬೆಲಿಮರ : ಏಳನೇ ದಿವಸದಲ್ಲಿ ಅರುವನು ಒಂದು ಕಂಬದ ಅಥವಾ ಮೂರು ಕಂಬದ

ತುದಿಗೆ ಒಂದು ಹಲಿಗೆಯನ್ನು ಹೊಡೆದು ಮನೆಯ ಹೊರಗಿನ ಹಟ್ಟಿಯಲ್ಲಿ ಹೂಣಿ ನಿಲ್ಲಿಸಬೇಕು. ಇದಕ್ಕೆ "ಬೆಲಿಮರ"ವೆಂದು ಹೆಸರು.

ಕಾಕೆಕ್ ಕೂಳ್ ಬೆಪ್ಪ : ಸತ್ತವನ ಹೆಂಡತಿಯು ಅಥವಾ ಸತ್ತವಳ ಗಂಡನು ಏಳನೇ ದಿವಸದಿಂದ, ಹನ್ನೊಂದನೇ ದಿವಸದವರೆಗೂ ತಾನು ಊಟ ಮಾಡುವುದಕ್ಕೆ ಮೊದಲು ಒಂದು ಎಲೆಗೆ ತಮಗೆ ಮಾಡಿದ ಅನ್ನ ಪದಾರ್ಥ ಸಹ ಹಾಕಿ ಬೆಲಿ ಮರದ ಮೇಲೆ ಮಡುಗಿ "ಕಾ ಕಾ" ಎಂದು ಹೇಳುತ್ತಾ ಮೂರು ಚಪ್ಪಾಳೆಗಳನ್ನು ಹೊಡೆದು ಬರಬೇಕು. ಅದಕ್ಕೆ "ಕಾಕೆಕ್ ಕೂಳ್ ಬೆಪ್ಪ" ಅನ್ನುವರು.

ಕಾಗೆಯು ಬಂದು ಅನ್ನ ತಿನ್ನುತ್ತದೋ ಎಂದು ಸ್ವಲ್ಪ ಹೊತ್ತು ನೋಡುವರು. ಅವರ ಮುಂದೆ ಕಾಗೆಯು ಅನ್ನ ತಿಂದರೆ ಸತ್ತವನಿಗೆ ಆ ಮಡುಗಿದ "ಎಡೆ"ಯು ತೃಪ್ತಿಯೆಂದು ತಿಳಿದುಕೊಳ್ಳುವರು.

ಸತ್ತವನಿಗೆ ಮಾಡುವ ಉತ್ತರ ಕ್ರಿಯೆಗಳಲ್ಲಿ "ಪನ್ನಂದ್" "ಕುಳಿಚುಂಬ" ಮತ್ತು "ಮಾದ" ಎಂಬವುಗಳೇ ಮುಖ್ಯವಾದವುಗಳು. ಪನ್ನಂದನ್ನು ಹನ್ನೊಂದನೇ ದಿವಸವೂ ಆ ಮೇಲೆ ಮಾದವನ್ನು ನಿಶ್ಚಯಿಸಿದ ಹಾಗೂ ಕುಳಿಚುಂಬದನ್ನು ಮಾದಕ್ಕೆ ಒಂದು ದಿವಸಕ್ಕೆ ಮುಂಚಿತವಾಗಿಯೂ ಮಾಡಬೇಕು.

ಪನ್ನಂದನ್ನು ಕುಳಿಚುಂಬದನ್ನು ಮತ್ತು ಮಾದವನ್ನು ಹನ್ನೊಂದನೇ ದಿವಸವೇ ತೀರಿಸುವುದುಂಟು. ಮುಖ್ಯವಾಗಿ ತಿಥಿ ಕರ್ಮಾಂತರಗಳನ್ನು ನಡೆಸದೆ ಇರುವುದರಿಂದ ಶುಭಕಾರ್ಯಗಳನ್ನು ಮಾಡಲು ಅಡ್ಡಿಯಾಗುವುದಾದರೆ ಹನ್ನೊಂದನೇ ದಿವಸದಲ್ಲಿಯೂ ಕೆಲವು ಸಂದರ್ಭಗಳಲ್ಲಿ ಏಳನೇ ದಿವಸದಲ್ಲಿಯೂ ತೀರಿಸಿಬಿಡುವುದುಂಟು.

ಪನ್ನಂದ್ : ಈ ದಿವಸ ಮೇಂಗಲು ಇಷ್ಟವಿರುವವರು ಮೇಂಗಬಹುದು. ಕುಳಿಕ್ ನಿಂತವರಲ್ಲಿ ಒಬ್ಬನಾದರೂ ಮೇಂಗತೆ ಇರಬೇಕು. ಮೇಂಗುವವರು ಮಧ್ಯಾಹ್ನದ ಹೊತ್ತಿಗೆ ನವಧಾನ್ಯದಿಂದ ಮಾಡಿದ ಏನೊಂದೂ ವಸ್ತುವನ್ನು ತಿನ್ನಕೂಡದು.

ಪನ್ನಂದಿನ ಮಾರನೆ ದಿವಸ ಮಾದ ಮಾಡುವುದಾದರೂ ಕುಳೀಚುಂಬ ದಿವಸ ಮಾಡತಕ್ಕ ಆಚಾರವನ್ನು ಆ ದಿವಸ ಮಧ್ಯಾಹ್ನದವರೆಗೂ ಮಾಡಬೇಕು.

ಮಾದವು 28ನೇ ಅಥವಾ 48ನೇ ದಿವಸದಲ್ಲಿಯೇ ಆಗಬೇಕೆಂದು ಕೆಲವರು ತಪ್ಪು ಅಭಿಪ್ರಾಯ ಮಾಡಿಕೊಂಡಿದ್ದಾರೆ.

ಮೇಂಗುವವರು ಸ್ನಾನ ಮಾಡಿ ಅಡಿಗೆ ಮನೆಗೆ ಹೋಗಿ ನಿಲ್ಲಬೇಕು. ಮೇಂಗುವವರೆಲ್ಲರೂ ಕುಳಿಕ್ ನಿಂತವರಂತೆ ಉಡುಪು ಹಾಕಿಕೊಂಡಿರಬೇಕು. ಅಡಿಗೆ ಮನೆಯಲ್ಲಿ ಕುಳಿಕ್ ನಿಂತವರು ಅಡಿಗೆ ಮಾಡಿರುವ ಅನ್ನಕ್ಕೆ ಮೊಸರು, ಬಾಳೆಹಣ್ಣು ಮತ್ತು ತುಪ್ಪವನ್ನು ಸಹ ಮಿಶ್ರಮಾಡಿ, ಒಂದು ಕಂಚಿನ ಗಂಗಳದಲ್ಲಿ ಹಾಕಿ ಹತ್ತಿರ ಒಂದು ಪಾತ್ರೆಯಲ್ಲಿ ಸ್ವಲ್ಪ ನೀರು, ಸ್ವಲ್ಪ ಗರಿಕೆ ಹುಲ್ಲು ಮತ್ತು ಒಂದು ಅಗ್ರದೆಲೆಯನ್ನು ಸಹ ಒಂದು ಚಾಪೆಯ ಮೇಲೆ ಮಡಗಿರಬೇಕು. ಮೇಂಗುವವರು ಮೊಣಕಾಲೂರಿಕೊಂಡು ಮಿಶ್ರ ಮಾಡಿಟ್ಟ ಅನ್ನ ಮುಂತಾದನ್ನು ಕೈಯಲ್ಲಿ ತೆಗೆದುಕೊಂಡು ತಮ್ಮ ಹೆಬ್ಬೆಟ್ಟಿನಿಂದ ಬಲಕ್ಕೆ ಮೂರು ದಪ ಅದನ್ನು ಅಗ್ರದೆಲೆಗೆ ಹಾಕಬೇಕು. ಅನಂತರ ಕೈ ತೊಳೆದು ಸ್ವಲ್ಪ ಗರಿಕೆ ಹುಲ್ಲನ್ನು ಹಿಡಿದುಕೊಂಡು ಅದರ ಮೇಲೆ ನೀರು ಹುಯಿದು ತನ್ನ ಬಲ ಕೈಯಿಂದ ತನ್ನ ಜುಟ್ಟನ್ನು ಹಿಡಿದುಕೊಂಡು ಮೊಳ ಕೈಯಿಂದ ನೀರನ್ನು ತಾನು ಅಗ್ರದೆಲೆಗೆ ಹಾಕಿದ ಅನ್ನದ ಸುತ್ತಲೂ ಬಿಡಬೇಕು. ಈ ಅನ್ನವನ್ನು (ಎಡೆಯನ್ನು) ಕುಳಿಕ್ ನಿಂತವರು ತೆಗೆದುಕೊಂಡು

ಹೋಗಿ ಬೆಲಿ ಮರದ ಮೇಲೆ ಕಾಗೆಗೆ ಮಡಗಬೇಕು.

ಕುಳಿಕ್ ನಿಂತವರೇ ಈ ಕರ್ಮಗಳನ್ನೆಲ್ಲಾ ಆಚರಿಸಿ ಮೇಂಗುವವರಿಗೆ ಒಂದೊಂದು ಎಲೆಯಲ್ಲಿ "ಎಡೆ"ಯನ್ನು ಹಾಕಿ ಕೊಡುವುದೂ ಮೇಂಗುವವರು ಅವುಗಳನ್ನು ತೆಗೆದುಕೊಂಡು ಹೋಗಿ ಕಾಗೆಗೆ ಇಡುವುದೂ ಉಂಟು.

ಆ ಮೇಲೆ ಮೇಂಗದವರಿಗೆ ಮಧು ಮಾಂಸ ಸಮೇತ ಊಟ ಮಾಚಬಹುದು.

ಕುಳಿಚುಂಬ : ಇದು ಮಾದಕ್ಕೆ ಒಂದು ದಿನಕ್ಕೆ ಮೊದಲು ಆಗಬೇಕು. ಪನ್ನಂದಿನ ದಿವಸ ಮೇಂಗದವರು ಈ ದಿವಸ ನವಧಾನ್ಯಗಳಿಂದ ಮಾಡಿದ ಏನೊಂದು ವಸ್ತುವನ್ನೂ ತಿನ್ನದೆ ಮಧ್ಯಾಹ್ನ ಸ್ನಾನ ಮಾಡಿ ಬೇರೆ ಅಡುಗೆ ಮಾಡಿಕೊಳ್ಳಬೇಕು. ಊಟಕ್ಕೆ ಮೊದಲು ಇವರು ಅಡಿಗೆ ಮನೆಗೆ ಬಂದು ಪನ್ನಂದಿನ ದಿವಸ ಮೇಂಗಿದವರು ಮಾಡಿದಂತೆ ಕರ್ಮಗಳನ್ನು ಮಾಡಬೇಕು. ಆದರೂ ಇವರು ಮೇಂಗಿಲ್ಲವೆಂದು ತಿಳಿದುಕೊಳ್ಳಬೇಕು. ಆದುದರಿಂದ ಅರುವನು ಇವರಿಗೆ ಎಲೆ ಅಡಿಕೆ ಕೊಡಕೂಡದು. ಆ ಮೇಲೆ ಇವರು ಬೇರೆ ಊಟ ಮಾಡುವರು. ಇವರು ಸಾಯಂಕಾಲ ಫಲಹಾರಗಳನ್ನು ಮಾಡಬಹುದು. ಊಟ ಮಾಡಕೂಡದು.

ಕಾಗೆಯು ಅನ್ನವನ್ನು ತೆಗೆದ ಮೇಲೆ ಅರುವನು ಬೆಲಿ ಮರವನ್ನು ಒಟ್ಟು ಓರೆ ಮಾಡಬೇಕು.

ಈ ದಿವಸ ಅರುವನು * ಮನೆಯ ಮುಂದೆ ನಾಲ್ಕು ಕಾಲುಗಳ ಚಪ್ಪರವನ್ನು ಹಾಕಬೇಕು. ಚಪ್ಪರದ ಮೇಲ್ಭಾಗಕ್ಕೆ ಬೈನೆಮರದ ಸೊಪ್ಪನ್ನು ಹಾಕಬೇಕು.

ಮಾದ (ತಿಥಿ) : ಈ ದಿವಸ ಕೋಳಿ ಕೂಗುವ ಹೊತ್ತಿಗೆ ಅರುವನು ಬಂದು ಬೆಲಿ ಮರವನ್ನು ಕಡಿದು ಹಾಕಬೇಕು. ಅದೇ ಸಮಯದಲ್ಲಿ ಕುಳಿಕ್ ನಿಂತವರು ತಮ್ಮ ಅಡಿಗೆಗೋಸ್ಕರವಾಗಿ ಹಾಕಿದ್ದ ಒಲೆಯನ್ನು ಕಿತ್ತು ಹಾಕಬೇಕು.

ಕುಳಿ ಮಾಚುವ : ಕುಳಿಕ್ ನಿಂತವರು ಈ ದಿವಸ ಮೇಂಗಬೇಕು. ಒಬ್ಬನಿಗಿಂತ ಹೆಚ್ಚು ಜನರು ಕುಳಿಕ್ ನಿಂತಿದ್ದರೆ ಒಬ್ಬನ ವಿನಹ ಮಿಕ್ಕವರು ಪನ್ನಂದಿನ ದಿವಸ ಮೇಂಗಬಹುದು.
ಮೇಂಗದವರು ಮತ್ತು ಕುಳಿಕ್ ನಿಂತವರು ಸಹ ಈ ದಿವಸ ಹೊತ್ತಾರೆ ನವ ಧಾನ್ಯದಿಂದ ಮಾಡಿದ ಏನೊಂದು ವಸ್ತುವನ್ನೂ ತಿನ್ನದೆ ಎಲ್ಲರೂ ಸ್ನಾನ ಮಾಡಿ ಕುಳಿಕ್ ನಿಂತವರಂತೆ ಉಡುಪು ಹಾಕಿಕೊಳ್ಳಬೇಕು.

ಕುಳಿಕ್ ನಿಂತವರು ಮುಖ್ಯವಾಗಿ ಸತ್ತವಳ ಗಂಡನು ಅಥವಾ ಸತ್ತವನ ಹೆಂಡತಿ ಅಥವಾ ಮದುವೆಯಾಗದೆ ಸತ್ತಿದ್ದರೆ ಅಥವಾ ಸತ್ತವನಿಗೆ ಹೆಂಡತಿ ಅಥವಾ ಸತ್ತವಳಿಗೆ ಗಂಡನು ಇಲ್ಲದಿದ್ದರೆ ಸಮ್ಮಂಧಿಕರಲ್ಲಿ ಹತ್ತಿರದ ಒಬ್ಬನು, ಅರುವನು ಇನ್ನೊಂದಿಬ್ಬರು ಕೇಕಳಕ್ಕೆ ಅಥವಾ ತೂಟ್ಂಗಳಕ್ಕೆ, ಒಂದು ತಟ್ಟೆಯಲ್ಲಿ ಆರು ಅಗ್ರದೆಲೆಗಳು ಅಥವಾ ತ್ರಿಕೋಣಾಕಾರವಾದ ಎಲೆಗಳನ್ನಿಟ್ಟು ಅದರಲ್ಲಿ ಆ ದಿವಸ ಮಾಡಿದ ಅನ್ನ ಮತ್ತು ಪದಾರ್ಥಗಳನ್ನು ಮಿಶ್ರಮಾಡಿ ಎಡೆ ಇಟ್ಟು, ಮೂರು ಹಲಸಿನ ಎಲೆಯ ಚೆಳೆಯನ್ನು ಮಾಡಿ ಇಟ್ಟುಕೊಂಡು ಹೋಗಬೇಕು. ದಾರಿಯಲ್ಲಿ ಹೋಗುತ್ತಾ ಸಾವನ್ನು ಮಡಗಿದ ಸ್ಥಳದಲ್ಲಿ ಸ್ವಲ್ಪ ನೀರನ್ನು ಪ್ರೋಕ್ಷಿಸಿ ಒಂದೊಂದು ಅಗ್ರದೆಲೆಯಲ್ಲಿರುವ ಎಡೆಯನ್ನು ಮಡಗಬೇಕು.

ಕುಳಿಕ್ ನಿಂತವರಲ್ಲಿ ಒಬ್ಬನು ಸ್ಮಶಾನದಲ್ಲಿ ಗುಂಡಿಗೆ ಅಥವಾ ಸುಟ್ಟ ಸ್ಥಳಕ್ಕೆ ನೀರು ಪ್ರೋಕ್ಷಿಸಿ ಅದರ ತಲೆಯ ಹತ್ತಿರ ಮೂರು ಎಡೆ ಇಟ್ಟಿದ್ದ ಅಗ್ರದೆಲೆಗಳನ್ನು ಮಡಗಿ ಅದರ ಹತ್ತಿರ ಮೂರು

*** ಬೇರೆಯವರು ಚಪ್ಪರದ ಕೆಲಸಕ್ಕೆ ಸೇರಕೂಡದೆಂಬ ಅರ್ಥವಲ್ಲ.**

ಚೆಳ್ಳೆಗಳನ್ನಿಟ್ಟು, ಒಂದು ಚೆಳ್ಳೆಯಲ್ಲಿ ನೀರೂ, ಇನ್ನೊಂದು ಚೆಳ್ಳೆಯಲ್ಲಿ ಎಲೆ ಅಡಿಕೆಯೂ, ಮತ್ತೊಂದರಲ್ಲಿ ಸ್ವಲ್ಪ ನಿಶಾ ಪದಾರ್ಥವನ್ನೂ ಇಡಬೇಕು. ಮತ್ತು ಸ್ವಲ್ಪ ಎಲೆ ಅಡಿಕೆಯನ್ನು ಅವನು ಬಾಯಿಗೆ ಹಾಕಿಕೊಳ್ಳಬೇಕು.

ಈ ಮಧ್ಯದಲ್ಲಿ ಮನೆಯಲ್ಲಿ ಮೇಂಗುವವರು ಮೇಂಗಬಹುದು. ಮೇಂಗುವವರು ನೆಲ್ಲಕ್ಕಿ ನಡುಬಾಡೆಯಲ್ಲಿ ನಿಂತುಕೊಳ್ಳಬೇಕು. ಆಗ ಅರುವನ ಹೆಣ್ಣು ಅಗ್ರದೆಲೆಗಳಲ್ಲಿ ಅಥವಾ ತ್ರಿಕೋಣಾಕಾರದಲ್ಲಿ ಮಾಡಿರುವ ಎಲೆಗಳಲ್ಲಿ ಮಿಶ್ರಮಾಡಿ ಇಟ್ಟ ಆ ದಿವಸದ ಅನ್ನ ಮತ್ತು ಪದಾರ್ಥಗಳನ್ನು ಅಡಿಗೆ ಮನೆಯಲ್ಲಿಯೇ ನಿಂತುಕೊಂಡು ಹೋಗಿ ಬೆಲಿಮರವು ಇದ್ದ ಸ್ಥಳದಲ್ಲಿ ಮಡುಗಬೇಕು.

ಹಿಂತಿರುಗಿ ಮನೆಗೆ ಸ್ಮಶಾನದಿಂದ ಬಂದವರಿಗೆ "ತೆಳಿನೀರ್" ಪ್ರೋಕ್ಷಿಸಬೇಕು. ಹಿಂತಿರುಗಿ ಮನೆಗೆ ಬರುವ ಸಮಯದಲ್ಲಿ ಅರುವನು ಕೈಯ್ಯಾಲೆಯಲ್ಲಿದ್ದುಕೊಂಡು ಪ್ರತಿಯೊಬ್ಬರಿಗೆ ಎಲೆ ಅಡಿಕೆ ಕೊಡಬೇಕು. ಅವರು ಅದನ್ನು ಬಾಯಿಗೆ ಹಾಕಿ ಅಗಿದು ಮನೆಯ ಮೇಲಕ್ಕೆ ಬೆಸಾಡಬೇಕು.

ಮನೆಯ ನೆಲ್ಲಕ್ಕಿಯಲ್ಲಿರುವ ತಳಿಯಕ್ಕಿ ಬೊಳಕಿನಲ್ಲಿ ಒಂದು ದೋಸೆಯೂ ಮೂರು ವೀಳ್ಯದೆಲೆಯೂ ಮೂರು ಅಡಿಕೆಯೂ ಇಟ್ಟಿರಬೇಕು.

ಕುಳಿಕ್ ನಿಂತಿದ್ದವನು ಕೈಗೆ ಸುತ್ತಿಕೊಂಡಿದ್ದ ಬೆಳ್ಳಿಯ ಸರಪಣಿಯನ್ನು ಬಿಚ್ಚಿ ತಳಿಯಕ್ಕಿ ಬೊಳಕಿಗೆ ಹಾಕಬೇಕು. ಆ ಮೇಲೆ ಎಲ್ಲರೂ ಒಟ್ಟಿಗೆ ಊಟ ಮಾಡಬೇಕು.

ಕ್ಷೌರ : ಆ ದಿವಸ ಹಜಾಮನನ್ನು ಕರೆಸಿರಬೇಕು. ಊಟ ಮಾಡಿ ಆದಮೇಲೆ
ಕುಳಿಕ್ ನಿಂತವರಲ್ಲದೆ ಮೇಂಗತೆ ನಿಂತವರಲ್ಲಿ ಮೂವರಾದರೂ ಆ ದಿವಸ ಅಲ್ಲಿ ಕೊನೆಗೆ ಮುಖ ಕ್ಷೌರ ಮಾಡಿಸಿಕೊಳ್ಳಬೇಕು. ಕ್ಷೌರ ಮಾಡುವ ಸ್ಥಳದಲ್ಲಿ ಒಂದು ಪಚ್ಚೆಯದಲ್ಲಿ ಎಲೆ ಅಡಿಕೆ, ಬಾಳೆಹಣ್ಣು, ತೆಂಗಿನಕಾಯಿ, ಸ್ವಲ್ಪ ಅಕ್ಕಿ ಸಹ ಇಟ್ಟಿರಬೇಕು. ಅದನ್ನು ಹಜಾಮನಿಗೆ ಕೊಡಬೇಕು.

ಕುಳಿಕ್ ನಿಂತವರ ಹೊರತು ಮಿಕ್ಕ ಮೇಂಗಿದವರೆಲ್ಲರೂ ಮೊದಲಿನಂತೆ ಉಡಿಗೆ ತೊಡಿಗೆಗಳನ್ನೂ ನಗ ನಾಣ್ಯಗಳನ್ನೂ ಧರಿಸಿಕೊಳ್ಳಬಹುದು.

ತ್‌ಕೆ ಉತ್ತುವ : ಕುಳಿಕ್ ನಿಂತಿದ್ದವರು ದೀಕ್ಷೆಯನ್ನು ಜಾತ್ರೆ ಸ್ಥಳಗಳಲ್ಲಿ ಬಿಚ್ಚಬೇಕು. ಅದುವರೆಗೆ ಅವರು ಹಾಲು ಮತ್ತು ಜೇನು ಉಪಯೋಗಿಸಕೂಡದು; ಆಭರಣ ಧರಿಸಕೂಡದು; ಕೆಂಪು ದಟ್ಟಿ ಕೆಂಪು ವಸ್ತ್ರ ಕಟ್ಟಕೂಡದು; ದಟ್ಟಿ ಕಟ್ಟಿದ್ದಕ್ಕೆ ಕಂಬಿ ಇರಕೂಡದು. ಹೆಂಗಸರು ನಿಪ್ಪ್‌ಕ್ ತುಣಿ ಕಟ್ಟಿಕೊಂಡಿರಬೇಕು. ಗಂಡಸರು ಕ್ಷೌರ ಮಾಡಕೂಡದು. ದೀಕ್ಷೆ ಬಿಚ್ಚಿದ ಮೇಲೆ ಹೆಂಡತಿಯೊಬ್ಬಳಲ್ಲದೆ ಮಿಕ್ಕವರು ವಾಡಿಕೆಯ ಬಟ್ಟೆಬರೆಗಳನ್ನೂ ತಿಂಡಿಗಳನ್ನೂ ಉಪಯೋಗಿಸ ಬಹುದು. ಹೆಂಡತಿ ಮಾತ್ರ ಕುಪ್ಪ ಬಳೆಯಾಗಲೀ ಕಾಲುಂಗುರವಾಗಲೀ ಹಾಕಕೂಡದು. ವಿಧವೆಯು ಪುನರ್ವಿವಾಹ ಆಗದ ವಿನಹ ಹೆಚ್ಚು ನಗ ನಾಣ್ಯಗಳನ್ನೂ, ಬಟ್ಟೆ ಬರೆಗಳನ್ನೂ ಹಾಕುವುದನ್ನು ಜನರು ಇಷ್ಟಪಡುವುದಿಲ್ಲ.

ಅಡ ತಲೆ : ಮದುವೆ ದಿವಸ ಕೇಟಾಮೆ ಬರಿವಂತೆ ಮಾದದ ದಿವಸ ಅಡತಲೆ ಎಂಬುವುದು ಬರುತ್ತಿತ್ತು. ಅದರ ಸಶೇಷವೇ ಪೊಡಿ ಬಾಳೆ.

ಪೊಡಿ ಬಾಳೆ : ಇದು ಪನ್ನಂದಿನ ದಿವಸ ಅಥವಾ ಮಾದದ ದಿವಸ ಮಾತ್ರ ತರಬೇಕು. ಒಂದು ಕುಕ್ಕೆಯಲ್ಲಿ ಹಸಿ ಹಿಟ್ಟಿನ ಬದಲು ಅಕ್ಕಿಯನ್ನೂ ಬಾಳೆಹಣ್ಣಿನ ಬದಲು ಬೆಲ್ಲವನ್ನೂ ತೆಗೆದುಕೊಂಡು ಹೋಗುವುದುಂಟು.

ಪೊಡಿ ಬಾಳೆ ತಂದವರ ಕುಕ್ಕೆಗಳಲ್ಲಿ ಮಾಂಸ ಎಲೆ ಅಡಿಕೆ ಮುಂತಾದವುಗಳನ್ನು ಹಾಕಿ ಕೊಡಬೇಕು. ಪೊಡಿಬಾಳೆ ಹೊತ್ತುಕೊಂಡು ಬಂದ ಆಳಿನ ತಲೆಗೆ ಎಣ್ಣೆ ಕೊಡಬೇಕು.

ಪೊಡಿಬಾಳೆ ತರಲು ಅನುಕೂಲವಿಲ್ಲದೆ ಇದ್ದರೆ ತಳಿಯಕ್ಕಿ ಬೊಳಕಿಗೆ ಇಷ್ಟವಿದ್ದಷ್ಟು ಹಣ ವನ್ನು ಹಾಕಬಹುದು. ಒಂದು ಕುಟುಂಬದಿಂದ ಒಬ್ಬನೆ ಪೊಡಿ ಬಾಳೆ ಕಳುಹಿಸಬೇಕೆಂಬುದು ತಪ್ಪು.

ತ್‌ೀಕೆ ಮನೆ : ಮಾದದ ದಿವಸದವರೆಗೆ ಸತ್ತ ಮನೆಗೆ "ತ್‌ೀಕೆ ಮನೆ"ಯೆಂದು ಹೆಸರು. ಅದುವರೆಗೆ ಯಾರೊಬ್ಬರೂ ಆ ಮನೆತನದಲ್ಲಿ ಕಾಲು ಹಿಡಿಯಲೂ ಹಿಡಿಸಿಕೊಳ್ಳಲೂ ಬಾರದು. ದೀಕ್ಷೆ ಇರುವವರು ದೀಕ್ಷೆ ಬಿಚ್ಚುವವರೆಗೂ ಕಾಲು ಹಿಡಿಯಲೂ ಹಿಡಿಸಿಕೊಳ್ಳಲೂ ಬಾರದು.

ದುಡಿ ಬಾಯಿ ಕೆಟ್ಟುವ : ತನ್ನ ಕುಟುಂಬದಲ್ಲಿ ಯಾರೊಬ್ಬರೂ ಇಲ್ಲದೆ ತಾನು ಸತ್ತ ಮೇಲೆ ತನ್ನ ಮಾದವನ್ನು ಯಾರೂ ಮಾಡಲಾರರೆಂದು ನೆನಸುವವರು ತನ್ನ ತಿಥಿಯನ್ನು ತನ್ನ ಜೀವಮಾನಕಾಲದಲ್ಲಿಯೇ ಮಾಡುವುದುಂಟು. ಅದಕ್ಕೆ "ದುಡಿಬಾಯಿ ಕೆಟ್ಟುವ" ಎಂದು ಹೆಸರು.

ಇದರಲ್ಲಿ ಆಚಾರವು ಏನೊಂದೂ ಇಲ್ಲ. ನಾಲ್ಕು ಕಾಲಿನ ಚಪ್ಪರ ಹಾಕಿ ಬೈನೆ ಮರದ ಸೊಪ್ಪಿನಿಂದ ಆ ಚಪ್ಪರವನ್ನು ಮುಚ್ಚಿ ಸಾಯಂಕಾಲ ಊಟ ಕೊಟ್ಟು ಮಾದದಲ್ಲಿ ಹಾಡುವಂತೆ ಹಾಡುವರು.

ಪೊಲಿಚಿ ಪಾಡುವ : ಮಾದದ ದಿವಸ ಊಟ ಉಪಚಾರ ಆದಮೇಲೆ ನಾಲ್ಕು ಜನ ಗಂಡಸರು ನಾಲ್ಕು ಜನ ಹೆಂಗಸರು ದುಡಿ ಮತ್ತು ತಾಳ ತೆಗೆದುಕೊಂಡು ನೆಲ್ಲಕ್ಕಿ ತಳಿಯಕ್ಕಿ ಬೊಳಕಿನ ಮುಂದೆಯೇ ನಿಂತುಕೊಂಡು ಈ ಕೆಳಗಿನ ರೀತಿ ಹಾಡಬೇಕು. ಇದಕ್ಕೆ "ಪೊಲಿಚಿ ಪಾಡುವ" ಎಂದು ಹೇಳುವರು. ತಾಳವನ್ನು ತೆಗೆದುಕೊಂಡು ಹಾಡಲು ತಿಳಿಯುವ ಹೆಂಗಸರು ಇಲ್ಲದಿದ್ದರೆ ಅರುವನು ತಾಳವನ್ನು ಹೊಡೆದು ತಳಿಯಕ್ಕಿ ಬೊಳಕಿನಲ್ಲಿಟ್ಟು ಬಿಡುವನು.

ಪೊಲಿಚಿ ಪಾಟ್

ಚೆಲ್ಲ್ ಪೋಲೆ ಚೇರೋಡೆ
ಚಕ್ಕೊತ್ತ ಸರಂಬೋಲೆ
ಒಪ್ಪೋಡೆ ಪೊರ್‌ಲೋಡೆ
ಒಪ್ಪ್‌ಕ್‌ಟ್ವೆಳೆ ಪೋಲೆ
ಚಾಲಿಯಂಡ ನೂಪೋಲೆ
ಮಾಲಟ್ಟ್ ನರ ಪೋಲೆ
ಕೆಂಬಟ್ಟ್ ಮಡಿ ಪೋಲೆ
ಪಚ್ಚೆ ಪಟ್ಟ್ ಮೈ ಪೋಲೆ
ಬೀರಾಳಿ ಕುರಿ ಪೋಲೆ
ಕನ್ನಡಿ ನೆಳ ಪೋಲೆ
ಒಜ್ಜ್‌ರ ಪರ ಪೋಲೆ
ಮುತ್ತ್‌ರ ನುರಿ ಪೋಲೆ
ಬಾನ ದುಂಬ ಮೀಂಬೋಲೆ
ತೋಟ ದುಂಬ ಪೂಪೋಲೆ

ಒಕ್ಕ ದುಂಬ ಮಕ್ಕಳೊ.
ಈ ಮಕ್ಕಡ ಕೂಟ್‌ಲ್
ನಾವೆರುಳ್ಳ ಎಂಗಳೊ
ಪಾಡಿ ನೋಟಿ ಕೊಂಡಲ್ಲಿ
ಜಬ್ಬೂಮಿರ ಮೀದಲ್
ಏದ್ ದೇಶ ಚೊಲ್ಲುಳ್ಳ?
ಪಾಡಿ ನೋಟಿ ಕಾಂಬಕ್ಕ
ಪೊಮ್ಮಾಲೆ ಕೊಡವಾಪ.
ಪೊಮ್ಮಾಲೆ ಕೊಡವುಲ್
ಏದ್ ನಾಡ್ ಚೊಲ್ಲುಳ್ಳ?
ಪಾಡಿ ನೋಟಿ ಕಾಂಬಕ್ಕ
....
ಈ ನಾಡ್ ನಡುವುಲ್
ನಾಡಾಪಾದಿ ಊರಾಪ

....
ಈ ಊರ್ ನಡುವುಲ್
ಊರಾಪಾದಿ ಒಕ್ಕಳೊ
....
ಈ ಒಕ್ಕ ಮನೆಯಿಲ್
ಇಂದಿಯ ದಿನತ್‌ಲ್
ಎನ್ನಾಂಡ ಮೊಳಿಗೊಂಡ್
ಚೆಂಬ ದುಡಿ ಕೇಪದೊ?
ನಮ್ಮೆಯಲ್ಲ ನಾಳಲ್ಲ;
ಆರಾಟ್ ಬೊಳಕಲ್ಲ.
ಕೇಳೆನ್ನಡ ಸಂಜಾದಿ
ಪೊಮ್ಮಾಲೆ ಕೊಡವುಲ್
ಅಮ್ಮಂಡೊ ಕೊಡವಂಡೊ
ಪಂಡಿಯ ಮರಿಯಾದಿ
ಈ ಒಕ್ಕ ಮನೆಯಿಲ್
ಅಂದಿಯ ದಿನತ್‌ಲ್
ಚತ್ತ್ ಸ್ವರ್ಗ ಪೋನೋರ್
ಕೆಂಗುದ್‌ರೆ ಅಯ್ಯಣ್ಣ
ಅಯ್ಯಣ್ಣ ಬಯಿಂಬಂಡ
ಮಾದತ್‌ರ ಚೊಲ್ಲಾಲೆ
.... ಊರೋನೂ
ಇಲ್ಲವನೂ ಬೆಂದುವೂ
ಈ ಒಕ್ಕ ಮನೆಯಿಲ್
ಕಾಡ್ ಪೋಲೆ ಕೂಡಿತ್
ಚತ್ತ್ ಸ್ವರ್ಗ ಸೇರ್‌ನ
ಅಯ್ಯಣ್ಣ ಬಯಿಂಬನ

ಎಂಗ ನಾಲ್ ಕುಞ್ಞಿಯು
ನಾಲವ್ವಂಡ ಮಕ್ಕಳೊ
ನಾಕೆಮ್ಮೆ ಮೊಲೆ ಪೋಲೆ
ಒತ್ತೊರ್‌ಮೆ ಕೊಂಡಿತ್
ಪಾಡಿ ಸ್ವರ್ಗ ಕೂಟನ.
ಕೇಳೊ ಕೇಳೊ ಸಂಜಾದಿ
ಪಟ್ಟತಾನೆ ಅಯ್ಯಣ್ಣ
ಚತ್ತ ನಾಳ್ ತೊಟ್ಟ್‌ಂಚಿ
ಈ ಒಕ್ಕ ಮನೆಯಿಲ್
ಮಕ್ಕಳೂ ಮೈಮಕ್ಕಳೂ
ತ್‌ಕೆ ನೋಂಬ್ ನಿಂದಿತ್
ಇಂದಿಯ ದಿನತ್‌ಲ್
ತ್‌ಕೆನ ಕಯಿಚಿತ್
ಅಯ್ಯಣ್ಣ ಪೆದಲಾಲೆ
ಇಲ್ಲವಂಗೂ ಬೆಂದುಕೂ
ತನ್ನಡೋರ್ ಊರೊಂಗೂ
ಪಟ್ಟಮಕೂ ಪಾರ್ವಕೂ
ಜೋಯಮ್ಮಕೂ ದೊಂಬಕೂ
ಪಾಪಿ ಪರದೇಶಿಕೂ
ಜಾತಿ ನುಪ್ಪತ್ತಂಜಾಂಗೂ
ಅನ್ನ ದಾನ ಕೆಯ್ಯುವ.
ಕೇಳೆನ್ನಡ ಸಂಜಾದಿ
ಅಯ್ಯಣ್ಣ ಪುಲಿ ಪುತ್ರ
ಭೂಮಿಲ್ ಪರಕಣೆ
ಭಾಗಿಯ ಪರಂದತ್.

ಇನ್ನು ಮುಂದೆ ಇದೇ ರಾಗದಲ್ಲಿ "ಅಜ್ಜಯ್ಯ" ಎಂಬುವ ಶಬ್ದವನ್ನು ಬಿಟ್ಟು 155ನೇ ಪುಟದ 3ನೇ ಲೈನಿನಿಂದ ಮುಂದುವರಿಸಿ 174ನೇ ಪುಟದ 3ನೇ ಲೈನಿನಲ್ಲಿ ನಿಲ್ಲಿಸಿ ಈ ಕೆಳಗಿನಂತೆ ಮುಂದುವರಿಸು.

ಪೂವ್ ಜೀವಡಂಗ್‌ಚಿ;
ಆನೆ ಜೀವಪಾರ್‌ಚಿ;
ತಂಗದ್ ಕಾಂಬಕ್ಕ
ಉಯಿ! ತನ್ನಡ ದೇವಿಯೂ
ಕುಞ್ಞಿಯಳೂ ಮಕ್ಕಳೂ
ಮಂಡೆ ಮಂಡೆ ಪೊಜ್ಜಿತ್

ಶಿವ ಶೋಕ ಮಾಡಿತ್
ಬುದ್ದತ್ ತೆರಂದತ್;
ಅಕ್ಕಣೆಕ್ ಬೆಂದುವೆ
ಇಲ್ಲವನೂ ಬೆಂದುವೂ
ಏರ ದುಃಖ ಮಾಡ್‌ನ
ಅಕ್ಕಣೆಕ್ ಸಂಜಾದಿ

ಒಕ್ಕಡ ಪೆರಿಯವನ್
ಬೇರ ನಲ್ಲ ಬಾಲನ್
ಈ ಬಾಕ್ ಪರಂದತ್
“ಕೇಳಿ ಕೇಳಿ ಕುಞ್ಞ್ಯಳೆ
ಏರ ದುಃಖ ಮಾಡಂಡ
ಆವಿಜ ಜಳಂದಕ
ಅಂಗಯಿ ತಡ್‌ಪ್‌ಲೆ;
ಕ್‌ಬ್ಬೂಮಿ ಕುಡ್‌ಂದಕ
ಅಂಗಾಲ್ ತಡ್‌ಪ್‌ಲೆ;
ದೇವ ಪಾಪ ಕೆಜ್ಜಕ
ಆವದಿಲ್ಲೆ ನಂಗಕ್.
ಚಾವದೂ ಪರಪದೂ
ಈ ಭೂಮಿಲ್ ಉಳ್ಳದ್
ಎಂಗಕ್ಕೊರದಿಯಲ್ಲ
ಚಾವತ್ತ ಮನೆಯಿಲ್ಲೆ
ಬೇವತ್ತ ಒಲೆಯಿಲ್ಲೆ
ಬೆಚ್ಚವನೆಡ್‌ಪಕ್ಕ
ಬೋಂಡಂದೆಣ್ವರಾಳಿಲ್ಲೆ
ದೇವಯ್ಯನ್ ಕಾಕ್ವಕ
ಕೈಯ್ಯಂದೆಣ್ವರಾಳಿಲ್ಲೆ”
ಎಂದೆಣ್ಣಿ ಪರಂದಿತ್
ಕಣ್ಣ್ ನೀರ್ ತ್‌ೕಟ್‌ಚಿ.
ಈನಂಗುಂಡ್ ಪೋರಾಂದ್
ಅಮ್ಮಂಡೊ ಕೊಡವಂಡೊ
ಪಂಡಿಯ ಮರಿಯಾದಿ
ಜೋಡ್ ಬೊಡಿ ಬೆಚ್ಚತ್.
ಜೋಡ್ ಬೊಡಿ ಬೆಚ್ಚಿತ್
ತಾಂಗ್‌ಂಜಿ ಎಳಯವು
ಮುಂಜೆತ್ ಕುಳಿಚಿತ್
ಆಣಾಯಿ ಪರಂದವು
ದಂಡ್ ಮುಂಡ್ ಸುತ್ತಿತ್
ಪೊಣ್ಣಾಯಿ ಪರಂದವು
ಓಲೆ ಚೆಂಡಯಿಚಿತ್
ಜೀವ ಪೋನ ಬಟ್ಟೆಕ್
ಮುಮ್ಮಡಕಂಡೋಣಿಲ್
ಓಣಿ ಕೂಳ್ ಬೆಚ್ಚಿತ್
ಮಾಲೆ ಪೊಯಿತ್ ಪೊಜ್ಜಂಡ್

ಕಾಕಿತ್ ಮೊರಟಂಡ್
ನೀಲಕೊಡಿ ಚಾವುಕ್
ಆರಿಜ ಕೊಡ್‌ತತ್.
ಈನಂಗುಂಡ್ ಪೋರಾಂದ್
ಚಂಜಾದಿಕೂ ಬೆಂದುಕೂ
ಮನಿಯತಾಳಯಚತ್.
ಓರಂದೀರಂಡೆಣ್ಣಣೆ
ತನ್ನಡೋರ್ ಊರೋನ್
ಆಣೂ ಪೊಣ್ಣಡೆಮೇಂಗ್
ಕಾಡ್ ಪೋಲೆ ಕೂಡ್‌ಚಿ.
ಓರಂದೀರಂಡೆಣ್ಣಣೆ
ನೇರ ಪೋಯಿ ತಾಂದತ್.
ಕೇಳೆನ್ನಡ ಸಂಜಾದಿ
ಚೀಯೋದಿರ ಮೋಂದಿಕ್
ನೀಲ ಕೊಡಿ ಚಾವುನ
ತೆಕ್ಕೊರ ತಲೆ ಬೆಚ್ಚಿ
ನಾಗ ಮೊಗ ನಲ್ಲಾಂಗ್
ಬೊಳ್ಳಿರ ತಳಿಯನ
ಪಾಂಗರಿಂಜಿ ಬೆಚ್ಚಿತ್
ನೀಲಕೊಡಿ ಚಾವುಕ್
ಬೊಳ್ಳಿ ಪೋಲೆ ಬಟ್ಟೆನ
ಪಾಂಗರಿಂಜಿ ಬೆಚ್ಚಿತ್
ಚಾವುನಲ್ಲಿ ಕೂಟಿತ್
ನೆಲ್ಲಕ್ಕಿ ನಡುವುಲ್
ಕಾಕಿತ್ ಮೊರಟಂಡ್
ನೇರ ಇರ್ ಪೊಲತ್‌ನ.
ಒರಂದೀರಂಡೆಣ್ಣಣೆ
ಬೊಳ್ಳಿ ಪೋಲೆ ಬೊಪ್ಪನ.
ಈನಂಗುಂಡ್ ಪೋರಾಂದ್
ಕುಟ್ಟುವತ್ ನೀಕಾಚಿ
ಪೊಂಗುಳಿ ಕುಳಿಪಕ್
ನೀಲ ಕೊಡಿ ಚಾವುನ
ಕೈ ಕೈ ಪುಡಿಚಿತ್
ಬೊಳ್ಳಿಮಾಡ ಪಟ್ಟಿಲ್
ಅಲ್ಲಿ ಕೋಂದ್ ಬೆಚ್ಚಿತ್
ಎಣ್ಣೆ ಮಂಜ ತೇಚಿತ್
ಬೋಜಿ ಮೇಲ್ ಕತ್ತಿತ್

ಮಾಜುತ್ತಿ ಮಡಿ ಪಾಂದ್
ಚಿಂಗಾರೆಲ್ಲಣಿಂಜಿತ್
ನೀಲ ಕೊಡಿ ಚಾವುನ
ನೆಲ್ಲಕ್ಕಿ ನಡುಬಾಡೆ
ಮೇಕೆಟ್ಟ್‌ರೊಳ್‌ವುಲ್
ಕೂಟ್‌ಕಟ್ಟ್ ಮೀದಲ್
ಬೊಟ್ಟ್‌ಲ್ ಕುರ್‌ಬಂಡ
ತೂರ ಪೊಟ್ಟಿ ನಲ್ಲಾಂಗ್
ಬೆಂದಾಗಿತೆಳತೋಲೆ
ಚಾವು ಕೂಟಿಕೊಂಡತ್.
ಅಕ್ಕಣೆಕ್ ಸಂಜಾದಿ
ಇಲ್ಲವನೂ ಬೆಂದುವೂ
ಮುಂಜೆತ್ ಕುಳಿಚಿತ್
ನೀಲ ಕೊಡಿ ಚಾವುಕ್
ಆರಿಜ ಕೊಡ್‌ತತ್.
ಅಕ್ಕಣೆಕ್ ಸಂಜಾದಿ
ಕೂಡ್‌ನ ಜನವೆಲ್ಲಾ
ಆರಿಜ ಕೊಡ್‌ತತ್.
ಓರಂದೀರಂಡೆಣ್ಣಣೆ
ಕೊಂಡೋನೂ ಕೊಡ್‌ತವನೂ
ಕೆಂದನೊಲ್ಲಿ ಕೆಲ್ಲಟಿ
ಕೊಂಬ್ ಕೊಟ್ಟ್ ಜೋಡಾಯಿ
ನೈತೋಕ್ ಕೈಲಾಯಿ
ಚಾವು ಕೊಂಬುರುಪಿತ್
ಚಾವು ಪರೆ ಪೊಜ್ಜಂಡ್
ಜೋಡ್ ಬೊಡಿ ಬೆಚ್ಚಂಡ್
ಪೊಣ್ಣಾಯಿ ಪರಂದವು
ಮಾಲೆ ಪೋಯ್ತ್ ಪೊಜ್ಜಂಡ್
ಮಚ್ಚಿ ಮನೆಕೇರಿತ್
ನೀಲಕೊಡಿ ಚಾವುಕ್
ಆರಿಜ ಕೊಡ್‌ತತ್.
ಅಕ್ಕಣೆಕ್ ಸಂಜಾದಿ
ಚಾಂಡಾಳ ಪೊಲೆ ಮಕ್ಕ
ನೀಲಕೊಡಿ ಚಾವುಕ್
ಬೊಳ್ಳಿಮಾಡ ಪಟ್ಟಿಲ್
ಅಂಗಲಾಡಿ ಕೊಂಡತ್.
ಓರಂದೀರಂಡೆಣ್ಣಣೆ
ನೇರ ಮಜ್ಜಣಾಚಿಲ,
ಅಕ್ಕಣೆಕ್ ಸಂಜಾದಿ
.... ಊರೋಂಡ
ಒಕ್ಕಲಣ್ಣ ಬಾಲಂಗ
ಕತ್ತಿ ಮತ್ತ್ ಕೈಲಾಯಿ
ತೂಟ್ ಕಳ ತೂಪೆಲ್
ಮಾವು ಪುಳ್ಳಿ ಕೆತ್ತಿತ್
ಕಂಬೆ ಪುಳ್ಯಡಕ್‌ಚಿ.
ಈನಂಗುಂಡ್ ಪೋರಾಂದ್
ತಚ್ಚಾಯಿರಿ ಕುಞ್ಞಿಯೊ
ಕೇಕ್ ಮರ ಕೆತ್ತಿತ್
ಅಂದೊಳ ಪಣೆ ತ್ೕತ.
ನೇರೊಯಿಪತಾಪಕ
ಕೈ ಮುರುವೆಳೆ ಬಾಲ
ಅಂದೊಳ ಕೈಲಾಯಿ
ಚಾಚಿ ಮೆಲ್ಲೆ ಬಂದಿತ್
ಬೊಳ್ಳಿಮಾಡ ಪಟ್ಟಿಲ್
ಅಲ್ಲಿ ಕೋಂದ್ ಬೆಚ್ಚಿತ್
ಕೈ ಮುರುವೆಳೆ ಬಾಲ
ನೀಲಕೊಡಿ ಚಾವುಕ್
ಆರಿಜ ಕೊಡ್‌ತಿತ್
ಅಂದೊಳತ್ ಚಾಯೋಡೆ
ಕೆಟ್ಟ್ ಗೂಟೊರಪಾಯಿ
ಎಲ್ಲಾ ಕೊರು ತ್ೕತತ್.
ಓರಂದೀರಂಡೆಣ್ಣಣೆ
ಕೈ ಮುರುವೆಳೆ ಬಾಲ
ನೀಲಕೊಡಿ ಚಾವುನ
ನೆಲ್ಲಕ್ಕಿ ನಡುವುಂಜಿ
ಕೈ ಪುಡಿಚೆಡ್‌ತಿತ್
ಅಂದೊಳತ್ ಮೀದಲ್
ಚಂದೊಳತ್ ಬೆಕ್ಕಣೆ
ಬೊಳ್ಳ ತೆಂಗೆ ಪೊಜ್ಜಿತ್
ನೀಲಕೊಡಿ ಚಾವುಡ
ಕುಪ್ಪಿ ಬಾಯಿ ನಲ್ಲಾಂಗ್
ಕೂಡ್‌ನ ಜನವೆಲ್ಲಾ
ನೀರ್ ಬೂಕಿ ಕೊಂಡತ್.
ಅಕ್ಕಣೆಕ್ ಸಂಜಾದಿ

ಬೆಂದುಡ ಮರಿಯಾದಿ
ಒತ್ತೆ ಪಣ ಇಟ್ಟತ್.
ಈನಂಗುಂಡ್ ಪೋರಾಂದ್
ಕೈ ಮುರುವೆಳೆ ಬಾಲ
ಜೂಕ್ ಕಟ್ಟ್ ನಲ್ಲಾನ
ಕೈಕೆಡ್‌ತ್‌ಕೊಂಡಿತ್
ಬೊಳ್ಳಿಮಾಡ ಪಟ್ಟಿಲ್
ಮೂಂದ್ ಸುತ್ತ್ ಆಡಿತ್
ಜೂಕ್ ಕಟ್ಟ್ ನಲ್ಲಾನ
ಆನೆ ನಿಪ್ಪ್ ನಲ್ಲಾಲ್
ಪಾಂಗರಿಂಜಿ ಬೆಚ್ಚಿತ್
ತಂಗೊಯ್ಯನೆ ಪೋಪಕ
ಪೊಣ್ಣಾಯಿ ಪರಂದವು
ಮಾಲೆ ಪೋಯ್ತ್ ಪೊಜ್ಜಂಡ್
ಕೈ ಮುರುವೆಳೆ ಬಾಲ
ಕಾಕಿತ್ ಮೊರಟಂಡ್
ತೂಟ್ ಕಳ ತೂಪೆಕ್
ತಂಗ ಚಾಚಿ ಪೋಯಿತ್
ಕಂಬೆ ಪುಳ್ಳಿ ನಲ್ಲಾಂಗ್
ಮೂಂದ್ ಸುತ್ತ್ ಬಂದಿತ್
ಅಂದೊಳ ಉಳ್‌ಪಿತ್.
ಈನಂಗುಂಡ್ ಪೋರಾಂದ್
ಪಂಡಿಯ ಮರಿಯಾದಿ
ನೀಲಕೊಡಿ ನೀರ್‌ಲ್
ಮುಂಜೆ ನೀರ್‌ಳಿವಕ್
ಇಲ್ಲವನೂ ಬೆಂದುವೂ
ಚಾಚಿ ಮೆಲ್ಲೆ ಪೋಯಿತ್
ನೀಲ ಕೆರೆ ನೀರ್‌ಲ್
ಮುಂಜೆತ್ ಪೊರಟಿತ್
ನೀಲ ಕೆರೆಡೇರಿಲ್
ಮಿಞ್ಞ ತಾಂಡ ಮೈಮನೂ
ಪಿಞ್ಞ ತಾಂಡ ಕುಞ್ಞೆಯೂ
ಆಂಡ ಬಯ್ಯ ದೇವಿಯೂ
ಅಲ್ಲಿ ಬಂದ್ ನಿಕ್ಕಣೆ
ಮಣ್ಣರುವ ಬಾಲನ್
ತಾನೆನ್ನ ಪಣಿ ಕೆಜ್ಜ?
ಅಲ್ಲತೊಂದು ಅಲ್ಲಲ.

ಗರ್ಕೆ ಪಿಲ್ಲ್ ನಲ್ಲಾಂಡ
ತೊಂಬ್‌ಡ ತೊರತಿತ್
ಜೋಗ ತಲೆ ಮೀದಲ್
ಪಾಂಗರಿಂಜಿ ಬೆಚ್ಚಿತ್,
ಕೋಯ ಬೆರ ನಲ್ಲಾಂಗ್
ಗರ್ಕೆ ಪಿಲ್ಲ್ ಮೋದಿರ
ಪಾಂಗರಿಂಜಿತ್‌ಟ್ಟಿತ್
ತನ್ನಡೋರ್ ದೇವಿಯೋ
ಮಂಗೊಡ ತಲೆ ಬೆಚ್ಚ;
ತನ್ನಡೋರ್ ಕುಞ್ಞೆಯೊ
ತೆಂಗೆ ಕೊಡೆಡ್‌ತತ್
ಈನಂಗುಂಡ್ ಪೋರಾಂದ್
ತನ್ನಡೋರ್ ಮೈಮನ್
ಕ್ಂಡಿ ಕೊಡೆಡ್‌ತತ್.
ಅಕ್ಕಣೆಕ್ ಸಂಜಾದಿ
ಮಣ್ಣರುವ ಬಾಲನ್
ಮೂಂದಾಳಿಂಜ ಮಕ್ಕಡ
ಚಾಂದ್‌ಡು ನೆತ್ತಿಕ್
ಮಂಜಲಕ್ಕಿ ಇಟ್ಟಿತ್
ಮೂವೊ ಮಕ್ಕ ಮೀದಲ್
ಮೇಮಾಡಿ ಪುಡಿಚತ್.
ಮೂವೊ ಮಕ್ಕ ಒಂದಾಯಿ
ಕಾಕಿತ್ ಮೊರಟಂಡ್
ಮಂಜಲಕ್ಕಿ ಚೆಲ್ಯಂಡ್
ಜೋಡ್ ಬೊಡಿ ಬೆಚ್ಚಂಡ್
ತೂಟ್‌ಕಳ ತೂಪೆಕ್
ಚಾಚಿ ಮೆಲ್ಲೆ ಬಂದಿತ್
ನೀಲಕೊಡಿ ಚಾವುಕ್
ಮೂಂದ್ ಸುತ್ತ್ ಸುತ್ತಿತ್
ಉಯಿ ತನ್ನಡ ದೇವಿಯೋ
ತಲೆಕೋರತ್ ನಿಂದತ್;
ತನ್ನಡೋರ್ ಕುಞ್ಞೆಯೊ
ಕಾಕೋರತ್ ನಿಂದತ್;
ಈನಂಗುಂಡ್ ಪೋರಾಂದ್
ತನ್ನಡ ಮಯಿಮನ್
ಪಟ್ಟೊಳಿ ಬಲ ಬರಿ
ಅಲ್ಲಿ ಬಂದ್ ನಿಂದತ್.

ಈನಂಗುಂಡ್ ಪೋರಾಂದ್
ನೀಲಕೊಡಿ ದೇವಿಯೋ
ಮಂಗೊಡ ಎಡ್‌ತಿತ್
ಕಟ್ಟ್‌ಕಾಲ್ ನಲ್ಲಾಂಗ್
ಮೂಮ ಮೂಮ ಓಂಗಿತ್
ಕುಟ್ಟಿತ್ ಒಡತತ್.
ಉಯಿ! ತನ್ನಡ ಮೋವನ್
ತೆಂಗೆ ಕೊಡ ನಲ್ಲಾನ
ಕಟ್ಟ್‌ಕಾಲ್‌ಕೋಂಗಿತ್
ಪೊಜ್ಜಿತ್ ಪೊಳಿಚಿತ್
ಕಟ್ಟಡಿಕ್ ಇಟ್ಟತ್.
ಅಕ್ಕಣೆಕ್ ಮೈಮನ್
ಕ್‌ಂಡಿ ಕೊಡ ನಲ್ಲಾನ
ಕೈಕೆಡ್‌ತ್ ಕೊಂಡಿತ್
ಕಟ್ಟ್‌ಕಾಲ್ ನಲ್ಲಾಂಗ್
ಮೂಮ ಮೂಮ ಓಂಗಿತ್
ಕಟ್ಟಡಿಕ್ ಇಟ್ಟತ್.
ಕೇಳೆನ್ನಡ ಸಂಜಾದಿ
ಈನಂಗುಂಡ್ ಪೋರಾಂದ್
ಬೊಳ್ಳಿಡ ತಳಿಯಕ್
ಬೊಳ್ಳ ತೆಂಗೆ ನೀರಾಯಿ
ನೀಲಕೊಡಿ ಚಾವುಡ
ಕುಪ್ಪಿ ಬಾಯಿ ನೀಬೆಚ್ಚ.
ಅಕ್ಕಣೆಕ್ ಸಂಜಾದಿ
ಬೆಂದುಡ ಮರಿಯಾದಿ
ಒತ್ತೆ ಪಣ ಇಟ್ಟತ್.
ಅಕ್ಕಣೆಕ್ ಸಂಜಾದಿ
ಉಯಿ! ತನ್ನಡ ದೇವಿಯೊ
ಕೆಂದಾವರೆ ಕೈಯ್‌ಲ್
ಕುಪ್ಪಿ ಬಳಿ ನಲ್ಲಾನ
ಕಟ್ಟ್‌ಕಾಲ್ ನಲ್ಲಾಂಗ್
ಕುಟ್ಟಿತ್ ಪೊಳಿಚತ್.
ಕುಟ್ಟಿತ್ ಪೊಳಿಚಿತ್
ಉಯಿ! ತನ್ನಡ ದೇವಂಡ
ಕುಟ್ಟ್ ಮಡ್‌ಕ್‌ಟ್ಟತ್.
ಓರಂದೀರಂಡೆಣ್ಣಣೆ
ನೀಲಕೊಡಿ ಚಾವುಕ್
ಇಟ್ಟದೆಲ್ಲಾ ಉತ್ತ್‌ಚಿ.
ಚಾಂಡಾಳ ಪೊಲೆಯಃ್
ಕಾಮುರಿ ಕೊಡ್‌ತತ್.
ಈನಂಗುಂಡ್ ಪೋರಾಂದ್
ನೀಲಕೊಡಿ ಚಾವುಕ್
ಬೊಳ್ಳಿ ಪೋಲೆ ಬಟ್ಟೆನ
ಮೂಡ್‌ಲ್‌ಟ್ಟಿ ಮುಚ್ಚಿತ್
ಎಣ್ಣೆ ಮಂಜ ತೇಚಿತ್
ಕೈ ಮುರುವೆಳಿ ಬಾಲ
ನೀಲಕೊಡಿ ಚಾವುನ
ಮಾವು ಪುಳ್ಳಿ ಮೀದಲ್
ಪಾಂಗರಿಂಜಿ ಬೆಚ್ಚತ್.
ಅಕ್ಕಣೆಕ್ ದೇವಿಯೊ
ಕಂಬೆ ಪುಳ್ಳಿಡಡಿಕ್
ತೆರಂಗೊಳ್ಳಿ ಬೆಚ್ಚತ್.
ತೆರಂಗೊಳ್ಳಿ ಬೆಚ್ಚಿತ್
ಇಲ್ಲವನೂ ಬೆಂದುವೂ
ವೈಯ್ಯನೆ ಪಿರಿಂಜತ್.
ಕೇಳೊ ಕೇಳೊ ಸಂಜಾದಿ
ತೆರಂಗೊಳ್ಳಿ ಬೆಕ್ಕಣೆ
ಅಗ್ಗಿ ಬಾಯಿ ದೇವಯ್ಯ
ಮಾರ್ ಬೆಚ್ಚಿ ಕತ್ತ್‌ಚಿ.
ತಿತ್ತ್ ಮಾರ್ ಕೂಡಣೆ
ಕೈ ಮುರುವ ಬಾಲಂಗ
ಜೋಡ್ ಬೊಡಿ ಬೆಚ್ಚತ್.
ಓರಂದೀರಂಡೆಣ್ಣಣೆ
ಚಾವು ತ್‌ೕರ ಬೆಂಜಿತ್
ಬೂದಿ ಆಯಿ ಬುದ್ದತ್.
ಅಕ್ಕಣೆಕ್ ಬಾಲಂಗ
ಬಟ್ಟೆಕುಳ್ಳ ಕೂಪೋದಿ
ಕಯಿಚಿತಲ್ಲಿ ಬೆಚ್ಚತ್.
ಕಯಿಚಿತಲ್ಲಿ ಬೆಚ್ಚಿತ್
ಒತ್ತೆ ಬೊಡಿ ಬೆಚ್ಚಿತ್
“ನೀ ಪೋನೋರ್ ಬಟ್ಟೆಕ್
ಕಲ್ಲ್ ಮುಳ್ಳ್ ಇಟ್ಟೋಳೊ”
ಎಂದೆಣ್ಣತ್ ಪರಂದಿತ್
ತೂಪೆಂಜಿ ಪಿರಿಂಜಿತ್

ಅಂದಲ್ಲ ಪಿನಿಯಾಂದ್
ಚುಟ್ಪ್ ಸ್ವರ್ಗ ಪೋನವಂಡ
ಚುಟ್ಪ್ ಬುದ್ದ ಬೂದಿನ
ಇಲ್ಲವನೂ ಬೆಂದುವೂ
ಗಂಗೆಕ್ಟ್ಪ್ ಕೊಂಡತ್.
ಅಂದ್ ತೊಟ್ಪ್ ಇಂದೋಳ
ಈ ಒಕ್ಕ ಮನೆಯಿಲ್
ಮಕ್ಕಳೂ ಮ್ಯೆಮಕ್ಕಳೂ
ತ್ಽಕೆ ನೋಂಬ್ ನಿಂದಿತ್
ಇಂದಿಯ ದಿನತ್‌ಲ್

ತ್ಽಕೆನ ಕಯಿಚಿತ್
ಅಯ್ಯಣ್ಣ ಪೆದಲಾಲೆ
ಇಲ್ಲವಂಗೂ ಬೆಂದುಕೂ
ತನ್ನಡೋರ್ ಊರೋಂಗೂ
ಪಟ್ಟಮಕೂ ಪಾರ್‌ವಕೂ
ಜೋಯಮ್ಮಕೂ ದೊಂಬಕೂ
ಪಾಪಿ ಪರದೇಶಿಕೂ
ಜಾತಿ ನುಪ್ಪತಂಜಾಂಗೂ
ಅನ್ನ ದಾನ ಕೆಯ್ಯುವ.

ಇನ್ನು 173ನೇ ಪುಟದಲ್ಲಿ "ಚತ್ತಲ್ಲಿ ಪರೆಯತಿ" ಎಂದು ಹಾಡುತ್ತಾ ಮುಂದುವರಿಸಬೇಕು.

ಕೆಲವು ಕಡೆಗಳಲ್ಲಿ ರಾತ್ರೆಯೆಲ್ಲಾ ಪೊಲಿಚಿ ಪಾಡುತ್ತಾ ಬೆಳಕರಿಯುವಾಗ ಓಣಿಗೆ ಹೋಗಿ, 101ನೇ ಪುಟದಲ್ಲಿರುವ ಪದ್ಯವನ್ನು ಹಾಡುತ್ತಾ ಬರುವರು.

೩. ಹಬ್ಬಗಳು

ಕೊಡಗರ ಹಬ್ಬಗಳಲ್ಲಿ "ಕೈಲುಪೊಳ್ದು", ಕಾವೇರಿ ಸಂಕ್ರಮಣ, "ಪುತ್ತರಿ ಪೊಳ್ದ್", ಶಿವರಾತ್ರೆ, ಯುಗಾದಿ ಮತ್ತು ವಿಷು ಸಂಕ್ರಮಣ ಎಂಬವುಗಳು ಸಾರ್ವಾಜನಿಕವಾದ ಹಬ್ಬಗಳು.

ಇವುಗಳಲ್ಲದೆ ಆಯಾಯ ನಾಡುಗಳಲ್ಲಿ ನಾಡು ದೇವತೆಯ ಹಬ್ಬವೂ ಊರುಗಳಲ್ಲಿ ಊರು ದೇವತೆಯ ಹಬ್ಬವೂ, ಕೇರಿಗಳಲ್ಲಿ ಕೇರಿ ದೇವತೆಯ ಹಬ್ಬವೂ, ಮನೆಗಳಲ್ಲಿ ಗೃಹ ದೇವತೆಯ ಹಬ್ಬವೂ ಮತ್ತು ಎರಡು ಮೂರು ಗ್ರಾಮಗಳು ಸೇರಿ ಮಾಡುವಂಥ ಹಬ್ಬಗಳೂ ಅನೇಕವಿರುವವು.

ಕೈಲ್‌ಪೊಳ್ದ್

ಕೇಲ್‌ಪೊಳ್ದ್ ಎಂಬುವುದು ಕೈಲ್ ಬರುವುದನ್ನು ಕುರಿತು ಮಾಡುವ ಹಬ್ಬವಾಗಿದೆ.

ಕೈಲ್=ಕಾಯಿಯಾಪ ಕೊಂಬ್+ಪೊಳ್ದ್=ಪೊಲಿವದ್. ಉದಾ: ಪನೆರ ಕೈಲ್.

ಕೈಲ್ ಎಂಬುವುದು "ಕಯಪ" ಎಂಬ ಕೃದ್ವಾಚಿಯ ನಾಮಪದ. ಉದಾ: "ಮೊಂಗಯಪ ಮರ ಆಚೆಂಗಿಯೂ ಮನೆರ ಪಕ್ಕ ಇಪ್ಪಕಾಗ."

ಕೈಲ್‌ಪೊಳ್ದನ್ನು ಈಗ ಕೆಲವು ನಾಡುಗಳಲ್ಲಿ ಸಿಂಹ ಮಾಸ 18ಕ್ಕೆ ನಡೆಸುತ್ತಾರೆ.

ಪೂರ್ವದಲ್ಲಿ ಆಯಾಯ ನಾಡಿನವರೆಲ್ಲರೂ ನಾಡು ದೇವಸ್ಥಾನಗಳಲ್ಲಿ ಸೇರಿ ಕಣಿಯನನ್ನು ಕರೆಸಿ ದಿವಸವನ್ನು ನಿಶ್ಚೈಸಿಕೊಳ್ಳುತ್ತಿದ್ದರು. ಈ ಪದ್ಧತಿ ಕೆಲವು ನಾಡುಗಳಲ್ಲಿ ಈಗಲೂ ಇದೆ.

ಕಣಿಯನು ಹಬ್ಬಕ್ಕೆ ಶುಭ ದಿವಸ ಹೇಳುವುದಲ್ಲದೆ, ಆಯುಧ ಪೂಜೆಗೆ ಮುಹೂರ್ತ, ಬೇಟೆಯಾಡಬೇಕಾದ ದಿಕ್ಕು, ಬೇಟೆ ಫಲಿತವಿರುವ ನಕ್ಷತ್ರದಲ್ಲಿ ಹುಟ್ಟಿದ ಮನುಷ್ಯನ ಹೆಸರು, ಪೊಯ್ಯ ಕಣೆಮರ ಕಡಿಯುವುದಕ್ಕೆ ಮುಹೂರ್ತ ಮತ್ತು ನಾರು ಕಡಿಯುವುದಕ್ಕೆ ಮುಹೂರ್ತ ಸಹ ಹೇಳುವನು.

ಹಬ್ಬದ ದಿನ ಹೊತ್ತಾರೆ ಕೋವಿ, ಒಡಿಕತ್ತಿ, ಪೀಚೆಕತ್ತಿ, ಈಟಿ, ಬರ್ಚಿ ಮುಂತಾದ ಆಯಧಗಳನ್ನು ಉಜ್ಜಿ ಕನ್ನಿಮೂಲೆ ಕೋಣೆಯಲ್ಲಿ ಅಥವಾ ನೆಲ್ಲಕ್ಕಿಯಲ್ಲಿ ಮಡಗಬೇಕು.

ಆಯುಧ ಪೂಜೆ : ಮಧ್ಯಾಹ್ನ ಊಟ ಮಾಡುವುದಕ್ಕಿಂತ ಮೊದಲು ಆಯುಧಗಳಿಗೆ ದೂಪದಿಂದ ಹೊಗೆ ಕೊಟ್ಟು ಅವುಗಳಿಗೆ ಗಂಧದಿಂದ ಬೊಟ್ಟುಗಳನ್ನು ಹಾಕಿ ಕೋವಿಯ ಮೋಬಾಯಿಗೆ ಒಂದು ತೋಕ್‌ಪೂವ್ ಸಿಕ್ಕಿಸಿ ಒಂದು ಅಗ್ರದೆಲೆಯಲ್ಲಿ ಅಡಿಗೆ ಮಾಡಿದ ಪದಾರ್ಥಗಳೆಲ್ಲವನ್ನು ಹಾಕಿ ಆಯುಧಗಳ ಹತ್ತಿರ ಮಡಗಬೇಕು.

ಮಧ್ಯಾಹ್ನದ ಊಟ ಉಪಚಾರಗಳನ್ನು ತೀರಿಸಿ ಸಾಧಾರಣ 4 ಗಂಟೆಯ ಸಮಯದಲ್ಲಿ ನೂತನ ವಸ್ತ್ರಗಳನ್ನು ಧರಿಸಿ ಮನೆಯ ಗಂಡಸರೆಲ್ಲರೂ ಬಂದು ಆಯುಧಗಳ ಮುಂದೆ ನಿಲ್ಲಬೇಕು. ಆಗ ಆ ಮನೆತನದ ಹಿರಿಯವನು ಒಂದು ಕೋವಿಯನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು,

"ನರಿನೊ ಪಂದಿನೊ ಬಟ್ಟೆಬುಟ್ಟ್ ಪಣಂಗ್, ಶತ್ತರುನ ಎಣಂಗತೆ, ಶತ್ತುರು ಎಣಂಗ್‌ಚೆಂಗಿ ಬಟ್ಟಿ ಕೆಟ್ಟಿ ಪಣಂಗ್, ಮಿತ್ತುರುಕ್ ತೊಣೆಯಾಯಿ ನಿಲ್ಲ್; ರಾಯಂಗ್ ಮಿನಿಯತೆ, ದೇವರ

ಮರೆಯತೆ" ಎಂದು ಹೇಳಿ ಕೋವಿಯನ್ನು ಬಾಕಿ ಇರುವವರಲ್ಲಿ ಹಿರಿಯನಿಗೆ ಕೊಡಬೇಕು. ಅವನು ಯಜಮಾನನ ಕಾಲಿ ಹಿಡಿದು ನಮಸ್ಕರಿಸಿ ಕೋವಿಯನ್ನು ತೆಗೆದುಕೊಳ್ಳಬೇಕು. ಮಿಕ್ಕವರು ಹಾಗೆಯೇ ಹೊಂದಿಕೊಳ್ಳುವರು.

ಆಮೇಲೆ ಅವರೆಲ್ಲರೂ ಆ ಗ್ರಾಮದಲ್ಲಿ ನಿಶ್ಚಯಿಸಿರುವ ಮಂದಿಗೆ ಅಥವಾ ಸ್ಥಳಕ್ಕೆ ಹೋಗಿ ಅಲ್ಲಿ ಗುರಿಗೆ ಅಥವಾ ತೆಂಗಿನಕಾಯಿಗೆ ಗುಂಡು ಹೊಡೆಯುವರು. ಗುಂಡು ಹೊಡೆಯುವಾಗ ಆ ಗ್ರಾಮದ ತಕ್ಕನು ಮೊದಲು ಗುಂಡು ಹೊಡೆಯಬೇಕು. ಹೆಂಗಸರು ಕೈಲ್ ಪೊಳ್ದ್ ಮಂದಿಗೆ ಹೋಗುವುದಿಲ್ಲ.

ಆ ಮೇಲೆ ಓಡುವುದು, ಹಾರುವುದು, ಕಲ್ಲು ಎಸೆಯುವುದು ಮುಂತಾದ ವಿನೋದಗಳನ್ನು ಮಾಡುವುದುಂಟು.

ಬೇಟೆ : ಹಬ್ಬವು ಕಳೆದನಂತರ ಬೇಟೆಯಾಡುವ ದಿವಸಗಳನ್ನು ನಿಶ್ಚಯ ಮಾಡಿಕೊಳ್ಳುವರು. ಬೇಟೆಯಲ್ಲಿ ಏನಾದರೂ ಸಿಕ್ಕಿದರೆ ಗುಂಡು ಹೊಡೆದವನಿಗೆ, ಗುಂಡು ಹೊಡೆದ ಜಾತಿಯ ತಲೆ, ಒಂದು ತೊಡೆ ಮತ್ತು ಒಂದು ಬೀವು ಕೊಡಬೇಕು. ಜಾತಿಯನ್ನು ಮೊದಲು ಮುಟ್ಟಿದವನಿಗೆ (ಬಾಬಟ್ಟ್‌ಕಾರಂಗ್) ಒಂದು ಬೀವು, ಒಂದು ಕೈಪಾರು ಕೊಡಬೇಕು. ಮೊದಲು ಗುಂಡು ಹೊಡೆದವನ ಗುಂಡು ತಗಲಿ ಆ ಗುಂಡಿನಲ್ಲಿ ಆ ಜಾತಿಯು ಸಾಯುತ್ತಿರಲಿಲ್ಲವಾಗಿದ್ದರೂ ಬಹುಮಾನಗಳೆಲ್ಲಾ ಅವನಿಗೇ ಸಿಕ್ಕುವುವು. ಇದಲ್ಲದೆ ಇವರಿಗೆ ಬೇರೆ ಜನರಿಗೆ ಸಿಕ್ಕುವಂತೆ ಪಾಲು ಸಹ ಸಿಕ್ಕುವುದು.

ಬೇಟೆಗೆ ಬಂದಿರುವ ನಾಯಿಗಳಿಗೆ ಬೇಟೆಗಾರನಿಗೆ ಸಿಕ್ಕುವಷ್ಟು ಪಾಲು ಸಿಕ್ಕುವುವು. ನಾಯಿಗಳ ಪಾಲುಗಳನ್ನು ನಾಯಿಗಳ ಯಜಮಾನರು ತೆಗೆದುಕೊಳ್ಳುವರು. ಹೆಣ್ಣು ನಾಯಿಗಳಿಗೆ ಪಾಲಿಲ್ಲ!

ಗುಂಡು ಹೊಡೆದು, ಜಾತಿಗೆ ತಗಲಿದ ಚಿಹ್ನೆಯು ಕಾಣದಿದ್ದರೆ ಗುಂಡು ಹೊಡೆದವನ ಕಾಲುಗಳ ಮಧ್ಯೆ ಶಿಕ್ಷಾರೂಪವಾಗಿ ಮುಳ್ಳು ಎಳೆಯುತ್ತಾರೆ; ಚಿಹ್ನೆಯು ರಕ್ತವಾಗಿರಬೇಕು. "ರಕ್ತಕ್ಕೆ ನಂಬಿಗೆ" ಎಂದು ಹೇಳುವರು. ಬುಧವಾರ ಮತ್ತು ಶನಿವಾರ ದೇವರ ಕಾಡುಗಳಲ್ಲಿ ದೇವತೆಗಳು ಬೇಟೆಯಾಡುವರೆಂದೂ ಆ ದಿವಸ ದೇವರ ಕಾಡುಗಳಲ್ಲಿ ಬೇಟೆಯಾಡಿದರೆ ಅಪಾಯವಾಗಿತ್ತದೆಂದೂ ತಿಳಿದುಕೊಂಡಿರುವರು.

ಕದಿರು ಕಂಡ ಒಡನೆ ಕದಿರಿನ ಹುಲ್ಲಿಗೆ ಗಂಟುಹಾಕಿ ಪತ್ತಾಯದ ಹತ್ತಿರ ಒಂದು

"ಕದ್ ಕಂಡ ಕದ್ ಕಂಡ ಪತ್ತಾಯ,

ಬೊತ್ತತೆ ಬೊರ್‌ಂಡ್‌ತೆ ಪತ್ತಾಯ" ಎಂದು ಹೇಳುವರು.

ಕಾವೇರಿ ಚಂಗ್ರಾಂದಿ (ಸಂಕ್ರಮಣ)

ಈ ಹಬ್ಬವು ತುಲಾ ಸಂಕ್ರಮಣದಲ್ಲಿ ಆಗುತ್ತದೆ. ಸೂರ್ಯನು ತುಲಾರಾಶಿಗೆ ಸೇರುವಾಗ ಕಾವೇರಿಯು ಹುಟ್ಟುವ ತಲಕಾವೇರಿಯ ಕುಂಡಿಕೆಯಲ್ಲಿ ತೀರ್ಥ ಬರುವ ಸಂಗತಿಯನ್ನು 14ನೇ ಪುಟದಲ್ಲಿ ಬರೆದಿರುವುದನ್ನು ನೋಡಿ.

ಈ ದಿವಸ ಕೊಡಗರು ಹೆಚ್ಚಾಗಿ ಕಾವೇರಿಗೆ ಹೋಗುವರು. ಅಲ್ಲಿಗೆ ಹೋಗಲು ಅನುಕೂಲವಿಲ್ಲದಿರುವವರು ಹರಿಶ್ಚಂದ್ರಕ್ಕಾಗಲೀ, ಬಲಮುರಿಗಾಗಲೀ ಮಾರನೆ ದಿನ ಹೋಗುವರು. ಸಂಕ್ರಮಣ ಕಳೆದ ಮೇಲೆ ಬರುವ ಕೃಷ್ಣ ಪಕ್ಷಕ್ಕೆ ಗುಯ್ಯಕ್ಕೆ ಹೋಗುವುದೂ ಉಂಟು. ತುಲಾ ಸಂಕ್ರಮಣಕ್ಕೆ ಕಾವೇರಿಗೆ ಹೋಗದಿದ್ದರೂ ವೃಶ್ಚಿಕ ಸಂಕ್ರಮಣದವರೆಗೂ ಹೋಗುತ್ತಿರುವರು.

ತುಲಾ ಸಂಕ್ರಮಣಕ್ಕೆ ಬಲ್ಯ ಚಂಗ್ರಾಂದಿ ಎಂತಲೂ, ವೃಶ್ಚಿಕ ಸಂಕ್ರಮಣಕ್ಕೆ ಕ್‌ರ್ ಚಂಗ್ರಾಂದಿ ಎಂತಲೂ ಹೇಳುವರು.

ಬೊತ್ತು : ಬೊತ್ತು ಚುಚ್ಚುವುದಕ್ಕೆ ಒಂದು ತರದ ಮರವಿದೆ. ಈ ಮರಕ್ಕೆ ಪೊಂಗ ಮರವೆಂದು ಹೆಸರು. ಅದನ್ನು ಕಾವೇರಿ ಸಂಕ್ರಮಣ ದಿನ ಕೊಡಗು ದೇಶದಲ್ಲಿರುವ ಎಲ್ಲಾ ಗದ್ದೆ, ಬಾವಿಯ, ಕೆರೆ, ದನದ ಕೊಟ್ಟಿಗೆಯ ಹಟ್ಟಿ, ಗೊಬ್ಬರ ಗುಂಡಿ ಮೊದಲಾದ ಜಾಗಗಳಿಗೆ ಒಂದೊಂದು ಬೊತ್ತನ್ನು ಚುಚ್ಚಿ, ಬೊತ್ತಿನ ತುದಿಯನ್ನು ಒಡೆದು ಅದರ ಮಧ್ಯಕ್ಕಾಗಿ ಕೈಬಳ (ಕೈಬಿಲಿ) ಬಳ್ಳಿಯನ್ನು ಸಿಕ್ಕಿಸುತ್ತಾರೆ. ಆದರೆ ಕೆಲವು ಕಡೆಗಳಲ್ಲಿ ಬಿದುರು ದಬ್ಬೆಗಳನ್ನೂ, ಕೆಲವು ಕಡೆಗಳಲ್ಲಿ "ಕಾಂಡ" ಕೊಂಬನ್ನೂ ಚುಚ್ಚುತ್ತಾರೆ. ಬೊತ್ತು ಚುಚ್ಚದೇ ಇರುವುದೂ ಉಂಟು. ಎಲ್ಲದಕ್ಕೂ ಒಂದೊಂದು ಕಾರಣ ಉಂಟು.

ಕಣಿ ಪೂಜಿಸುವುದು : ಕಣಿ ಪೂಜಿಸುವುದು ಅಂದರೆ ಭೂದೇವತೆಯನ್ನು ಪೂಜಿಸುವುದು. ಹೆಚ್ಚಾಗಿ ಇದನ್ನು ಕಾವೇರಿ ಸಂಕ್ರಮಣದ ಮಾರಣೆ ದಿವಸವೂ ಕೆಲವು ಕಡೆಗಳಲ್ಲಿ ವಿಷ್ಣು ಸಂಕ್ರಮಣದಲ್ಲಿಯೂ ಮಾಡುವುದುಂಟು. ಇದರ ಕ್ರಮ ಹೇಗೆಂದರೆ:--

ಒಂದು ದಿವಸಕ್ಕೆ ಮೊದಲು ಹೂವುಗಳನ್ನು ತಂದು ಇಬ್ಬನಿಯಲ್ಲಿಟ್ಟು ಮಾರಣೆ ದಿವಸ ಕೋಳಿ ಕೂಗುವ ಹೊತ್ತಿಗೆ ಒಬ್ಬ ಮುತ್ತೈದೆಯು ಒಂದು ತಳಿಯಕ್ಕಿ ಬೋಳಕನ್ನು ಮಾಡಿ ಆ ಗಂಗಳದ ಮಧ್ಯದಲ್ಲಿ ಒಂದು ಕೆಂಪು ರೇಷ್ಮೆ ವಸ್ತ್ರವನ್ನು ತ್ರಿಕೋಣಾಕಾರವಾಗಿ ಮಡಸಿಟ್ಟು ಅದರ ಸುತ್ತಲೂ ಹೂವುಗಳನ್ನು ಇಟ್ಟು, ಅದರಲ್ಲಿ ಒಂದು ತೆಂಗಿನಕಾಯಿ ಅಥವಾ ಸೌತೆಕಾಯಿ ಮಡಗಿ ಅದರಲ್ಲಿ 3 ಎಲೆ 3 ಅಡಿಕೆಗಳನ್ನು ಇಟ್ಟು, ಕೆಂಪು ವಸ್ತ್ರದಲ್ಲಿರುವ ಹೂವುಗಳ ಸುತ್ತಲೂ ಆಭರಣಗಳನ್ನು ಮಡಗಿ ಇದನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ಮಡುಗುವಳು.

ಗಂಗೆ ಪೂಜೆ : ಕಣಿ ಪೂಜಿಸಿ ಆದ ಮೇಲೆ ಮುತ್ತೈದೆಯು ಬಾವಿಗೆ ಹೋಗಿ ಗಂಗೆ ಪೂಜೆಯನ್ನು ಮಾಡಿ ಹಿಟ್ಟು ಮುಂತಾದುದ್ದನ್ನು ಬಾವಿಯ ಹತ್ತಿರ ಚುಚ್ಚಿದ ಬೊತ್ತಿನ ಮೇಲಾಗಲೀ ಇಲ್ಲವೆ ಬಾವಿಯ ದಡದಲ್ಲಾಗಲೀ ಮೀದಿ ಮಡಗಿ ಬಾವಿಯಿಂದ ನೀರು ತೆಗೆದುಕೊಂಡು ಬಂದು ಅಡಿಗೆ ಮಾಡಬೇಕು. ಗಂಡಸರು ಸ್ವಲ್ಪ ಹಿಟ್ಟನ್ನು ತೆಗೆದುಕೊಂಡು ಹೋಗಿ ಗದ್ದೆಯ ತೆವರಿಯಲ್ಲಿ ಅಥವಾ ಬೊತ್ತಿನ ಮೇಲೆ ಮೀದಿ ಮಡಗಿ ಮೂರು ದಪ ಕೂಗುವರು. ಆಮೇಲೆ ಆ ಹಿಟ್ಟನ್ನು ಹೊಲೆಯರು ಅಲ್ಲಿಂದ ತೆಗೆದುಕೊಂಡು ಹೋಗಿ ತಿನ್ನುವರು.

ಗಂಗಳದಲ್ಲಿ ಹೂವನ್ನು ಮಧ್ಯಾಹ್ನದ ಮೇಲೆ ತೋಡಿಗಾಗಲೀ ಹೊಳೆಗಾಗಲೀ ಹಾಕುವರು.

---

* ಒಂದು ನಾಡಿನವರು ಮಾತ್ರ ಕಾಂಡ ಕೊಂಬನ್ನು ಬೊತ್ತಿಗೆ ಪೊಂಗದ ಬದಲಿಗೆ ಉಪಯೋಗಿಸುವುದನ್ನು ಕಂಡು ಆಶ್ಚರ್ಯದಿಂದ ವಿಚಾರ ಮಾಡಿದಲ್ಲಿ, ಪೂರ್ವದಲ್ಲಿ ಬೊತ್ತು ತರುವುದಕ್ಕಾಗಿ ಆ ನಾಡಿನ ಹೊಲೆಯನೊಬ್ಬನು ಕಾಡಿಗೆ ಹೋಗಿರುವಾಗ ಅವನನ್ನು ಹುಲಿಯು ಹಿಡಿದು ಬಿಟ್ಟಿದ್ದರಿಂದ "ಕಾಂಡ ಕುತ್ತ್‌ಚೆಂಗಿ ನ್‌ೕಂಡಿತ್ ಬೊಳೆಯು" ಎಂದು ಒಂದು ಗಾದೆಯನ್ನು ಕಲ್ಪಿಸಿಕೊಂಡು ಆ ನಾಡಿನವರು ಅವರ ಗದ್ದೆ ಬೊತ್ತಿಗೆ ಪೊಂಗದ ಬದಲಿಗೆ ಕಾಂಡ ಕೊಂಬನ್ನು ಆ ದಿವಸ ಉಪಯೋಗಿಸುತ್ತಿದ್ದುದರಿಂದ ಆ ಪದ್ಧತಿಯನ್ನೇ ಆನುಸರಿಸುವುದಾಗಿ ತಿಳಿಯಬಂತು. ಇದೇ ರೀತಿ ಯಾವುದಾದರೂ ಒಂದೊಂದು ಕಾರಣದಿಂದ ಬೊತ್ತಿಗೆ ಪೊಂಗದ ಬದಲಿಗೆ ಇತರ ಮರಗಳ ಕೊಂಬುಗಳನ್ನು ಚುಚ್ಚುವುದು ಉಂಟು.

ಪುತ್ತರಿ (ಹುತ್ತರಿ)

ಪುತ್ತರಿ=ಪುದ್+ಅರಿ(ಹೊಸ ಅಕ್ಕಿ). ಈ ಪುತ್ತರಿಯು ಹೊಸ ಅಕ್ಕಿ ಬರುವುದನ್ನು ಕುರಿತು ಮಾಡಿದ ಹಬ್ಬವಾಗಿದೆ. ಈ ಹಬ್ಬದ ದಿನವನ್ನು ಕಿಗ್ಗಟ್ಟು ನಾಡಿನಲ್ಲಿ ಆವರೇ ನಿಶ್ಚೈಸುತ್ತಾರೆ. ಕೊಡಗಿನ ಬೇರೆ ಕಡೆಗಳಲ್ಲಿ ಪುತ್ತರಿ ಪೊಳ್‌ದ್ ಮಲೆಯಾಳದಲ್ಲಿ ಆಗುವ ಓಣವೆಂಬ ಹಬ್ಬ ಕಳೆದ ಮೂರು ತಿಂಗಳಲ್ಲಿ ಆಗುವುದು. ಆ ದಿನವು ಕೃತ್ತಿಕಾ ಅಥವಾ ರೋಹಿಣಿ ನಕ್ಷತ್ರವಾಗಿರುತ್ತದೆ.

ಪುತ್ತರಿ ಪೊಳ್‌ದಿಗಿಂತ ಮೊದಲು ಹುತ್ತರಿಗೆ ಸಮ್ಮಂಧವಾದ ಈಡು ಎಂಬುವುದು ಆಗುವುದುಂಟು.

ಈಡು : ಇದು ರಾತ್ರಿ ಸುಮಾರು 8 ಗಂಟೆಯಿಂದ ಮಧ್ಯರಾತ್ರಿಯವರೆಗೂ ನಡೆಯುತ್ತದೆ. ಈ ಸಮಯಕ್ಕೆ ಸರಿಯಾಗಿ ಕುಳವಾರು ಒಬ್ಬನಾದರೂ ತಕ್ಕನ ಮನೆಗೆ ಹೋಗಬೇಕು. ಅಲ್ಲಿ ಊಟ ಉಪಚಾರಗಳನ್ನು ತೀರಿಸಿಕೊಂಡು ಮಂದಿಗೆ ಹೋಗಬೇಕು. ನಾಲ್ಕು ಜನರು ದುಡಿ ತೆಗೆದುಕೊಂಡು 101ನೇ ಪುಟದಲ್ಲಿರುವ ಹಾಡನ್ನು ಹಾಡುತ್ತಾ ಹೋಗಬೇಕು.

ದುಡಿ ತೆಗೆದು ಹಾಡಲು ಗೊತ್ತಿರುವುದು ಕೊಡಗನಾದವನಿಗೆ ದೊಡ್ಡ ವಿದ್ಯಾಸಂಪತ್ತಾಗಿರುತ್ತದೆ. ಹಾಡಲು ಗೊತ್ತಿಲ್ಲದವರು ದುಡಿ ತೆಗೆದು ಹಾಡುವುದು ಮರ್ಯಾದೆಗೆ ಕಡಿಮೆಯಾದ ಕೆಲಸ ವೆಂದು ಹೇಳುವರು. ಈ ತರದ ಅಜ್ಞಾನದಿಂದಲೂ, ಅವಿವೇಕದಿಂದಲೂ ಜನರು ಗರ್ವವನ್ನು ತೋರಿಸುತ್ತಾ, ಅನೇಕ ಹಬ್ಬಗಳು ನಿಲ್ಲಲೂ ಊರು ಪಂಗಡವಾಗಲೂ ಕಾರಣವಾಯಿತು.

ಇದರ ಪದ್ಧತಿ ಹೇಗೆಂದರೆ :– ಊರಿನ ತಕ್ಕನ ಮನೆತನದ ಯಜಮಾನನಿಗೆ ಅಥವಾ ಅವನು ಇಲ್ಲದಿರುವಾಗ ಅವನ ಪ್ರತಿನಿಧಿಗೆ ದುಡಿ ತೆಗೆದು ಹಾಡಲು ಹೇಳುವುದಕ್ಕೆ ಯಾರಿಗೂ ಹಕ್ಕಿರುವುದಿಲ್ಲ. ಪ್ರತಿನಿಧಿಯಾಗಿರುವವನು ತಕ್ಕನ ಮನೆತನದವನೇ ಆಗಿರಬೇಕು. ಆ ಯಜಮಾನನು ತನ್ನ ಮನೆಯವರಿಗೆ ಸಮೇತವಾಗಿ ಊರಲ್ಲಿ ಯಾರೊಬ್ಬನಿಗೂ ದುಡಿ ತೆಗೆದು ಹಾಡಲು ಹೇಳಬಹುದು. ಅವನು ದುಡಿ ತೆಗೆಯಲೇಬೇಕು. ದೇವತಕ್ಕ, ಚಂಗೋಲ ಅಥವಾ ಚಂಗ ಮತ್ತು ಕಾವುಕಾರರೆಂಬ ಕುಳಗಳಿಗೆ ದುಡಿ ತೆಗೆಯಲು ಮಾಪು ಇರುವುದಿಲ್ಲ. ತಕ್ಕನ ಈ ಅಧಿಕಾರವು ಹಬ್ಬದಲ್ಲಿ ಮಾತ್ರವಲ್ಲ; ಊರಲ್ಲಿ ಆಗುವ ಮದುವೆ, ತಿಥಿ ಮುಂತಾದವುಗಳಲ್ಲಿಯೂ ಸಹ ನಡೆಯುತ್ತದೆ.

ಊರವರು ಮಂದಿಗೆ ಹಾಡುತ್ತಾ ಹೋಗುವಾಗ ಮೇದರು ಅಥವಾ ಹೊಲೆಯರು ಮುಂದುಗಡೆ ದೋಳು ಹೊಡೆಯುತ್ತಾ ವಾದ್ಯ ಮಾಡುತ್ತಾ ಹೋಗುವರು. ಹಾಡುವವರು ಮಂದಿಗೆ ತಲುಪಿದ ಒಡನೆ ಈ ಕೆಳಗಿನ ಹಾಡನ್ನು ಹಾಡಿ, ಹಾಡನ್ನು ನಿಲ್ಲಿಸಬೇಕು.

"ಬಾಳ್ ಬಾಳೆನ್ನಡ, ಜಬ್ಬೂಮಿ ಬಾಳೋ,
ಜಬ್ಬೂಮಿ ಮೀದಲ್, ಪೂಮಂದ್ ಬಾಳೋ
ಪೂಮಂದ್ ಮೀದಲ್, ದೇವಯ್ಯ ಬಾಳೋ,
ದೇವಂಗೊತ್ತಾಜಾರ, ಪಾಡಿಚೊ ಎಂಗಾ,
ಆಜಾರ ಪಾಡಿತ್ ಬೆಕ್ಕನ ಎಂಗಾ
ಲೇಲಾಲೇ ಲಾಲೇಲ ಲೇಲೇಲೊ ಲೇಲೋ.!"

ಈ ಹಾಡೂ ನಿಲ್ಲಿಸಿದ ಒಡನೆ ಊರವರೆಲ್ಲರೂ ಸೇರಿ "ಅರಪುವತರ" ಹಾಕುವರು. ಆಮೇಲೆ "ನಾಡೆ" ಕರೆಯುವರು. ಕೆಲವು ಕಡೆಗಳಲ್ಲಿ "ಚೆಂಡು ಕುತ್ತಿ" ಹಾಕಿ "ನಾಡೆ" ಕರೆಯುತ್ತಾರೆ. ಕೆಲವು ಕಡೆಗಳಲ್ಲಿ "ಚೆಂಡುಕುತ್ತಿ" ಇಲ್ಲದೆ "ನಾಡೆ" ಕರೆಯುತ್ತಾರೆ. ಕೆಲವು ಕಡೆಗಳಲ್ಲಿ "ನಾಡೆ"

ಕರೆಯುವುದೇ ಇಲ್ಲ. "ನಾಡೆ" ಕರೆಯುವುದರಲ್ಲಿಯೂ ಒಂದೊಂದು ನಾಡಿನಲ್ಲಿ ಒಂದೊಂದು ತೆರನಾಗಿ ಕರೆಯುತ್ತಾರೆ. ನಮೂನೆಗಾಗಿ ಒಂದು ನಾಡಿನಲ್ಲಿ ಕರೆಯುವ ನಾಡೆಯನ್ನು ಮಾತ್ರ ಈ ಕೆಳಗೆ ಬರೆಯುತ್ತೇನೆ.

(1) ತೋರೆಯೂ ಕುರುಳಿಯೂ

ಪಂದೀಕಾರ ॥ ಕೂಹ! ಅಯ್ಯ ನಾಡೆ ! ಕೂಹ ಮುಂದಲೆ ಮುಂದಲೆಕಾರ !

ನಾಡ್‌ಜನ ॥ನ್‌ಡ ಅಣ್ಣಾಪ್ ಅಡಂದ್ ಪೋಡ್.

ಪಂದೀಕಾರಂಡ ಕಡೆಕಾರ॥ ಬಾಳ್!

ಪಂ॥ ತೋರೆಯೂ ಕುರುಳಿಯೂ ತಚ್ಚಂಡ ಅಟ್ಟತ್‌ಲ್ ಒಕ್ಕತಕ್ಕ ಮುಟ್ಟೆ ಇಟ್ಟ್ ಕೊಂಡತ್‌ಲ್ಯೆಯ್ಯ ನಾಡೇ.

ನಾ॥ ಅಯಂಡ ಇಬ್ಬಡ ಒರ್ಮೆಕೊಕ್ಕನೆ ಒಕ್ಕತಕ್ಕ ಮುಟ್ಟೆ ಇಡೇಲುಳ್ಳಲ ಪಂದೀಕಾರ.

ಪಂ॥ ತೋರೆರ ಕುಞ್ಞನ ತೋರೆ ಪಾರಿಚಂಡ್ ಪೋಚಿ, ಕುರುಳಿರ ಕುಞ್ಞನ ತಚ್ಚ ತಾಳ ತಾಕೋಲು ಇಟ್ಟ್ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಕುರುಳಿರ ಕುಞ್ಞನ ಕುರುಳಿ ಪಾರಿಚಂಡ್ ಪೋವತೆ ಪಿಞ್ಞ ತಚ್ಚ ತಾಳೂ ತಾಕೋಲೂ ಇಡೇಲುಳ್ಳಲ ಪಂದೀಕಾರ.

ಪಂ॥ ಅಕ್ಕ ಕುರುಳಿ ಪೋಯಿತ್ ತಚ್ಚಂಗ್ "ತಚ್ಚಾ, ತಚ್ಚಾ! ತಾಳೂ ತಾಕೋಲೂ ನೀಕಂಡೂ"ಂದ್ ಎಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ। ಕುಞ್ಞನ ಪಾರ್‌ಚಂಡ್ ಪೊಂಡೂಂದ್ ಆನ ಪಿಞ್ಞ, ತಚ್ಚಂಗ್ ತಾಳೂ ತಾಕೋಲೂ ನೀಕುವಕೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅಕ್ಕಣೆಕ್ ತಚ್ಚ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ತಚ್ಚಂಗ್ ಎಕ್ಕಲೂ ಕುಂಬ್ ಮರ ತೇಡಿ ಪೋಪಕುಳ್ಳಾನಂಗುಂಡ್ ಕಾಲೋ ನೇರೋ ಪೋರಾಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ತಚ್ಚಂಗ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಪಂದಿಕ್ "ಪಂದೀ!ಪಂದೀ! ತಚ್ಚಂಡ ವೀಳ್ಯವೂ ಬಾಳೆಯೂ ಕುತ್ತಂಡು"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ತಚ್ಚಂಗ್ ಎಣ್ಣಿತ್ ಕೇಳತ ಪಿಞ್ಞ ಪಂದಿಕ್ ತಚ್ಚಂಡ ವೀಳ್ಯವೂ ಬಾಳೆಯೂ ಕುತ್ತುವ ಕೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅಕ್ಕಣೆಕ್ ಪಂದಿ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಪಂದಿಕ್ ಎಕ್ಕಲೂ ಆಡಾಂಡ ಪಚ್ಚೆ ಬೊಳೆ ತೇಡಿ ಪೋಪಕುಳ್ಳಾನಂಗುಂಡ್ ಕಾಲೋ ನೇರೋ ಪೋರಾಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಪಂದಿಕ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಮೇದಂಗ್ "ಮೇದಾ!ಮೇದಾ! ಪಂದಿಯುಳ್ಳ ಕಾಡ್‌ಕ್ ಪರೆ ಪೊಯ್ಯಂಡೂ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಪಂದಿ ಎಣ್ಣಿತ್ ಕೇಳತ ಪಿಞ್ಞ ಮೇದಂಗ್ ಪಂದಿಯುಳ್ಳ ಕಾಡ್‌ಕ್ ಪರೆ ಪೊಯ್ಯುವ ಕೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೇದ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಮೇದಂಗೆಕ್ಕಲೂ ಓಟೆಕೋ ಓಲಿಕೋ ಮೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಮೇದಂಗ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಎಲಿಕ್ "ಎಲೀ!ಎಲೀ! ಮೇದಂಡ ಪರೆಕ್ ಕಂಗೊತ್ತಂಡೂಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಮೇದಂಗ್ ಎಣ್ಣಿತ್ ಕೇಳತ ಪಿಞ್ಞ ಎಲಿಕ್ ಮೇದಂಡ ಪರೆಕ್ ಕಂಗೊತ್ತುವಕೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಎಲಿ" ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಎಲಿಕೆಕ್ಕಲೂ ಆಡಾಂಡ ಕುಂಬ್ ಪತ್ತಾಯತ್ ನೆಲ್ಲ್ ತೇಡಿ ಮೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಎಲಿಕ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಕೇರೆಕ್ "ಕೇರೇ!ಕೇರೇ! ಎಲಿನ ಮುಡಿಕಂಡೂ" ಂದೆಣ್ಣಿ ಕೊಂಡತ್‌ಲೈಯ್ಯನಾಡೆ.

ನಾ॥ ಎಲಿಕ್ ಎಣ್ಣಿತ್ ಕೇಳತ ಪಿಞ್ಞ ಕೇರೆಕ್ ಎಲಿನ ಮುಡಿಪಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕೇರೆ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕೇರೆಕ್ ಎಕ್ಕಲೂ ಎಣೆಯಾಡಿ ಮೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಕೇರೆ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಅತ್ತಕಾರ ಮಕ್ಕಕ್ "ಅತ್ತಕಾರ ಮಕ್ಕಳೇ! ಅತ್ತಕಾರ ಮಕ್ಕಳೇ! ಕೇರೆನ ಮೊಯ್ಯಂಡೂ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕೇರೆ ಎಣ್ಣಿತ್ ಕೇಳತ ಪಿಞ್ಞ ಅತ್ತಕಾರ ಮಕ್ಕಕ್ ಕೇರೆನ ಮೊಯ್ಯುವಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಅತ್ತಕಾರ ಮಕ್ಕ "ಎಂಗಕ್ ಇಂದೇಕೂ ನಾಳೆಕೂ ಕಾಲೋ ನೇರೋ ಮೋರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಅತ್ತಕಾರ ಮಕ್ಕಕ್ ಎಕ್ಕಲೂ ಪೀಚೋಳಿ ಚಕ್ಕೆ ತೇಡಿಮೊಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಅತ್ತಕಾರ ಮಕ್ಕಕ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಕಾಳೆಕ್ "ಕಾಳೇ! ಕಾಳೇ! ಅತ್ತಕಾರ ಮಕ್ಕಳ ಕುತ್ತಂಡೂ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಅತ್ತಕಾರ ಮಕ್ಕ ಎಣ್ಣಿತ್ ಕೇಳತ ಪಿಞ್ಞ ಕಾಳೆಕ್ ಅತ್ತಕಾರ ಮಕ್ಕಳ ಕುತ್ತುವಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕಾಳೆ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೋರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕಾಳೆಕ್ ಎಕ್ಕಲೂ ಗೊಡ್ಡಿರ ಬಯ್ಯ ಪೊಯಿಪರಾಡಿ ಮೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಕಾಳೆಕೆಣ್ಣಿತ್ ಕೇಳತ ಪಿಞ್ಞ ಕುರುಳಿ ಕಡಂದ್‌ಕ್ "ಕಡ್‌ಂದ್‌ೇ!ಕಡ್‌ಂದ್‌ೇ! ಕಾಳೆಕ್ ಕುಯಿಂಕಂಡೂ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕಾಳೆಕ್ ಎಣ್ಣಿತ್ ಕೇಳತ ಪಿಞ್ಞ ಕಡಂದ್‌ಕ್ ಕಾಳೆಕ್ ಕುಯಿಂಪಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕಡಂದ್ "ನಾಕ್ ಇಂದೇಕೂ ನಾಳೆಕೂ ಕಾಲೋ ನೇಟೋ ಪೋರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕಡಂದ್‌ಕ್ ಎಕ್ಕಲೂ ಬಂಡೋ ಪೂವೋ ತೇಡಿ ಮೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಕಡಂದ್ ಎಣ್ಣಿತ್ ಕೇಳತ ಪಿಞ್ಞ ಕುರುಳಿ ಕ್‌ಡ್‌ವಂಗ್ "ಕ್‌ಡ್‌ವಾ! ಕ್‌ಡ್‌ವಾ! ಕಡಂದ್ ಮೂಡೆಕ್ ಕೊದೆಕಂಡೂ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕಡಂದ್ ಎಣ್ಣಿತ್ ಕೇಳತ ಪಿಞ್ಞ ಕ್‌ಡ್‌ವಂಗ್ ಕಡಂದ್ ಮೂಡೆಕ್ ಕೊದೆಪಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕ್‌ಡ್‌ವ "ನಾಕ್ ಇಂದೇಕೂ ನಾಳೆಕೂ ಕಾಲೋ ನೇರೋ ಪೊರಾ"ಂದೆಣ್ಣಿ ಕೊಂಡತ್‌ಲೈಯ್ಯ ನಾಡೆ.

ನಾ॥ ಕ್‌ಡ್‌ವಂಗೆಕ್ಕಲೂ ಆಡಾಂಡ ಕೋಳಿ ಕುಞ್ಞಿರ ಬಯ್ಯ ಪೋಪಕುಳ್ಳ ನೇರೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕುರುಳಿ ಕ್‌ಡ್‌ವಂಗ್ ಕಾಲ್‌ಕ್ ಕಾಗೆಜ್ಜೆಯೂ ಬೆನ್ನ್‌ಕ್ ಬೆಂಗಟ್ಟೆಯೂ ಕೈಕೂಲಿ ಪರಂದ್ ಕೊಂಡತ್‌ಲೈಯ್ಯನಾಡೆ.

ನಾ॥ ತಾಂಡ ಕಾರ್ಯ ಆಂಡೂಂದುಂಡೇಂಗಿ ಕೈಕೂಲಿ ಪರಯೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕ್‌ಡ್‌ವ ಪೋಯಿ ಕಡಂದ್ ಮೂಡೆಕ್ ಕೊದೆತತ್, ಕಡಂದ್ ಪೋಯಿ ಕಾಳೆಕ್ ಕುಯಿಂಚತ್, ಕಾಳೆ ಪೋಯಿ ಅತ್ತಕಾರ ಮಕ್ಕಳ ಕುತ್ತ್‌ಚಿ, ಅತ್ತಕಾರ ಮಕ್ಕ ಪೋಯಿ ಕೇರೆನ ಪೊಜ್ಜತ್, ಕೇರೆ ಪೋಯಿ ಎಲಿನ ಪುಡಿಚತ್, ಎಲಿ ಪೋಯಿ ಮೇದಂಡ ಪರೆಕ್ ಕಂಗೊತ್ತ್‌ಚಿ, ಮೇದ ಪೋಯಿ ಪಂದಿಯುಳ್ಳ ಕಾಡ್‌ಕ್ ಪರೆ ಪೊಜ್ಜತ್, ಪಂದಿ ಪೋಯಿ ತಚ್ಚಂಡ ವೀಳ್ಯವೂ ಬಾಳೆಯೂ ಕುತ್ತ್‌ಚಿ, ತಚ್ಚ ಪೋಯಿ ತಾಳೂ ತಾಕೋಲೂ ನೀಕ್‌ಚಿ, ಕುರುಳಿ ಕುರುಳಿರ ಕುಞ್ಞನ ಪಾರಿಚಂಡ್ ಪೋಚಿ.

(2) ನಾನೂ ಏಡ ಚೆಂಬೆಯೂ

ಪಂ॥ ಎಲ್ಲಾರು ಬೋಟೆ ಪೋಪಾಂದೆಣ್ಣಿತ್ ನಾನೂ ಏಡ ಚೆಂಬೆಯೂ ಬೋಟೆ ಪೋಯಿ ಕೊಂಡತ್‌ಲೈಯ್ಯ ನಾಡೆ.

ನಾ॥ ನಿಂಗಿಬ್ಬರು ಬೋಟೆ ಪೋತೆ ಪೋಚೆಂಗಿ ಬೋಟೆ ಆಗಾಂದಿಂಜ ಪಂದೀಕಾರ.

ಪಂ॥ ನಾನೂ ಏಡ ಚೆಂಬೆಯೂ ಪರಂಬ್‌ಕ್ ಪೊಯಿತೆತ್ತಣೆ ನಾಡೆಲ್ಲ ಉತ್ತಿ ಅಳೀಪೋಯಿ ಕೊಂಡಿಂಜತ್‌ಲೈಯ್ಯ ನಾಡೆ.

ನಾ॥ ನ್‌ಡ ಪಟ್ಟಾಂಗ ಪದಿ ತ್‌ರಣೆ ನಾಡೆಲ್ಲ ಇಕ್ಕೂಂದಿಂಜ ಪಂದೀಕಾರ.

ಪಂ॥ ಅಲ್ಲಿಂಜಿ ನಾನೂ ಏಡ ಚೆಂಬೆಯೂ ಕ್‌ದಿಯ ಪರಂಬ್‌ಂಜಿ ಮೇಕಿಯ ಪರಂಬ್‌ಕ್ ಪೋಯಿಕೊಂಡತ್‌ಲೈಯ್ಯ ನಾಡೆ.

ನಾ॥ ನಾಡೆಲ್ಲ ಪೋನ ಪಿಞ್ಞ ನೀನೂ ನೀಡ ಚೆಂಬೆಯೂ ಬೋಟೆ ಆಡೇಲುಳ್ಳಲ ಪಂದೀಕಾರ.

ಪಂ॥ ಮೇಕಿಯ ಪರಂಬ್‌ಕ್ ಪೋನ ಚೆಂಬೆ, ಒರ್ ಈಚಿ ಕೊಚ್ಚೆರ ಮರೆಕ್ ಕೂಡಿ ಕೊಂಡತ್‌ಲೈಯ್ಯ ನಾಡೆ.

ನಾ॥ ಞಾಣಕರತಿ ಚೆಂಬೆ ತೂರುವಕ್ ಓರ್ ಈಚಿ ಕೊಚ್ಚೆರ ಮರೆಕ್ ಪೋಗೇಲುಳ್ಳಲ ಪಂದೀಕಾರ.

ಪಂ॥ ಈಚಿ ಕೊಚ್ಚೆಕ್ ಕೂಡ್‌ನ ಚೆಂಬೆ ಓರ್ ಮೊನತ್‌ರ ಕುಟ್ಟಿನ ಪುಡಿಚಿಕೊಂಡತ್‌ಲೈಯ್ಯ ನಾಡೆ.

ನಾ॥ ನ್‌ಡ ಬೋಟೆಕರತಿ ಚೆಂಬೆ ಓರ್ ಮೊನತ್‌ರ ಕುಟ್ಟಿನ ಪುಡಿಕೇಲುಳ್ಳಲ ಪಂದೀಕಾರ.

ಪಂ॥ ಮೊನತ್‌ನೋ ಎಡ್‌ತ್ ಚೆಂಬೆನೋ ಕೂಟಿ ಮೇಕಿಯ ಪರಂಬ್‌ಂಜಿ ಕ್‌ದಿಯ ಪರಂಬ್‌ಕ್ ಬಂದ್ ಕೊಂಡಲೈಯ್ಯ ನಾಡೆ.

ನಾ॥ ನ್'ಡ ಬೋಟೆಯಾನ ಪಿಜ್ಞಾ ನೀನೂ ನ್'ಡ ಚೆಂಬೆಯೂ ಬೈಪಿರಿಯೇಲುಳ್ಳಲ ಪಂದೀಕಾರ.

ಪಂ॥ ಕ್'ದಿಯ ಪರಂಬ್'ಕ್ ಬಂದ ಚೆಂಬೆ ಆದಿಯೊ ಒರ್ ಈಚಿ ಕೊಚ್ಚೆರ ಮರೆಕ್ ಕೂಡಿಕೊಂಡತ್'ಲೈಯ್ಯ ನಾಡೆ.

ನಾ॥ ನ್'ಡ ಬೋಟೆಕರತಿ ಚೆಂಬೆಯಾನ ಪಿಜ್ಞಾ ಅಕ್ಕಕ್ಕಲೇ ಈಚಿ ಕೊಚ್ಚೆರ ಮರೆಕ್ ಕೂಡೇಲುಳ್ಳಲ ಪಂದೀಕಾರ.

ಪಂ॥ ಈಚಿ ಕೊಚ್ಚೆರ ಮರೆಕ್ ಕೂಡ್'ನ ಚೆಂಬೆ, ಮೂಂದ್ ಕುಟ್ಟಿಯಳ ಬೆಚ್ಚಿಕೊಂಡತ್'ಲೈಯ್ಯ ನಾಡೆ.

ನಾ॥ ಕುಳಿಯಮೆಕರತಿ ಚೆಂಬೆ ಕುಟ್ಟಿ ಇಡಾಂದಿಂಜ ಪಂದೀಕಾರ.

ಪಂ॥ ಅಲ್ಲಿಂಜಿ ನಾನ್ ಮೊನತ್'ನೋ ಎಡ್'ತ್, ಕುಟ್ಟಿಯಳೋ ಎಡ್'ತ್ ಚೆಂಬೆನೋ ಕೂಟಿ ಬೈಪಿರಿಂಜಿ ಕೊಂಡಲೈಯ್ಯ ನಾಡೆ.

ನಾ॥ ನೀಕ್ ಬೋಟೆಕ್ ಬೋಟೆಯೂ ಆಚಿ, ಮಕ್ಕಕ್ ಮಕ್ಕಳೂ ಆಚಿ, ಇಜ್ಞೆ ನೀನ್ ಮಡಕ ಪಿರಿಯೇಲುಳ್ಳಲ ಪಂದೀಕಾರ.

ಪಂ॥ ನಾನ್ ಬೈಪಿರಿಂಜಿ ಮನೆಕ್ ಬಪ್ಪಂಜಿ "ಮೂಡೀ! ಮೂಡೀ! ಚೆಂಬೆನೋ ಕುಟ್ಟಿಯಳೋ ಬೆಪ್ಪಕ್ ಓರ್ ಬಟ್ಟಿ ತಾ"ಂದ್ ಕೇಟ್ ಕೊಂಡಲೈಯ್ಯ ನಾಡೆ.

ನಾ॥ ಚೆಂಬೆನೋ ಕುಟ್ಟಿಯಳೋ ಬೆಪ್ಪಕ್ ಓರ್ ಬಟ್ಟಿಕ್ ಕೇಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ಚೆಂಬೆನೋ ಕುಟ್ಟಿಯಳೋ ನ್'ಡ ಕುಪ್ಪಿಯ ಪಾಳಿಲ್ ಕೆಟ್ಟಿಯ ದೇವಯ್ಯಾ"ಂದ್ ಎಣ್ಣಿಕೊಂಡತ್'ಲೈಯ್ಯ ನಾಡೆ.

ನಾ॥ ಬಟ್ಟಿಯಾಕಾಣಿ ಕುಪ್ಪಿಯ ಪಾಳಿ ಒರಪಾನ ಪಿಜ್ಞಾ, ಕುಪ್ಪಿಯ ಪಾಳಿಲ್ ಕೆಟ್ಟಿಯ ಪೊಲೆಕೈಯ್ಯಾಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಕುರುಬ ಪಾಡಿಕ್ ಪೋಪಂಜಿ ಪತ್ತ್ ಬಟ್ಟಿ ಕೋಂದ್ ಕೊಂಡಲೈಯ್ಯ ನಾಡೆ.

ನಾ॥ ಅನ್ನೇರತ್ ನೀನ್ ಪೊಲೆಪಳ್ಳಿಕ್ ಪೋಪಂಜಿ ಓರ್ ಪದ್ದ್ ಬಟ್ಟಿ ಕೋಂದರೇಲುಳ್ಳಲ ಪಂದೀಕಾರ.

ಪಂ॥ ಬಟ್ಟಿ ಕೋಂದಿತ್ "ಮೂಡೀ! ಮೂಡೀ! ಚೆಂಬೆನೋ ಕುಟ್ಟಿಯಳೋ ಎಲ್ಲಿ ಬೆಪ್ಪ"ಂದ್ ಕೇಟ್ ಕೊಂಡಲೈಯ್ಯ ನಾಡೆ.

ನಾ॥ ನಾಯಿನೋ ಕುಟ್ಟಿಯಳೋ ಬೆಪ್ಪಕ್ ಜಾಗಕ್ ಮೂಡಿನ ಕೇಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ಚೆಂಬೆನೋ ಕುಟ್ಟಿಯಳೋ ಬಟ್ಟಿಕ್'ಟ್ಟಿತ್ ಮಂಡೆಲ್ ಬೆಚ್ಚ ದೇವಯ್ಯಾ"ಂದ್ ಎಣ್ಣಿಕೊಂಡತ್'ಲೈಯ್ಯ ನಾಡೆ.

ನಾ॥ ನ್'ಡ ಅನ್ನತ ಬುದ್ಧಿಕರತಿ ಮೂಡಿಯಾನ ಪಿಜ್ಞಾ "ಚೆಂಬೆನೋ ಕುಟ್ಟಿಯಳೋ ಬಟ್ಟಿಕ್'ಟ್ಟಿತ್ ಮಂಡೆಲ್ ಬೆಚ್ಚ ಪೊಲೆಕೈಯಾ"ಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಚೆಂಬೆನೋ ಕುಟ್ಟಿಯಳೋ ಬಟ್ಟಿಕ್'ಟ್ಟಿತ್ ಗುಡ್ಡತ್ ಮೂಲೆಲ್ ಅಡಕ ಪಡಕ ಬೆಚ್ಚಿ ಕೊಂಡಲೈಯ್ಯ ನಾಡೆ.

ನಾ॥ ನೀನ್ ಬೂದಿಕುಂಡ್'ಲ್ ನಾಯಿನೋ ಕುಟ್ಟಿಯಳೋ ಬೆಕ್ಕೇಲುಳ್ಳಲ ಪಂದೀಕಾರ.

ಪಂ॥ ಅಲ್ಲಿಂಜಿ ಬಂದಿತ್ ನಾನ್ ಮೊನತ್'ನ ಉರಿಚಿ, ಕರಿಚಿ, ತರಿಚಿ, ಮುರಿಚಿ, ಎರಚಿ ಮಾಡಿಗೊಂಡಲೈಯ್ಯ ನಾಡೆ.

ನಾ॥ ನೀನ್ ಮೊನತ್'ನ ಕರಿಚಿ, ಮುರಿಚಿ, ಎರಚಿ ಮಾಡೇಲುಳ್ಳಲ ಪಂದೀಕಾರ.

ಪಂ॥ ಎರಚಿ ಮಾಡಿತ್ "ಮೂಡೀ! ಮೂಡೀ! ಎರಚಿನಿಚ್ಚಕ್ ಕರಿಮಾರ್ಡ್‌"ಂದೆಣ್ಣಿ ಕೊಂಡಲ್ಯೆಯ್ಯ ನಾಡೆ.

ನಾ॥ ಎರಚಿನ ಕರಿ ಬೆಪ್ಪಕ್ ಮೂಡಿಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ಉಪ್ಪು, ಮಳು ಇಟ್ಟಿತ್ ಕರಿ ಬೆಚ್ಚ ದೇವಯ್ಯಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಬುದ್ದಂಡ ಕಡಿಕೆಂಜಿ ಏಳತ ಪೊಣ್ಣ್ ನೀಕ್ "ಕರಿ ಬೆಚ್ಚ ಪೊಲೆಕ್ಯೆಯ್ಯಾ"ಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಮೂಡಿಕ್ "ಮೂಡೀ! ಮೂಡೀ! ಕರಿ ಬೆಪ್ಪಕ್ ಓರ್ ಚಟ್ಟಿತಾ"ಂದ್ ಕೇಟ್"ಕೊಂಡಲ್ಯೆಯ್ಯ ನಾಡೆ.

ನಾ॥ ಚಟ್ಟಿ ಇಲ್ಲತೆ ಕರಿ ಬೆಪ್ಪಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ನ್‌ಡ ಮಂಡೆರ ಓಡ್‌ನ ಎಡ್‌ತ ದೇವಯ್ಯಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಚಟ್ಟಿಯಾಕಾಣಿ ಮಂಡೆರ ಓಡ್ ಒರಪಾನ ಪಿಞ್ಞ "ಮಂಡೆರ ಓಡೆಡ್‌ತ ಪೊಲೆ ಕ್ಯೆಯ್ಯಾ"ಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಪಾಂಡ್ ಮಾಡ್ ಪೆಮ್ಮಾಡ್ ಪೋಯಿತ್ ಓರ್ ನಾಲ್ ಚಟ್ಟಿ ಕೋಂದ್ ಕೊಂಡಲ್ಯೆಯ್ಯ ನಾಡೆ.

ನಾ॥ ಕರಿ ಬೆಪ್ಪಕ್ ಚಟ್ಟಿಯಾಂಡೂಂದ್ ಆನ ಪಿಞ್ಞ ನೀನ್ ಓರ್ ಚಟ್ಟಿ ಕೋಂದರೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ "ಮೂಡೀ! ಮೂಡೀ! ಕರಿ ಬೆಪ್ಪಕ್ ಇಚ್ಚಕ್ ಉಪ್ಪ್ ತಾ"ಂದ್ ಕೇಟ್‌ಕೊಂಡಲ್ಯೆಯ್ಯ ನಾಡೆ.

ನಾ॥ ಎರಚಿ ಕರಿಕ್ ಉಪ್ಪ್ ಇಡಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ನೀಡ ತಲೆ ಚೋರ್ ಎಡ್‌ತ ದೇವಯ್ಯಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಉಪ್ಪಾಕಾಣಿ ತಲೆ ಚೋರ್ ಉಪ್ಪಾನ ಪಿಞ್ಞ "ನ್‌ಡ ತಲೆ ಚೋರ್ ಎಡ್‌ತ ಪೊಲೆಕ್ಯೆಯ್ಯಾ"ಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಚೋಮ ಪೋರಿ ಪೋಯಿತ್ ಮಲೆಯಾಳತಿಂಜಿ ಓರ್ ಚಾಕ್ ಉಪ್ಪ್ ಕೋಂದ್ ಕೊಂಡಲ್ಯೆಯ್ಯ ನಾಡೆ.

ನಾ॥ ನೀನ್ ನೆರೆಮನೆ ಮುಮ್ಮನೆ ಪೋಯಿತ್ ಓರ್ ಪುಡಿ ಉಪ್ಪ್ ಕೋಂದರೇಲುಳ್ಳಲ ಪಂದೀಕಾರ.

ಪಂ॥ ಕರಿಕ್ ಉಪ್ಪ್‌ಟ್ಟಿತ್ "ಮೂಡೀ! ಮೂಡೀ! ಕರಿಕಿಚ್ಚಕ್ ಮಳು ತಾ"ಂದ್ ಕೇಟ್ ಕೊಂಡಲ್ಯೆಯ್ಯನಾಡೆ.

ನಾ॥ ಉಪ್ಪ್‌ಟ್ಟ ಪಿಞ್ಞ ಕರಿಕ್ ಮಳು ಇಡಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ನ್‌ಡ ಕ್ಯೆಬೆರ ಮುರಿಚ ದೇವಯ್ಯಾ"ಂಣೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಮಳುವಾಕಾಣಿ ಕ್ಯೆಬೆರ ಮಳುವಾನ ಪಿಞ್ಞ "ಕ್ಯೆಬೆರ ಮುರಿಚ ಪೊಲೆಕ್ಯೆಯ್ಯಾ"ಂದ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಮೂಡ್‌ಸೀಮೆಕ್ ಪೋಯಿತ್ ಓರ್ ಮಣ ಮಳು ಕೋಂದ್

ಕೊಂಡಲ್ಯೆಯ್ಯ ನಾಡೆ.

ನಾ॥ ನೀನ್ ಮೂಡ್‌ಸೀಮೆಕ್ ಪೋಯಿತ್ ಮಳು ಎಡ್‌ತಂಡ್ ಬರೇಲುಳ್ಳಲ ಪಂದೀಕಾರ.

ಪಂ॥ ಕರಿಕ್ ಮಳುವು ಇಡುವಂಜಿ "ಮೂಡೀ! ಮೂಡೀ! ಕರಿಕಿಚ್ಚಕ್ ಪುಳಿ ತಾ"ಂದ್ ಕೇಟ್ ಕೊಂಡಲ್ಯೆಯ್ಯ ನಾಡೆ.

ನಾ॥ ಉಪ್ಪು ಮಳುವು ಇಟ್ಟ ಪಿಜ್ಞ ಕರಿಕ್ ಪುಳಿ ಇಡಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ನ್‌ೕಡ ಚೋರೆನ ಪುಂಡಿಯ ದೇವಯ್ಯಾ"ಂಬೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಪುಳಿಯಾಕಾಣಿ ಚೋರೆ ಪುಳಿಯಾನ ಪಿಜ್ಞ "ನ್‌ೕಡ ಚೋರೆನ ಪುಂಡಿಯ ಪೊಲೆಕ್ಯೆಯ್ಯಾ"ಂದೆಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಮೇಕಿಯ ತೊಡಿಯತ್ ಪೋಯಿತ್ ಪಣ ಪುಳಿ ಮರತ್‌ರಡಿಲ್ ನಿಪ್ಪಂಜಿ ಕಣ್ಣ್ ಚಿಮ್ಮಿತ್ ಮೂಂದ್ ಬಡಿಯ ಮರಿಯ ಕನಿಚಿ ಕೊಂಡಲ್ಯೆಯ್ಯ ನಾಡೆ.

ನಾ॥ ಒಂದರೆ ಕಣ್ಣ! ನೀನ್ ಕಣ್ಣ್ ಚಿಮ್ಮೇಲುಳ್ಳಲ ಪಂದೀಕಾರ.

ಪಂ॥ ಮೂಂದ್ ಬಡಿಯ ಕನಿಕಣೆ ಮೂಬಟ್ಟಿ ಮಂಜ ಪಕ್ಕಿ ಬುಡ್ಡ್ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಮೂಂದ್ ಬಡಿಯತ್ ಮೂಬಟ್ಟಿ ಮಂಜ ಪಕ್ಕಿ ಬೂವೇಲುಳ್ಳಲ :ಪಂದೀಕಾರ.

ಪಂ॥ ಮೂಬಟ್ಟಿ ಮಂಜ ಪಕ್ಕಿ ತೇಡಿ ಪೊರಿಕಿ ಕೊಂಡಿತ್ ಕೋಟೆಯತ್ ಕೋಯಿಕ್ ಕಾಯಿಚೆ ಬೆಚ್ಚಿ ಕೊಂಡಲ್ಯೆಯ್ಯ ನಾಡೆ.

ನಾ॥ ಒನ್ನಾಂದ್ ಕ್‌ಟ್ಟತ್ತಚ್ಚಕ್ ಎರಚಿ ಕ್‌ಟ್ಟುವದು ನೀನ್ ಕೋಟೆಯತ್ ಕೋಯಿಕ್ ಕಾಯಿಚೆ ಬೆಕ್ಕೇಲುಳ್ಳಲ ಪಂದೀಕಾರ.

ಪಂ॥ ಮಂಜ ಪಕ್ಕಿಯತ್ತ್ ಕಾಂಬದು ಕೋಟೆಯತ್ ಕೋಯಿ ಓರ್ ಮೊರ ಮುತ್ತ್ ದಯಬುಟ್ಟ್ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಮಂಜ ಪಕ್ಕಿಯತ್ತ್ ಕಾಂಬದು ಕೋಟೆಯತ್ ಕೋಯಿ ಓರ್ ಮೊರ ನುಚ್ಚ್ ದಯ ಬುಡೇಲುಳ್ಳಲ ಪಂದೀಕಾರ.

ಪಂ॥ ಮುತ್ತ್ ಕಾಂಬದು ನಾನ್ ಬೆಮ್ಮರಿಂಜಿ ನಿಂದ್ ಕೊಂಡಲ್ಯೆಯ್ಯ ನಾಡೆ.

ನಾ॥ ಅಂದಾಕಣೆ ನೀನ್ ಮುತ್ತ್ ಕಾಣತವನ್ ಅಂದ್ ಮುತ್ತ್ ಕಾಂಬದು ಬೆಮ್ಮರಿಂಜಿ ನಿಕ್ಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕೋಟೆಯತ್ ಕೋಯಿ "ನೀಕ್ ಎನ್ನತ ಬೋಂಡೂ"ಂದ್ ಕೇಟ್ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಅಕ್ಕಿಯೋ ನೆಲ್ಲೋ ಬೊಂಡುವಾಂದ್ ಕೇಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಬೊಳ್ಳಾನೆ ಚಂಜೋಲೆ ದಯಬುಡಂಡೂಂದ್ ಕೇಟ್ ಕೊಂಡಲ್ಯೆಯ್ಯ ನಾಡೆ.

ನಾ॥ ಅನ್ನೇರತ್ ನೀನ್ ನಾಯಿ ಚಂಜೋಲೆ ದಯಬುಡಂಡೂಂದ್ ಕೇಕೇಲುಳ್ಳಲ ಪಂದೀಕಾರ.

ಪಂ॥ ಅದ್ ಕೇಟ ಕೋಟೆಯತ್ ಕೋಯಿ ಬೊಳ್ಳಾನೆ ಚಂಜೋಲೆ ದಯಬುಟ್ಟ್ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಅದ್ ಕೇಟ ಕೋಟೆಯತ್ ಕೋಯಿ ನಾಯಿ ಚಂಜೋಲೆ ದಯಬುಡೇಲುಳ್ಳಲ ಪಂದೀಕಾರ.

ಪಂ॥ ಅಲ್ಲಿಂಜಿ ನಾನ್ ಆನೆ ಪೊರಕೇರಿ ಮಡಕ ಪಿರಿಂಜಿ ಕೊಂಡಲ್ಯೆಯ್ಯ ನಾಡೆ.

ನಾ॥ ಅಲ್ಲಿಂಜಿ ನೀನ್ ನಾಯಿ ಪೊರಕೇರಿ ಮಡಕ ಪಿರಿಯೇಲುಳ್ಳಲ ಪಂದೀಕಾರ.

ಪಂ॥ ಮನೆಕ್ ಬಂದಿತೆತ್ತಣೆ ಮೂಡಿ ತಾಳೂ ಪಡಿ ಇಟ್ಟ್ ಕೊಂಡಿಂಜತ್‌ಲ್ಯೆಯ್ಯ ನಾಡೆ.

ನಾ॥ ನೀನ್ ನಾಯಿ ಪೊರಕೇರಿ ಬಕ್ಕಣೆ ನ್‌ಡ ಮೂಡಿ ಕಾತಿತಿಕ್ಕೊಂದಿಂಜ ಪಂದೀಕಾರ.

ಪಂ॥ ಮನೆಕ್ ಬಂದಿತ್ "ಮೂಡೀ! ಮೂಡೀ! ಪಡಿ ಎಡ್"ಂದೆಣ್ಣಿ ಕೊಂಡಲ್ಯೆಯ್ಯ ನಾಡೆ.

ನಾ॥ ನೀಕ್ ಮನೆರ ಒಳ್‌ಕ್ ಕೂಡಂಡೂಂದಿಂಜ ಪಿಙ್ಙ ಮೂಡಿಕ್ ಪಡಿ ಎಡ್‌ಪಕ್ ಎಣ್ಣೇಲುಳ್ಳ ಪಂದೀಕಾರ.

ಪಂ॥ ಮೂಡಿ ಎಣ್ಣಿತ್ ಕೇಳತ ಪಿಙ್ಙ ನಾನ್ ಆನೆರ ತುಂಬಿ ಕೈಕಾಯಿತೆ ಪತ್ತುವಂಜಿ ಬಿಂಬಿ ಕೈಕಾಯಿತೆ ಮನೆರ ಒಳ್‌ಕ್ ಇಳಿವಂಜಿ ತಾಳು ಪಡಿ ಎಡ್‌ತ್ ಕೊಂಡಲ್ಯೆಯ್ಯ ನಾಡೆ.

ನಾ॥ ನೀಕ್ ಮನೆರ ಒಳ್‌ಕ್ ಕೂಡಂಡೂಂದಾನ ಪಿಙ್ಙ ಆನೆರ ಬೆನ್ನ್ ಪತ್ತಿತ್ ಮನೆರ ಒಳ್ಕ್ ಇಳಿಯುವಂಜಿ ತಾಳೂ ಪಡಿ ಎಡ್‌ಕೇಲುಳ್ಳಲ ಪಂದೀಕಾರ.

ಪಂ॥ ಮನೆರ ಒಳ್‌ಕ್ ಕೂಡುವಂಜಿ "ಮೂಡೀ! ಮೂಡೀ!ಬೊಳ್ಳಾನೆ ಚಂಜೋಲೆ ಎಲ್ಲಿ ತಳತಿಯುವ"ಂದ್ ಕೇಟ್ ಕೊಂಡಲ್ಯೆಯ್ಯ ನಾಡೆ.

ನಾ॥ ಚೆಂಬೆನೋ ಕುಟ್ಟಿಯಳೋ ಬೆಪ್ಪಕ್ ಜಾಗ ಕೇಟವನ್ ಬೊಳ್ಳಾನೆ ಚಂಜೋಲೆ ತಳತುವಕ್ ಜಾಗ ಕೇಳಾಂದಿಂಜ ಪಂದೀಕಾರ.

ಪಂ॥ ಬೊಳ್ಳಾನೆ ಚಂಜೋಲೆ ಕಂಡ ಮೂಡಿ, "ಕನ್ನಿ ಕಂಬ್‌ಲ್ ತಳತಿಯುವಂಗ ದೇವಯ್ಯಾ"ಂದೆಣ್ಣಿ ಕೊಂಡತ್‌ಲ್ಯೆಯ್ಯ ನಾಡೆ.

ನಾ॥ ಬೊಳ್ಳಾನೆ ಚಂಜೋಲೆನ ಕನ್ನಿ ಕಂಬ್‌ಲ್ ತಳತಿಯವಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಬೊಳ್ಳಾನೆ ಚಂಜೋಲೆನ ನಾನ್ ಕನ್ನಿ ಕಂಬ್‌ಲ್ ತಳತಣೆ ಮೂಡಿ ಕೆತ್ತ್‌ಂಗಲ್ಲ್ ಗುಡ್ಡತ್ ಏಳ್ ಕುಟ್ಟುವ ನೀರ್ ಕಾಚಿಕೊಂಡತ್‌ಲ್ಯೆಯ್ಯ ನಾಡೆ.

ನಾ॥ ನ್‌ಡ ಬೂದಿ ಕತ್ತುವಕ್ ಒರ್ ಮಂಗಲ ನೀರ್ ಬೆಕ್ಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ ಏಳ್ ಕುಟ್ಟುವ ನೀರ್‌ಲ್ ಪೊಂಗುಳಿ ಕುಳಿಚಿಕೊಂಡಲ್ಯೆಯ್ಯ ನಾಡೆ.

ನಾ॥ ಒರ್ ಮಂಗಲತ್ ನೀರ್‌ಲ್ ನ್‌ಡ ಬೂದಿ ಕತ್ತೇಲುಳ್ಳಲ ಪಂದೀಕಾರ.

ಪಂ॥ ಕುಳಿಚಿತ್ ಬಕ್ಕಣೆ ಮೂಡಿ ಮುಕ್ಕಾಲಿ ಪಲಯ ರುದ್ರಾಕ್ಷಿ ಕುರಿಯುಂಡೆ ಎಲ್ಲ ಬೆಚ್ಚಿಕೊಂಡಿಂಜತ್‌ಲ್ಯೆಯ್ಯ ನಾಡೆ.

ನಾ॥ ನ್‌ಡ ಬುದ್ದಿಕರತಿ ಮೂಡಿ ನೀನ್ ಕುಳಿಚಿತ್ ಬಕ್ಕಣೆ ರುದ್ರಾಕ್ಷಿ ಬದ್ರಾಕ್ಷಿ ಎಲ್ಲ ಬೆಕ್ಕೇಲುಳ್ಳಲ ಪಂದೀಕಾರ.

ಪಂ॥ ಕುಳಿಚಿತ್ ಬಂದ್ ನಾನ್ ಕಣ್ಣೊ ಚಿಮ್ಮಿ ಶಿವಗೇನ ಮಾಡಿಕೊಂಡಲ್ಯೆಯ್ಯ ನಾಡೆ.

ನಾ॥ ನ್‌ಡ ಕಣ್ಣೊ ಚಿಮ್ಮಿ ಶಿವಗೇನ ಮಾಡೇಲುಳ್ಳಲ ಪಂದೀಕಾರ.

ಪಂ॥ ಕುರಿ ಇಡುವಂಜಿ, ನೇಂದ್ರ್ಯಾಲಂಬಿತೋರಡಿ, ಪೋರೊಲಂಬಿತೋರಡಿ, ಪಾಲೊಲಂಬಿತೋರಡಿ ಈರಡಿ ಮೂವಡಿ ಉಂಡ್‌ಕೊಂಡಲ್ಯೆಯ್ಯ ನಾಡೆ.

ನಾ॥ ಕುರಿ ಇಡುವಂಜಿ, ನುಚ್ಚೊಳ್ ಓರಡಿ, ಅಂಬ್‌ಲಿ ಓರಡಿ, ಪುಕ್ಕಡ ಕೂಳ್ ಓರಡಿ ಈರಡಿ ಮೂವಡಿ ಉಂಗೇಲುಳ್ಳಲ ಪಂದೀಕಾರ.

ಪಂ॥ ಕೂಳುಂಬಂಜಿ, ಮೂಡಿ ಒಪ್ಪ್‌ಕೆಲೆ ಬೆಚ್ಚಾನ ಬೋಜಕೆಲೆ ತಿಂದ್‌ಕೊಂಡಲ್ಯೆಯ್ಯನಾಡೆ.

ನಾ॥ ನ್‌ಡ ನಾರಿ ಬಾಯಿಕ್ ಒಪ್ಪ್‌ಕೆಲೆ ತಿಂಗೇಲುಳ್ಳಲ ಪಂದೀಕಾರ.

ಪಂ॥ ಅಲ್ಲಿಂಜಿ ನಾನ್ "ಮೂಡೀ! ಮೂಡೀ! ಪೊಲವಣೆ ಬೊಳ್ಳಾನೆ ಚಂಜೋಲೆನ ಎಲ್ಲಿ ತಳಯತಿವ"ಂದ್ ಕೇಟ್ ಕೊಂಡಲ್ಯೆಯ್ಯ ನಾಡೆ.

ನಾ॥ ಅಕ್ಕಕ್ಕಲೇ ಮೂಡಿರ ಬೇರ ಕೇಪವನ್ ಪೊಲವಣೆ ಬೊಳ್ಳಾನೆ ಚಂಜೋಲೆನ ಎಲ್ಲಿ

ತಳತಿಯವಂದ್ ಕೇಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ "ಬೊಳ್ಳಾನೆ ಚಂಜೋಲೆನ ಪೊಲವಣೆ ಕಟ್ಟ್ ಕಾಲ್‌ಲ್ ತಳತಿಯವಂಗ ದೇವಯ್ಯಾ"ಂದೆಣ್ಣಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಕನ್ನಿಕಂಬಾಕಾಣಿ ಕಟ್ಟ್ ಕಾಲ್ ಒರಪಾನ ಪಿಜ್ಞ ಬೊಳ್ಳಾನೆ ಚಂಜೋಲೆನ ಕಟ್ಟ್ ಕಾಲ್‌ಲ್ ತಳತಿಯವಕ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅಲ್ಲಿಂಜಿ ಬೊಳ್ಳಾನೆ ಚಂಜೋಲೆನ ಕಟ್ಟ್ ಕಾಲ್‌ಲ್ ತಳತಿತ್ ಮೂಡಿಯೂ ನಾನೂ ಏಳ್ ಕಡಕೆಲ್ ಬುದ್ದಂಡ್ ಪೂ ಒರಕ್ ಒರಿಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಅನ್ನೇರತ್ ನೀನೂ ನ್'ಡ ಮೂಡಿಯೂ ಪಲಂಬ್'ರ ಮೇಲೆ ಬುದ್ದಂಡ್ ಒರೇಲುಳ್ಳಲ ಪಂದೀಕಾರ.

ಪಂ॥ ಪಾದಿರ ನೇರತ್ ನೆಕ್ಕನಚಿ ಕಂಡಿತ್ ಪೂ ಒರಕ್ ನೆಟ್ಟಿತ್ ಪರಜಿ ನೋಟಣೆ ಬೊಳ್ಳಾನೆ ಚಂಜೋಲೆನ ಕಂಡದಿಲ್ಲೆಲ್ಲೈಯ್ಯ ನಾಡೆ.

ನಾ॥ ನ್'ಡ ದದ್ಟ್ ಪೊರೆಂಜಿ ನಾಯಿ ಓಡಿ ಪೋಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ನಾನ್ "ಮೂಡೀ! ಮೂಡೀ! ಬೊಳ್ಳಾನೆ ಚಂಜೋಲೆ ಕಾಂಬದಿಲ್ಲೆ"ಂದ್ ಎಣ್ಣಿಕೊಂಡಲ್ಲೈಯ್ಯ ನಾಡೆ.

ನಾ॥ ನೀನ್ ನಾಯಿ ಚಂಜೋಲೆ ಕಾಂಬದಿಲ್ಲೇಂದ್ ಎಣ್ಣೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ ಬೊತ್ತಕುತ್ತರ ಬೆತ್ತಲೆ ಎದ್ದಿತ್ ಬೊಳಿಚ ಕತ್ತಿಚಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ನೀಡ ಬುದ್ದಿಕರತಿ ಮೂಡಿ ಬೆತ್ತಲೆ ಏಳಾಂದಿಂಜ ಪಂದೀಕಾರ.

ಪಂ॥ ಬೊಳಿಚ ಎಡ್'ತಂಡ್ ಏಳ್ ಕಡಕೆ ಪರಜಿ ನೋಟಣೆ ಮೂಂದ್ ಬೊಮ್ಮುಟ್ಟೆ ಕ್'ಟ್ಟಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಪಲಂಬೆಲ್ಲ ಬೊಳ್ಳೆ ದುಂಬ್'ನ ಪಿಜ್ಞ ಬೊಮ್ಮುಟ್ಟೆ ಕ್'ಟ್ಟಾಂದಿಂಜ ಪಂದೀಕಾರ.

ಪಂ॥ ಬೊಮ್ಮುಟ್ಟೆ ಒಡತಿತ್ ನೋಟಣೆ ಅದ್'ಂಡೊಳ್‌ಲ್ ಬೊಳ್ಳಾನೆ ಚಂಜೋಲೆ ಕ್'ಟ್ಟಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಬೊಮ್ಮುಟ್ಟೆರೊಳ್‌ಲ್ ಬೊಳ್ಳೆ ಇರೇಲುಳ್ಳಲ ಪಂದೀಕಾರ.

(3) ಬೇಪಾಡಿಯಂಡ ಕ್'ಣ್ಣನೂ ಕ್'ೀಪಾಡಿಯಂಡ ಮೂಡಿಯೂ.

ಪಂ॥ ಕೂಹ! ಅಯ್ಯ ನಾಡೆ! ಮುಂದಲೆ ಮುಂದಲೆಕಾರ!

ನಾ॥ ನ್'ಡ ಅಣ್ಣಾಪಡಂದ್ ಪೋಡ್.

ಪಂದೀಕಾರಂಡ ಕಡೆಕಾರ॥ ಬಾಳ್!

ಪಂ॥ ಬೇಪಾಡಿಯಂಡ ಕ್'ಣ್ಣನೂ ಕ್'ೀಪಾಡಿಯಂಡ ಮೂಡಿಯೂ ಒಕ್ಕ ತಕ್ಕ ಅತ್ತ ಮೇಪಕ್ ಪೋಯಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಅಯಂಡಿಬ್ಬಡ ಒರ್'ಮೆಕೊಕ್ಕನೆ ಅತ್ತ ಮೇಪಕ್ ಪೋಕೇಲುಳ್ಳಲ ಪಂದೀಕಾರ.

ಪಂ॥ ಅತ್ತ ಮೇಚಂಡ್ ಪೋನ ಮಕ್ಕ ಒಯಂದ ಮೊಟ್ಟೆಲ್ ನಿಂದ್ ಕೊಂಡತ್‌ಲ್ಲೈಯ್ಯನಾಡೆ.

ನಾ॥ ಅತ್ತ ನೋಟಿಯಂಡ್ ಪೋನ ಮಕ್ಕ ಒಯಂದ ಮೊಟ್ಟೆಲ್ ನಿಕ್ಕೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಕ್'ಣ್ಣ ಬಪ್ಪಂಜಿ ಮೂಡಿರ ತಾರೆ ನಿಂದ್ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಒಯಂದ ಮೊಟ್ಟೆಕ್ ಪೋನ ಪಿಜ್ಞ ಕ್'ಣ್ಣ ಮೂಡಿರ ತಾರೆ ನಿಕ್ಕೇಲುಳ್ಳಲ ಪಂದೀಕಾರ.

ಪಂ॥ ಕ್'ಣ್ಣ ಬಂದ್ ತಾರೆ ನಿಕ್ಕಣೆ ಮೂಡಿ ಇದೆನ್ನ? ಒದರ ನೋಟುವಕ್ಕೋಂದ್

ಆಕೀರತ್‌ಲ್ಲೈಯ್ಯ ನಾಡೆ.

ನಾ॥ ಬುದ್ದಿಕರತಿ ಮೂಡಿಕ್ ಕ್‌ಣ್ಣ ತಾರೆ ನಿಕ್ಕಣೆ ಒದರ ನೋಟುವಕ್‌ಂದ್ ಆಗೇಲುಳ್ಳಲ ಪಂದೀಕಾರ.

ಪಂ॥ ತಾರೆ ನಿಂದ ಕ್‌ಣ್ಣ ಮಾರೋಡೆ ತಬ್ಬಿ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ತಾರೆ ನಿಂದ ಕ್‌ಣ್ಣ ಮಾರೋಡೆ ತಬ್ಬಾಂದಿಂಜ ಪಂದೀಕಾರ.

ಪಂ॥ ಕ್‌ಣ್ಣ ಮಾರೋಡೆ ತಬ್ಬಣೆ, ಮೂಡಿ ಇದೆನ್ನ? ಬಣ್ಣ ನೋಟುವಕ್ಕೋಂದ್ ಆಕೀರತ್‌ಲ್ಲೈಯ್ಯ ನಾಡೆ.

ನಾ॥ ಉದ್ದ ನೋಟ್‌ನ ಕ್‌ಣ್ಣ ಬಣ್ಣ ನೋಟಾಂದಿಂಜ ಪಂದೀಕಾರ.

ಪಂ॥ ಮಾರೋಡೆ ತ್‌ಬ್ಬನ ಕ್‌ಣ್ಣ ಮಲಾರ ಇಟ್ಟ್‌ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಮಾರೋಡೆ ತ್‌ಬ್ಬನ ಕ್‌ಣ್ಣ ಮಲಾರ ಇಡಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ ಇದೆನ್ನ? ಬಾಣತ್ ಮೀನ್ ನೋಟುವಕ್ಕೋಂದ್ ಆಕೀರತ್‌ಲ್ಲೈಯ್ಯ ನಾಡೆ.

ನಾ॥ ಮಜ್ಜಣ ನೇರತ್ ಬಾಣತ್ ಮೀನ್ ನೋಟೇಲುಳ್ಳಲ ಪಂದೀಕಾರ.

ಪಂ॥ ಮಲಾರ ಇಟ್ಟ ಕ್‌ಣ್ಣ ಚೆನ್ನ ಏರಕೊರೆ ಮಾಡಿಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಮಲಾರ ಇಟ್ಟ ಕ್‌ಣ್ಣ ಏರಕೊರೆ ಮಾಡಾಂದಿಂಜ ಪಂದೀಕಾರ.

ಪಂ॥ ಅನ್ನೇರತ್ ಮೂಡಿ ಪೋಯಿತ್ ನಾಡ್‌ಲ್ ತಕ್ಕಂಗಕ್ಕೆಲ್ಲ ಅರಿವು ಕೊಡ್‌ತ್ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಮಾಡತ ಕೆಲಸ ಮಾಡ್‌ನ ಪಿಞ್ಞ ತಕ್ಕಂಗಕ್ಕೆಲ್ಲಕೂ ಅರಿವು ಕೊಡಿಕೇಲುಳ್ಳಲ ಪಂದೀಕಾರ.

ಪಂ॥ ನಾಡ್‌ಲ್ ತಕ್ಕಂಗೆಲ್ಲ ಕೂಡಿತ್ ಮೂಂದ್ ದಿನ ಒರತ್ ಞಾಯ ಪರಂದ್ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ನಾಡ್‌ಲ್ ತಕ್ಕಂಗ ಮೂಂದ್ ದಿನ ಒರತ್ ಞಾಯ ಪರೆಯೇಲುಳ್ಳಲ ಪಂದೀಕಾರ.

ಪಂ॥ ನಾಡ್‌ಲ್ ತಕ್ಕಂಗೆಲ್ಲ ಞಾಯ ಪರಂದಿತ್ ಕ್‌ಣ್ಣಂಡ ಪರ ಮಾಡಿಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಬಲ್ಯದಾನ ಮೂಡಿ ಕ್‌ಣ್ಣಂಡ ಕೂಡ ಕಳಿಚ ಪಿಞ್ಞ ನಾಡ್‌ಲ್ ತಕ್ಕಂಗ ಕ್‌ಣ್ಣಂಡ ಪರ ಮಾಡೇಲುಳ್ಳಲ ಪಂದೀಕಾರ.

ಪಂ॥ ಅನ್ನೇರತ್ ಮೂಡಿ ಬೊಟ್ಯತ್ ನಾಡ್‌ಕೂ ಬೇರೊಳಿ ನಾಡ್‌ಕೂ ಏಯಿ ಕೊಡ್‌ತ್ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಇಲ್ಲಿಯತ ತಕ್ಕಂಗೆಲ್ಲ ಕೂಡಿತ್ ಕ್‌ಣ್ಣಂಡ ಪರ ಮಾಡ್‌ನ ಪಿಞ್ಞ ಮೂಡಿ ಏಯಿ ಕೊಡ್‌ಕೇಲುಳ್ಳಲ ಪಂದೀಕಾರ.

ಪಂ॥ ಅಲ್ಲಿಯತ ತಕ್ಕಂಗೆಲ್ಲ ಕೂಡುವಂಜಿ ಎಟ್ಟ್ ದಿನ ಒರತ್ ಞಾಯ ಪರಂದ್ ಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಞಾಯ ಕೊಡ್‌ಕಂಡೂಂದಾನ ಪಿಞ್ಞ ಒರತ್ ಞಾಯ ಪರೆಯೇಲುಳ್ಳಲ ಪಂದೀಕಾರ.

ಪಂ॥ ಞಾಯ ಪರೆವಂಜಿ ಕ್‌ಣ್ಣನೂ ಮೂಡಿಯೂ ಎಳೆಕೂ ಬೊಳೆಕೂ ಒಂದಾಯಿತಿ ರಂಡೂಂದ್ ಮಾಡಿಕೊಂಡತ್‌ಲ್ಲೈಯ್ಯ ನಾಡೆ.

ನಾ॥ ಅಲ್ಲಿಯತ ತಕ್ಕಂಗೆಲ್ಲ ಕೂಡುವಂಜಿ ಕ್‌ಣ್ಣನೂ ಮೂಡಿಯೂ ಎಳೆಕೂ ಬೊಳೆಕೂ ಒಂದಾಯಿತಿರಂಡೂಂದ್ ಮಾಡೇಲುಳ್ಳಲ ಪಂದೀಕಾರ.

(4) ಚಂದಪ್ಪಂಡ ಕುಂಗು ಔಷಧ ಮಾಡಿದ್ದು

ಈ ಕುಂಗು ಎಡೆನಾಲ್ಕುನಾಡು ಆರಜಿ ಗ್ರಾಮದವನು. ಕಡಿಯತ್ತುನಾಡಿಗೆ ಬೆಪ್ಪುನಾಡು "ಮರ್‌ದಲೆ" ನಾಡಾಗಿರುವುದರಿಂದ ಈ ನಾಡುಗಳು ಒಂದರ ಮೇಲೊಂದು ಯಾವಾಗಲೂ ಯುದ್ಧ ಮಾಡುತ್ತಿದ್ದವು. ಇಂಥ ಒಂದು ಯುದ್ಧದಲ್ಲಿ ಪೂಳಂಡ ಅಚ್ಚಿ ಎಂಬವನು ಬಿಟ್ಟ ಅಂಬಿನಲ್ಲಿ ಕಡಿಯತ್ತುನಾಡಿನ ಒಬ್ಬನು ಗಾಯಪಟ್ಟು ಅಂಬು ಕೀಳಲಾರದೆ ಇದ್ದ ಸಮಯದಲ್ಲಿ ಕಡಿಯತ್ತುನಾಡಿಗೆ ಹಿತವಾಗಿದ್ದ ಎಡೆನಾಲ್ಕು ನಾಡು ಆರಜಿ ಗ್ರಾಮದವನಾದ ಚಂದಪ್ಪಂಡ ಕುಂಗು ಎಂಬವನು ಮಲೆಯಾಳ ದೇಶದಿಂದ ಔಷಧಗಳನ್ನು ಕಲಿತುಕೊಂಡು ಬಂದಿರುವ ಸಂಗತಿಯನ್ನು ತಿಳಿದು ಅವನನ್ನು ಕರೆಸಿ ಔಷಧ ಮಾಡಿಸುವರು. ಆದರೆ ಈ ಕುಂಗುವಿನ ತಾಯಿಯು ಬೆಪ್ಪುನಾಡು ಕುಂಜಲಗೇರಿ ಗ್ರಾಮದಿಂದ ಬಂದ ನೆಂಟಸ್ಥನದ ಮೇಲೆ ಕಾಯಿಲಕ್ಕೆ ತಕ್ಕ ಔಷಧಗಳನ್ನು ಮಾಡದೆ ಕಾಯಿಲಸ್ಥನನ್ನು ಕೊಲ್ಲುವನು. ಇವನು ಸತ್ತ ವರ್ತಮಾನವನ್ನು ಮೇದನು ಎಲ್ಲರಿಗೂ ತಿಳಿಸುವನು.

